ಸೋಮವಾರ, ಆಗಸ್ಟ್ 11, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 222 | ಪುಟ 12
prajavani.net prajavani www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸಿಬಿಎಸ್‌ಇ ರೇಡಿಯೊ
ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯು (ಸಿಬಿಎಸ್‌ಇ) ಸಮುದಾಯ ರೇಡಿಯೊ ಕೇಂದ್ರ ಸ್ಥಾಪಿಸಲು ಪರವಾನಗಿ ಕೋರಿ ಅರ್ಜಿ ಸಲ್ಲಿಸಿದೆ. ಶಿಕ್ಷಕರು, ವಿದ್ಯಾರ್ಥಿಗಳು, ಪಾಲುದಾರರನ್ನು ಗಮನದಲ್ಲಿಟ್ಟುಕೊಂಡು ಈ ಬಾನುಲಿ ಕೇಂದ್ರ ಕಾರ್ಯನಿರ್ವಹಿಸಲಿದೆ.



ವಿಜಯಕುಮಾರಿಗೆ ಚಿನ್ನ
ಕರ್ನಾಟಕದ ವಿಜಯಕುಮಾರಿ ಜಿ.ಕೆ. ಅವರು ಭುವನೇಶ್ವರದಲ್ಲಿ ಭಾನುವಾರ ನಡೆದ ವಿಶ್ವ ಅಥ್ಲೆಟಿಕ್ಸ್ ಕಾಂಟಿನೆಂಟಲ್ ಟೂರ್‌ನಲ್ಲಿ ಮಹಿಳೆಯರ 400 ಮೀಟರ್ ಓಟದಲ್ಲಿ ಚಿನ್ನದ ಪದಕ ಗೆದ್ದರು

ಗೋದ್ನಾ ವಿದ್ಯುತ್ ಯೋಜನೆಗೆ ಮರುಜೀವ 5 | ಪೆಟ್ರೋಲ್ ಪಂಪ್ ಪರವಾನಗಿ ನಿಯಮ ಸಡಿಲಿಕೆ? 8

ಸಂಭ್ರಮದ ಜತೆ ಹಕ್ಕಿನ ಮಾತು

ಮೆಟ್ರೊ ಯೋಜನೆಗೆ ರಾಜ್ಯದ್ದು ₹25,379 ಕೋಟಿ, ಕೇಂದ್ರದ್ದು ₹7,468 ಕೋಟಿ: ಮುಖ್ಯಮಂತ್ರಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪ್ರಮುಖ ಕೈಗಾರಿಕಾ ಪ್ರದೇಶವಾದ ಬೊಮ್ಮನಹಳ್ಳಿ, ಎಲೆಕ್ಟ್ರಾನಿಕ್ ಸಿಟಿಯನ್ನು ಸಂಪರ್ಕಿಸುವ 'ನಮ್ಮ ಮೆಟ್ರೊ ಹಳದಿ ಮಾರ್ಗ'ದ ಉದ್ಘಾಟನೆ ಕಾರ್ಯಕ್ರಮವು, ಸಂಭ್ರಮದ ಜತೆಗೆ, ರಾಜ್ಯದ ಹಕ್ಕೊತ್ತಾಯಕ್ಕೆ ವೇದಿಕೆಯೂ ಆಯಿತು.

ಇತ್ತೀಚಿನ ವರ್ಷಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಮಧ್ಯೆ ನಿರಂತರ ನಡೆಯುತ್ತಿದ್ದ ಅನುದಾನದ ಸಂಘರ್ಷ ತುಸು ತಿಳಿಯಾದಂತೆ ಗೋಚರಿಸಿದ ಸಮಾರಂಭ, ಪ್ರಜಾತಂತ್ರ ವ್ಯವಸ್ಥೆಯ ಅಂದಕ್ಕೂ ಸಾಕ್ಷಿಯಾಯಿತು.

19.15 ಕಿ.ಮೀ ಉದ್ದದ ನಮ್ಮ ಮೆಟ್ರೊ ಹಳದಿ ಮಾರ್ಗ, ಮೂರನೇ ಹಂತದ ಮೆಟ್ರೊ ಯೋಜನೆ ಶಂಕುಸ್ಥಾಪನೆ ಹಾಗೂ ದೇಶದ ಮೂರು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳಿಗೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಿದರು. ರಾಜ್ಯಪಾಲ ಥಾವರಚಂದ್ ಗೆಹಲೋತ್ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಸಂಭ್ರಮಕ್ಕೆ ಜತೆಯಾದರು.

ಪ್ರಧಾನಿ ಮೋದಿಯವರ ಜತೆಗೆ ನಗುನಗುತ್ತಲೇ ಸಿದ್ದರಾಮಯ್ಯ ಪಾಲ್ಗೊಂಡರು. ಬಳಿಕ, ಎಲೆಕ್ಟ್ರಾನಿಕ್ ಸಿಟಿಯ ಐಐಐಟಿ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಪ್ರಧಾನಿ ಎದುರೇ, ಮೆಟ್ರೊಕ್ಕೆ ರಾಜ್ಯದ ಪಾಲಿನ ವಿವರವನ್ನು ಮಂಡಿಸಿದರಲ್ಲದೇ, ಕೇಂದ್ರವು ಕಡಿಮೆ ಅನುದಾನ ನೀಡಿದೆ ಎಂಬುದನ್ನು ಎಳೆ ಎಳೆಯಾಗಿ ಬಿಡಿಸಿಟ್ಟರು.

ಸಂಭ್ರಮಕ್ಕೆ ಜತೆ

ಮೇಕ್ರಿ ಸರ್ಕಲ್ ಬಳಿ ಇರುವ ಭಾರತೀಯ ವಾಯುಪಡೆಯ ತರಬೇತಿ ಕೇಂದ್ರಕ್ಕೆ ಹೆಲಿಕಾಪ್ಟರ್‌ನಲ್ಲಿ ಬಂದಿಳಿದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಗುತ್ತಲೇ ಬರಮಾಡಿಕೊಂಡರು. ಇಬ್ಬರು ನಾಯಕರ ನಡುವಣ ಕುಶಲೋಪರಿಗೆ ಸಾಕ್ಷಿ ಎನ್ನುವಂತೆ ಸಿದ್ದರಾಮಯ್ಯ ಅವರು ಮೋದಿ ಅವರ ತೋಳು ಸವರಿ ಸ್ವಾಗತಕ್ಕೆ ಮೆರುಗು ತಂದರು.



ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಬಂದಿಳಿದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆತ್ಮೀಯವಾಗಿ ಬರಮಾಡಿಕೊಂಡರು. ರಾಜ್ಯಪಾಲ ಥಾವರಚಂದ್ ಗೆಹಲೋತ್ ಸಾಕ್ಷಿಯಾದರು

ಅಲ್ಲಿಂದ ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕೇಂದ್ರ ರೈಲು ನಿಲ್ದಾಣಕ್ಕೆ ತೆರಳಿದ ಮೋದಿ ಅವರು ಬೆಂಗಳೂರು–ಬೆಳಗಾವಿ, ಅಮೃತಸರ–ವೈಷ್ಣೋದೇವಿ, ಪುಣೆ–ಅಜ್ನಿ ನಡುವಣ ಮೂರು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳಿಗೆ ಚಾಲನೆ ನೀಡಿದರು.

ಬಹುನಿರೀಕ್ಷಿತ ಹಳದಿ ಮಾರ್ಗವನ್ನು ಉದ್ಘಾಟಿಸಲು ಆರ್.ವಿ.ಕಾಲೇಜು ಮೆಟ್ರೊ ನಿಲ್ದಾಣಕ್ಕೆ ಬಂದ ಮೋದಿ ಅವರಿಗೆ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜತೆಯಾದರು. ನಿಲ್ದಾಣದಲ್ಲಿದ್ದ ಕಿಯೋಸ್ಕ್‌ನಲ್ಲಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ ಟಿಕೆಟ್ ಖರೀದಿಸಿದ ಮೋದಿ ಅವರು ಹಳದಿಮಾರ್ಗದ ರೈಲು ಹತ್ತಿದರು. ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರ ನಡುವೆ ಕುಳಿತು ಮೋದಿ ಪ್ರಯಾಣಿಸುತ್ತಲೇ, ನಗೆಯ ಚಟಾಕಿ ಹಾರಿಸಿದರು. ಮೂವರು ನಗುತ್ತಿರುವ ವಿಡಿಯೊಗಳು ಜಾಲತಾಣದಲ್ಲಿ ಹರಿದಾಡಿವು.

ಮುಖ್ಯಾಂಶಗಳು
- ಮೆಟ್ರೊ–ರಸ್ತೆ ಒಳಗೊಂಡ ಡಬ್ಬಲ್ ಡೆಕ್ಕರ್ ಮಾದರಿ ವೀಕ್ಷಿಸಿದ ಪ್ರಧಾನಿ
- ಮಿಶ್ರ ಸಾರಿಗೆ ವ್ಯವಸ್ಥೆಯ ಬಗ್ಗೆ ಮೆಚ್ಚುಗೆ

ಪಾಲು ಪ್ರಸ್ತಾಪಿಸಿದ ಸಿ.ಎಂ:

ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಸಿದ್ದರಾಮಯ್ಯ ಅವರು, 'ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದಾಗ ಬೆಂಗಳೂರು ಮೆಟ್ರೊ ರೈಲು ಯೋಜನೆಗೆ ಚಾಲನೆ ನೀಡಲಾಗಿತ್ತು. ಮೆಟ್ರೊ ರೈಲು ಯೋಜನೆಯ ವೆಚ್ಚದಲ್ಲಿ ಶೇ 50ರಷ್ಟು ಕೇಂದ್ರ ಸರ್ಕಾರ ಮತ್ತು ಶೇ 50ರಷ್ಟು ರಾಜ್ಯ ಸರ್ಕಾರ ಒದಗಿಸಬೇಕು ಎಂಬುದು ಒಪ್ಪಂದ. ಆದರೆ ಕೇಂದ್ರ ಸರ್ಕಾರ ಶೇ 13ರಷ್ಟು ಮಾತ್ರ ಕೊಡುತ್ತಿದ್ದು, ವೆಚ್ಚವು ರಾಜ್ಯ ಸರ್ಕಾರದ ಮೇಲೆಯೇ ಬೀಳುತ್ತಿದೆ' ಎಂದು ಮಾತು ಆರಂಭಿಸಿದರು.

'ಬೆಂಗಳೂರು ಮೆಟ್ರೊ ಜಾಲವು ಈಗ 96 ಕಿ.ಮೀ.ನಷ್ಟು ಉದ್ದವಿದೆ. ಇದಕ್ಕೆ ರಾಜ್ಯ ಸರ್ಕಾರವು ₹25,379 ಕೋಟಿ ವೆಚ್ಚ ಮಾಡಿದ್ದರೆ, ಕೇಂದ್ರ ಸರ್ಕಾರ ವೆಚ್ಚ ಮಾಡಿರುವುದು ₹7,468.86 ಕೋಟಿ ಮಾತ್ರ. ಮೆಟ್ರೊ ಯೋಜನೆಯಲ್ಲಿ ರಾಜ್ಯ ಸರ್ಕಾರದ್ದೇ ಸಿಂಹಪಾಲು' ಎಂದು ಮೆಟ್ರೊ ಯೋಜನೆ ಮೇಲಿನ ರಾಜ್ಯದ ಹಕ್ಕನ್ನು ಪ್ರತಿಪಾದಿಸಿದರು.

'ಕೇಂದ್ರವು ಶೇ 50ರಷ್ಟು ವೆಚ್ಚವನ್ನು ಭರಿಸುವುದಿಲ್ಲ. ಬದಲಿಗೆ ರಾಜ್ಯ ಸರ್ಕಾರಕ್ಕೆ ಮತ್ತು ಬಿಎಂಆರ್‌ಸಿಎಲ್‌ಗೆ ಸಾಲ ನೀಡುತ್ತದೆ. ಅದೆಲ್ಲವನ್ನೂ ಬಡ್ಡಿಯ ಸಮೇತ ರಾಜ್ಯವು ವಾಪಸ್ ಮಾಡಬೇಕು. ಮೆಟ್ರೊ ಯೋಜನೆಗೆ ಕೇಂದ್ರವು ನೀಡಿದ್ದ ಸಾಲದಲ್ಲಿ ₹3,987 ಕೋಟಿಯಷ್ಟನ್ನು ಬಡ್ಡಿಯ ಸಮೇತ ಈಗಾಗಲೇ ನಾವು ವಾಪಸ್ ಮಾಡಿದ್ದೇವೆ' ಎಂದು ಪ್ರಧಾನಿ ಮೋದಿ ಅವರತ್ತ ನೋಡಿದರು.

4B

'ಆಪರೇಷನ್ ಸಿಂಧೂರ ಯಶಸ್ಸಿಗೆ ಬೆಂಗಳೂರಿನ ಕೊಡುಗೆ'

'ಆಪರೇಷನ್ ಸಿಂಧೂರದಲ್ಲಿ ಪಾಕಿಸ್ತಾನವನ್ನು ಮಂಡಿಯೂರಿ ಕೂರಿಸಿದೆವು. ಆಪರೇಷನ್ ಸಿಂಧೂರ ಯಶಸ್ವಿಯಾಗುವಲ್ಲಿ ಬೆಂಗಳೂರಿನ ಜನರ, ಕಂಪನಿಗಳ ಕೊಡುಗೆ ಇದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

'ಬೆಂಗಳೂರು ದೇಶದ ಮಾಹಿತಿ ತಂತ್ರಜ್ಞಾನ ಕ್ಷೇತ್ರಕ್ಕೆ ದೊಡ್ಡ ಕೊಡುಗೆ ನೀಡಿದೆ. ಇಂದು ವಿಶ್ವದಲ್ಲಿ ಬೆಂಗಳೂರು ಒಂದು ಮಹತ್ವದ ಸ್ಥಾನದಲ್ಲಿದೆ ಎಂದರೆ, ಅದಕ್ಕೆ ಇಲ್ಲಿನ ಜನರ ಶ್ರಮವೇ ಕಾರಣ' ಎಂದರು.

'ಇಂತಹ ಬೆಂಗಳೂರನ್ನು ಭವಿಷ್ಯದ ದಿನಗಳಿಗೆ ಸಿದ್ಧಪಡಿಸಬೇಕು. ಅದರ ಭಾಗವಾಗಿಯೇ ಮೆಟ್ರೊ ಹಳದಿ ಮಾರ್ಗಕ್ಕೆ ಚಾಲನೆ ನೀಡಲಾಗಿದೆ. ಇದರಿಂದ ಜನರ ಸಮಯ ಮತ್ತು ಹಣ ಉಳಿತಾಯವಾಗಲಿದೆ. ವಾಯು–ಶಬ್ದ ಮಾಲಿನ್ಯವೂ ಇಳಿಕೆಯಾಗಲಿದೆ. ಈ ಯೋಜನೆಗೆ ಇನ್ಫೊಸಿಸ್, ಬಯೊಕಾನ್‌ನಂತಹ ಕಂಪನಿಗಳು ಸಿಎಸ್‌ಆರ್ ನಿಧಿಯನ್ನು ಒದಗಿಸುವ ಮೂಲಕ ಅಭಿವೃದ್ಧಿ ಹೊಸ ಮಾದರಿಗೆ ನಾಂದಿ ಹಾಡಲಾಗಿದೆ' ಎಂದರು.

ಕೇಂದ್ರದ ಕೊಡುಗೆ ಬಣ್ಣಿಸಿದ ಮೋದಿ

'2014ರಲ್ಲಿ ದೇಶದ 5 ನಗರಗಳಲ್ಲಿ ಮಾತ್ರ ಮೆಟ್ರೊ ರೈಲು ಜಾಲವಿತ್ತು. ನಮ್ಮ ಸರ್ಕಾರ ಬಂದ ನಂತರ ಮೆಟ್ರೊ ಜಾಲ ವಿಸ್ತರಿಸಲಾಗಿದೆ. ಈಗ ದೇಶದ 24 ನಗರಗಳಲ್ಲಿ ಒಟ್ಟು 1,000 ಕಿ.ಮೀ.ಗೂ ಹೆಚ್ಚು ಉದ್ದದ ಮೆಟ್ರೊ ಜಾಲವಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

'ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದ 2014ರವರೆಗೆ ಕೇವಲ 20,000 ಕಿ.ಮೀ.ನಷ್ಟು ಉದ್ದದ ರೈಲುಮಾರ್ಗವನ್ನು ಮಾತ್ರ ವಿದ್ಯುದೀಕರಣ ಮಾಡಲಾಗಿತ್ತು. 2025ರ ವೇಳೆಗೆ ವಿದ್ಯುದೀಕರಣವಾದ ರೈಲುಮಾರ್ಗದ ಉದ್ದವು 40,000 ಕಿ.ಮೀ.ಗೆ ಏರಿಕೆಯಾಗಿದೆ' ಎಂದು ವಿವರಿಸಿದರು.

'ಈ ಅವಧಿಯಲ್ಲಿ ವಿಮಾನ ನಿಲ್ದಾಣಗಳ ಸಂಖ್ಯೆಯನ್ನು 74ರಿಂದ 160ಕ್ಕೆ, ಜಲಮಾರ್ಗಗಳನ್ನು 3ರಿಂದ 30ಕ್ಕೆ, ಏಮ್ಸ್‌ಗಳನ್ನು 7ರಿಂದ 22ಕ್ಕೆ, ವೈದ್ಯಕೀಯ ಕಾಲೇಜುಗಳನ್ನು 387ರಿಂದ 704ಕ್ಕೆ, ಐಐಟಿಗಳನ್ನು 16ರಿಂದ 23ಕ್ಕೆ, ಐಐಎಂಗಳನ್ನು 13ರಿಂದ 21ಕ್ಕೆ ಹೆಚ್ಚಿಸಿದ್ದೇವೆ' ಎಂದು ಕೇಂದ್ರ ಸರ್ಕಾರದ ಸಾಧನೆಗಳನ್ನು ಪಟ್ಟಿ ಮಾಡಿದರು.

ಜಲರಥೋತ್ಸವದ ಸೊಬಗು

ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ



ಸಿದ್ಧಾರೂಢ ಸ್ವಾಮಿಯ 96ನೇ ಪುಣ್ಯಸ್ಮರಣೆ ನಿಮಿತ್ತ ಹುಬ್ಬಳ್ಳಿ ಸಿದ್ಧಾರೂಢ ಮಠದ ಪುಷ್ಕರಣಿಯಲ್ಲಿ ಅಪಾರ ಭಕ್ತರ ಸಮ್ಮುಖದಲ್ಲಿ ಭಾನುವಾರ ಜಲರಥೋತ್ಸವ ಜರುಗಿತು

ಜನ ಬೆಂಬಲ ಗಿಟ್ಟಿಸಲು ಕಾಂಗ್ರೆಸ್‌ನಿಂದ ವೆಬ್ ಪೋರ್ಟಲ್

'ಮತ ಕಳವು' ವಿರುದ್ಧ ಅಭಿಯಾನ

ನವದೆಹಲಿ (ಪಿಟಿಐ): 'ಮತ ಕಳ್ಳತನ'ದ ವಿರುದ್ಧ ಹೋರಾಟ ತೀವ್ರಗೊಳಿಸಿರುವ ಕಾಂಗ್ರೆಸ್, ಜನರ ಬೆಂಬಲ ಪಡೆಯಲು ಡಿಜಿಟಲ್ ಅಭಿಯಾನಕ್ಕೆ ಚಾಲನೆ ನೀಡಿದೆ. ಇದಕ್ಕಾಗಿ ಪ್ರತ್ಯೇಕ ವೆಬ್ ಪೋರ್ಟಲ್ ಆರಂಭಿಸಿದೆ.

ಈ ಬಗ್ಗೆ ಭಾನುವಾರ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, 'ಮತ ಕಳ್ಳತನ' ಎಂಬುದು 'ಒಬ್ಬ ವ್ಯಕ್ತಿ, ಒಂದು ಮತ' ಎಂಬ ಪ್ರಜಾಪ್ರಭುತ್ವದ ಮೂಲತತ್ವದ ಮೇಲಿನ ದಾಳಿಯಾಗಿದೆ' ಎಂದು ಹೇಳಿದ್ದಾರೆ. ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗೆ 'ದೋಷರಹಿತ ಮತದಾರರ ಪಟ್ಟಿ ಅತ್ಯಗತ್ಯ' ಎಂದು ಪ್ರತಿಪಾದಿಸಿದ್ದಾರೆ.

'ಚುನಾವಣಾ ಆಯೋಗದ ಮುಂದಿಟ್ಟಿರುವ ನಮ್ಮ ಬೇಡಿಕೆ ಸ್ಪಷ್ಟವಾಗಿದೆ. ಪಾರದರ್ಶಕತೆಯನ್ನು ತೋರಿಸಿ ಮತ್ತು ಡಿಜಿಟಲ್ ಸ್ವರೂಪದಲ್ಲಿ ಮತದಾರರ ಪಟ್ಟಿಯನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿ. ಇದರಿಂದ ಸಾರ್ವಜನಿಕರು ಮತ್ತು ರಾಜಕೀಯ ಪಕ್ಷಗಳು ಪಟ್ಟಿಯನ್ನು ಸ್ವತಃ ಪರಿಶೀಲನೆ ನಡೆಸಬಹುದು' ಎಂದು ಅವರು ಹೇಳಿದ್ದಾರೆ.

8

'ಇನ್ನಷ್ಟು ಕ್ಷೇತ್ರಗಳಲ್ಲಿ ಪರಿಶೀಲನೆ'

ಆಲಪ್ಪುಳ (ಕೇರಳ): ಕಳೆದ ಲೋಕಸಭೆ ಚುನಾವಣೆಯ ಮತದಾರರ ಪಟ್ಟಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳನ್ನು ಬಹಿರಂಗಪಡಿಸಲು ಕಾಂಗ್ರೆಸ್ ಪಕ್ಷ ಸಮಗ್ರ ಪರಿಶೀಲನೆ ಪ್ರಾರಂಭಿಸಲಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಭಾನುವಾರ ಹೇಳಿದ್ದಾರೆ.

'ಇಂಡಿಯಾ' ಮೈತ್ರಿಕೂಟದ ಅಭ್ಯರ್ಥಿಗಳು 50 ಸಾವಿರಕ್ಕಿಂತ ಕಡಿಮೆ ಮತಗಳಿಂದ ಸೋತ 48 ಕ್ಷೇತ್ರಗಳಿದ್ದು, ಅವೆಲ್ಲದರಲ್ಲೂ ಪಕ್ಷವು ವ್ಯಾಪಕ ಪರಿಶೀಲನೆ ನಡೆಸಲಿದೆ ಎಂದಿದ್ದಾರೆ. ಆಲಪ್ಪುಳದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪ್ರಧಾನಿ ನರೇಂದ್ರ ಮೋದಿ ನಿಜವಾದ ಜನಾದೇಶದೊಂದಿಗೆ ಅಧಿಕಾರಕ್ಕೆ ಬಂದಿಲ್ಲ. ರಾಹುಲ್ ಗಾಂಧಿ ಅವರು ಚುನಾವಣಾ ಅಕ್ರಮಗಳನ್ನು ಪುರಾವೆಗಳೊಂದಿಗೆ ಬಿಡುಗಡೆ ಮಾಡಿದ ನಂತರ ಇದು ಸ್ಪಷ್ಟವಾಯಿತು' ಎಂದು ಹೇಳಿದ್ದಾರೆ.

ದಾಖಲೆ ಒದಗಿಸಿ; ರಾಹುಲ್‌ಗೆ ನೋಟಿಸ್


ಮಹಿಳೆಯೊಬ್ಬರು ಎರಡು ಬಾರಿ ಮತ ಚಲಾಯಿಸಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸುವಂತೆ ಸೂಚಿಸಿ ಕರ್ನಾಟಕದ ಮುಖ್ಯ ಚುನಾವಣಾಧಿಕಾರಿ, ರಾಹುಲ್ ಗಾಂಧಿ ಅವರಿಗೆ ಭಾನುವಾರ ನೋಟಿಸ್ ಜಾರಿ ಮಾಡಿದ್ದಾರೆ.

ದಾಖಲೆಗಳನ್ನು ಒದಗಿಸಿದರೆ ಚುನಾವಣಾ ಆಯೋಗವು ವಿವರವಾದ ತನಿಖೆ ನಡೆಸಲು ನೆರವಾಗಲಿದೆ ಎಂದು ಹೇಳಿದ್ದಾರೆ. 'ಮತ ಕಳ್ಳತನ' ಆರೋಪಿಸಿ ಕಳೆದ ವಾರ ನವದೆಹಲಿಯಲ್ಲಿ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ರಾಹುಲ್ ಅವರು ಕೆಲವು ದಾಖಲೆಗಳನ್ನು ತೋರಿಸಿದ್ದರು.

'ಚುನಾವಣಾಧಿಕಾರಿ ನೀಡಿದ ದಾಖಲೆಗಳ ಪ್ರಕಾರ, ಶಕುನ್ ರಾಣಿ ಎಂಬುವರು ಎರಡು ಬಾರಿ ಮತ ಚಲಾಯಿಸಿದ್ದಾರೆ ಎಂದು ನೀವು ಹೇಳಿದ್ದೀರಿ. ನೀವು ಆರೋಪಿಸಿರುವಂತೆ ಶಕುನ್ ರಾಣಿ ಅವರು ಎರಡು ಬಾರಿ ಅಲ್ಲ, ಒಮ್ಮೆ ಮಾತ್ರ ಮತ ಚಲಾಯಿಸಿದ್ದಾರೆ ಎಂಬುದು ಪರಿಶೀಲನೆ ವೇಳೆ ನಮಗೆ ತಿಳಿದುಬಂದಿದೆ' ಎಂದು ನೋಟಿಸ್‌ನಲ್ಲಿ ಹೇಳಲಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ನೀವು ತೋರಿಸಿದ 'ಟಿಕ್ ಮಾರ್ಕ್' ಮಾಡಿರುವ ದಾಖಲೆಯನ್ನು ಚುನಾವಣಾಧಿಕಾರಿ ನೀಡಿಲ್ಲ ಎಂಬುದು ಆಯೋಗ ನಡೆಸಿರುವ ಪ್ರಾಥಮಿಕ ವಿಚಾರಣೆಯಲ್ಲಿ ತಿಳಿದುಬಂದಿದೆ ಎಂದು ಉಲ್ಲೇಖಿಸಲಾಗಿದೆ.

'ಆದ್ದರಿಂದ, ಶಕುನ್ ರಾಣಿ ಅಥವಾ ಬೇರೆ ಯಾರಾದರೂ ಎರಡು ಬಾರಿ ಮತ ಚಲಾಯಿಸಿದ್ದಾರೆ ಎಂದು ನೀವು ಹೇಳಿರುವುದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸಿದರೆ ನಾವು ವಿಸ್ತೃತ ತನಿಖೆ ನಡೆಸಬಹುದು' ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ.



ರಾಹುಲ್ ಗಾಂಧಿ

ಬಿಹಾರ ಮಾದರಿಯಲ್ಲೇ ಪರಿಷ್ಕರಣಾ ಕಾರ್ಯಕ್ಕೆ ಮುಂದಾದ ಆಯೋಗ

ರಾಜ್ಯದಲ್ಲೂ ಮತ ಪಟ್ಟಿ ಪರಿಷ್ಕರಣೆ?

• ಜಯಸಿಂಹ ಆರ್.

ಬೆಂಗಳೂರು: ಬಿಹಾರದ ಸ್ವರೂಪದಲ್ಲೇ ಕರ್ನಾಟಕದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ಕೇಂದ್ರ ಚುನಾವಣಾ ಆಯೋಗ ಮುಂದಾಗಿದೆ.

ಬಿಹಾರದಲ್ಲಿ ಈಚೆಗೆ ಮತದಾರರ ಪಟ್ಟಿಯನ್ನು ಪರಿಷ್ಕರಿಸಿ, ಸುಮಾರು 65 ಲಕ್ಷ ಜನರ ಮತದಾನದ ಚೀಟಿಯನ್ನು ರದ್ದು ಮಾಡಿ ಕರಡು ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಇದೇ ಮಾದರಿಯಲ್ಲಿ ಕರ್ನಾಟಕದಲ್ಲೂ ಮತದಾರರ ಪಟ್ಟಿಯನ್ನು ಪರಿಷ್ಕರಿಸಲು ಚುನಾವಣಾ ಆಯೋಗವು ಕ್ರಮ ತೆಗೆದುಕೊಂಡಿದೆ ಎಂದು ಗೊತ್ತಾಗಿದೆ.

ಈ ಸಂಬಂಧ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಮಟ್ಟದಲ್ಲಿ, ಚುನಾವಣಾ ಕರ್ತವ್ಯಕ್ಕೆ ನಿಯೋಜಿತರಾದ ಜಿಬಿಎ ಕಂದಾಯ ವಿಭಾಗದ ಅಧಿಕಾರಿಗಳ ಸಭೆ ನಡೆಸಲಾಗಿದೆ. ಅನಂತರ ಕಂದಾಯ ವಿಭಾಗದ ಅಧಿಕಾರಿಗಳು ತಮ್ಮ ಅಧೀನ ಅಧಿಕಾರಿಗಳ ಸಭೆ ನಡೆಸಿದ್ದಾರೆ ಎಂದು ಖಚಿತ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.



'ಈ ಸಂಬಂಧ ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿಯಿಂದ ನಿರ್ದೇಶನ ಬಂದಿದೆ. ಮತದಾರರ ಪಟ್ಟಿ ಪರಿಷ್ಕರಣೆಗೆ ಸಿಬ್ಬಂದಿಯನ್ನು ಸನ್ನದ್ಧಗೊಳಿಸಲು ತರಬೇತಿ ಸಾಮಗ್ರಿಗಳನ್ನು ಸಿದ್ಧಪಡಿಸಲಾಗಿದೆ. ತರಬೇತುದಾರರನ್ನು ಗುರುತಿಸಲಾಗಿದೆ. ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸಿಕೊಳ್ಳಲಾಗಿದೆ' ಎಂದು ಜಿಬಿಎ ಮೂಲಗಳು ಹೇಳಿವೆ.

'ಜಿಬಿಎಯ ಕಂದಾಯ ಅಧಿಕಾರಿಯೇ ಚುನಾವಣಾ ಕರ್ತವ್ಯದಲ್ಲಿ ಎಲೆಕ್ಟೋರಲ್ ಆಫೀಸರ್ (ಇಆರ್‌ಒ) ಆಗಿರುತ್ತಾರೆ. ಜಿಬಿಎ ವ್ಯಾಪ್ತಿಯ ಎಲ್ಲ ಇಆರ್‌ಒಗಳು ತಮ್ಮ ಅಧೀನದ ಸಹಾಯಕ ಕಂದಾಯ ಅಧಿಕಾರಿಗಳು, ಕಂದಾಯ ನಿರೀಕ್ಷಕರು ಮತ್ತು ತೆರಿಗೆ ಅಧಿಕಾರಿಗಳ ಜತೆ ಜುಲೈ ಮೂರನೇ ವಾರದಲ್ಲಿ ಸಭೆ ನಡೆಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

5

ಬಿಎಲ್‌ಒಗೆ ಕೇಂದ್ರದ ಸಿಬ್ಬಂದಿ?

ಮತದಾರರ ಚೀಟಿ–ಪಟ್ಟಿ ಪರಿಷ್ಕರಣೆ, ಚುನಾವಣಾ ಕರ್ತವ್ಯದಲ್ಲಿ ಮತಗಟ್ಟೆ ಅಧಿಕಾರಿ (ಬಿಎಲ್‌ಒ) ಮಟ್ಟದ ಕರ್ತವ್ಯಗಳಿಗೆ ರಾಜ್ಯ ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳ 'ಸಿ' ದರ್ಜೆಯ ಸಿಬ್ಬಂದಿಯನ್ನು ನಿಯೋಜನೆ ಮಾಡಿಕೊಳ್ಳಲಾಗುತ್ತಿತ್ತು. ಈಗ ಕೇಂದ್ರ ಸರ್ಕಾರದ 'ಸಿ' ದರ್ಜೆಯ ಸಿಬ್ಬಂದಿಯನ್ನೂ ಬಳಸಿಕೊಳ್ಳಲು ಚುನಾವಣಾ ಆಯೋಗ ಮುಂದಾಗಿದೆ.

'ರಾಜ್ಯ ಮುಖ್ಯ ಚುನಾವಣಾ ಅಧಿಕಾರಿ ಕಚೇರಿಯಿಂದ ಜಿಬಿಎಗೆ ನಿರ್ದೇಶನ ಬಂದಿದ್ದು, ಪ್ರತಿ ಮತಗಟ್ಟೆ ವ್ಯಾಪ್ತಿಯಲ್ಲಿರುವ ಕೇಂದ್ರ ಸರ್ಕಾರದ 'ಸಿ' ದರ್ಜೆಯ ಸಿಬ್ಬಂದಿಯನ್ನು ಗುರುತಿಸುವಂತೆ ಸೂಚಿಸಲಾಗಿದೆ' ಎಂದು ಜಿಬಿಎ ಮೂಲಗಳು ಖಚಿತಪಡಿಸಿವೆ. 'ಕೇಂದ್ರ ಸರ್ಕಾರದ 'ಸಿ' ದರ್ಜೆಯ ನೌಕರರನ್ನು ಗುರುತಿಸಿ, ಪಟ್ಟಿ ಮಾಡುವ ಹೊಣೆಗಾರಿಕೆಯನ್ನು ಕಂದಾಯ ನಿರೀಕ್ಷಕರು ಮತ್ತು ತೆರಿಗೆ ಅಧಿಕಾರಿಗಳಿಗೆ ನೀಡಲಾಗಿದೆ. ಈ ಕೆಲಸ ಇನ್ನಷ್ಟೇ ಆರಂಭವಾಗಬೇಕಿದೆ. ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆಯ ಭಾಗವಾಗಿ ಈ ಬದಲಾವಣೆ ಮಾಡಲಾಗುತ್ತದೆಯೇ ಎಂಬುದನ್ನು ಮುಖ್ಯ ಚುನಾವಣಾ ಅಧಿಕಾರಿ ಕಚೇರಿಯು ಸ್ಪಷ್ಟಪಡಿಸಿಲ್ಲ' ಎಂದು ಮಾಹಿತಿ ನೀಡಿವೆ.

ಬಿಹಾರ ಮಾದರಿಗೆ ಕಟು ವಿರೋಧ

ಬಿಹಾರದಲ್ಲಿ ನಡೆಸಲಾದ ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆಗೆ ವಿರೋಧ ಪಕ್ಷಗಳು ಮತ್ತು ಸ್ವಯಂಸೇವಾ ಸಂಸ್ಥೆಗಳಿಂದ ತೀವ್ರ ವಿರೋಧ ವ್ಯಕ್ತವಾಗಿದೆ. 'ಒಂದು ಜಾತಿ, ಸಮುದಾಯ ಮತ್ತು ಒಂದು ಧರ್ಮದ ಮತದಾರರನ್ನು ಗುರಿಯಾಗಿಸಿಕೊಂಡು ಪರಿಷ್ಕರಣೆ ನಡೆಸಲಾಗುತ್ತಿದೆ. ಆಡಳಿತ ಪಕ್ಷಕ್ಕೆ ಅನುಕೂಲವಾಗುವ ರೀತಿಯಲ್ಲಿ ಮತದಾರರನ್ನು ಪಟ್ಟಿಯಿಂದ ಕೈಬಿಡಲಾಗತ್ತಿದೆ' ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ.

5

ಚಿನಕುರುಳಿ ಪ್ರಕಾಶ್ ಶೆಟ್ಟಿ



ಈಜುಕೊಳದಲ್ಲಿ ಮುಳುಗಿ ಈಜುಪಟು ಸಾವು

ಪ್ರಜಾವಾಣಿ ವಾರ್ತೆ

ಮಂಗಳೂರು: ನೀರಿನೊಳಗೆ ಉಸಿರು ಬಿಗಿ ಹಿಡಿದು ಸಮರ್‌ಸಾಲ್ಟ್ ಮತ್ತು ಆಸನಗಳನ್ನು ಪ್ರದರ್ಶಿಸಿ 'ವರ್ಲ್ಡ್ ವೈಡ್ ಬುಕ್ ಆಫ್ ರೆಕಾರ್ಡ್'ನಲ್ಲಿ ಸ್ಥಾನ ಪಡೆದಿದ್ದ ಈಜುಪಟು ಕೆ. ಚಂದ್ರಶೇಖರ ರೈ ಸೂರಿಕುಮೇರು (52) ಈಜುಕೊಳದಲ್ಲಿ ಮುಳುಗಿ ಭಾನುವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ.



ಚಂದ್ರಶೇಖರ್

ಬಂಟ್ವಾಳ ತಾಲ್ಲೂಕಿನ ಕಲ್ಲಡ್ಕ ಸಮೀಪದ ಸೂರಿಕುಮೇರು ಬರಿಬರದ ನಿವಾಸಿಯಾದ ಅವರು ಮಂಗಳೂರಿನ ಕುದ್ರೋಳಿಯಲ್ಲಿ ವಾಸವಾಗಿದ್ದರು. ಅವರಿಗೆ ಪತ್ನಿ ಮತ್ತು ಪುತ್ರಿ ಇದ್ದಾರೆ.

ಉಡುಪಿ ಈಜುಕೊಳದಲ್ಲಿ ಗುತ್ತಿಗೆ ಆಧಾರದಲ್ಲಿ ಲೈಫ್ ಗಾರ್ಡ್ ಆಗಿದ್ದ ಅವರು ಮೂರು ವರ್ಷದ ಹಿಂದೆ ಮಂಗಳೂರಿಗೆ ಬಂದು ಮಹಾನಗರಪಾಲಿಕೆ ಈಜುಕೊಳದ ನಿರ್ವಹಣೆ ಮಾಡುತ್ತಿದ್ದರು.

10

ಮೈಸೂರು ತಾಲ್ಲೂಕು ನಾಡನಹಳ್ಳಿಯಲ್ಲಿ 5.5 ಎಕರೆ ಜಾಗದಲ್ಲಿ ನಿರ್ಮಾಣ

16 ವರ್ಷದ ಬಳಿಕ ಸಂಗೀತ ವಿ.ವಿಗೆ ನೆಲೆ

• ಎಂ. ಮಹೇಶ್

ಮೈಸೂರು: ಕರ್ನಾಟಕ ರಾಜ್ಯ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ 16 ವರ್ಷಗಳ ನಂತರ ಸ್ವಂತ ಕಟ್ಟಡವನ್ನು ಹೊಂದುತ್ತಿದೆ.

ತಾಲ್ಲೂಕಿನ ನಾಡನಹಳ್ಳಿಯಲ್ಲಿ 5.5 ಎಕರೆ ನಿವೇಶನದಲ್ಲಿ 'ಕುಟೀರ'ಗಳನ್ನು ನಿರ್ಮಿಸಲಾಗುತ್ತಿದ್ದು, ಪ್ರಸಕ್ತ ಸಾಲಿನಿಂದ ಅಲ್ಲಿಯೇ ತರಗತಿಗಳನ್ನು ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ಸಂಗೀತ ಮತ್ತು ಪ್ರದರ್ಶಕ ಕಲೆಗಳ ಎ ಶಾಖೆಗಳಲ್ಲಿನ ಕಲಿಕೆಯ ಮುನ್ನಡೆ ಸಾಧಿಸುವುದು, ಸಂಶೋಧನೆ, ದಾಖಲೀಕರಣ, ಧ್ವನಿ ಮತ್ತು ದೃಶ್ಯ ರೆಕಾರ್ಡಿಂಗ್‌ಗಳ ಪ್ರಕಟಣೆ ಉದ್ದೇಶದಿಂದ 2008–09ರಲ್ಲಿ ಅಸ್ತಿತ್ವಕ್ಕೆ ಬಂದಿದ್ದ ವಿ.ವಿ ಸದ್ಯ ಲಕ್ಷ್ಮೀಪುರಂನ ಸರ್ಕಾರಿ ಶಾಲೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ.

ನಾಡನಹಳ್ಳಿಯಲ್ಲಿ ಮುಡಾದಿಂದ (ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ) ಸಿಕ್ಕಿರುವ ನಿವೇಶನದಲ್ಲಿ ವಿಶ್ವವಿದ್ಯಾಲಯ ಮೈದಳೆದಿದೆ.

8

ಮುಖ್ಯಾಂಶಗಳು
- ನೂತನ ಕ್ಯಾಂಪಸ್‌ನಲ್ಲೇ 2025–26ನೇ ಸಾಲಿನ ತರಗತಿ
- 2008–09ರಲ್ಲಿ ಸ್ಥಾಪನೆಯಾಗಿದ್ದ ವಿಶ್ವವಿದ್ಯಾಲಯ
- ಸೆಮಿನಾರ್ ಹಾಲ್ ಸೇರಿ ಸಮಗ್ರ ಸೌಲಭ್ಯ



ಸದ್ಯ ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಕ್ಯಾಂಪಸ್ ಅಭಿವೃದ್ಧಿಯನ್ನೂ ಆಂತರಿಕ ಸಂಪನ್ಮೂಲದಿಂದ ಕೈಗೊಳ್ಳಲಾಗಿತ್ತು. ಹೊಸ ಕ್ಯಾಂಪಸ್‌ನಿಂದ ಸ್ವಂತ ನೆಲೆ ದೊರೆತಂತಾಗಿದೆ

ಪ್ರೊ.ನಾಗೇಶ್ ವಿ.ಬೆಟ್ಟಕೋಟೆ
ಕುಲಪತಿ, ಸಂಗೀತ ವಿಶ್ವವಿದ್ಯಾಲಯ



ಮೈಸೂರು ತಾಲ್ಲೂಕು ನಾಡನಹಳ್ಳಿಯಲ್ಲಿ ಸಂಗೀತ ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್

ಈಗಿರುವ ಕ್ಯಾಂಪಸ್‌ನಲ್ಲಿ...

'ಹಾಲಿ ಇರುವ ಕಟ್ಟಡದಲ್ಲಿ ಸರ್ಟಿಫಿಕೆಟ್ ಕೋರ್ಸ್‌ಗಳು ಮುಂದುವರಿಯಲಿವೆ. ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ನಡೆಸುತ್ತಿದ್ದ ಸಂಗೀತ, ತಾಳವಾದ್ಯ ಹಾಗೂ ನೃತ್ಯಕ್ಕೆ ಸಂಬಂಧಿಸಿದ ಜೂನಿಯರ್, ಸೀನಿಯರ್, ವಿದ್ವತ್ ಪೂರ್ವ ಹಾಗೂ ವಿದ್ವತ್ ಪರೀಕ್ಷೆಗಳ ನಿರ್ವಹಣೆ ಹೊಣೆಯನ್ನು ವಿಶ್ವವಿದ್ಯಾಲಯಕ್ಕೇ ವಹಿಸಲಾಗಿದೆ. ರಾಜ್ಯಮಟ್ಟದ ಈ ವಿಶೇಷ ಪರೀಕ್ಷೆಯನ್ನು ಪ್ರತಿ ವರ್ಷ ನಡೆಸಲು ಲಕ್ಷ್ಮೀಪುರಂ ಕ್ಯಾಂಪಸ್ ಬಳಸಲಾಗುವುದು' ಎಂದು ಪ್ರೊ.ನಾಗೇಶ್ ತಿಳಿಸಿದರು. ವಿಶ್ವವಿದ್ಯಾಲಯ ಸದ್ಯ ಗಾಯನ ಸಂಗೀತ, ವಾದ್ಯಗಳು, ನೃತ್ಯ ಹಾಗೂ ರಂಗಭೂಮಿ ಕಲಾ ವಿಭಾಗದಲ್ಲಿ ಬಿಪಿಎ, ಎಂಪಿಎ, ಡಿ.ಲಿಟ್, ಸರ್ಟಿಫಿಕೆಟ್ ಹಾಗೂ ಪಿಜಿ ಡಿಪ್ಲೊಮಾ ಕೋರ್ಸ್ ನಡೆಸಲಾಗುತ್ತಿದೆ. ಧಾರವಾಡ ಜಿಲ್ಲೆಯ ಗಂಗೂಬಾಯಿ ಹಾನಗಲ್ ಗುರುಕುಲ ಕೇಂದ್ರವನ್ನೂ ವಿಶ್ವವಿದ್ಯಾಲಯವೇ ನಡೆಸುತ್ತಿದೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ಸಾಧಾರಣ ಮಳೆಯಾಗುವ ಸಾಧ್ಯತೆ

‘ಸಾಹಿತ್ಯ ಬರವಣಿಗೆಯೂ ಕ್ರಿಕೆಟ್ ಪಂದ್ಯದಂತೆ’

ಬುಕ್ ಬ್ರಹ್ಮ ಸಾಹಿತ್ಯ ಉತ್ಸವದ ‘ಮನದ ಮಾತು’

• ಕುಂ. ವೀರಭದ್ರಪ್ಪಗೆ ಮುಖಾಮುಖಿಯಾದ ಪುತ್ರ ಪ್ರವರ

• ವರುಣ ಹೆಗಡೆ

ಬೆಂಗಳೂರು: ‘ಸಾಹಿತ್ಯ ಬರವಣಿಗೆಯೂ ಕ್ರಿಕೆಟ್ ಪಂದ್ಯದ ರೀತಿ. ಟೆಸ್ಟ್, ಏಕದಿನ, ಟ್ವೆಂಟಿ-20 ಮಾದರಿಗೆ ಆಟಗಾರ ಹೊಂದಿಕೊಂಡಂತೆ, ಬರಹಗಾರ ಕೂಡ ಕವನ, ಕಥೆ ಹಾಗೂ ಕಾದಂಬರಿಗೆ ಹೊರಳಬೇಕಾಗುತ್ತದೆ...’

ಸಾಹಿತ್ಯದ ವಿವಿಧ ಪ್ರಕಾರಗಳಿಗೆ ತಾವು ತೆರೆದುಕೊಂಡ ಬಗೆಗೆ ಸಾಹಿತಿ ಕುಂ. ವೀರಭದ್ರಪ್ಪ ಅವರ ಅಭಿಮತ ಇದಾಗಿತ್ತು. ಬುಕ್ ಬ್ರಹ್ಮ ಸಂಸ್ಥೆ ಹಮ್ಮಿಕೊಂಡಿದ್ದ ‘ಬುಕ್ ಬ್ರಹ್ಮ ಸಾಹಿತ್ಯ ಉತ್ಸವ’ದ ಕೊನೆಯ ದಿನವಾದ ಭಾನುವಾರ ನಡೆದ ‘ಮನದ ಮಾತು: ತಂದೆ-ಮಗನ ಜುಗಲ್ ಬಂದಿ’ ಗೋಷ್ಠಿಯಲ್ಲಿ ಪುತ್ರ ಪ್ರವರ ಕೊಟ್ಟೂರು ಜತೆಗೆ ಮುಖಾಮುಖಿಯಾದ ಅವರು, ಬರವಣಿಗೆ ಪ್ರಾರಂಭಿಸಿದ ಬಗೆ, ತಾವು ವಾಸವಿದ್ದ ಪ್ರದೇಶದ ವಾತಾವರಣ, ಕಾದಂಬರಿಯಲ್ಲಿ ಮಹಿಳೆಯರಿಗೆ ವಿಶೇಷ ಸ್ಥಾನ ನೀಡಲು ಕಾರಣ, ಬದುಕಿನ ಪ್ರಶ್ನೆಗಳಿಗೆ ಸ್ಪಂದಿಸಿದ ಪರಿ ಸೇರಿ ಹಲವು ಸಂಗತಿಗಳನ್ನು ಹಂಚಿಕೊಂಡರು.

‘ಕವಿತೆ ಮೂಲಕ ಬರವಣಿಗೆ ಆರಂಭಿಸಿದ ತಾವು, ನಂತರ ಕಥೆಗಳಿಗೆ ಹೊರಳಿಕೊಂಡಿರಿ. ಬಳಿಕ ಕಾದಂಬರಿ ಬರೆಯಲು ಪ್ರಾರಂಭಿಸಿದಿರಿ. ಕವಿತೆಗಳನ್ನು ಮತ್ತೆ ಏಕೆ ಬರೆಯಲಿಲ್ಲ’ ಎಂಬ ಪ್ರವರ ಅವರ ಪ್ರಶ್ನೆಗೆ ಉತ್ತರಿಸಿದ ಕುಂವೀ, ‘ಕ್ರಿಕೆಟ್‌ನ ವಿವಿಧ ಪ್ರಕಾರಕ್ಕೆ ವಲಸೆ ಹೋದಂತೆ, ಸಾಹಿತ್ಯದ ಪ್ರಕಾರಗಳಿಗೂ ವಲಸೆ ಹೋಗಬೇಕಾಗುತ್ತದೆ. ಅದು ಸೃಜನಶೀಲ ಲೇಖಕನ ಲಕ್ಷಣ. ಆಂಧ್ರದ ಹಿರೇಹಳ್ಳದ ವಾತಾವರಣ, ಗ್ರಾಮೀಣ ಭಾಗದ ಜನರ ಸ್ಥಿತಿಗತಿ ಹಾಗೂ ಚಳವಳಿಗಳು ನನ್ನ ಮೇಲೆ ಪ್ರಭಾವ ಬೀರಿದ ಪರಿಣಾಮ, ಕಥೆ, ಕಾದಂಬರಿ ಬರವಣಿಗೆ ಪ್ರಾರಂಭಿಸಿದೆ’ ಎಂದರು.



ಕುಂ. ವೀರಭದ್ರಪ್ಪ

‘ನಾನು ಕಥೆ ಬರೆಯುತ್ತಿರುವ ವೇಳೆ ಗೆಳೆಯನೊರ್ವ ನಿನಗೆ ಕಾದಂಬರಿ ಬರೆಯಲು ಬರುವುದಿಲ್ಲ ಎಂದು ಹೇಳಿದ್ದ. ಆದ್ದರಿಂದ ಕಾದಂಬರಿ ಬರೆದು ತೋರಿಸಿದೆ’ ಎಂದು ಸ್ಮರಿಸಿಕೊಂಡರು. ಕಾದಂಬರಿಗಳಲ್ಲಿ ಮಹಿಳೆಯರಿಗೆ, ಅದರಲ್ಲೂ ಮುದುಕಿಯರಿಗೆ ವಿಶಿಷ್ಟ ಸ್ಥಾನ ನೀಡಲು ಕಾರಣ ವಿವರಿಸಿದ ಅವರು, ‘ಹೆಣ್ತನ ಯಾರಲ್ಲಿ ಹೆಚ್ಚಿರುತ್ತದೆಯೋ ಅವರು ಉತ್ತಮ ಲೇಖಕರಾಗುತ್ತಾರೆ. ಹೆಣ್ಣಿನ ನೋವು ನಲಿವಿಗೆ ಸ್ಪಂದಿಸಬೇಕು. ಮಹಿಳಾ ಬರಹಗಾರರಲ್ಲಿ ಪುರುಷ ಗುಣ, ಪುರುಷ ಬರಹಗಾರರಲ್ಲಿ ಹೆಣ್ತನ ಇರಬೇಕಾಗುತ್ತದೆ’ ಎಂದು ಅಭಿಪ್ರಾಯಪಟ್ಟರು.

ಸಾಹಿತ್ಯ ಭಾಷಾ ಬೆಳವಣಿಗೆ ಬಗ್ಗೆ ಮಾತುಗಳನ್ನು ವಿಸ್ತರಿಸಿದ ಅವರು, ‘ಎಲ್ಲಿ ಜಗಳ ಇರುತ್ತದೆಯೋ ಅಲ್ಲಿ ಭಾಷೆ ಬೆಳೆಯುತ್ತದೆ. ನಾಗರಿಕ ಪ್ರಜ್ಞೆ ಇಲ್ಲದಿರುವ ಕಡೆ ಸಾಹಿತ್ಯ ವಿಸ್ತರಿಸಿಕೊಳ್ಳುತ್ತದೆ. ಶಿಸ್ತುಬದ್ಧ ಜೀವನ ಇರುವಲ್ಲಿ ಸಾಹಿತ್ಯ ಬೆಳೆಯದು’ ಎಂದರು. ಈ ನಡುವೆ ಕನ್ನಡ ಮಾಧ್ಯಮ ಶಾಲೆಗಳ ಸ್ಥಿತಿಗತಿಯ ಬಗ್ಗೆಯೂ ಕಳವಳ ವ್ಯಕ್ತಪಡಿಸಿದ ಅವರು, ‘ನಮ್ಮ ಶಾಸಕರು, ಸಂಸದರು ಖಾಸಗಿ ಶಾಲೆಗಳನ್ನು ನಿರ್ವಹಿಸುತ್ತಿರುವ ಪರಿಣಾಮ ಸರ್ಕಾರಿ ಶಾಲೆಗಳು ಇಂದು ಬಾಗಿಲುಗಳನ್ನು ಮುಚ್ಚುತ್ತಿವೆ’ ಎಂಬ ಬೇಸರದ ನುಡಿಗಳನ್ನಾಡಿದರು.

ಸಾಹಿತ್ಯ ಸಂಭ್ರಮದಲ್ಲಿ ಸಂಗೀತದ ಸಿಂಚನ



ಉತ್ಸವದಲ್ಲಿ ಸಾಹಿತ್ಯಾಸಕ್ತರು ಪುಸ್ತಕಗಳನ್ನು ಖರೀದಿಸಿದರು — ಪ್ರಜಾವಾಣಿ ಚಿತ್ರ

ಬೆಂಗಳೂರು: ಕೋರಮಂಗಲದ ಸೇಂಟ್ ಜಾನ್ಸ್ ಸಭಾಂಗಣದಲ್ಲಿ ಮೊಳಗಿದ ‘ಮಾರ್ನಿಂಗ್ ಮೆಲೋಡಿ’ಗೆ ಮಕ್ಕಳಿಂದ ಹಿಡಿದು ವೃದ್ಧರವರೆಗಿನ ಎಲ್ಲ ವಯೋಮಾನದವರು ‘ಮಂಚಿನ’ ಪ್ರವೇಶಿಸಿದ್ದರು. ಸಾಹಿತ್ಯದ ಚರ್ಚೆಗಳಿಗೆ ಕಿವಿಯಾಗಲು ಬಂದಿದ್ದವರು ಹಿಂದೂಸ್ತಾನಿ ಸಂಗೀತ ಗಾಯನಕ್ಕೆ ತಲೆದೂಗಿದರು.

ಬುಕ್ ಬ್ರಹ್ಮ ಸಂಸ್ಥೆ ಹಮ್ಮಿಕೊಂಡಿದ್ದ ‘ಬುಕ್ ಬ್ರಹ್ಮ ಸಾಹಿತ್ಯ ಉತ್ಸವ’ದ ಕೊನೆಯ ದಿನವಾದ ಭಾನುವಾರ ಮುಂಜಾನೆ ‘ಮಂಚಪ’ ವೇದಿಕೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಗಣಪತಿ ಭಟ್ ಹಾಸಣಗಿ ಮತ್ತು ತಂಡದವರು ಹಿಂದೂಸ್ತಾನಿ ಗಾಯನ ಪ್ರಸ್ತುತ ಪಡಿಸಿದರು. ಸುಮಾರು ಒಂದೂವರೆ ಗಂಟೆ ನಡೆದ ಈ ಕಾರ್ಯಕ್ರಮ ಪ್ರೇಕ್ಷಕರನ್ನು ಸೆರೆ ಹಿಡಿದಿಟ್ಟುಕೊಳ್ಳುವಲ್ಲಿ ಯಶಸ್ವಿಯಾಯಿತು. ಬಳಿಕ ಆ ವೇದಿಕೆಯ ಜತೆಗೆ ಒಟ್ಟು ಎಂಟು ವೇದಿಕೆಗಳಲ್ಲಿ ವಿವಿಧ ವಿಚಾರ ಗೋಷ್ಠಿಗಳು ನಡೆದವು.

ಚರ್ಚಾ ಗೋಷ್ಠಿಗಳಲ್ಲಿ ವಿಷಯ ವೈವಿಧ್ಯ ಇದ್ದ ಕಾರಣ ಉತ್ಸವದಲ್ಲಿ ಪಾಲ್ಗೊಂಡಿದ್ದವರು, ತಮ್ಮಿಷ್ಟದ ಗೋಷ್ಠಿಗಳನ್ನು ಆಯ್ಕೆ ಮಾಡಿಕೊಂಡು ವಿಷಯ ತಜ್ಞರ ಮಾತುಗಳನ್ನು ಆಲಿಸಿದರು. ಸಾಹಿತ್ಯ ಕ್ಷೇತ್ರದ ಪ್ರಮುಖರ ಜತೆಗೆ ಮಾತುಕತೆ, ಫೋಟೊ ಕ್ಲಿಕ್ಕಿಸಿಕೊಳ್ಳುವುದು ಹಾಗೂ ಪುಸ್ತಕಗಳಿಗೆ ಹಸ್ತಾಕ್ಷರ ಪಡೆಯುವುದು ಸಾಮಾನ್ಯವಾಗಿತ್ತು.

ಮಕ್ಕಳಿಗೆ ಪ್ರತ್ಯೇಕವಾಗಿ ರೂಪಿಸಲಾಗಿದ್ದ ‘ಚಿಣ್ಣರ ಲೋಕ’ದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಪಾಲ್ಗೊಂಡಿದ್ದರು. ಇದರಿಂದಾಗಿ ಚಿಣ್ಣರ ಕಲರವ ಪಾಲಕರ ಸಂಭ್ರಮವನ್ನು ಹೆಚ್ಚಿಸಿತ್ತು. ಮಕ್ಕಳ ಜತೆ ಸಂಭಾಷಣೆ ನಡೆಸಿದ ಲೇಖಕರು, ಕಥೆಗಳನ್ನು ಹೇಳಿ ರಂಜಿಸಿದರು. ಚಿತ್ರಕಲೆ, ಕಥೆ ಹೇಳುವುದೂ ಸೇರಿ ವಿವಿಧ ಸ್ಪರ್ಧೆಗಳ ಜತೆಗೆ ಮನೋರಂಜನೀಯ ಕಾರ್ಯಕ್ರಮಗಳನ್ನು ಮಕ್ಕಳಿಗಾಗಿ ಆಯೋಜಿಸಲಾಗಿತ್ತು.

ಉತ್ಸವದ ಮುಖ್ಯ ಆಕರ್ಷಣೆಯಾದ ‘ಮುಖಾ-ಮುಖಿ’ ವೇದಿಕೆಯಲ್ಲಿ ಬಾನು ಮುಷ್ತಾಕ್, ದಾಮೋದರ್ ಮೌಜೊ, ಎನ್.ಎಸ್. ಮಾಧವನ್, ಕೆ.ಆರ್. ಮೀರಾ, ಲಕ್ಷ್ಮಣ ಗಾಯಕ್ವಾಡ್, ನೇಮಿಚಂದ್ರ, ಪೆರುಮಾಳ್ ಮುರುಗನ್, ಮಕರಂದ ಸಾಠೆ, ವಸುಧೇಂದ್ರ, ಶರಣಕುಮಾರ ಲಿಂಬಾಳೆ, ಜೋಗಿ ಹಾಗೂ ಕೊಳಕಲೂರಿ ಎನೋಚ್ ಅವರ ಜತೆಗೆ ಸಾಹಿತ್ಯಾಸಕ್ತರು ಚರ್ಚೆ, ಸಂವಾದ ನಡೆಸಿದರು.

ಮಧ್ಯಾಹ್ನ ಬಿ.ಸುಬ್ಬರಾವ್ ಪ್ರಸ್ತುತ ಪಡಿಸಿದ ‘ರಾಮೇಶ್ವರಮ್ ಕಾಕುಲು’ ತೆಲುಗು ನಾಟಕ, ಬೆಂಗಳೂರು ಕಥಕ್ಕಳಿ ಕ್ಲಬ್ ಮತ್ತು ಕಲಾ ಸಂಸ್ಕೃತಿ ಪ್ರಸ್ತುತಪಡಿಸಿದ ‘ಕಥಕ್ಕಳಿ’ ಸಾಂಸ್ಕೃತಿಕ ಕಾರ್ಯಕ್ರಮ ಪ್ರೇಕ್ಷಕರ ಮನಸೂರೆಗೊಳಿಸಿದವು.

ಸುದ್ದಿ 2 ನಿಮಿಷ

ಬೆಂಗಳೂರು ವಿ.ವಿ: ಫೆಲೋಶಿಪ್ ಹೆಚ್ಚಿಸಲು ವಿದ್ಯಾರ್ಥಿಗಳ ಮನವಿ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ವಿಶೇಷಾಧಿಕಾರಿ ಪ್ರೊ. ಕೃಷ್ಣಮೂರ್ತಿ ನೇತೃತ್ವದಲ್ಲಿ ವಿಶ್ವವಿದ್ಯಾಲಯದ ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿಗಳ ಒಕ್ಕೂಟವು, ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಅವರನ್ನು ಭೇಟಿ ಮಾಡಿ ಎಸ್‌.ಸಿ/ಎಸ್.ಟಿ ಸಂಶೋಧನಾ ವಿದ್ಯಾರ್ಥಿಗಳಿಗೆ ನೀಡುತ್ತಿರುವ ₹10,000 ಫೆಲೋಶಿಪ್ ಅನ್ನು ತಕ್ಷಣವೇ ಹೆಚ್ಚಿಸುವಂತೆ ಮನವಿ ಮಾಡಿತು.

ಫೆಲೋಶಿಪ್ ಹಣವನ್ನು ಇಲಾಖೆಯ ಡಿಬಿಟಿ ವ್ಯವಸ್ಥೆ ಮೂಲಕ ನೀಡುತ್ತಿರುವುದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದರು. ಇದರಿಂದ ವಿಳಂಬ, ಗೊಂದಲಗಳು ಉಂಟಾಗುತ್ತಿವೆ. ಸಹಾಯಧನದ ಮೇಲೆ ಅವಲಂಬಿತ ಆಗಿರುವ ಎಸ್‌.ಸಿ/ಎಸ್.ಟಿ ಸಂಶೋಧನಾ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ತಕ್ಷಣವೇ ಈ ಆದೇಶವನ್ನು ಹಿಂತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು. ವಿದ್ಯಾರ್ಥಿಗಳ ಬೇಡಿಕೆಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಸಚಿವರು, ಮನವಿ ಪರಿಗಣಿಸುವುದಾಗಿ ಭರವಸೆ ನೀಡಿದರು.

ಒಕ್ಕೂಟದ ಅಧ್ಯಕ್ಷ ಅಬುಲನ್, ಉಪಾಧ್ಯಕ್ಷ ಚಂದ್ರುಮಿದ್ದಮನಿ, ಬಸವರಾಜ್ ಮುಸಲಾಪುರ, ಗೋಪಾಲಕೃಷ್ಣ ಕೆ.ಎ, ರವಿಕುಮಾರ್, ಅನಿಲ್ ಕುಮಾರ್ ವಿ ಉಪಸ್ಥಿತರಿದ್ದರು.

ವೈಚಾರಿಕ ಪ್ರಜ್ಞೆ ಮೂಡಿಸಿದ್ದ ರಾಷ್ಟ್ರಕವಿ ಕುವೆಂಪು



ಬೆಂಗಳೂರು: ‘ಕುವೆಂಪು ಅವರು ಸಮಾಜದಲ್ಲಿ ವೈಚಾರಿಕ ಪ್ರಜ್ಞೆ ಮೂಡಿಸಿದ್ದರು. ಜೊತೆಗೆ ತಮ್ಮ ಅಗಾಧ ಪಾಂಡಿತ್ಯದ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ’ ಎಂದು ಬಿ.ಎಂ.ಶ್ರೀ ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಹೇಳಿದರು.

ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಆಯೋಜಿಸಿದ್ದ ರಾಜ್ಯಮಟ್ಟದ ವೈಜ್ಞಾನಿಕ, ವೈಚಾರಿಕ ಸಾಹಿತ್ಯ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು. ‘ವಿಶ್ವವನ್ನು ಆಳುವುದು ವೈಚಾರಿಕತೆಯೇ ಹೊರತು ವ್ಯಕ್ತಿ ಅಥವಾ ನಂಬಿಕೆಗಳಲ್ಲ. ಕುವೆಂಪು ಇಂದು ನಮ್ಮ ನಡುವೆ ಇಲ್ಲದಿದ್ದರೂ ಅವರ ವೈಚಾರಿಕ ಚಿಂತನೆಗಳು ಮತ್ತು ವಿಶ್ವಮಾನವ ಸಂದೇಶ ಜೀವಂತವಾಗಿದೆ’ ಎಂದು ಹೇಳಿದರು.

ಯುವ ಸಾಹಿತಿ ಆಶಾ ಶಿವುಗೌಡ ಹಾಗೂ ವಿಜ್ಞಾನ ಲೇಖಕ ಹಾಗೂ ಸಮಾವೇಶದ ಸರ್ವಾಧ್ಯಕ್ಷ ಆರ್.ಎಸ್. ರವೀಂದ್ರ ಅವರಿಗೆ ಪುನೀತ್ ರಾಜಕುಮಾರ್ ಸಾಹಿತ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಲೇಖಕ ಶಶಿಕಾಂತ್ ರಾವ್, ಟ್ರಸ್ಟ್‌ನ ಅಧ್ಯಕ್ಷ ಎಸ್. ರಾಮಲಿಂಗೇಶ್ವರ, ಕಾರ್ಯದರ್ಶಿ ಸಿ. ಹೇಮಾವತಿ, ಪ್ರೊ.ಬಿ. ಕೃಷ್ಣಪ್ಪ ಟ್ರಸ್ಟ್‌ನ ಇಂದಿರಾ ಕೃಷ್ಣಪ್ಪ, ವಿಷ್ಣು ಸೇನಾ ಸಮಿತಿ ಅಧ್ಯಕ್ಷ ವೀರಕಪುತ್ರ ಶ್ರೀನಿವಾಸ್, ಕೃಷ್ಣಹಾನ್‌ಬಾಳ್, ಆರ್. ವಾದಿರಾಜ್ ಉಪಸ್ಥಿತರಿದ್ದರು.

ಕಾಡಾನೆ ದಾಳಿ ಬೆಳೆ ನಾಶ

ರಾಮನಗರ: ತಾಲ್ಲೂಕಿನ ವಿಭೂತಿಕೆರೆ ಗ್ರಾಮದಲ್ಲಿ ಎರಡ್ಮೂರು ಕಾಡಾನೆಗಳು ಜಮೀನಿಗೆ ಲಗ್ಗೆ ಇಟ್ಟಿವೆ. ಇದರಿಂದಾಗಿ ಶಿವಯ್ಯ, ರೇಣುಕಾ ಹಾಗೂ ಶಿವರಾಜು ಎಂಬ ರೈತರಿಗೆ ಸೇರಿದ ಜಮೀನಿನಲ್ಲಿ ತೆಂಗಿನಮರ, ಪಪ್ಪಾಯ, ಹಲಸಿನಮರ, ನೀರಾವರಿ ಪರಿಕರಗಳು ನಾಶವಾಗಿವೆ.

ಹಲವೆಡೆ ಭಾರಿ ಮಳೆ, ರಸ್ತೆಗಳು ಜಲಾವೃತ

ಬೆಂಗಳೂರು: ನಗರದಲ್ಲಿ ಭಾನುವಾರ ದಿನವಿಡೀ ಬಿಟ್ಟು ಬಿಟ್ಟು ಮಳೆ ಸುರಿದಿದ್ದು, ಹಲವೆಡೆ ರಸ್ತೆಗಳಲ್ಲೇ ನೀರು ನಿಂತಿತ್ತು.

ವಡ್ಡರಪಾಳ್ಯ– ಹೆಣ್ಣೂರು ರಸ್ತೆ, ವಡ್ಡರಪಾಳ್ಯ–ಗೆದ್ದಲಹಳ್ಳಿ, ಕಬ್ಬನ್ ರಸ್ತೆ, ಜಯಮಹಲ್ ರಸ್ತೆ, ಖೋಡೆ ವೃತ್ತ, ವಿಂಡ್ಸರ್ ಮ್ಯಾನರ್ ಸೇರಿದಂತೆ ಹಲವೆಡೆ ರಸ್ತೆಯಲ್ಲಿ ನೀರು ನಿಂತಿತ್ತು. ಚರಂಡಿ ವ್ಯವಸ್ಥೆ ಸರಿ ಇಲ್ಲದೇ ಮಳೆ ನೀರು ಹರಿಯಲು ಅಡ್ಡಿಯಾಯಿತು.

ಪ್ರಧಾನಿ ನರೇಂದ್ರ ಮೋದಿ ಅವರ ವಿವಿಧ ಕಾರ್ಯಕ್ರಮಗಳಿಗೆ ಬಂದೋಬಸ್ತ್ ಮಾಡಲು ಆಗಮಿಸಿದ್ದ ಪೊಲೀಸರಿಗೂ ಮಳೆ ಅಡ್ಡಿಯಾಯಿತು.



ಲಾಲ್‌ಬಾಗ್ ಬಳಿ ಮಳೆಯಲ್ಲಿ ಜನರು ಸಾಗುತ್ತಿದ್ದ ದೃಶ್ಯ — ಪ್ರಜಾವಾಣಿ ಚಿತ್ರ

ಮಳೆ ವಿವರ: ವಿಶ್ವನಾಥ ನಾಗೇನಹಳ್ಳಿ 4.2 ಸೆಂ.ಮೀ. , ಹಂಪಿನಗರ 2.8 ಸೆಂ.ಮೀ., ಜಕ್ಕೂರು 2.7 ಸೆಂ.ಮೀ., ಹೊರಮಾವು 3.1 ಸೆಂ.ಮೀ., ಕೋರಮಂಗಲ 2.5 ಸೆಂ.ಮೀ., ಸಿಂಗಸಂದ್ರ 2.4 ಸೆಂ.ಮೀ., ಮನೋರಾಯನ ಪಾಳ್ಯ 2.4 ಸೆಂ.ಮೀ., ರಾಮಮೂರ್ತಿ ನಗರ 2.2 ಸೆಂ.ಮೀ., ಪುಟ್ಟೇನಹಳ್ಳಿ 2.2 ಸೆಂ.ಮೀ., ಬಾಣಸವಾಡಿ 2 ಸೆಂ.ಮೀ. ಮಳೆಯಾಗಿದೆ.

ಹೆಮ್ಮಿಗೆಪುರ, ಶೆಟ್ಟಿಹಳ್ಳಿ, ಚೌಡೇಶ್ವರಿ, ಬೊಮ್ಮನಹಳ್ಳಿ, ಮಾರುತಿ ಮಂದಿರ, ಬಾಗಲಗುಂಟೆ, ಎಚ್.ಎಸ್.ಆರ್. ಲೇಔಟ್, ಕಾಡುಗೋಡಿ, ಬಸವನಪುರ, ಗರುಡಾಚಾರ್ ಪಾಳ್ಯ, ವಿದ್ಯಾಪೀಠ, ಯಶವಂತಪುರ, ಎಂ.ಜಿ. ರಸ್ತೆ, ಮೆಜೆಸ್ಟಿಕ್, ಯಲಹಂಕ ಸೇರಿದಂತೆ ನಗರದ ಎಲ್ಲ ಪ್ರದೇಶಗಳಲ್ಲಿ ಬಿರುಸಿನಿಂದ ಮಳೆಯಾಗಿದೆ.

18ರವರೆಗೆ ರುದ್ರಾಕ್ಷಿ ಪ್ರದರ್ಶನ, ಮಾರಾಟ

ಬೆಂಗಳೂರು: ಹೈದರಾಬಾದ್‌ನ ಇಂಡಸ್-ನೇಪಾಳ ರುದ್ರಾಕ್ಷ ಸಂಸ್ಥೆಯು ಜೆ.ಪಿ.ನಗರದ ಸಿಆರ್ ಲೇಔಟ್‌ನಲ್ಲಿರುವ ಹೋಟೆಲ್ ಲೆ ಪೋಲಿಜ್ ಬೈ ಟಿಜಿಐನಲ್ಲಿ ಹಮ್ಮಿಕೊಂಡಿರುವ ರುದ್ರಾಕ್ಷಿ ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಭಾನುವಾರ ಚಾಲನೆ ದೊರೆಯಿತು.

ಈ ಪ್ರದರ್ಶನ ಮತ್ತು ಮಾರಾಟವು ಇದೇ 18ರವರೆಗೆ ನಡೆಯಲಿದೆ. ‘ಭೂಮಿ ಮೇಲೆ ವಿರಳವಾಗಿ ದೊರಕುವ ರತ್ನದ ಹರಳುಗಳು ಸಹ ಈ ಮೇಳದಲ್ಲಿ ಲಭ್ಯ. ದುಂಡುಮುಖದ ಒಂದು ಮುಖಿ ರುದ್ರಾಕ್ಷಿಯನ್ನೂ (ಸುಮಾರು ₹ 4.5 ಲಕ್ಷ ಬೆಲೆ) ಪ್ರದರ್ಶನದಲ್ಲಿ ಕಾಣಬಹುದು. ಯಾವ ರುದ್ರಾಕ್ಷಿಯನ್ನು ಯಾವಾಗ ಹಾಗೂ ಯಾರು ಧರಿಸಬೇಕು ಎಂಬುದರ ಬಗ್ಗೆ ಯಾವುದೇ ಪಂಚಾಂಗ ಮತ್ತು ಕಂಪ್ಯೂಟರ್ ಸಹಾಯವಿಲ್ಲದೆ, ವೇದ ಗಣಿತದ ಮೂಲಕ ಜನ್ಮರಾಶಿ, ಜನ್ಮನಕ್ಷತ್ರದ ಆಧಾರ ತಿಳಿಸಲಾಗುವುದು’ ಎಂದು ಸಂಸ್ಥೆಯ ನಿರ್ದೇಶಕ ನರೇಂದ್ರ ಕಾಶಿರೆಡ್ಡಿ ಹೇಳಿದ್ದಾರೆ.



‘ಅಸಲಿ ಹಾಗೂ ನಕಲಿ ರುದ್ರಾಕ್ಷಿಗಳ ಭಿನ್ನತೆ ತಿಳಿಸಲಾಗುವುದು. ಗುಣಮಟ್ಟದ ರುದ್ರಾಕ್ಷಿಗಳನ್ನು ಗ್ರಾಹಕರಿಗೆ ಮಾರಾಟ ಮಾಡುವುದರಲ್ಲಿ ಸಂಸ್ಥೆ ವಿಶ್ವಾಸಾರ್ಹತೆ ಹೊಂದಿದೆ. ಆಸಕ್ತರಿಗೆ ವಿವಿಧ ಮುಖಗಳ ರುದ್ರಾಕ್ಷಿಗಳನ್ನು ತರಿಸಿ ಕೊಡಲಾಗುವುದು. ವ್ಯಕ್ತಿಯ ಜನ್ಮದಿನಾಂಕ ಆಧರಿಸಿ ಯಾವ ರಾಶಿಗೆ ಯಾವ ಮುಖದ ರುದ್ರಾಕ್ಷಿ ಸೂಕ್ತ ಎಂದು ನಿರ್ಧರಿಸಿ, ಆ ಪ್ರಕಾರದ ರುದ್ರಾಕ್ಷಿ ಕೊಡಲಾಗುವುದು. ಬೆಳಿಗ್ಗೆ 10.30 ರಿಂದ ರಾತ್ರಿ 9 ಗಂಟೆವರೆಗೆ ಪ್ರದರ್ಶನ ನಡೆಯುತ್ತದೆ’ ಎಂದು ತಿಳಿಸಿದ್ದಾರೆ. ಸಂಪರ್ಕಕ್ಕೆ: 7097296666

ಹುಕ್ಕಾ ಬಾರ್ ಮೇಲೆ ಪೊಲೀಸ್ ದಾಳಿ

ರಾಮನಗರ: ಅನಧಿಕೃತವಾಗಿ ಹುಕ್ಕಾ ಬಾರ್ ತೆರೆದಿದ್ದ ನಗರದ ಹೊರವಲಯದ ಎಸ್.ಬಿ. ದೊಡ್ಡಿಯ ಮಾದಾಪುರ ಗೇಟ್ ಬಳಿಯ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿರುವ ಫಿಲ್ಟರ್ ಕೆಫೆ ಆ್ಯಂಡ್ ಕಿಚನ್ ರೆಸ್ಟೋರೆಂಟ್ ಮೇಲೆ ಸಿಇಎನ್ ಠಾಣೆ ಡಿವೈಎಸ್ಪಿ ಕೆಂಚೇಗೌಡ ನೇತೃತ್ವದಲ್ಲಿ ಪೊಲೀಸರು ದಾಳಿ ನಡೆಸಿ, ಮೂವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ರೆಸ್ಟೋರೆಂಟ್‌ನ ವ್ಯವಸ್ಥಾಪಕ ವಡೇರಹಳ್ಳಿಯ ಅರುಣ್ ಕುಮಾರ್, ಹುಕ್ಕಾ ಮೇಕರ್ ಅರುಣಾಚಲ ಪ್ರದೇಶ ಮೂಲದ ಅನಿಲ್ ನಜರಿ ಹಾಗೂ ಮಾಲೀಕ ಬೆಂಗಳೂರಿನ ನಾಗರಬಾವಿಯ ಹೇಮಂತ್ ವಿರುದ್ಧ ಪ್ರಕರಣ ದಾಖಲಾಗಿದೆ. ಈ ಪೈಕಿ, ಅರುಣ್ ಮತ್ತು ಅನಿಲ್ ಅವರನ್ನು ವಶಕ್ಕೆ ಪಡೆದಿದ್ದಾರೆ. ಹುಕ್ಕಾ ಸೇವನೆಯ 11 ಪಾಟ್ ಹಾಗೂ ತಯಾರಿಸಲು ಬಳಸುವ ಫ್ಲೇವರ್ ಡಬ್ಬಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಮಧ್ಯರಾತ್ರಿ 12 ಗಂಟೆ ಸುಮಾರಿಗೆ ಗ್ರಾಹಕರ ಸೋಗಿನಲ್ಲಿ ತೆರಳಿದ ಪೊಲೀಸ್ ಸಿಬ್ಬಂದಿ, ರೆಸ್ಟೋರೆಂಟ್‌ನಲ್ಲಿ ಹುಕ್ಕಾ ಬಾರ್ ತೆರೆದಿರುವುದನ್ನು ಖಚಿತಪಡಿಸಿಕೊಂಡರು. ನಂತರ, ಹೆಚ್ಚುವರಿ ಸಿಬ್ಬಂದಿಯನ್ನು ಸ್ಥಳಕ್ಕೆ ಕರೆಯಿಸಿಕೊಂಡು ದಾಳಿ ನಡೆಸಿದರು.

ಅನುಮತಿ ಇಲ್ಲದೆ ಹುಕ್ಕಾ ಲಾಂಜ್ ತೆರೆದು, ಅಕ್ರಮ ಲಾಭಕ್ಕಾಗಿ ಈಗಾಗಲೇ ನಿಷೇಧಿಸಿರುವ ತಂಬಾಕು ಮತ್ತು ಮೊಲಾಶಿಸ್ ಅಂಶಗಳ ಉತ್ಪನ್ನಗಳ ಹುಕ್ಕಾ ಸೇವನೆಗೆ ಗ್ರಾಹಕರಿಗೆ ಅವಕಾಶ ಮಾಡಿ ಕೊಟ್ಟಿರುವುದು ದಾಳಿಯಲ್ಲಿ ಕಂಡುಬಂತು ಎಂದು ಪೊಲೀಸರು ಹೇಳಿದರು. ‘ಹುಕ್ಕಾ ಸೇವನೆ ಕುರಿತು ರೆಸ್ಟೋರೆಂಟ್‌ಗೆ ಬರುವವರು ತಮ್ಮ ಮೊಬೈಲ್‌ನಲ್ಲಿ ವಿಡಿಯೊ ಮಾಡದಂತೆ ನಿಗಾ ಇಟ್ಟಿದ್ದ ಮಾಲೀಕ, ಅದಕ್ಕಾಗಿ 15ಕ್ಕೂ ಹೆಚ್ಚು ಬೌನ್ಸರ್‌ಗಳನ್ನು ನೇಮಿಸಿಕೊಂಡಿದ್ದಾನೆ. ಪೊಲೀಸರು ದಾಳಿಗೆ ಬರುವುದನ್ನು ಮುಂಚೆಯೇ ತಿಳಿದುಕೊಳ್ಳುವುದಕ್ಕಾಗಿ ರೆಸ್ಟೋರೆಂಟ್‌ನ ಅಕ್ಕಪಕ್ಕ ಕೆಲವರನ್ನು ನಿಯೋಜಿಸಿ ನಿಗಾ ಇಡಲಾಗಿತ್ತು’ ಎಂದು ಡಿವೈಎಸ್ಪಿ ಕೆಂಚೇಗೌಡ ‘ಪ್ರಜಾವಾಣಿ’ಗೆ ತಿಳಿಸಿದರು.



ಫಿಲ್ಟರ್ ಕೆಫೆ ಆ್ಯಂಡ್ ಕಿಚನ್ ರೆಸ್ಟೋರೆಂಟ್ ಮೇಲೆ ಸಿಇಎನ್ ಠಾಣೆ ಡಿವೈಎಸ್ಪಿ ಕೆಂಚೇಗೌಡ ನೇತೃತ್ವದಲ್ಲಿ ಪೊಲೀಸರು ದಾಳಿ ನಡೆಸಿದರು

‘ರೆಸ್ಟೋರೆಂಟ್ ಮಾಲೀಕ ಸೇರಿದಂತೆ ಮೂವರ ವಿರುದ್ಧ ಸಿಗರೇಟ್ ಮತ್ತು ಇತರ ತಂಬಾಕು ಉತ್ಪನ್ನಗಳ ಕಾಯ್ದೆಯಡಿ (ಕೊಟ್ಪಾ) ಪ್ರಕರಣ ದಾಖಲಿಸಿ, ತನಿಖೆ ನಡೆಸಲಾಗುತ್ತಿದೆ ಎಂದು ಅವರು ಹೇಳಿದರು.

ಹೈದರಾಬಾದ್ ರೇಸ್

ಷೆರಿ ಷೆವಾಲಿಯರ್ ಗೆಲ್ಲುವ ನಿರೀಕ್ಷೆ

ಕೆ.ಮಹಿಪತಿ ರಾವ್ ಮೆಮೋರಿಯಲ್ ಗೋಲ್ಕಂಡ ಜುವೆನೈಲ್ ಮಿಲಿಯನ್ ಶನಿವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಷೆರಿ ಷೆವಾಲಿಯರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಆರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ನೈಟ್ ರೀಜೆಂಟ್ 1, ಮೂನ್‌ಲೈಟ್ ರೋಸ್ 7, ಪ್ರೈಡ್ ಅಸೈಡ್ 8
2ನೇ ರೇಸ್: ಅರಬೆಸ್ಕ 4, ಗೋಲ್ಡ್ ಗೀವರ್ 1, ಪೆಪ್ಪಿ 6
3ನೇ ರೇಸ್: ಗಬ್ಬಾಟು 8, ಟಾರ್ಚ್ ಬೇರರ್ 1, ಗಾಟಮ್ಯಾನ್ 3
4ನೇ ರೇಸ್: ಎನ್‌ಆರ್‌ಐ ಅಲ್ಟ್ರಾಪವರ್ 7, ಕಿಂಗ್‌ಸ್ಟನ್ 2, ಚೈನಾ ಟೌನ್ 1
5ನೇ ರೇಸ್: ಪರ್ಶ್ಯೆಪ್ಸನ್ 2, ಡಿನೊ 8, ಅಂಬೊಸೆಲಿ 5
6ನೇ ರೇಸ್: ಷೆರಿ ಷೆವಾಲಿಯರ್ 2, ಯುವರ್ ಅನ್‌ಫಾರ್ಗಟಬಲ್ 4, ಮಿಸ್ ಸ್ಮೈಲಿ ಏಂಜೆಲ್ 3
7ನೇ ರೇಸ್: ನೈಟ್ ಕ್ರುಸಾಡರ್ 3, ಡಿಯಾಬ್ಲೊ 1, ಕಲ್ಕಿ 5

ಉತ್ತಮ ಬೆಟ್: ನೈಟ್ ರೀಜೆಂಟ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಸಿಂಗಾರದ ಸೀರೆ




ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ಆರ್ಕಿಟೆಕ್ಚರ್ ಶಾಲೆ ಹಾಗೂ ವಿದ್ಯಾರ್ಥಿ ವ್ಯವಹಾರಗಳ ವಿಭಾಗದ ವತಿಯಿಂದ 11ನೇ ರಾಷ್ಟ್ರೀಯ ಕೈಮಗ್ಗ ದಿನದ ಪ್ರಯುಕ್ತ ಕೈಮಗ್ಗ ಉತ್ಪನ್ನಗಳ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

₹9.82 ಲಕ್ಷ ವಂಚನೆ

ರಾಮನಗರ: ಸಾಮಾಜಿಕ ಜಾಲತಾಣ ಇನ್‌ಸ್ಟಾಗ್ರಾಂನಲ್ಲಿ ಆನ್‌ಲೈನ್ ಕೆಲಸದ ಜಾಹೀರಾತು ನಂಬಿದ ಕನಕಪುರ ತಾಲ್ಲೂಕಿನ ಮಹಿಳೆಯೊಬ್ಬರು, ವಂಚಕರ ಜಾಲಕ್ಕೆ ಸಿಲುಕಿ ₹9.82 ಲಕ್ಷ ಕಳೆದುಕೊಂಡಿದ್ದಾರೆ. ಜಾಹೀರಾತು ಮೇಲೆ ಕ್ಲಿಕ್ ಮಾಡಿದಾಗ, ಮಹಿಳೆಯ ಮೊಬೈಲ್ ಸಂಖ್ಯೆಯು ವಾಟ್ಸ್‌ಆ್ಯಪ್ ಗ್ರೂಪ್‌ಗೆ ಸ್ವಯಂಚಾಲಿತವಾಗಿ ಸೇರಿಕೊಂಡಿದೆ.

ಬಳಿಕ ವಂಚಕರು, ಆನ್‌ಲೈನ್ ಕೆಲಸಕ್ಕಾಗಿ ಟೆಲಿಗ್ರಾಂ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳುವಂತೆ ವಾಟ್ಸ್‌ಆ್ಯಪ್‌ನಲ್ಲಿ ಸಂದೇಶ ಕಳಿಸಿದ್ದಾರೆ. ಮಹಿಳೆ ಆ್ಯಪ್ ಡೌನ್‌ಲೋಡ್ ಮಾಡಿಕೊಂಡಿದ್ದಾರೆ. ನಂತರ, ಅವರ ಸಂಖ್ಯೆಯನ್ನು ಟೆಲಿಗ್ರಾಂ ಗ್ರೂಪ್‌ವೊಂದಕ್ಕೆ ಸೇರಿಸಿದ ವಂಚಕರು, ಮತ್ತೊಂದು ಲಿಂಕ್ ಕಳಿಸಿ, ಕ್ಲಿಕ್ ಮಾಡಲು ಹೇಳಿ ವಂಚಿಸಿದ್ದಾರೆ.

ಕುಂದು ಕೊರತೆ | ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...
9606038256

‘ತ್ಯಾಜ್ಯದಿಂದ ಆವರಿಸಿಕೊಂಡ ರಸ್ತೆ’



ಯಲಚೇನಹಳ್ಳಿಯ ಕನಕನಗರದ ರಸ್ತೆಯ ಅರ್ಧ ಭಾಗವನ್ನು ಕಸದ ತ್ಯಾಜ್ಯ ಆವರಿಸಿಕೊಂಡಿದೆ. ಇದರಿಂದ ಅಲ್ಲಿ ಮೂಗು ಮುಚ್ಚಿಕೊಂಡೇ ಸಾಗುವ ಪರಿಸ್ಥಿತಿ ಇದೆ. ಈ ರಸ್ತೆಯು ಕಸದ ತೊಟ್ಟಿಯಾಗಿ ಪರಿಣಮಿಸಿದ್ದು, ರಸ್ತೆಯಲ್ಲಿ ನಡೆದಾಡಲೂ ಸಾಧ್ಯವಾಗದ ರೀತಿಯಲ್ಲಿ ಕಸ ಸುರಿಯಲಾಗುತ್ತಿದೆ. ಕ್ರಮೇಣ ಕೊಳೆತು ದುರ್ನಾತ ಬೀರುತ್ತಿದೆ. ತ್ಯಾಜ್ಯ ಹರಡಿ, ವಾಹನ ಸವಾರರು ಮತ್ತು ಪಾದಚಾರಿಗಳಿಗೆ ತೊಂದರೆಯಾಗುತ್ತಿದೆ. ಮಳೆ ಕಾರಣ ಸಾಂಕ್ರಾಮಿಕ ರೋಗದ ಭೀತಿಯೂ ಉಂಟಾಗಿದೆ. ಸುತ್ತಮುತ್ತಲಿನ ನಿವಾಸಿಗಳು ಕೂಡ ಎಚ್ಚೆತ್ತುಕೊಳ್ಳದೆ ಇಲ್ಲಿಯೇ ಕಸವನ್ನು ಎಸೆಯುತ್ತಿದ್ದಾರೆ. ಈ ಸ್ಥಳದಲ್ಲಿ ಕಸ ಹಾಕದಂತೆ ಕೂಡಲೇ ಕ್ರಮ ಕೈಗೊಳ್ಳಬೇಕು.

ಪತ್ತಂಗಿ ಎಸ್. ಮುರಳಿ, ಕುಮಾರಸ್ವಾಮಿ ಬಡಾವಣೆ

‘ಪೂರ್ಣಗೊಳ್ಳದ ಒಳಚರಂಡಿ ಕಾಮಗಾರಿ’



ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ ರಾಜಮಹಲ್ ಗುಟ್ಟಹಳ್ಳಿಯಲ್ಲಿ ಒಳಚರಂಡಿ ಕಾಮಗಾರಿ ಪ್ರಾರಂಭವಾಗಿ ಹತ್ತು ತಿಂಗಳೇ ಕಳೆದಿದ್ದು, ಕಾಮಗಾರಿಯನ್ನು ಅರ್ಧಕ್ಕೆ ನಿಲ್ಲಿಸಲಾಗಿದೆ. ಈ ಒಳಚರಂಡಿ ಮುಚ್ಚದ ಕಾರಣ ಗಬ್ಬು ನಾರುತ್ತಿದ್ದು, ಸ್ಥಳೀಯ ನಿವಾಸಿಗಳು ಹಾಗೂ ವಾಹನ ಸವಾರರು ಸಮಸ್ಯೆ ಎದುರಿಸುತ್ತಿದ್ದಾರೆ. ಸೊಳ್ಳೆಗಳ ಕಾಟವೂ ಹೆಚ್ಚಾಗಿದೆ. ಬಿಬಿಎಂಪಿ ಹಾಗೂ ಜಲಮಂಡಳಿ ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಲಿಲ್ಲ. ಅವರು ಪರಸ್ಪರ ಆರೋಪ ಮಾಡಿಕೊಂಡು ಕಾಮಗಾರಿಯನ್ನು ಸ್ಥಗಿತ ಮಾಡಿದ್ದಾರೆ. ಇದರಿಂದ ಪ್ರತಿನಿತ್ಯ ನರಕ ಯಾತನೆ ಅನುಭವಿಸುತ್ತಿದ್ದು, ಕೂಡಲೇ ಇದಕ್ಕೆ ಪರಿಹಾರ ಒದಗಿಸಬೇಕು.

ಸ್ಥಳೀಯ ನಾಗರಿಕರು

‘ಅಪಾಯ ತಂದೊಡ್ಡುವ ಗುಂಡಿ’



ಅವಿನ್ಯೂ ರಸ್ತೆ ಜಂಕ್ಷನ್ ಬಳಿ ಗುಂಡಿಗಳು ಬಿದ್ದಿದ್ದು, ಇದು ಅಪಾಯವನ್ನು ತಂದೊಡ್ಡುತ್ತಿದೆ. ದ್ವಿಚಕ್ರ ವಾಹನ ಸವಾರರು ನಿಯಂತ್ರಣ ತಪ್ಪಿ ಬಿದ್ದು, ಗಾಯಗೊಂಡ ಘಟನೆಯೂ ಇದೆ. ಈ ಮಾರ್ಗದಲ್ಲಿ ವಾಹನ ಚಾಲನೆ ಮಾಡುವುದು ದುಸ್ತರವಾಗಿದೆ. ಮಳೆ ಬಂದರೆ ನೀರು ತುಂಬಿಕೊಂಡು ಗುಂಡಿಗಳನ್ನು ಗುರುತಿಸಲು ಸಾಧ್ಯವಿಲ್ಲ. ಸಂಬಂಧಪಟ್ಟವರು ಕೂಡಲೇ ಕ್ರಮವಹಿಸಿ, ಗುಂಡಿಗಳನ್ನು ಮುಚ್ಚಬೇಕು. ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು.

ಶಿವಪ್ರಸಾದ್, ವಾಹನ ಸವಾರ

ಸಾಲ ಮಾಡಿದ್ದ ಹಣ ಸೈಬರ್ ವಂಚಕರ ಪಾಲು

ಟೆಕಿಯಿಂದ ₹ 34 ಲಕ್ಷ ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬೈ ಪೊಲೀಸ್ ಹಾಗೂ ಇ.ಡಿ ಅಧಿಕಾರಿಗಳ ಸೋಗಿನಲ್ಲಿ ಕರೆ ಮಾಡಿರುವ ಸೈಬರ್ ವಂಚಕರು, ‘ಡಿಜಿಟಲ್ ಅರೆಸ್ಟ್’ ಹೆಸರಿನಲ್ಲಿ ಸಾಫ್ಟ್‌ವೇರ್ ಎಂಜಿನಿಯರ್‌ಗೆ ಬೆದರಿಸಿ, ₹34 ಲಕ್ಷ ಸುಲಿಗೆ ಮಾಡಿದ್ದಾರೆ.

ಬಾಬುಸಾಬ್‌ಪಾಳ್ಯದ ಮಲ್ಲಪ್ಪ ಲೇಔಟ್ ನಿವಾಸಿ ರಾಜಶೇಖರ ರೆಡ್ಡಿ ಅವರ ದೂರಿನ ಮೇರೆಗೆ ಪೂರ್ವ ವಿಭಾಗದ ಸೈಬರ್ ಕ್ರೈಂ ಪೊಲೀಸರು ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ಖಾಸಗಿ ಕಂಪನಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ರಾಜಶೇಖರ ರೆಡ್ಡಿ ಅವರಿಗೆ ಜುಲೈ 5ರಂದು ಕರೆ ಮಾಡಿದ ಅಪರಿಚಿತ ವ್ಯಕ್ತಿಗಳು, ‘ನಿಮ್ಮ ಹೆಸರಿನಲ್ಲಿರುವ ಸಿಮ್ ಕಾರ್ಡ್ ಬಳಸಿಕೊಂಡು ಕೆಲವರಿಗೆ ಕಿರುಕುಳದ ಮೆಸೇಜ್ ಕಳುಹಿಸುತ್ತಿರುವ ಬಗ್ಗೆ ಮುಂಬೈನ ಕೊಬಾಲಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಈ ರೀತಿಯ ಪ್ರಕರಣದಲ್ಲಿ ನೀವು ಭಾಗಿಯಾಗಿಲ್ಲ ಎಂಬುದಕ್ಕೆ ನಿರಾಕ್ಷೇಪಣಾ ಪತ್ರ(ಎನ್‌ಒಸಿ) ನೀಡಲಾಗುವುದು. ಅದಕ್ಕಾಗಿ ಕಾರ್ಡ್ ನಂಬರ್ ಕಳುಹಿಸಿಕೊಡಿ’ ಎಂದು ತಿಳಿಸಿದ್ದರು.

ನಂತರ ವಾಟ್ಸ್‌ಆ್ಯಪ್ ಮೂಲಕ ಸಂಪರ್ಕಕ್ಕೆ ಬಂದ ಅಪರಿಚಿತ ವ್ಯಕ್ತಿ, ‘ನರೇಶ್ ಗೋಯಲ್ ಎಂಬಾತ ಹಣ ಅಕ್ರಮ ವರ್ಗಾವಣೆ ಮಾಡಿದ್ದು, ಈ ಪ್ರಕರಣದಲ್ಲಿ ನೀವು ಶಂಕಿತ ವ್ಯಕ್ತಿ ಆಗಿದ್ದೀರಾ’ ಎಂದು ಹೇಳಿದ್ದರು. ಎರಡು ದಿನ ವಾಟ್ಸ್‌ಆ್ಯಪ್ ವಿಡಿಯೊ ಕರೆಯಲ್ಲಿ ಅವರ ಕಣ್ಗಾವಲಿನಲ್ಲಿ ಇರಿಸಿದ್ದರು. ನಂತರ ನ್ಯಾಯಾಲಯದ ವಿಚಾರಣೆಗೆ, ತನಿಖೆಗೆ ಸಹಕರಿಸಬೇಕು. ಭವಿಷ್ಯ ನಿಧಿ, ಉಳಿತಾಯ ಖಾತೆ ಒದಗಿಸುವಂತೆ ಸೂಚಿಸಿದ್ದರು. ಅದರಂತೆ ದೂರುದಾರರು ತಮ್ಮ ಬ್ಯಾಂಕ್ ಖಾತೆ ಮತ್ತು ವೈಯಕ್ತಿಕ ವಿವರಗಳನ್ನು ಹಂಚಿಕೊಂಡರು ಎಂದು ಪೊಲೀಸರು ತಿಳಿಸಿದ್ದಾರೆ.

‘ಇ.ಡಿ ಕಚೇರಿಯಿಂದ ಕರೆ ಮಾಡುತ್ತಿರುವುದಾಗಿ ಹೇಳಿ ಎಲ್ಲ ವಿವರವನ್ನು ಸಲ್ಲಿಸುವಂತೆ ಸೂಚಿಸಿದ್ದರು. ಜಾಮೀನು ಭದ್ರತೆಗಾಗಿ ದೊಡ್ಡ ಮೊತ್ತದ ಹಣದ ಎರಡು ಚೆಕ್ ಅನ್ನು ಠೇವಣಿ ಇಡುವಂತೆ ಹೇಳಿ ಜಾಮೀನು ಆದೇಶ ಪ್ರತಿಯನ್ನು ಕಳುಹಿಸಿದ್ದರು. ಮಾನಸಿಕ ಹಿಂಸೆ ನೀಡಿದ್ದರು. ಜುಲೈ 24 ರಂದು ಹಣ ವರ್ಗಾಯಿಸಿದೆ. ವಂಚಕರು ಸೂಚಿಸಿದ ಬ್ಯಾಂಕ್ ಖಾತೆಗಳಿಗೆ ಹಂತ ಹಂತವಾಗಿ ₹34 ಲಕ್ಷ ಹಣವನ್ನು ವರ್ಗಾವಣೆ ಮಾಡಿದೆ. ನಂತರ ನಡೆದ ಎಲ್ಲ ಘಟನೆಯನ್ನು ಕುಟುಂಬ ಸದಸ್ಯರಿಗೆ ತಿಳಿಸಿದೆ’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಆಕ್ಸಿಸ್ ಬ್ಯಾಂಕ್‌ನಿಂದ ₹ 14.50 ಲಕ್ಷ, ಎಚ್‌ಡಿಎಫ್‌ಸಿ ಬ್ಯಾಂಕ್‌ನಿಂದ ₹1.2 ಲಕ್ಷ, ಚಿನ್ನ ಅಡವಿಟ್ಟು ₹1.1 ಲಕ್ಷ, ಫ್ಲಿಪ್ ಕಾರ್ಟ್‌ನಿಂದ ₹4.5 ಲಕ್ಷ, ಕ್ರೆಡ್ ಆ್ಯಪ್‌ನಿಂದ ₹2.5 ಲಕ್ಷ, ಎಲ್‌ಐಸಿ ವಿಮೆಯಿಂದ ₹2.2 ಲಕ್ಷ ಸಾಲ ಮಾಡಿದ್ದೆ. ನನ್ನ ಬಳಿ ಇದ್ದ ಹಣವೂ ಸೇರಿ ಒಟ್ಟಾರೆ ₹34 ಲಕ್ಷ ಹಣ ವರ್ಗಾಯಿಸಿದ್ದೇನೆ’ ಎಂದು ವಿವರಿಸಿದ್ದಾರೆ.

₹1.5 ಲಕ್ಷ ಕೋಟಿ ಅನುದಾನಕ್ಕೆ ಡಿಸಿಎಂ ಮನವಿ



ಹಳದಿ ಮಾರ್ಗ: ವೇಳಾಪಟ್ಟಿ ನಿಗದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್.ವಿ.ರಸ್ತೆ–ಡೆಲ್ಟಾ ಎಲೆಕ್ಟ್ರಾನಿಕ್ಸ್ ಬೊಮ್ಮಸಂದ್ರ ನಡುವಿನ ಹಳದಿ ಮಾರ್ಗದಲ್ಲಿ ಆ.11ರಂದು ಪ್ರಯಾಣಿಕರಿಗಾಗಿ ರೈಲುಗಳ ಸಂಚಾರ ಆರಂಭವಾಗಲಿದ್ದು, ವೇಳಾಪಟ್ಟಿಯನ್ನು ನಿಗದಿಪಡಿಸಲಾಗಿದೆ.

ಎರಡು ಟರ್ಮಿನಲ್ ಸೇರಿ ಎಲ್ಲ 16 ನಿಲ್ದಾಣಗಳಲ್ಲಿ ನಿಲುಗಡೆ ಇರಲಿದೆ. ಡೆಲ್ಟಾ ಎಲೆಕ್ಟ್ರಾನಿಕ್ಸ್ ಬೊಮ್ಮಸಂದ್ರದಿಂದ ಕೊನೆಯ ರೈಲು ರಾತ್ರಿ 11.15ಕ್ಕೆ ಮತ್ತು ಆರ್.ವಿ.ರಸ್ತೆ ಇಂಟರ್‌ಚೇಂಜ್ ನಿಲ್ದಾಣದಿಂದ ಕೊನೆಯ ರೈಲು ರಾತ್ರಿ 11.50ಕ್ಕೆ ಹೊರಡುತ್ತದೆ. ಬೆಳಿಗ್ಗೆ 6.30 ರಿಂದ ಡೆಲ್ಟಾ ಎಲೆಕ್ಟ್ರಾನಿಕ್ಸ್ ಬೊಮ್ಮಸಂದ್ರದಿಂದ ಹಾಗೂ ಬೆಳಿಗ್ಗೆ 7.10 ರಿಂದ ಆರ್.ವಿ. ರಸ್ತೆ ಮೆಟ್ರೊ ನಿಲ್ದಾಣದಿಂದ ಪ್ರತಿ 25 ನಿಮಿಷಕ್ಕೊಮ್ಮೆ ರೈಲುಗಳು ಸಂಚರಿಸಲಿವೆ. ರಾತ್ರಿ 10 ಗಂಟೆಯ ನಂತರ ರೈಲು ಸಂಚಾರದ ಅವಧಿ ಕಡಿಮೆಯಾಗಲಿದೆ.

ಪ್ರತಿ ಭಾನುವಾರ ರೈಲು ಸಂಚಾರ ಬೆಳಿಗ್ಗೆ 6.30ರ ಬದಲಾಗಿ 7ಕ್ಕೆ ಪ್ರಾರಂಭವಾಗಲಿದೆ. ಹಳದಿ ಮಾರ್ಗದ ಟರ್ಮಿನಲ್ ನಿಲ್ದಾಣಗಳ ನಡುವಿನ ಪ್ರಯಾಣದ ದರ ₹ 60 ಆಗಿದೆ. ಟೋಕನ್, ಎನ್‌ಸಿಎಂಸಿ ಕಾರ್ಡ್, ಬಿಎಂಆರ್‌ಸಿಎಲ್ ಸ್ಮಾರ್ಟ್ ಕಾರ್ಡ್, ಕ್ಯೂಆರ್ ಟಿಕೆಟ್ ಲಭ್ಯವಿವೆ.

ಹೆಚ್ಚು ರೈಲು ಬೋಗಿಗಳು ಪೂರೈಕೆಯಾಗುತ್ತಿದ್ದಂತೆ, ರೈಲುಗಳ ಟ್ರಿಪ್ ಹೆಚ್ಚಿಸಲಾಗುವುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರು ಸಮಗ್ರ ಅಭಿವೃದ್ಧಿ ಯೋಜನೆಗೆ ನೆರವು ಒದಗಿಸಿ
• ಪ್ರಧಾನಿ ನರೇಂದ್ರ ಮೋದಿಗೆ ಮನವಿ ಪತ್ರ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರದ ಸಮಗ್ರ ಅಭಿವೃದ್ಧಿಗಾಗಿ ಕೈಗೊಂಡಿರುವ ಯೋಜನೆಗಳ ಅಂದಾಜು ವೆಚ್ಚ ₹ 1.50 ಲಕ್ಷ ಕೋಟಿಯಾಗಿದ್ದು, ಕೇಂದ್ರ ಸರ್ಕಾರವು ಸಮರ್ಪಕ ಅನುದಾನವನ್ನು ಒದಗಿಸಬೇಕು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಮಾಡಿದ್ದಾರೆ.

ಸುರಂಗ ರಸ್ತೆ, ಆರ್ಟಿರಿಯಲ್ ರಸ್ತೆಗಳ ಬಳಿ ಎಲಿವೇಟೆಡ್ ಕಾರಿಡಾರ್ ನಿರ್ಮಾಣ, ಪೆರಿಫೆರಲ್ ವರ್ತುಲ ರಸ್ತೆ, ಘನತ್ಯಾಜ್ಯ ವಿಲೇವಾರಿ ಸೇರಿದಂತೆ ಇತರೇ ಮೂಲಸೌಕರ್ಯಗಳ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗಿದೆ ಎಂದು ಮನವಿ ಪತ್ರದಲ್ಲಿ ತಿಳಿಸಿದ್ದಾರೆ.

‘ಕರ್ನಾಟಕವು ವರ್ಷಕ್ಕೆ ಸುಮಾರು ₹4.50 ಲಕ್ಷ ಕೋಟಿ ತೆರಿಗೆ ಪಾವತಿಸುತ್ತಿದೆ. ಬೆಂಗಳೂರು ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರ ಎಂದು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಈಗಾಗಲೇ ಕರ್ನಾಟಕ ಸರ್ಕಾರವು ಯಶಸ್ವಿಯಾಗಿ ಮೆಟ್ರೊ ಮಾರ್ಗ ಹಾಗೂ ಡಬಲ್ ಡೆಕರ್ ಅನುಷ್ಠಾನಗೊಳಿಸಿದೆ. ಐದನೇ ಹಂತದ ಕಾವೇರಿ ಕುಡಿಯುವ ನೀರು ಯೋಜನೆಯೂ ಯಶಸ್ವಿಯಾಗಿದೆ. ಹೆಚ್ಚುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚುವರಿಯಾಗಿ ಕುಡಿಯುವ ನೀರಿನ ಯೋಜನೆಗಳು, ರಾಜಕಾಲುವೆಗಳ ಪಕ್ಕದಲ್ಲಿ ನೂತನ ರಸ್ತೆಗಳ ನಿರ್ಮಾಣ ಇತ್ಯಾದಿ ಯೋಜನೆಗಳಿಂದ ಬೆಂಗಳೂರು ಇನ್ನಷ್ಟು ಪ್ರಮುಖ ನಗರವಾಗಿ ಅಭಿವೃದ್ಧಿಯಾಗಲಿದೆ’ ಎಂದು ವಿವರಿಸಿದ್ದಾರೆ.



ಪ್ರಧಾನಿ ನರೇಂದ್ರ ಮೋದಿ ಅವರಿಗೆ ಡಿ.ಕೆ. ಶಿವಕುಮಾರ್ ಮನವಿ ಸಲ್ಲಿಸಿ ಚರ್ಚಿಸಿದರು

ರಾಪಿಡ್ ರೈಲ್ ಟ್ರಾನ್ಸಿಟ್ ಸಿಸ್ಟಮ್ ತನ್ನಿ

ಬೆಂಗಳೂರು-ಬಿಡದಿ- ಮೈಸೂರು, ಬೆಂಗಳೂರು- ಹಾರೋಹಳ್ಳಿ- ಕನಕಪುರ, ಬೆಂಗಳೂರು- ನೆಲಮಂಗಲ- ತುಮಕೂರು, ಬೆಂಗಳೂರು- ಏರ್ ಪೋರ್ಟ್- ಚಿಕ್ಕಬಳ್ಳಾಪುರ, ಬೆಂಗಳೂರು- ಹೊಸಕೋಟೆ- ಕೋಲಾರಕ್ಕೆ ರಾಪಿಡ್ ರೈಲ್ ಟ್ರಾನ್ಸಿಟ್ ಸಿಸ್ಟಮ್ (ಆರ್‌ಆರ್‌ಟಿಎಸ್) ಯೋಜನೆಯಡಿ ‘ನಮೋ ಭಾರತ್ ರೈಲು ಯೋಜನೆ’ ಅನುಷ್ಠಾನಗೊಳಿಸಲು ಡಿ.ಕೆ. ಶಿವಕುಮಾರ್ ಮನವಿ ಸಲ್ಲಿಸಿದರು.

ನಗರದಲ್ಲಿ ದಿನವೊಂದಕ್ಕೆ 6,500 ಮೆಟ್ರಿಕ್ ಟನ್ ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು ಇದರ ವೈಜ್ಞಾನಿಕ ವಿಲೇವಾರಿಗೆ ಸಿಎನ್‌ಜಿ ತಯಾರಿಕಾ ಘಟಕ, ಗೊಬ್ಬರ ಘಟಕ, ವೇಸ್ಟ್ ಎನರ್ಜಿ ಘಟಕಗಳ ಸ್ಥಾಪನೆಗೆ ಬೆಂಬಲ ನೀಡುವಂತೆ ಕೋರಿದ್ದಾರೆ.

ಸುರಂಗ ರಸ್ತೆ ಹಾಗೂ ಎಲಿವೇಟೆಡ್ ಕಾರಿಡಾರ್ ನಿರ್ಮಾಣಕ್ಕೆ ₹ 41,780 ಕೋಟಿ, ಪ್ರಮುಖ ರಸ್ತೆಗಳ ಬಳಿ ಎಲಿವೇಟೆಡ್ ಕಾರಿಡಾರ್‌ಗಳ ನಿರ್ಮಾಣಕ್ಕೆ ₹ 15 ಸಾವಿರ ಕೋಟಿ, ಪೆರಿಫೆರಲ್ ರಿಂಗ್ ರಸ್ತೆ ನಿರ್ಮಾಣಕ್ಕೆ ₹ 27,000 ಕೋಟಿ, ಘನತ್ಯಾಜ್ಯ ವಿಲೇವಾರಿಗೆ ₹3,200 ಕೋಟಿ, ಡಬಲ್ ಡೆಕರ್‌ಗಳ ನಿರ್ಮಾಣಕ್ಕೆ ₹ 8,916 ಕೋಟಿ ವೆಚ್ಚವಾಗಲಿದೆ. ಮೆಟ್ರೊ ಹಂತ 2, 2ಎ, 3, 3ಎ ಯೋಜನೆಗಳ ಅನುಷ್ಠಾನದಿಂದ ರೈಲು ಮಾರ್ಗದ ಒಟ್ಟು ಉದ್ದ 128 ಕಿ.ಮೀಗೆ ವಿಸ್ತಾರಣೆ ಆಗಲಿದೆ ಎಂದು ಮಾಹಿತಿ ನೀಡಿದ್ದಾರೆ.

ರಾಜಕಾಲುವೆಗಳ ಪಕ್ಕ ಹೊಸ ರಸ್ತೆಗಳ ನಿರ್ಮಾಣಕ್ಕೆ ₹3000 ಕೋಟಿ ವೆಚ್ಚವಾಗಬಹುದು ಎಂದು ಅಂದಾಜಿಸಲಾಗಿದೆ. ನಗರಕ್ಕೆ ಹೆಚ್ಚುವರಿಯಾಗಿ ಕುಡಿಯುವ ನೀರು ಪೂರೈಕೆ ಯೋಜನೆಗಳಿಗೆ ₹6,939 ಕೋಟಿ ಅನುದಾನ ಬೇಕಾಗಬಹುದು ಎಂದು ಪ್ರಧಾನಿ ಮೋದಿ ಅವರಿಗೆ ಸಲ್ಲಿಸಿದ ಮನವಿಯಲ್ಲಿ ಡಿ.ಕೆ.ಶಿವಕುಮಾರ್ ಅವರು ತಿಳಿಸಿದ್ದಾರೆ.

ಪ್ರಧಾನಿಗೆ ಹೂಮಳೆ: ಸಡಗರದ ಸ್ವಾಗತ

ಬೆಂಗಳೂರು: ನಮ್ಮ ಮೆಟ್ರೊ ಹಳದಿ ಮಾರ್ಗಕ್ಕೆ ಚಾಲನೆ ಸೇರಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿಯಾಗಲು ಭಾನುವಾರ ರಾಜಧಾನಿಗೆ ಬಂದಿದ್ದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬಿಜೆಪಿ ಕಾರ್ಯಕರ್ತರು, ಅಭಿಮಾನಿಗಳು ದಾರಿಯುದ್ದಕ್ಕೂ ಹೂಮಳೆ, ಅದ್ದೂರಿ ಸ್ವಾಗತ ನೀಡಿದರು.

ಮೇಖ್ರಿ ವೃತ್ತದ ಬಳಿ ಇರುವ ವಾಯುಪಡೆಯ ತರಬೇತಿ ಕೇಂದ್ರಕ್ಕೆ ಬಂದಿಳಿದ ಅವರು, ಅಲ್ಲಿಂದ ಹೊರಬರುತ್ತಿದ್ದಂತೆ ರಸ್ತೆಯ ಅಕ್ಕಪಕ್ಕ ನಿಂತಿದ್ದ ಬಿಜೆಪಿ ಕಾರ್ಯಕರ್ತರು ದೂರದಿಂದಲೇ ಸ್ವಾಗತ ಕೋರಿದರು. ಇದು ಮೋದಿಯವರು ಹೋದೆಡೆಯಲ್ಲೆಲ್ಲ ಮುಂದುವರಿದಿತ್ತು.

ಮೆಟ್ರೊ ನೂತನ ಮಾರ್ಗ ಉದ್ಘಾಟಿಸಿದ ಮೋದಿ ಅವರು, ರಾಗಿಗುಡ್ಡದಿಂದ ಎಲೆಕ್ಟ್ರಾನಿಕ್ಸ್ ಸಿಟಿ ಮೆಟ್ರೊ ಸ್ಟೇಷನ್‌ವರೆಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಹಾಗೂ ಕೇಂದ್ರ ನಗರ ವ್ಯವಹಾರಗಳ ಸಚಿವ ಮನೋಹರ ಲಾಲ್ ಖಟ್ಟರ್ ಅವರನ್ನು ಎಡಬಲದಲ್ಲಿ ಕೂರಿಸಿಕೊಂಡು ಪ್ರಯಾಣ ಬೆಳೆಸಿದರು.

ಹಳದಿ ಮಾರ್ಗ ಉದ್ಘಾಟನೆಗಾಗಿ ಆರ್.ವಿ. ರಸ್ತೆ ಮೂಲಕ ರಾಗಿಗುಡ್ಡಕ್ಕೆ ಬರುತ್ತಿದ್ದಂತೆ ಅವರಿದ್ದ ಕಾರಿನ ಮೇಲೆ ಹೂವಿನ ಮಳೆಗರೆಯಲಾಯಿತು. ಪೂಜಾ ಕುಣಿತ, ಆಂಜನೇಯ ವೇಷದ ಕುಣಿತ, ಕೀಲು ಕುದುರೆ ಕುಣಿತಗಳು ಅವರನ್ನು ಸ್ವಾಗತಿಸಿದವು. ಅಭಿಮಾನಿಗಳು, ಕಾರ್ಯಕರ್ತರು ಮೋದಿ ಮೋದಿ ಎಂದು ಕೂಗಿದರು. ಇದಕ್ಕೆ ಪ್ರತಿಯಾಗಿ ಒಂದಷ್ಟು ಜನರು ಡಿ.ಕೆ ಡಿ.ಕೆ ಎಂದು ಕೂಗಿದರು.

ರಾಗಿಗುಡ್ಡ ಮೆಟ್ರೊ ನಿಲ್ದಾಣವನ್ನು ಭದ್ರತಾ ಕಾರಣಕ್ಕಾಗಿ ನಿಯಂತ್ರಿತ ಪ್ರದೇಶ ಎಂದು ಘೋಷಿಸಿ 200 ಮೀಟರ್ ದೂರದಲ್ಲೇ ಅಭಿಮಾನಿಗಳನ್ನು ನಿಯಂತ್ರಿಸಲಾಗಿತ್ತು. ರಸ್ತೆಯ ಎರಡೂ ಕಡೆಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಾಯಕರ ಫ್ಲೆಕ್ಸ್‌ಗಳು ರಾರಾಜಿಸಿದವು. ಮೋದಿಯವರ ಪ್ರತಿರೂಪದಂತಿದ್ದ ವ್ಯಕ್ತಿ ಆಕರ್ಷಣೆಯ ಕೇಂದ್ರವಾದರೆ, ಕಲಾಕೃತಿಯಲ್ಲಿ ಅರಳಿದ ಮೋದಿಯ ಚಿತ್ರಗಳು ಗಮನ ಸೆಳೆದವು.


ಮೋದಿ ಅವರು ರಾಗಿಗುಡ್ಡ ನಿಲ್ದಾಣಕ್ಕೆ ಬಂದಾಗ ಅವರಿಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನಗರದ ಅತಿ ಎತ್ತರದ ಇಂಟರ್‌ಚೇಂಜ್ ಆಗಿರುವ ಜಯದೇವ ಮೆಟ್ರೊ ನಿಲ್ದಾಣದ ಬಗ್ಗೆ ವಿವರ ನೀಡಿದರು. ಮುಖ್ಯಮಂತ್ರಿ ಸಹಿತ ಉಳಿದವರು ಸಾಥ್ ನೀಡಿದರು. ಮೆಟ್ರೊ ಒಳಗೆ ಇದ್ದ ವಿದ್ಯಾರ್ಥಿ–ವಿದ್ಯಾರ್ಥಿನಿಯರನ್ನು ಪ್ರಧಾನಿ ಮಾತನಾಡಿಸಿದರು. ಮೆಟ್ರೊ ಸಿಬ್ಬಂದಿ ಜೊತೆಗೆ ಚರ್ಚೆ ನಡೆಸಿದರು.

ಎಲೆಕ್ಟ್ರಾನಿಕ್ ಸಿಟಿಯಲ್ಲಿ ಎಲ್ಲರೂ ಇಳಿದು ಸಭಾ ಕಾರ್ಯಕ್ರಮಕ್ಕಾಗಿ ಐಐಐಟಿ ಸಭಾಂಗಣಕ್ಕೆ ತೆರಳಿದರು. ಕೇಂದ್ರದ ಬೃಹತ್ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ, ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಶಾಸಕರಾದ ಸಿ.ಕೆ. ರಾಮಮೂರ್ತಿ, ಎಂ. ಕೃಷ್ಣಪ್ಪ, ಸತೀಶ್ ರೆಡ್ಡಿ ಬರಮಾಡಿಕೊಂಡರು.


ರಾಗಿಗುಡ್ಡದಲ್ಲಿ ಪ್ರಧಾನಿ ಮೋದಿ ಅವರ ಬರುವಿಕೆಗಾಗಿ ಕಾಯುತ್ತಿದ್ದ ಅಭಿಮಾನಿಗಳು ಚಿತ್ರ: ಪುಷ್ಕರ್ ವಿ.

ಚಿಟಿಕೆ ಸುದ್ದಿ

ಹಸಿರು ಹಾವು ರಕ್ಷಣೆ


ಕೋಲಾರ ನಗರದ ಮನೆಯೊಂದರಲ್ಲಿ ಕಾಣಿಸಿಕೊಂಡ ‘ಬ್ಯಾಂಬೂ ಪಿಟ್ ವೈಪರ್’ ಹಾವು

ಕೋಲಾರ: ದಟ್ಟ ಹಸಿರು ಕಾಡುಗಳಲ್ಲಿ ಕಂಡುಬರುವ ಅತಿವಿಷಯುಕ್ತ ಹಸಿರು ಬಣ್ಣದ ‘ಬ್ಯಾಂಬೂ ಪಿಟ್ ವೈಪರ್’ ಕೋಲಾರದಲ್ಲಿ ಪತ್ತೆಯಾಗಿದೆ.

ನಗರದ ಜಯನಗರ ರಸ್ತೆಯಲ್ಲಿರುವ ಆಗ್ರೋ ಕಚೇರಿ ಹಿಂಭಾಗದ ಮನೆಯೊಂದರಲ್ಲಿ ಹಸಿರು ಬಣ್ಣದ ಈ ಹಾವು ಕಾಣಿಸಿಕೊಂಡಿತ್ತು. ಉರಗ ಸಂರಕ್ಷಕ ನಾಗರಾಜ್ ಹಾವು ಸಂರಕ್ಷಿಸಿ ಸುರಕ್ಷಿತವಾಗಿ ಕಾಡಿಗೆ ಬಿಟ್ಟಿದ್ದಾರೆ.

ಬೇಲಿ, ಗಿಡ, ಮರಗಳಲ್ಲಿ ಹೆಚ್ಚಾಗಿ ಕಂಡು ಬರುವ ಹಸಿರು ಬಣ್ಣದ ಈ ಹಾವನ್ನು ಸ್ಥಳೀಯರು ‘ಹಸಿರು ಹಾವು’ ಎಂದು ಕರೆಯುತ್ತಾರೆ. ತ್ರಿಕೋನದಾಕಾರದ ತಲೆ, ಬಳ್ಳಿಯಂತಹ ತೆಳ್ಳನೆಯ ದೇಹ ಹಾಗೂ ದೊಡ್ಡದಾದ ಕಣ್ಣು ಹೊಂದಿರುವ ಈ ವಿಷಕಾರಿ ಹಾವು ರಾತ್ರಿ ಹೊತ್ತು ಹೆಚ್ಚು ಚಟುವಟಿಕೆಯಿಂದ ಕೂಡಿರುತ್ತದೆ ಎಂದು ಸ್ನೇಕ್ ನಾಗರಾಜ್ ಹೇಳಿದರು.

‘ಎಸ್‌ಐಟಿ ತನಿಖೆ; ಮಧ್ಯಂತರ ವರದಿ ಪ್ರಕಟಿಸಿ’

ಹುಬ್ಬಳ್ಳಿ: ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸುತ್ತಿರುವ ಎಸ್‌ಐಟಿಯು ಕೂಡಲೇ ಮಧ್ಯಂತರ ವರದಿ ಪ್ರಕಟಿಸಬೇಕು ಎಂದು ಜೈನ ಸಮಾಜದ ಮುಖಂಡರು ಆಗ್ರಹಿಸಿದರು.

ಇಲ್ಲಿನ ವರೂರಿನ ನವಗ್ರಹತೀರ್ಥ ಕ್ಷೇತ್ರದಲ್ಲಿ ಗುಣಧರನಂದಿ ಮಹಾರಾಜರ ನೇತೃತ್ವದಲ್ಲಿ ಭಾನುವಾರ ನಡೆದ ಜೈನ ಸಮಾಜದ ಮುಖಂಡರು, ಮುನಿಗಳ ಸಭೆಯಲ್ಲಿ, ವಿವಿಧ ಬೇಡಿಕೆಗಳ ಕುರಿತು ಸೋಮವಾರ ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹ ಸಚಿವ ಜಿ.ಪರಮೇಶ್ವರ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಲು ನಿರ್ಣಯಿಸಲಾಯಿತು. ಸಾಕ್ಷಿ ದೂರುದಾರ ಹೇಳಿದ್ದ ಬಹುತೇಕ ಸ್ಥಳಗಳಲ್ಲಿ ಶೋಧ ಕಾರ್ಯ ನಡೆದಿದೆ. ಆತನನ್ನು ಮಂಪರು ಪರೀಕ್ಷೆಗೆ ಒಳಪಡಿಸಬೇಕು ಎಂದು ಮುಖಂಡರು ಒತ್ತಾಯಿಸಿದರು.

ಬ್ಯಾರಿಕೇಡ್ ಹಾರಿದ ಯುವಕ

ಹಲವೆಡೆ ವಾಹನ ಸಂಚಾರ ಬಂದ್: ಸವಾರರ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ನಗರಕ್ಕೆ ಭೇಟಿ ನೀಡಿದ ಹಿನ್ನೆಲೆಯಲ್ಲಿ ಪೊಲೀಸರು ಬಿಗಿ ಭದ್ರತೆ ಕೈಗೊಂಡಿದ್ದರಿಂದ ಸಾರ್ವಜನಿಕರು ತೊಂದರೆ ಅನುಭವಿಸಿದರು. ಹಲವೆಡೆ ವಾಹನ ಸಂಚಾರ ನಿರ್ಬಂಧಿಸಿದ ಪರಿಣಾಮ ಸಂಚಾರ ದಟ್ಟಣೆ ಉಂಟಾಗಿ, ಸವಾರರು ಪರದಾಡಿದರು.

‘ನಮ್ಮ ಮೆಟ್ರೊ’ ಹಳದಿ ಮಾರ್ಗದ ಉದ್ಘಾಟನೆಗಾಗಿ ಬಂದಿದ್ದ ನರೇಂದ್ರ ಮೋದಿ ಅವರನ್ನು ನೋಡಲು ಬೆಳಿಗ್ಗೆಯಿಂದಲೇ ಸಾವಿರಾರು ಜನರು ನಗರದ ಪ್ರಮುಖ ರಸ್ತೆಗಳಲ್ಲಿ ಜಮಾವಣೆಗೊಂಡಿದ್ದರು. ಪ್ರಧಾನಿ ಸಾಗುವ ಮಾರ್ಗ ಮಾತ್ರವಲ್ಲದೇ ವೇದಿಕೆ ಕಾರ್ಯಕ್ರಮ ನಡೆದ ಐಐಐಟಿ ಸಭಾಂಗಣದ ಸುತ್ತಮುತ್ತಲೂ ಬ್ಯಾರಿಕೇಡ್‌ಗಳನ್ನು ಅಳವಡಿಸಿ, ಬಿಗಿ ಬಂದೋಬಸ್ತ್ ಮಾಡಲಾಗಿತ್ತು.

ಭದ್ರತೆಯ ದೃಷ್ಟಿಯಿಂದ ಪೊಲೀಸರು 15 ಕಡೆ ವಾಹನಗಳ ಸಂಚಾರ ನಿರ್ಬಂಧಿಸಿ, ಪರ್ಯಾಯ ಮಾರ್ಗದ ವ್ಯವಸ್ಥೆ ಮಾಡಿದ್ದರು. ಕಾರ್ಯಕ್ರಮ ಮುಗಿಸಿ ಮೋದಿ ವಿಮಾನ ನಿಲ್ದಾಣ ಕಡೆಗೆ ತೆರಳುವ ವೇಳೆಗೆ ಮಧ್ಯಾಹ್ನ 3 ಗಂಟೆ ಆಗಿತ್ತು. ವೇದಿಕೆ ಕಾರ್ಯಕ್ರಮ ಮುಗಿಯುತ್ತಿದ್ದಂತೆ ಮಳೆಯೂ ಶುರುವಾಯಿತು. ಮೋದಿ ಅವರು ವಾಪಸ್ ತೆರಳುವ ಸಂದರ್ಭದಲ್ಲಿ ಮಳೆಯ ತೀವ್ರತೆ ಹೆಚ್ಚಾಗಿದ್ದರಿಂದ ಹೆಲಿಕಾಪ್ಟರ್ ಬದಲು ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಕಾರಿನಲ್ಲೇ ತೆರಳಿದರು.



ನಗರದ ಮೇಖ್ರಿ ವೃತ್ತದಲ್ಲಿ ಸೇರಿದ್ದ ಬಿಜೆಪಿ ಕಾರ್ಯಕರ್ತರು

ಪ್ರಧಾನಿ ವಾಹನ ತೆರಳಿದ ಬಳಿಕ ಇತರೆ ವಾಹನಗಳು ಒಮ್ಮೆಗೇ ಹೊರ ಹೋಗಲು ಮುಂದಾದವು. ವಾಹನಗಳ ದಟ್ಟಣೆ ಜೊತೆಗೆ ಜನದಟ್ಟಣೆ ತೀವ್ರವಾಗಿತ್ತು. ವಾಹನಗಳು ಹಾಗೂ ಜನರನ್ನು ನಿಯಂತ್ರಿಸಲು ಪೊಲೀಸರು ಹರಸಾಹಸ ಪಟ್ಟರು.

ಬೊಮ್ಮನಹಳ್ಳಿ ಮೇಲ್ಸೇತುವೆ, ಜಯನಗರ, ಮೇಖ್ರಿ ಸರ್ಕಲ್, ಎಲ್‌ಟಿಪಿ ರಸ್ತೆ, ಕಾಟನ್‌ಪೇಟೆ ಮುಖ್ಯ ರಸ್ತೆ, ಮೈಸೂರು ರಸ್ತೆ, ಮಾಗಡಿ ಮುಖ್ಯ ರಸ್ತೆ, ಕೆ.ಜಿ.ರಸ್ತೆ, ಮೈಸೂರು ಬ್ಯಾಂಕ್ ಜಂಕ್ಷನ್, ಸಾಗರ್ ಜಂಕ್ಷನ್, ಕೆ.ಜಿ.ಜಂಕ್ಷನ್, ರಾಜೀವ್ ಗಾಂಧಿ ಸರ್ಕಲ್, ಕನಕದಾಸ ಜಂಕ್ಷನ್‌ನಲ್ಲಿ ಸಂಚಾರ ದಟ್ಟಣೆ ಕಂಡು ಬಂತು. ದ್ವಿಚಕ್ರ ವಾಹನ ಸವಾರರು ತೊಯ್ದುಕೊಂಡು ಹೋದರು. ಕೆಲವರು ಕೊಡೆ ಹಿಡಿದು ಸಾಗಿದರು. ಮತ್ತೆ ಕೆಲವರು ಕಟ್ಟಡ ಹಾಗೂ ಮರದ ಕೆಳಗೆ ಆಶ್ರಯ ಪಡೆದರು.

ಬ್ಯಾರಿಕೇಡ್ ಹಾರಿದ ಯುವಕ: ಪ್ರಧಾನಿ ಮೋದಿ ಅವರು ಕೆಎಸ್‌ಆರ್ ರೈಲು ನಿಲ್ದಾಣದ ವೇದಿಕೆ ಕಾರ್ಯಕ್ರಮ ಮುಗಿಸಿ ಬೆಂಗಾವಲು ಪಡೆಯೊಂದಿಗೆ ಜೆ.ಪಿ.ನಗರದ ರಾಗಿಗುಡ್ಡ ಮೆಟ್ರೊ ನಿಲ್ದಾಣದತ್ತ ರಸ್ತೆ ಮಾರ್ಗವಾಗಿ ಹೋಗುತ್ತಿದ್ದಾಗ ಸೌತ್ ಎಂಡ್ ವೃತ್ತದ ಬಳಿ ಯುವಕನೊಬ್ಬ ಬ್ಯಾರಿಕೇಡ್ ಹಾರಿ ರಸ್ತೆಗೆ ನುಗ್ಗಲು ಯತ್ನಿಸಿದ. ಇದರಿಂದ ಸ್ಥಳದಲ್ಲಿ ಆತಂಕ ಸೃಷ್ಟಿಯಾಯಿತು.

ಈ ವೇಳೆ ಸ್ಥಳದಲ್ಲಿದ್ದ ಪೊಲೀಸರು ಯುವಕನನ್ನು ತಡೆದು ವಶಕ್ಕೆ ತೆಗೆದುಕೊಂಡರು. ಬಳಿಕ ಆತನ ವಿಚಾರಣೆ ನಡೆಸಿ, ಬಿಟ್ಟು ಕಳುಹಿಸಿದರು.

‘ಮೋದಿ ಅವರನ್ನು ಹತ್ತಿರದಿಂದ ನೋಡುವ ಹುಮ್ಮಸ್ಸಿನಲ್ಲಿ ಯುವಕ, ಬ್ಯಾರಿಕೇಡ್ ದಾಟಿ ರಸ್ತೆಗೆ ಬರಲು ಯತ್ನಿಸಿದ್ದಾನೆ ಎಂಬುದು ವಿಚಾರಣೆಯಲ್ಲಿ ಗೊತ್ತಾಗಿದೆ. ಯುವಕನ ಬಗ್ಗೆ ವಿಚಾರಣೆ ಮಾಡಿ ವೈಯಕ್ತಿಕ ಮಾಹಿತಿ ಕಲೆ ಹಾಕಲಾಗಿದೆ. ಆತನ ವಿರುದ್ಧ ಯಾವುದೇ ಪ್ರಕರಣ ದಾಖಲಿಸದೆ ಬಿಟ್ಟು ಕಳುಹಿಸಲಾಗಿದೆ. ಭದ್ರತಾ ವ್ಯವಸ್ಥೆಯಲ್ಲಿ ಯಾವುದೇ ಲೋಪವಾಗಿಲ್ಲ’ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಮೋದಿ ಅವರ ಭದ್ರತೆಗಾಗಿ ನಗರದಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಪೊಲೀಸರನ್ನು ನಿಯೋಜಿಸಿ ಎಲ್ಲೆಡೆ ಸರ್ಪಗಾವಲು ಹಾಕಲಾಗಿತ್ತು. ನಾಲ್ವರು ಜಂಟಿ ಪೊಲೀಸ್ ಆಯುಕ್ತರು, ಹತ್ತಕ್ಕೂ ಹೆಚ್ಚು ಉಪ ಪೊಲೀಸ್ ಆಯುಕ್ತರು, ಸಹಾಯಕ ಉಪ ಪೊಲೀಸ್ ಆಯುಕ್ತರು, ಇನ್‌ಸ್ಪೆಕ್ಟರ್‌ಗಳು ಮತ್ತು ಸಿಬ್ಬಂದಿ ಭದ್ರತಾ ಕಾರ್ಯದಲ್ಲಿ ತೊಡಗಿ, ಹದ್ದಿನ ಕಣ್ಣು ಇಟ್ಟಿದ್ದರು.

ಎನ್‌ಎಸ್‌ಯುಐ ಪದಾಧಿಕಾರಿಗಳ ಬಂಧನ, ಬಿಡುಗಡೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ನಗರಕ್ಕೆ ಭೇಟಿ ನೀಡಿದ್ದ ಹಿನ್ನೆಲೆಯಲ್ಲಿ ಪ್ರತಿಭಟನೆ ನಡೆಸುತ್ತಾರೆ ಎಂಬ ಶಂಕೆಯ ಮೇಲೆ ಎನ್‌ಎಸ್‌ಯುಐ ಪದಾಧಿಕಾರಿಗಳನ್ನು ಗೃಹ ಬಂಧನದಲ್ಲಿ ಇರಿಸಲಾಗಿತ್ತು ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎ.ಪಿ.ಬಸವರಾಜು ಆರೋಪಿಸಿದ್ದಾರೆ.

ಕಳೆದ ಲೋಕಸಭಾ ಚುನಾವಣೆ ವೇಳೆ ಮತ ಕಳ್ಳತನ ನಡೆದಿದೆ ಎಂದು ಆರೋಪಿಸಿ ಶುಕ್ರವಾರವಷ್ಟೇ ಕಾಂಗ್ರೆಸ್ ಪಕ್ಷವು ನಗರದಲ್ಲಿ ಪ್ರತಿಭಟನಾ ಸಮಾವೇಶ ಆಯೋಜಿಸಿತ್ತು. ಪದಾಧಿಕಾರಿಗಳು ಪ್ರತಿಭಟನೆ ನಡೆಸಬಹುದು ಎಂಬ ಕಾರಣಕ್ಕೆ ವಶಕ್ಕೆ ಪಡೆದು, ಸಂಜೆ ಬಳಿಕ ಎಲ್ಲರನ್ನೂ ಬಿಡುಗಡೆ ಮಾಡಲಾಯಿತು.

ಮೂವರ ಬಂಧನ: ‘ರಾಗಿಗುಡ್ಡ ಮೆಟ್ರೊ ನಿಲ್ದಾಣ’ ಎಂದು ನಾಮಕರಣ ಮಾಡಿರುವುದನ್ನು ವಿರೋಧಿಸಿದ್ದ ಬಹುಜನ ಮಹಾ ಸಭಾ ಸಂಘಟನೆ ಕಾರ್ಯದರ್ಶಿ ಎಂ.ಪಿ.ನಂಜೇಶ್ ಕುಮಾರ್ ಸೇರಿ ಮೂವರನ್ನು ಶನಿವಾರ ರಾತ್ರಿ ಪೊಲೀಸರು ಬಂಧಿಸಿದ್ದರು.

‘ಮಾರೇನಹಳ್ಳಿ ಮೆಟ್ರೊ ನಿಲ್ದಾಣ’ ಎಂದು ಘೋಷಿಸುವಂತೆ ಆಗ್ರಹಿಸಿ ಪದಾಧಿಕಾರಿಗಳು ಬಿಬಿಎಂಪಿ ದಕ್ಷಿಣ ವಲಯದ ಜಂಟಿ ಆಯುಕ್ತರಿಗೆ ಮನವಿ ಸಲ್ಲಿಸಿದ್ದರು. ಸ್ಥಳೀಯ ಶಾಸಕ ಸಿ.ಕೆ. ರಾಮಮೂರ್ತಿ ಸಹ ಮಾರೇನಹಳ್ಳಿ ಗ್ರಾಮಸ್ಥರಿಗೆ ಬೆಂಬಲ ನೀಡಿದ್ದರು. ರಾಗಿಗುಡ್ಡ ಮೆಟ್ರೊ ನಿಲ್ದಾಣ ಎದುರು ಪ್ರತಿಭಟನೆಗೆ ಅನುಮತಿ ನೀಡುವಂತೆ ಕೋರಿ ಜೆ.ಪಿ.ನಗರ ಠಾಣೆಗೆ ತೆರಳಿದ್ದ ಸಂಘಟನೆಯ ಪದಾಧಿಕಾರಿಗಳಾದ ಎಂ.ಪಿ.ನಂಜೇಶ್ ಕುಮಾರ್, ಸುರೇಶ್, ಮಣಿಕಂಠ ಅವರನ್ನು ಮುನ್ನೆಚ್ಚರಿಕೆಯಾಗಿ ಬಂಧಿಸಿ, ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಇರಿಸಲಾಗಿತ್ತು. ಶನಿವಾರ ರಾತ್ರಿ ಮೂವರನ್ನು ಹನುಮಂತ ನಗರ ಪೊಲೀಸ್ ಠಾಣೆಗೆ ಸ್ಥಳಾಂತರಿಸಲಾಗಿತ್ತು. ಭಾನುವಾರ ಬಿಡುಗಡೆ ಮಾಡಲಾಗಿದೆ.

ಬೆಂಗಳೂರು ಬಿಲ್ಲವ ಅಸೋಸಿಯೇಷನ್‌ನ ಸುವರ್ಣ ಸಂಭ್ರಮ

‘ಬಿಲ್ಲವರು, ಈಡಿಗರು ಎಂದೇ ಬರೆಸಿ’


ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ನಾನಾ ಭಾಗಗಳಲ್ಲಿ ನೆಲಸಿರುವ ಬಿಲ್ಲವರು, ಈಡಿಗರು ಆಯಾ ಭಾಗದಲ್ಲಿರುವಂತೆ ತಮ್ಮ ಜಾತಿಯ ಹೆಸರನ್ನೇ ಜಾತಿವಾರು ಗಣತಿ ವೇಳೆ ಬರೆಸಬೇಕು. ಅಡ್ಡಹೆಸರು ಇಲ್ಲವೇ ಉಪಜಾತಿ ಬರೆಸುವುದು ಬೇಡ’ ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಸಲಹೆ ನೀಡಿದರು.

ಬೆಂಗಳೂರಿನ ಅರಮನೆ ಆವರಣದಲ್ಲಿ ಭಾನುವಾರ ಆಯೋಜಿಸಿದ್ದ ಬಿಲ್ಲವ ಅಸೋಸಿಯೇಷನ್‌ನ ಸುವರ್ಣ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ‘ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಭಾಗದಲ್ಲಿ ಬಿಲ್ಲವರು, ಉತ್ತರ ಕನ್ನಡ ಭಾಗದಲ್ಲಿ ನೆಲಸಿರುವ ನಾಮಧಾರಿಗಳು, ಶಿವಮೊಗ್ಗ ಜಿಲ್ಲೆಯಲ್ಲಿರುವ ದೀವರು ಹಾಗೂ ಕರ್ನಾಟಕದ ಇತರೆ ಭಾಗಗಳಲ್ಲಿ ಇರುವ ಈಡಿಗರು ಅದೇ ಹೆಸರನ್ನು ನಮೂದಿಸಬೇಕು. ಇದರಿಂದ ಜಾತಿವಾರು ಜನಸಂಖ್ಯೆ ಬಗ್ಗೆ ನಿಖರ ಮಾಹಿತಿ ದೊರೆಯಲಿದ್ದು ಸೌಲಭ್ಯಗಳನ್ನು ಪಡೆಯಲು ಸಹಕಾರಿಯಾಗಲಿದೆ’ ಎಂದು ಹೇಳಿದರು.

‘ಕೇರಳದಲ್ಲಿ 117 ಶಿಕ್ಷಣ ಸಂಸ್ಥೆಗಳನ್ನು ನಾರಾಯಣಗುರುಗಳ ಹೆಸರಿನಲ್ಲಿ ಸ್ಥಾಪಿಸಲಾಗಿದೆ. ಕರ್ನಾಟಕದಲ್ಲೂ ಶಿಕ್ಷಣ ಸಂಸ್ಥೆ ಸ್ಥಾಪಿಸಲು ಐದು ಎಕರೆ ಭೂಮಿ ಕೊಡಬೇಕು. ಒಂದು ಎಕರೆ ಜಮೀನು ಒದಗಿಸಿದರೆ ಬಿಲ್ಲವ ಸಂಘದಿಂದ ಮಹಿಳಾ ಹಾಸ್ಟೆಲ್ ನಿರ್ಮಿಸಲಾಗುವುದು’ ಎಂದರು.

‘ಕರ್ನಾಟಕದ ನಾನಾ ಭಾಗಗಳಲ್ಲಿ ಸಮುದಾಯದವರನ್ನು ಬೇರೆ ಬೇರೆ ಹೆಸರಿನಲ್ಲಿ ಕರೆಯಲಾಗುತ್ತದೆ. ಸಂಸ್ಕೃತಿಯು ಭಿನ್ನವಾಗಿದೆ.


ಬೆಂಗಳೂರು ಬಿಲ್ಲವ ಅಸೋಸಿಯೇಷನ್‌ನ ಸುವರ್ಣ ಸಂಭ್ರಮ ಕಾರ್ಯಕ್ರಮದಲ್ಲಿ ಆರ್ಯ ಈಡಿಗ ಸಂಸ್ಥಾನದ ವಿಖ್ಯಾತಾನಂದ ಸ್ವಾಮೀಜಿ ಮಾತನಾಡಿದರು ಪ್ರಜಾವಾಣಿ ಚಿತ್ರ

ತುಳುನಾಡ ಸಂಸ್ಕೃತಿ ಅನಾವರಣ

ಬೆಂಗಳೂರಿನಲ್ಲಿ ದಶಕಗಳಿಂದ ನೆಲಸಿರುವ ಕರಾವಳಿ ಮೂಲದ ಬಿಲ್ಲವ ಸಮುದಾಯದ ಹಲವರು ಸುವರ್ಣ ಸಂಭ್ರಮದಲ್ಲಿ ಕುಟುಂಬದೊಂದಿಗೆ ಭಾಗಿಯಾಗಿ ಸಂಭ್ರಮಿಸಿದರು. ತುಳುನಾಡಿನ ಸಂಸ್ಕೃತಿ ಬಿಂಬಿಸುವ ಕಲಾ ಪರಿಸರ, ಸಾಂಸ್ಕೃತಿಕ ಕಾರ್ಯಕ್ರಮಗಳು, ಊಟೋಪಚಾರ ಸಮುದಾಯದವರನ್ನು ಬೆಸೆದವು. ಮಳೆಯ ನಡುವೆಯೂ ಉತ್ಸಾಹದಿಂದ ಪಾಲ್ಗೊಂಡಿದ್ದರು.

ಎಲ್ಲರೂ ಶಿಕ್ಷಣಕ್ಕೆ ಒತ್ತು ನೀಡಬೇಕು. ಸಮುದಾಯದ ಯುವಕರು ಕೊಲೆ ಮಾಡಿ ಜೈಲಿಗೆ ಸೇರುವುದು ಇಲ್ಲವೇ ಕೊಲೆಯಾಗುವಂತ ಸನ್ನಿವೇಶಗಳನ್ನು ಸೃಷ್ಟಿಸಿಕೊಳ್ಳಬೇಡಿ. ನಾರಾಯಣ ಗುರುಗಳ ಆದರ್ಶದಂತೆ ಬದುಕು ಕಟ್ಟಿಕೊಳ್ಳಿ’ ಎಂದು ಕಿವಿಮಾತು ಹೇಳಿದರು.

ಸ್ಮರಣ ಸಂಚಿಕೆ ಬಿಡುಗಡೆ ಮಾಡಿದ ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್, ‘ಬಿಲ್ಲವ ಸಮುದಾಯದವರು ಒಂದು ಕಡೆ ಸೇರಿ ಸಂಭ್ರಮದಲ್ಲಿ ತೊಡಗಿರುವುದು ಒಳ್ಳೆಯದು. ಒಗ್ಗಟ್ಟಿನ ಮೂಲಕ ಇತರೆ ಸಮುದಾಯದೊಂದಿಗೆ ಸಮನ್ವಯ ಸಾಧಿಸಬೇಕು’ ಎಂದು ನುಡಿದರು.

ಸೋಲೂರಿನ ಆರ್ಯ ಈಡಿಗ ಸಂಸ್ಥಾನದ ನಾರಾಯಣಗುರು ಮಠದ ಶ್ರೀ ವಿಖ್ಯಾತಾನಂದ ಸ್ವಾಮೀಜಿ, ಸಂಸದ ಕೋಟಾ ಶ್ರೀನಿವಾಸ ಪೂಜಾರಿ, ಗ್ಯಾರಂಟಿ ಅನುಷ್ಠಾನ ಸಮಿತಿಯ ರಾಜ್ಯ ಘಟಕದ ಅಧ್ಯಕ್ಷ ಎಚ್.ಎಂ.ರೇವಣ್ಣ, ಶಾಸಕರಾದ ವಿ.ಸುನೀಲ್ ಕುಮಾರ್, ಬೇಳೂರು ಗೋಪಾಲಕೃಷ್ಣ, ಉಮಾನಾಥ ಕೋಟ್ಯಾನ್, ಮಾಜಿ ಸಚಿವ ಮಾಲೀಕಯ್ಯ ಗುತ್ತೇದಾರ್, ಮಾಜಿ ಶಾಸಕರಾದ ಗೋಪಾಲ ಪೂಜಾರಿ, ಕೆ.ಹರೀಶ್ ಕುಮಾರ್, ಹಿಂದುಳಿದ ವರ್ಗಗಳ ಆಯೋಗದ ಸದಸ್ಯೆ ಪ್ರತಿಭಾ ಕುಳಾಯಿ, ಬಿಲ್ಲವ ಅಸೋಸಿಯೇಷನ್ ಅಧ್ಯಕ್ಷ ಎಂ.ವೇದಕುಮಾರ್, ಪ್ರಧಾನ ಕಾರ್ಯದರ್ಶಿ ಡಿ.ಎನ್.ಸಂಪತ್ ಕುಮಾರ್, ಪದಾಧಿಕಾರಿಗಳು ಇದ್ದರು.

ಸನ್ಮಾನ: ಸುವರ್ಣ ಮಹೋತ್ಸವ ನೆನಪಿನಲ್ಲಿ ಬೆಂಗಳೂರು ಬಿಲ್ಲವ ಅಸೋಸಿಯೇಷನ್‌ನ ಮಾಜಿ ಅಧ್ಯಕ್ಷ ವಸಂತ ಕುಮಾರ್ ಬಂಗೇರ, ಯು.ಬಿ. ರವಿರಂಜನ್, ವಾಸುದೇವ ಕೋಟ್ಯಾನ್, ಎಂ.ಪ್ರಕಾಶ್, ಕೆ.ಎಚ್.ಆನಂದ್, ವಿಜಯಕೃಷ್ಣ ಪಡುಕೋಣೆ, ಲಲಿತಾ ಸುವರ್ಣ, ಭಾಸ್ಕರ ಅಮೀನ್, ಗೌರವ ಅಧ್ಯಕ್ಷ ನೆಕ್ಕಿದಪುಣೆ ಗೋಪಾಲಕೃಷ್ಣ ಅವರನ್ನು ಸನ್ಮಾನಿಸಲಾಯಿತು.


ಯಲಹಂಕದಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಪ್ರಾದೇಶಿಕ ಕೇಂದ್ರ ಹಾಗೂ ಆಕ್ಸ್‌ಫರ್ಡ್ ಪದವಿ ಕಾಲೇಜಿನ ಸಹಯೋಗದಲ್ಲಿ ಗುರುವಾರ ನಡೆದ ಶೈಕ್ಷಣಿಕ ವಿಚಾರಗೋಷ್ಠಿಯಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಪ್ರಾದೇಶಿಕ ಕೇಂದ್ರದ ನಿರ್ದೇಶಕ ಸುಧಾಕರ ಹೊಸಹಳ್ಳಿ, ಆಕ್ಸ್‌ಫರ್ಡ್ ಪದವಿ ಕಾಲೇಜಿನ ಪ್ರಾಂಶುಪಾಲ ಬಸವೇಶಗೌಡ ಉಪಸ್ಥಿತರಿದ್ದರು

ವಿಷ್ಣುವರ್ಧನ್ ಸ್ಮಾರಕ ನಿರ್ಮಿಸಿ: ಶೋಭಾ ಕರಂದ್ಲಾಜೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನ ಅಭಿಮಾನ್ ಸ್ಟುಡಿಯೊ ಆವರಣದಲ್ಲಿರುವ ವಿಷ್ಣುವರ್ಧನ್ ಸಮಾಧಿಯನ್ನು ಶಾಶ್ವತವಾಗಿ ಸಂರಕ್ಷಿಸಿ ರಾಷ್ಟ್ರೀಯ ಮಟ್ಟದ ಆಕರ್ಷಣೆಯ ಕೇಂದ್ರವಾಗಿ ರೂಪಿಸಬೇಕು ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಒತ್ತಾಯಿಸಿದ್ದಾರೆ.


ಶೋಭಾ ಕರಂದ್ಲಾಜೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಈ ಕುರಿತು ಪತ್ರ ಬರೆದಿರುವ ಅವರು, ವಿಷ್ಣುವರ್ಧನ್ ಸಮಾಧಿಯ ಜಾಗವನ್ನು ಕೆಲವರು ತಮ್ಮ ಭೂಮಿ ಎಂದು ಹೇಳಿಕೊಂಡು, ಸಮಾಧಿಯನ್ನು ರಾತ್ರೋರಾತ್ರಿ ಧ್ವಂಸ ಮಾಡಿರುವುದು ನೋವು ತಂದಿದೆ. ವಿಷ್ಣು ಅವರ ಸಮಾಧಿ ಇರುವ ಜಾಗವನ್ನು ಸ್ಮಾರಕವನ್ನಾಗಿ ಮಾಡಿ, ಕನ್ನಡ ಮತ್ತು ಸಂಸ್ಕೃತಿಯ ಪ್ರತೀಕವಾಗಿ ಅಭಿವೃದ್ಧಿ ಪಡಿಸಬೇಕು ಎಂದು ಸಲಹೆ ನೀಡಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಭೂಮಿಯನ್ನು ತಕ್ಷಣ ಸ್ವಾಧೀನಪಡಿಸಿಕೊಂಡು ಮಾಲೀಕರಿಗೆ ನಿಯಮಾನುಸಾರ ಪರಿಹಾರ ನೀಡಬೇಕು ಎಂದು ಸೂಚಿಸಿದ್ದಾರೆ.

ನಗರದಲ್ಲಿ ಇಂದು

ಮುನೇಶ್ವರ ಸ್ವಾಮಿ ದೇವರ ಪ್ರತಿಷ್ಠಾಪನೆ, ನೂತನ ದೇವಾಲಯದ ಮಹಾ ಕುಂಭಾಭಿಷೇಕ ಪೂಜೆ: ಉಪಸ್ಥಿತಿ: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಕೆ.ಎಂ. ನಾಗರಾಜ್, ಆಯೋಜನೆ ಮತ್ತು ಸ್ಥಳ: ಮುನೇಶ್ವರ ದೇವಸ್ಥಾನ ಅಭಿವೃದ್ಧಿ ಸಂಘ ಟ್ರಸ್ಟ್, ಬೆಳಿಗ್ಗೆ 9.30

ಕೃಷಿ ವಿಶ್ವವಿದ್ಯಾಲಯ ಸ್ನಾತಕೋತ್ತರ ವಿಜ್ಞಾನ ಸಪ್ತಾಹ 2025: ಉದ್ಘಾಟನೆ: ಆರ್.ಸಿ. ಅಗರವಾಲ್, ಅಧ್ಯಕ್ಷತೆ: ಎಸ್.ವಿ. ಸುರೇಶ, ಆಯೋಜನೆ: ಕೃಷಿ ವಿಶ್ವವಿದ್ಯಾಲಯ, ಸ್ಥಳ: ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಕೇಂದ್ರ, ಜಿಕೆವಿಕೆ ಆವರಣ, ಹೆಬ್ಬಾಳ. ಬೆಳಿಗ್ಗೆ 9.30


ವಚನ ಶ್ರಾವಣ–2025: ಅಧ್ಯಕ್ಷತೆ: ಮೈತ್ರಿದೇವಿ ಜೆ., ಅತಿಥಿ: ಮುಕ್ತಾಂಬ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಆಡಿಟೋರಿಯಂ, ನಾಗಪ್ಪ ರಸ್ತೆ, ಶೇಷಾದ್ರಿಪುರ, ಬೆಳಿಗ್ಗೆ 10

ಸಂಪೂರ್ಣ ರಾಮಾಯಣ–ಪೌರಾಣಿಕ ನಾಟಕ: ಉದ್ಘಾಟನೆ: ರಮೇಶ್ ಡಿ.ಎಸ್., ಅತಿಥಿಗಳು: ಎಂ. ಜಗದೀಶ್, ಬಾಲಕೃಷ್ಣ, ಆಯೋಜನೆ: ವಿನಾಯಕ ಕಲಾ ಬಳಗ ಟ್ರಸ್ಟ್, ಸ್ಥಳ: ಮೈಸೂರು ಉದ್ಯಾನ ಕಲಾ ಸಂಘ ಭವನ, ಲಾಲ್‌ಬಾಗ್, ಬೆಳಿಗ್ಗೆ 10.30

ಸಾಂಗ್ಸ್ ಆಫ್ ನೇಚರ್ ಪ್ರದರ್ಶನ: ಆಯೋಜನೆ: ಊರ್ಜಾ ವಿನ್ಯಾಸ ಸ್ಟುಡಿಯೊ. ಸ್ಥಳ: ‘ಸಭಾ’, ಕಾಮರಾಜ್ ರಸ್ತೆ, ಬೆಳಿಗ್ಗೆ 11ರಿಂದ

228ನೇ ಮಾಸಿಕ ಸಮಾವೇಶ, ಅಕ್ಕಯ್ಯಮ್ಮ ನಂಜಪ್ಪ ಮತ್ತು ಎಂ.ನಂಜಪ್ಪ ಸ್ಮರಣಾರ್ಥ ದತ್ತಿ ಕಾರ್ಯಕ್ರಮ: ಅತಿಥಿ: ಹಂಪ ನಾಗರಾಜಯ್ಯ, ಗಾಯಕಿಗೆ ಸನ್ಮಾನ: ಶೈಲಜಾ, ಅಧ್ಯಕ್ಷತೆ: ಎಸ್. ಷಡಕ್ಷರಿ, ಆಯೋಜನೆ: ಸದಾಶಿವ ನಗರ ವೀರಶೈವ ಸಮಾಜ, ಸ್ಥಳ: ಬೃಂದಾವನ ಹಾಲ್, ಸದಾಶಿವ ನಗರ ಕ್ಲಬ್, ಸಂಜೆ 6.30

ಗುರುರಾಘವೇಂದ್ರಸ್ವಾಮಿಗಳ 354ನೇ ಆರಾಧನಾ ಮಹೋತ್ಸವ ಅಂಗವಾಗಿ ರಾಘವೇಂದ್ರ ಸದ್ಭಾವನಾ ಪ್ರಶಸ್ತಿ ಪ್ರದಾನ: ಅತಿಥಿಗಳು: ಎನ್.ಕೆ. ಸುಧೀಂದ್ರರಾವ್, ಮಹೇಶ್ ಜೋಶಿ, ಕೆ.ಕಲ್ಯಾಣ್, ಅಧ್ಯಕ್ಷತೆ: ಎಚ್.ಎಲ್. ಎನ್. ರಾವ್. ಪ್ರಶಸ್ತಿ ಪುರಸ್ಕೃತರು: ಎಂ.ಪಿ. ಮಂಜುನಾಥ್, ಚಿಂತನ್ ಚಿನ್ನಪ್ಪ, ಕೊಳ್ಳೇಗಾಲ ರಾಘವೇಂದ್ರ, ಬಿ.ವಿ. ನರಹರಿ ರಾವ್, ಕೆ.ಎನ್. ಪದ್ಮನಾಭ, ಬಿ.ಎಂ. ಬಸವರಾಜ್, ರೇಖಾ ಜಗದೀಶ್, ಭವ್ಯಶ್ರೀ ರೈ, ಹರಿಣಿ ಶ್ರೀಕಾಂತ್. ಪ್ರಿಯದರ್ಶಿನಿ, ಮಾಧವಾಚಾರ್ಯ, ನಾಗೇಂದ್ರ ಜೆಟ್ಟಿ. ಆಯೋಜನೆ: ಆರ್ಯಭಟ ಸಾಂಸ್ಕೃತಿಕ ಸಂಸ್ಥೆ. ಸ್ಥಳ: ಕೋದಂಡರಾಮ ವಿದ್ಯಾರ್ಥಿ ನಿಲಯ, ಕುಮಾರಕೃಪಾ ವೆಸ್ಟ್, ಬೆಳಿಗ್ಗೆ 9.30



ರಾಘವೇಂದ್ರ ಸ್ವಾಮಿಗಳ 354ನೇ ಆರಾಧನಾ ಮಹೋತ್ಸವದ ಪ್ರಯುಕ್ತ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ನೀಡುವವರು: ಅನುಷಾ ರಾಘವೇಂದ್ರ ಮತ್ತು ಸಂಗಡಿಗರು, ಆಯೋಜನೆ ಮತ್ತು ಸ್ಥಳ: ಉತ್ತರಾದಿ ಮಠ, ಸಹಕಾರ ನಗರ, ಸಂಜೆ 5.30

ಶ್ರೀ ರಾಘವೇಂದ್ರ ಸ್ವಾಮಿಗಳ 354ನೇ ಆರಾಧನಾ ಮಹೋತ್ಸವ: ಮುದ್ದುಮೋಹನ್ ಮತ್ತು ತಂಡದಿಂದ ಸಂಗೀತ ಕಛೇರಿ, ಆಯೋಜನೆ: ಶ್ರೀ ರಾಘವೇಂದ್ರ ಸೇವಾ ಸಮಿತಿ ಟ್ರಸ್ಟ್, ಸ್ಥಳ: ಶ್ರೀ ಗುರುರಾಜ ಸಭಾ ಭವನ, ಕೆಂಗೇರಿ ಉಪನಗರ, ಸಂಜೆ 6

‘ಗುರುರಾಯರ ಮಹಿಮೆ’-ಧಾರ್ಮಿಕ ಪ್ರವಚನ: ಕಲ್ಯಾ ಶ್ರೀಕಾಂತಾಚಾರ್ಯ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಸುಧೀಂದ್ರನಗರ, ಮಲ್ಲೇಶ್ವರ, ಸಂಜೆ 6.30

ರಾಘವೇಂದ್ರ ಸ್ವಾಮಿಗಳ 354ನೇ ಆರಾಧನಾ ಮಹೋತ್ಸವದ ಪ್ರಯುಕ್ತ ದಾಸಾಮೃತ: ದೈವೀ ವೀಣೆ: ಲತಾ, ಮಾನುಷಿ ವೀಣೆ:ಶ್ರುತಿ ಎಸ್., ಧನುವೀಣೆ: ಶ್ರವಂತ್, ನಂದಿವಾದ್ಯ: ಸರ್ವೋತ್ತಮ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರ ರಾಘವೇಂದ್ರ ಸ್ವಾಮಿಗಳ ಮಠ, ರಾತ್ರಿ 7

ರಾಘವೇಂದ್ರ ಸ್ವಾಮಿಗಳ 354ನೇ ಆರಾಧನಾ ಮಹೋತ್ಸವದ ಪ್ರಯುಕ್ತ ಹರಿದಾಸ ವೈಭವ: ಗಾಯನ: ಸುಷ್ಮಾ ಶ್ರೇಯಸ್, ಪಿಟೀಲು: ಎಂ.ಎಸ್. ಗೋವಿಂದಸ್ವಾಮಿ, ಮೃದಂಗ: ಗಣೇಶಮೂರ್ತಿ, ಆಯೋಜನೆ ಮತ್ತು ಸ್ಥಳ: ವ್ಯಾಸರಾಜ ಮಠ (ಸೋಸಲೆ), ರಾಜಾಜಿನಗರ 2ನೇ ಹಂತ, ಸಂಜೆ 7

ಕಡಿಮೆ ಸವಾಲುಗಳಿರಲಿ ಎಂದು ಬಯಸಬೇಡಿ, ಬಂದ ಸವಾಲುಗಳನ್ನೆಲ್ಲ ಎದುರಿಸಲು ಬೇಕಾದ ಬುದ್ಧಿವಂತಿಕೆ ಸಿದ್ಧಿಸಲಿ ಎಂದು ಆಶಿಸಿ.
–ಜಿಮ್ ರೌನ್



ವಿಮಾನಯಾನ ಉಜ್ವಲ ಭವಿಷ್ಯ ವಿಪುಲ ಅವಕಾಶ



• ಗುರುರಾಜ್ ಎಸ್. ದಾವಣಗೆರೆ

ಭಾರತದಲ್ಲಿ ನಾಗರಿಕ ವಿಮಾನಯಾನವು ಒಂದು ಶತಮಾನಕ್ಕೂ ಹೆಚ್ಚು ಕಾಲದ ಪ್ರಯಾಣವನ್ನು ಪೂರೈಸಿದೆ. ವಿಮಾನಯಾನ ಉದ್ಯಮ ಬೆಳೆದಂತೆ, ಪೈಲಟ್‌ಗಳು, ಎಂಜಿನಿಯರ್‌ಗಳು ಮತ್ತು ಇತರ ಸಿಬ್ಬಂದಿಗೆ ತರಬೇತಿ ನೀಡುವ ಅಗತ್ಯವೂ ಹೆಚ್ಚಾಯಿತು. 1930-40ರ ದಶಕಗಳಲ್ಲಿ ಕೆಲವು ಫ್ಲೈಯಿಂಗ್ ಕ್ಲಬ್‌ಗಳು ಮತ್ತು ಸಣ್ಣ ತರಬೇತಿ ಶಾಲೆಗಳು ಆರಂಭವಾದವು. ಈ ಸಂಸ್ಥೆಗಳು ಪ್ರಾಥಮಿಕವಾಗಿ ಪೈಲಟ್‌ಗಳಿಗೆ ತರಬೇತಿ ನೀಡುತ್ತಿದ್ದವು.

ಈಗ ನಾಗರಿಕ ವಿಮಾನಯಾನ ಶಿಕ್ಷಣ ಮತ್ತು ತರಬೇತಿಯನ್ನು ನೀಡುವ ಹಲವಾರು ಪ್ರಸಿದ್ಧ ಕಾಲೇಜುಗಳು ಮತ್ತು ಸಂಸ್ಥೆಗಳಿವೆ.

ಪೈಲಟ್ ತರಬೇತಿ, ವಿಮಾನ ನಿರ್ವಹಣಾ ಎಂಜಿನಿಯರಿಂಗ್ (ಎಎಂಇ), ಏರ್ ಟ್ರಾಫಿಕ್ ಕಂಟ್ರೋಲ್ (ಎಟಿಸಿ), ಕ್ಯಾಬಿನ್ ಸಿಬ್ಬಂದಿ, ಏರ್‌ಪೋರ್ಟ್ ಮ್ಯಾನೇಜ್‌ಮೆಂಟ್ ಮತ್ತು ಸಂಬಂಧಿತ ಕೋರ್ಸ್‌ಗಳನ್ನು ಇಲ್ಲಿ ನೀಡಲಾಗುತ್ತದೆ. ಕ್ಷೇತ್ರದಲ್ಲಿನ ನಿರಂತರ ಬೆಳವಣಿಗೆಯಿಂದಾಗಿ ಯುವಜನರಿಗೆ ಗುಣಮಟ್ಟದ ಶಿಕ್ಷಣ ಮತ್ತು ಉಜ್ವಲ ವೃತ್ತಿ ಅವಕಾಶಗಳು ದೊರಕುತ್ತಿವೆ.

ಇಂಡಿಯನ್ ಏವಿಯೇಷನ್ ಅಕಾಡೆಮಿ-ಐಎಎ: ಡೈರೆಕ್ಟರೇಟ್ ಜನರಲ್ ಆಫ್ ಸಿವಿಲ್ ಏವಿಯೇಷನ್ (ಡಿಜಿಸಿಎ), ಬ್ಯೂರೊ ಆಫ್ ಸಿವಿಲ್ ಏವಿಯೇಷನ್ ಸೆಕ್ಯೂರಿಟಿ (ಬಿಸಿಎಎಸ್) ಮತ್ತು ಏರ್‌ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ (ಎಎಐ) ಸಹಯೋಗದೊಂದಿಗೆ 2010ರಲ್ಲಿ ಸ್ಥಾಪಿಸಲಾದ ಐಎಎ, ವಿಮಾನಯಾನದ ವಿವಿಧ ವಿಭಾಗಗಳಲ್ಲಿ, ವಿಶೇಷವಾಗಿ ವಿಮಾನ ನಿಲ್ದಾಣ ನಿರ್ವಹಣೆ, ಸುರಕ್ಷತೆ ಮತ್ತು ಭದ್ರತೆಯಲ್ಲಿ ವೃತ್ತಿಪರ ತರಬೇತಿಯನ್ನು ನೀಡುತ್ತದೆ. ಕಾಲಾನಂತರದಲ್ಲಿ, ಕಮರ್ಷಿಯಲ್ ಪೈಲಟ್ ಲೈಸೆನ್ಸ್ (ಸಿಪಿಎಲ್) ಮತ್ತು ಪ್ರೈವೇಟ್ ಪೈಲಟ್ ಲೈಸೆನ್ಸ್ (ಪಿಪಿಎಲ್) ತರಬೇತಿಯನ್ನು ನೀಡುವ ಪೈಲಟ್ ತರಬೇತಿ ಸಂಸ್ಥೆಗಳು, ಎಎಂಇ, ಎಟಿಸಿ, ಕ್ಯಾಬಿನ್ ಸಿಬ್ಬಂದಿ ಮತ್ತು ವಿಮಾನ ನಿಲ್ದಾಣ ನಿರ್ವಹಣೆಗೆ ಸಂಬಂಧಿಸಿದ ಹಲವಾರು ಖಾಸಗಿ ಮತ್ತು ಸಾರ್ವಜನಿಕ ತರಬೇತಿ ಸಂಸ್ಥೆಗಳು ದೇಶದಾದ್ಯಂತ ಸ್ಥಾಪನೆಯಾದವು.

ಇಂದಿರಾ ಗಾಂಧಿ ರಾಷ್ಟ್ರೀಯ ಉಡಾನ್ ಅಕಾಡೆಮಿ, ಅಮೇಠಿ, **ಉತ್ತರಪ್ರದೇಶ:** ಇದು, ಕೇಂದ್ರ ಸರ್ಕಾರದ ಅಡಿಯಲ್ಲಿ ಕಾರ್ಯನಿರ್ವಹಿಸುವ ಅತ್ಯಂತ ಪ್ರತಿಷ್ಠಿತ ಮತ್ತು ಹಳೆಯ ಪೈಲಟ್ ತರಬೇತಿ ಸಂಸ್ಥೆಗಳಲ್ಲಿ ಒಂದಾಗಿದೆ. ಇಲ್ಲಿ ಸುಧಾರಿತ ತರಬೇತಿ ಸೌಲಭ್ಯಗಳು, ಆಧುನಿಕ ಸಿಮ್ಯುಲೇಟರ್‌ಗಳು ಮತ್ತು ಉತ್ತಮ ತರಬೇತಿ ವಿಮಾನಗಳಿವೆ. ವಿವಿಧ ವಿಮಾನಯಾನ ಸಂಸ್ಥೆಗಳೊಂದಿಗೆ ಉತ್ತಮ ಸಹಯೋಗವಿದ್ದು, ವಿದ್ಯಾರ್ಥಿಗಳಿಗೆ ಹೆಚ್ಚಿನ ಉದ್ಯೋಗಾವಕಾಶಗಳನ್ನು ಕಲ್ಪಿಸುತ್ತದೆ.

ರಾಜೀವ್ ಗಾಂಧಿ ನ್ಯಾಷನಲ್ ಏವಿಯೇಷನ್ ಯೂನಿವರ್ಸಿಟಿ, ಅಮೇಠಿ, **ಉತ್ತರಪ್ರದೇಶ:** ವಿಮಾನಯಾನ ವಲಯಕ್ಕೆ ಮೀಸಲಾದ ಏಕೈಕ ಕೇಂದ್ರೀಯ ವಿಶ್ವವಿದ್ಯಾಲಯ ಇದು. ಇಲ್ಲಿ ಪೈಲಟ್ ತರಬೇತಿ ಮಾತ್ರವಲ್ಲದೆ, ವಿಮಾನಯಾನ ನಿರ್ವಹಣೆ, ಏರ್‌ಪೋರ್ಟ್ ಗ್ರೌಂಡ್ ಟ್ರೈನಿಂಗ್, ಏವಿಯೇಷನ್ ಲಾಜಿಸ್ಟಿಕ್ಸ್‌ನಲ್ಲಿ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳನ್ನು ನೀಡಲಾಗುತ್ತದೆ.

ಬಾಂಬೆ ಫ್ಲೈಯಿಂಗ್ ಕ್ಲಬ್ (ಬಿಎಫ್‌ಸಿ), ಮುಂಬೈ, ಮಹಾರಾಷ್ಟ್ರ: 1928ರಲ್ಲಿ ಸ್ಥಾಪಿತವಾದ ಬಿಎಫ್‌ಸಿ, ಪೈಲಟ್ ತರಬೇತಿಗೆ ಹೆಸರಾದ ಭಾರತದ ಅತ್ಯಂತ ಹಳೆಯ ಮತ್ತು ಪ್ರತಿಷ್ಠಿತ ಫ್ಲೈಯಿಂಗ್ ಕ್ಲಬ್‌ಗಳಲ್ಲಿ ಒಂದಾಗಿದೆ. ಜೆಆರ್‌ಡಿ ಟಾಟಾ ಅವರು ತಮ್ಮ ಮೊದಲ ವಿಮಾನ ಹಾರಾಟಕ್ಕಾಗಿ ಈ ಕ್ಲಬ್‌ನಲ್ಲಿ ತರಬೇತಿ ಪಡೆದಿದ್ದರು.

ಇಲ್ಲೂ ಕಲಿಯಬಹುದು: ಮೈಸೂರಿನ ಓರಿಯಂಟ್ ಫ್ಲೈಟ್ಸ್ ಏವಿಯೇಷನ್ ಅಕಾಡೆಮಿ, ಮಧ್ಯಪ್ರದೇಶದ ಧನಾ ನಗರದ ಚೈಮ್ಸ್ ಏವಿಯೇಷನ್ ಅಕಾಡೆಮಿ, ಬೆಂಗಳೂರಿನ ಹಿಂದೂಸ್ತಾನ್ ಏವಿಯೇಷನ್ ಅಕಾಡೆಮಿ, ಅಹಮದಾಬಾದ್ ಏವಿಯೇಷನ್ & ಏರೋನಾಟಿಕ್ಸ್ ಲಿಮಿಟೆಡ್, ಹೈದರಾಬಾದ್‌ನ ಏಷ್ಯಾ ಪೆಸಿಫಿಕ್ ಫ್ಲೈಟ್ ಟ್ರೈನಿಂಗ್ ಅಕಾಡೆಮಿಯಲ್ಲಿ ಪೈಲಟ್ ತರಬೇತಿ ಜೊತೆಗೆ ಏರೊನಾಟಿಕಲ್ ಎಂಜಿನಿಯರಿಂಗ್, ಏರ್‌ಕ್ರಾಫ್ಟ್ ಮೇಂಟೆನೆನ್ಸ್ ಎಂಜಿನಿಯರಿಂಗ್ ಶಿಕ್ಷಣ, ಕ್ಯಾಡೆಟ್ ಪೈಲಟ್ ಪ್ರೋಗ್ರಾಂ, ಆಧುನಿಕ ಫ್ಲೀಟ್ ನಿರ್ವಹಣೆ ತರಬೇತಿ ನೀಡಲಾಗುತ್ತದೆ.

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯು ನೇರವಾಗಿ 'ನಾಗರಿಕ ವಿಮಾನಯಾನ' ಕೋರ್ಸ್‌ಗಳನ್ನು ಕಲಿಸದಿದ್ದರೂ ಪದವಿ ಮತ್ತು ಸ್ನಾತಕೋತ್ತರ ಏರೋಸ್ಪೇಸ್ ಎಂಜಿನಿಯರಿಂಗ್‌ನಲ್ಲಿ ವಿಶ್ವದರ್ಜೆಯ ಸಂಶೋಧನೆ ಮತ್ತು ಶಿಕ್ಷಣದ ಜೊತೆಗೆ ವಿಮಾನಯಾನ ನಿರ್ವಹಣೆ ಹಾಗೂ ವಿನ್ಯಾಸ ಕ್ಷೇತ್ರಕ್ಕೆ ಅಗತ್ಯವಾದ ಮೂಲಭೂತ ಜ್ಞಾನವನ್ನು ಒದಗಿಸುತ್ತದೆ.

ಚೆನ್ನೈನ ಹಿಂದೂಸ್ತಾನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಆ್ಯಂಡ್ ಸೈನ್ಸ್, ದೆಹಲಿ ಮತ್ತು ರಾಜಸ್ಥಾನದ ನೀಮ್‌ರಾನಾದ ಸ್ಕೂಲ್ ಆಫ್ ಏರೊನಾಟಿಕ್ಸ್, ಪುಣೆ ಇನ್‌ಸ್ಟಿಟ್ಯೂಟ್ ಆಫ್ ಏವಿಯೇಷನ್ ಟೆಕ್ನಾಲಜಿ ಸಂಸ್ಥೆಗಳು ಏರ್‌ಕ್ರಾಫ್ಟ್ ಮೇಂಟೆನೆನ್ಸ್ ಎಂಜಿನಿಯರಿಂಗ್, ಏರೊನಾಟಿಕಲ್ ಎಂಜಿನಿಯರಿಂಗ್ ಮತ್ತು ವಿಮಾನಯಾನ ಸಂಬಂಧಿತ ಕೋರ್ಸ್‌ಗಳಿಗೆ ಹೆಸರಾಗಿವೆ. ನೋಯ್ಡಾದ ಅಮಿಟಿ ಮತ್ತು ಗಾಲ್ಗೋಟಿಯಾಸ್ ವಿಶ್ವವಿದ್ಯಾಲಯಗಳು, ಬೆಂಗಳೂರಿನ ಅನೇಕ ಪದವಿ ಕಾಲೇಜುಗಳು, ದೆಹಲಿಯ ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿಶ್ವವಿದ್ಯಾಲಯವು ಏವಿಯೇಷನ್ ಮ್ಯಾನೇಜ್‌ಮೆಂಟ್, ಏರ್‌ಲೈನ್ ಆಪರೇಷನ್ಸ್ ವಿಷಯಗಳಲ್ಲಿ ಪದವಿ ಕೋರ್ಸ್‌ಗಳನ್ನು ನೀಡುತ್ತವೆ. ❖

ತರಬೇತಿಗೆ ಸೇರುವ ಮುನ್ನ...

ಯಾವುದೇ ವಿಮಾನಯಾನ ಶಿಕ್ಷಣ ಸಂಸ್ಥೆಗೆ ಸೇರುವ ಮೊದಲು, ಅದು ಡಿಜಿಸಿಎಯಿಂದ ಅನುಮೋದಿತವಾಗಿದೆಯೇ ಎಂದು ವೆಬ್‌ಸೈಟ್‌ನಲ್ಲಿ ಖಚಿತಪಡಿಸಿಕೊಳ್ಳುವುದು ಅತಿ ಮುಖ್ಯ.

ಶೈಕ್ಷಣಿಕ ಅರ್ಹತೆ: ಪೈಲಟ್ ಮತ್ತು ಎಎಂಇ ಕೋರ್ಸ್‌ಗಳಿಗೆ ಪಿಯುಸಿ (10 + 2) ವಿಜ್ಞಾನ ವಿಭಾಗದ ಗಣಿತ, ಭೌತ ವಿಜ್ಞಾನ ವಿಷಯಗಳಲ್ಲಿ ಕನಿಷ್ಠ ಶೇ 50 ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು. ಎಟಿಸಿ, ಕ್ಯಾಬಿನ್ ಸಿಬ್ಬಂದಿ, ಏರ್‌ಪೋರ್ಟ್ ಮ್ಯಾನೇಜ್‌ಮೆಂಟ್ ವೃತ್ತಿಗಳಿಗೆ ಪಿಯುಸಿ (10 + 2) ಅಥವಾ ಪದವಿಯಲ್ಲಿ ಗಣಿತ, ಭೌತವಿಜ್ಞಾನ ವಿಷಯಗಳನ್ನು ಅಧ್ಯಯನ ಮಾಡಿರಬೇಕು. ಸಂಬಂಧಿತ ಡಿಪ್ಲೊಮಾ ಅಥವಾ ಪದವಿ ಕೋರ್ಸ್ ಮುಗಿಸಿದ್ದರೆ ಅನುಕೂಲ.

ವಯಸ್ಸು 17-30 ವರ್ಷಗಳ ನಡುವೆ ಇರಬೇಕು. ಉತ್ತಮ ದೈಹಿಕ ಮತ್ತು ಮಾನಸಿಕ ಆರೋಗ್ಯ ಹೊಂದಿರಬೇಕಾದುದು ಕಡ್ಡಾಯ. ಪೈಲಟ್‌ಗಳು ಮತ್ತು ಕ್ಯಾಬಿನ್ ಸಿಬ್ಬಂದಿಗೆ ಉತ್ತಮ ದೃಷ್ಟಿ, ಬಣ್ಣ ಗುರುತಿಸುವಿಕೆ, ಉತ್ತಮ ಶ್ರವಣ ಸಾಮರ್ಥ್ಯ ಇರಲೇಬೇಕು. ಕ್ಯಾಬಿನ್ ಸಿಬ್ಬಂದಿಯಾಗಲು ಕನಿಷ್ಠ 155 ಸೆಂ.ಮೀ. ಎತ್ತರ ಇರಬೇಕು ಮತ್ತು ಇಂಗ್ಲಿಷ್ ಭಾಷೆಯಲ್ಲಿ ಒಳ್ಳೆಯ ಸಂವಹನ ಕೌಶಲ ಇರಬೇಕಾದುದು ಕಡ್ಡಾಯ.

ವೃತ್ತಾಕಾರದ ತರಗತಿ ವಿದ್ಯಾರ್ಥಿಸ್ನೇಹಿಯೇ?

• ಚಂದ್ರಶೇಖರ ದಾಮ್ಲೆ

ಮಲಯಾಳಂ ಸಿನಿಮಾವೊಂದರಿಂದ ಪ್ರೇರಣೆ ಪಡೆದ ಕೇರಳದ ಶಾಲೆಗಳು ಈಗ ತರಗತಿಗಳಲ್ಲಿ ಮಕ್ಕಳನ್ನು ವೃತ್ತಾಕಾರದಲ್ಲಿ ಕೂರಿಸುವ ವಿಧಾನವನ್ನು ಅನುಸರಿಸತೊಡಗಿವೆ. ಹೀಗಾಗಿ, ಇದು 'ಕೇರಳ ಮಾದರಿ' ಎಂದು ಪ್ರಚಾರ ಪಡೆಯುತ್ತಿದೆ. ನಮ್ಮ ರಾಜ್ಯದ ಶಾಲೆಗಳೂ ಈ ಮಾದರಿ ಅನುಸರಿಸಬೇಕೆಂಬ ಒತ್ತಾಯ ಕೇಳಿಬರುತ್ತಿದೆ. ಆದರೆ, ಕರ್ನಾಟಕದ ಶಾಲೆಯೊಂದರಲ್ಲಿ ಸುಮಾರು ಮೂರು ದಶಕಗಳ ಹಿಂದೆಯೇ ಈ ಮಾದರಿಯನ್ನು ಅಳವಡಿಸಲಾಗಿದ್ದು, ಸುಳ್ಯದ ಪ್ರಕೃತಿ ಸಂಪದ್ಭರಿತ 'ಸ್ನೇಹ ಶಾಲೆ'ಯಲ್ಲಿ ಲಾಗಾಯ್ತಿನಿಂದಲೂ ಮಕ್ಕಳು ಹೀಗೇ ಕೂರುತ್ತಿದ್ದಾರೆ.

ಇಂಗ್ಲಿಷ್ ಮಾಧ್ಯಮದ ಪ್ರವಾಹದ ಎದುರು ಕನ್ನಡ ಮಾಧ್ಯಮದ ಈ ಖಾಸಗಿ ಶಾಲೆಯನ್ನು 1996ರಲ್ಲಿ ತೆರೆದಾಗ, ಅದು ವಿಶಿಷ್ಟವಾಗಿ ಇರಬೇಕೆಂಬ ಕಾರಣಕ್ಕೆ ವೃತ್ತಾಕಾರದ ಕಟ್ಟಡಗಳನ್ನು ಕಟ್ಟಲಾಯಿತು. ಜೊತೆಗೆ ತರಗತಿಗಳಲ್ಲಿ ಮಕ್ಕಳನ್ನೂ ವೃತ್ತಾಕಾರದಲ್ಲೇ ಕೂರಿಸುವ ವ್ಯವಸ್ಥೆ ಮಾಡಲಾಯಿತು. ಒಂದು ತರಗತಿಗೆ 30 ಮಕ್ಕಳಿಗೆ ಮಾತ್ರ ಪ್ರವೇಶ ನೀಡುವ ನೀತಿ ಇಲ್ಲಿ ಇದೆ. ಇಪ್ಪತ್ತು ಅಡಿಗಳ ವ್ಯಾಸದ ಕೊಠಡಿಯಲ್ಲಿ ಒಂದೇ ವೃತ್ತದಲ್ಲಿ ಗೋಡೆಯ ಪರಿಧಿಯಲ್ಲಿ ಎಲ್ಲ ಮಕ್ಕಳನ್ನೂ ಕೂರಿಸಲು ಸಾಧ್ಯವಾಗಿದೆ. ಕುತ್ತಿಗೆ ನೋವು, ಬೆನ್ನು ನೋವು, ಬೋರ್ಡ್ ಕಾಣದಿರುವಂತಹ ಸಮಸ್ಯೆಗಳಿಗೆ ಇಲ್ಲಿ ಜಾಗವಿಲ್ಲ. 'ಹಿಂದಿನ ಬೆಂಚಿನ' ಸಮಸ್ಯೆಯನ್ನು ಸಹ ಇದು ನೀಗಿಸಿದೆ.



ಹೀಗಿದೆ ಪ್ರಯೋಜನ

1. ಮಧ್ಯದಲ್ಲಿ ಏನೂ ಅಡಚಣೆ ಇರುವುದಿಲ್ಲವಾದ್ದರಿಂದ ಶಿಕ್ಷಕಿಗೆ ನೇರವಾಗಿ, ಕ್ಷಿಪ್ರವಾಗಿ ಯಾವುದೇ ಮಗುವಿನ ಬಳಿಗೆ ಹೋಗಲು ಮತ್ತು ಕಲಿಕೆಯನ್ನು ಪರಿಶೀಲಿಸಲು ಸಾಧ್ಯ.
2. ಮಕ್ಕಳು ಪರಸ್ಪರ ಮುಖಾಮುಖಿ ಆಗುವುದರಿಂದ ಅವರಿಗೆ ಸಭಾ ಕಂಪನ ಈ ಹಂತದಲ್ಲೇ ಮಾಯವಾಗುತ್ತದೆ.
3. ವೃತ್ತದ ಮಧ್ಯದಲ್ಲಿರುವ ಖಾಲಿ ಜಾಗವು ಮಕ್ಕಳ ಹಾಡು, ನೃತ್ಯ ಮತ್ತು ನಾಟಕದಂತಹ ಚಟುವಟಿಕೆಗಳಿಗೆ ಉಪಯುಕ್ತವಾಗುತ್ತದೆ.
4. ಗೋಡೆಯು ತಗ್ಗು ಆಕಾರದಲ್ಲಿದ್ದು, ಕರಿಹಲಗೆಯನ್ನು ಗೋಡೆಯಲ್ಲೇ ಅಳವಡಿಸಲಾಗಿದೆ. ಹೀಗಾಗಿ, ಅದರಲ್ಲಿ ಬರೆದುದೆಲ್ಲವೂ ಮಕ್ಕಳಿಗೆ ಕಾಣುತ್ತದೆ. ಮಗು ಎಲ್ಲೇ ಕುಳಿತಿದ್ದರೂ ಬೋರ್ಡಿನ ಯಾವುದೇ ಮೂಲೆಯಲ್ಲಿ ಬರೆದದ್ದು ಸಹ ಕಾಣಿಸುತ್ತದೆ.
5. ಮಕ್ಕಳಿಗೂ ಬರೆಯುವ ಅವಕಾಶ ನೀಡುವ ಉದ್ದೇಶದಿಂದ ಕರಿಹಲಗೆಯನ್ನು ತಗ್ಗಿನಲ್ಲಿ ನಿರ್ಮಿಸಲಾಗಿದೆ.
6. ಬಹಳಷ್ಟು ಕಿಟಕಿಗಳಿರುವುದರಿಂದ ಗಾಳಿ ಬೆಳಕಿನ ವ್ಯವಸ್ಥೆ ಉತ್ತಮವಾಗಿದೆ. ಮಾಡು ಸುಮಾರು 18 ಅಡಿಗಳಷ್ಟು ಎತ್ತರವಿದ್ದು, ಬಿಸಿಗಾಳಿ ಮೇಲಕ್ಕೆ ಸಾಗಿ ತರಗತಿಯಲ್ಲಿ ಮಕ್ಕಳು ಇಡೀ ದಿನ ಉಲ್ಲಾಸದಿಂದ ಇರುತ್ತಾರೆ.
7. ಶಿಕ್ಷಣ ಇಲಾಖೆಯು 1990ರ ದಶಕದ ಕೊನೆಗೆ 'ಚೈತನ್ಯ' ಎಂಬ ಹೆಸರಿನಲ್ಲಿ ವೃತ್ತಾಕಾರದ ತರಗತಿಗಳನ್ನು ಅನುಮೋದಿಸಿತ್ತು. ಇದರ ಭಾಗವಾಗಿ 1999ರಲ್ಲಿ 'ಸ್ನೇಹ ಶಾಲೆ'ಯಲ್ಲಿ ಕರಾವಳಿ ಶಾಲೆಗಳ ಶಿಕ್ಷಕರಿಗಾಗಿ ಒಂದು ವಾರದ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು.
8. ಶಾಲೆಯಲ್ಲಿ ಇಂತಹ ಮೂರು ಕೊಠಡಿಗಳಿದ್ದು, ಒಂದರಿಂದ ಮೂರರವರೆಗಿನ ತರಗತಿಗಳು ಇಲ್ಲಿ ನಡೆಯುತ್ತವೆ. ❖



'ಸ್ನೇಹ ಶಾಲೆ'ಯ ತರಗತಿಯಲ್ಲಿ ವೃತ್ತಾಕಾರದಲ್ಲಿ ಕುಳಿತಿರುವ ಮಕ್ಕಳು

ಲೆಗ್ರ್ಯಾಂಡ್ ಎಂಪವರಿಂಗ್ ಸ್ಕಾಲರ್‌ಶಿಪ್

ವಿದ್ಯಾರ್ಥಿ ವೇತನ ಕೈಪಿಡಿ

ಲೆಗ್ರ್ಯಾಂಡ್ ಸಂಸ್ಥೆಯು ಭಾರತದಾದ್ಯಂತ ಎಂಜಿನಿಯರಿಂಗ್, ವಾಸ್ತುಶಿಲ್ಪ, ಹಣಕಾಸು ಮತ್ತು ವಿಜ್ಞಾನದಲ್ಲಿ ವೃತ್ತಿಜೀವನವನ್ನು ಮುಂದುವರಿಸಲು ಬಯಸುವ ವಿದ್ಯಾರ್ಥಿಗಳನ್ನು ಬೆಂಬಲಿಸುತ್ತದೆ.

ಅರ್ಹತೆ: ಪ್ರತಿಭಾನ್ವಿತ ವಿದ್ಯಾರ್ಥಿನಿಯರು, ಅಂಗವಿಕಲ ಹೆಣ್ಣುಮಕ್ಕಳು, ಎಲ್‌ಜಿಬಿಟಿಕ್ಯು ವಿದ್ಯಾರ್ಥಿಗಳು, ಕೋವಿಡ್‌ಪೀಡಿತ ವಿದ್ಯಾರ್ಥಿಗಳು ಮತ್ತು ಒಂಟಿ ಪೋಷಕರನ್ನು ಹೊಂದಿರುವ ವಿದ್ಯಾರ್ಥಿಗಳು ಅಥವಾ ಪೋಷಕರಿಲ್ಲದವರಿಗೆ ಮುಕ್ತವಾಗಿದೆ. ಅರ್ಜಿದಾರರು ಬಿ.ಟೆಕ್., ಬಿ.ಇ., ಬಿ.ಆರ್ಕ್., ಬಿ.ಬಿ.ಎ., ಬಿ.ಕಾಂ., ಅಥವಾ ಬಿ.ಎಸ್ಸಿ. ಪದವಿಗೆ ಪ್ರವೇಶ ಪಡೆದಿರಬೇಕು. 2024–25ನೇ ಸಾಲಿನಲ್ಲಿ 12ನೇ ತರಗತಿ ಉತ್ತೀರ್ಣರಾಗಿರಬೇಕು. 10 ಮತ್ತು 12ನೇ ತರಗತಿ ಪರೀಕ್ಷೆಗಳಲ್ಲಿ ಬಾಲಕಿಯರು ಕನಿಷ್ಠ ಶೇ 70ರಷ್ಟು ಅಂಕ, ವಿಶೇಷ ವರ್ಗದ ವಿದ್ಯಾರ್ಥಿಗಳು ಕನಿಷ್ಠ ಶೇ 60ರಷ್ಟು ಅಂಕಗಳನ್ನು ಪಡೆದಿರಬೇಕು. ನಿರ್ದಿಷ್ಟ ಪ್ರಕರಣಗಳಿಗೆ ವಿನಾಯಿತಿ ಇರುತ್ತದೆ. ಕುಟುಂಬದ ವಾರ್ಷಿಕ ಆದಾಯ ಮಿತಿ ಗರಿಷ್ಠ ₹ 5 ಲಕ್ಷ. ವಿಶೇಷ ವರ್ಗದ ವಿದ್ಯಾರ್ಥಿಗಳಿಗೆ ಆದ್ಯತೆ.

ಆರ್ಥಿಕ ಸಹಾಯ: ವಿದ್ಯಾರ್ಥಿನಿಯರಿಗೆ ಶೇ 60ರಷ್ಟು ಶುಲ್ಕದಂತೆ ಕೋರ್ಸ್ ಪೂರ್ಣಗೊಳ್ಳುವವರೆಗೆ ವರ್ಷಕ್ಕೆ ₹ 60 ಸಾವಿರ ಹಾಗೂ ವಿಶೇಷ ವರ್ಗದವರಿಗೆ ₹ 1 ಲಕ್ಷದವರೆಗೆ ಶೇ 80ರಷ್ಟು ಶುಲ್ಕವನ್ನು ನೀಡಲಾಗುತ್ತದೆ.

ಅರ್ಜಿ ಸಲ್ಲಿಸಲು ಕೊನೇ ದಿನ: 08-09-2025

ವಿಧಾನ: ಆನ್‌ಲೈನ್.

ಹೆಚ್ಚಿನ ಮಾಹಿತಿಗೆ: Short Url: www.b4s.in/praja/LFLS12 ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ

ಸಮಾಜ ವಿಜ್ಞಾನ : ಭೂಗೋಳಶಾಸ್ತ್ರ

ಅಧ್ಯಾಯ–11 ಭಾರತದ ಋತುಗಳು

17) ಭಾರತದಲ್ಲಿ ಅಧಿಕ ಮಳೆಯ ಪ್ರದೇಶದ ಬಗ್ಗೆ ತಿಳಿಸಿ
ಉತ್ತರ : ವಾರ್ಷಿಕ ಸುಮಾರು 250 ಸೆಂ.ಮೀ. ಗಳಿಗಿಂತ ಹೆಚ್ಚು ಮಳೆ ಬೀಳುವ ಭಾಗಗಳನ್ನು ಅಧಿಕ ಮಳೆ ಬೀಳುವ ಪ್ರದೇಶಗಳೆಂದು ಗುರುತಿಸುತ್ತೇವೆ. ಪಶ್ಚಿಮ ಘಟ್ಟಗಳ ಪಶ್ಚಿಮ ಭಾಗ, ಅಸ್ಸಾಂ ಹಾಗೂ ಇತರ ಪೂರ್ವ ರಾಜ್ಯಗಳು ಹಾಗೂ ಪಶ್ಚಿಮ ಬಂಗಾಳ ಈ ವಲಯದಲ್ಲಿ ಸೇರುತ್ತವೆ. ಮೇಘಾಲಯದ 'ಮಾಸಿನ್‌ರಾಮ್' ದೇಶದಲ್ಲಿಯೇ ಅತ್ಯಧಿಕ ಮಳೆ ಪಡೆಯುವುದು. ಇದು ಪ್ರಪಂಚದಲ್ಲಿಯೇ ಅತಿಹೆಚ್ಚು ಮಳೆಯನ್ನು ದಾಖಲಿಸಿದೆ.

18) ಭಾರತದ ವ್ಯವಸಾಯವನ್ನು "ಮಾನ್ಸೂನ್ ಜೊತೆಯಲ್ಲಿ ಆಡುವ ಜೂಜಾಟ" ಎಂದು ಕರೆಯುತ್ತಾರೆ. ಈ ಹೇಳಿಕೆಯನ್ನು ಸಮರ್ಥಿಸಿ
ಉತ್ತರ:– ಭಾರತದ ಜನತೆಯ ಪ್ರಧಾನ ಉದ್ಯೋಗವು ವ್ಯವಸಾಯವಾಗಿರುವುದರಿಂದ ನೈರುತ್ಯ ಮಾನ್ಸೂನ್ ಮಾರುತಗಳು ತರುವ ಮಳೆಯ ಮೇಲೆ ನಿಂತಿವೆ. ಈ ಮಳೆ ವಿಫಲವಾದರೆ ಬರಗಾಲ ಬರುವುದು. ಅತಿ ಹೆಚ್ಚಾದಾಗ ಪ್ರವಾಹ ಉಂಟಾಗಿ ಪ್ರಾಣ ಹಾನಿ ಮತ್ತು ಆಸ್ತಿಗಳಿಗೆ ಹಾನಿ ಉಂಟಾಗುತ್ತದೆ. ಆದ್ದರಿಂದಲೇ ಭಾರತದ ವ್ಯವಸಾಯವನ್ನು "ಮಾನ್ಸೂನ್ ಜೊತೆಯಲ್ಲಿ ಆಡುವ ಜೂಜಾಟ" ಎಂದು ಕರೆಯುತ್ತಾರೆ

ಬಿಟ್ಟ ಸ್ಥಳಗಳನ್ನು ಸೂಕ್ತವಾದ ಪದಗಳಿಂದ ಭರ್ತಿ ಮಾಡಿರಿ.

1) ದೇಶದಲ್ಲಿಯೇ ಅತಿಹೆಚ್ಚು ಉಷ್ಣಾಂಶ ಹೊಂದಿದ ಸ್ಥಳ ....
ಉತ್ತರ:– ಗಂಗಾನಗರ (ರಾಜಸ್ತಾನ)

2) ಅತಿಹೆಚ್ಚು ಮಳೆ ಬೀಳುವ ಋತುಮಾನ .... ಆಗಿದೆ.
ಉತ್ತರ:– ನೈರುತ್ಯ ಮಾನ್ಸೂನ್(ಮಳೆಗಾಲ)

3) ಭಾರತದಲ್ಲಿ ಅತಿಕಡಿಮೆ ಮಳೆ ಬೀಳುವ ಪ್ರದೇಶ ....
ಉತ್ತರ:– ರಾಜಸ್ತಾನದ ಜೈಸಲ್ಮೇರ್ ಜಿಲ್ಲೆಯ ರೂಯ್ಲಿ

4) ಭಾರತದಲ್ಲಿಯೇ ಅತಿಹೆಚ್ಚು ಮಳೆಯಾಗುವ ಸ್ಥಳ ....
ಉತ್ತರ:– ಮೌಸಿಮ್ ರಾಮ್ (ಮೇಘಾಲಯ)

5) ಭಾರತದ ವ್ಯವಸಾಯವನ್ನು ....ಮಳೆಯ ಜೊತೆಯಲ್ಲಿ ಆಡುವ ಜೂಜಾಟ ಎಂದು ಕರೆಯುತ್ತಾರೆ.
ಉತ್ತರ:– ಮಾನ್ಸೂನ್

6)ರಾಜಸ್ತಾನದ ಗಂಗಾನಗರವು .... ಸೆ. ಗಳಷ್ಟು ಉಷ್ಣಾಂಶ ದಾಖಲಾಗುತ್ತದೆ.
ಉತ್ತರ:– 52^0

7) ದಕ್ಷಿಣ ಭಾರತವು ....ಕಡೆಗಳಲ್ಲಿ ಸಾಗರಗಳಿಂದ ಆವೃತ್ತವಾಗಿರುವ ಕಾರಣ ಉಷ್ಣಾಂಶ ಸಾಧಾರಣವಾಗಿರುತ್ತದೆ
ಉತ್ತರ:– ಮೂರು

8) ಎಪ್ರಿಲ್ ಹಾಗೂ ಮೇ ತಿಂಗಳಲ್ಲಿ ಅಲ್ಲಲ್ಲಿ ಸ್ಥಳೀಯ ....ಮತ್ತು ಪ್ರಚಲನ ಪ್ರವಾಹಗಳಿಂದ ಮಳೆಯಾಗುತ್ತದೆ.
ಉತ್ತರ:– ಉಷ್ಣಾಂಶ

9) ಪಶ್ಚಿಮ ಬಂಗಾಳದಲ್ಲಿ ಕಾಲ ಬೈಸಾಕಿ ; ಉತ್ತರಪ್ರದೇಶದಲ್ಲಿ ಆಂಡೀಸ್ ; :ಕರ್ನಾಟಕದಲ್ಲಿ ಕಾಫಿ ತುಂತುರು: ....
ಉತ್ತರ:– ಕೇರಳದಲ್ಲಿ 'ಮಾವಿನಹೊಯ್ಲು'

11) ನಮ್ಮ ದೇಶದ ಸರಾಸರಿ ಮಳೆಯ ಪ್ರಮಾಣ .... ಸೆಂ.ಮಿ.ಗಳು
ಉತ್ತರ:– 118

12) ಮಾನ್ಸೂನ್ ಮಾರುತಗಳ 'ನಿರ್ಗಮನ ಕಾಲ'ದ ಅವಧಿಯಲ್ಲಿ ಭಾರತವು ಶೇ ....ರಷ್ಟು ಮಳೆಯನ್ನು ಪಡೆಯುತ್ತದೆ.
ಉತ್ತರ:– 13

13) ರಾಜಸ್ತಾನದ ಜೈಸಲ್ಮೇರ್ ಜಿಲ್ಲೆಯ ರೂಯ್ಲಿಯ ವಾರ್ಷಿಕ ಸರಾಸರಿ ಮಳೆಯ ....ಸೆಂ.ಮೀ.ಗಳಷ್ಟಾಗಿದೆ. ಇದು ಮಳೆ ಭಾರತದಲ್ಲಿ ಅತಿಕಡಿಮೆ ಮಳೆಯನ್ನು ಪಡೆಯುವ ಪ್ರದೇಶವಾಗಿದೆ.
ಉತ್ತರ:– 8.3

14) ವಾರ್ಷಿಕ ಸುಮಾರು ....ಸೆಂ.ಮೀ. ಗಳಿಗಿಂತ ಹೆಚ್ಚು ಮಳೆ ಬೀಳುವ ಭಾಗಗಳನ್ನು ಅಧಿಕ ಮಳೆ ಬೀಳುವ ಪ್ರದೇಶಗಳೆಂದು ಗುರುತಿಸುತ್ತೇವೆ.
ಉತ್ತರ:– 250

ಅಧ್ಯಾಯ–12 ಭಾರತದ ಮಣ್ಣುಗಳು

1) ಭಾರತದಲ್ಲಿ ಕಂಡುಬರುವ ಮಣ್ಣನ್ನು ಎಷ್ಟು ವಿಧಗಳಾಗಿ ವಿಂಗಡಿಸಲಾಗಿದೆ, ಅವು ಯಾವುವು?
ಉತ್ತರ:– ಭಾರತದಲ್ಲಿ ಕಂಡು ಬರುವ ಮಣ್ಣನ್ನು ಆರು ಪ್ರಮುಖ ವಿಧಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ (1) ಮೆಕ್ಕಲು ಮಣ್ಣು (2) ಕಪ್ಪು ಮಣ್ಣು (3) ಕೆಂಪು ಮಣ್ಣು (4) ಜಂಬಿಟ್ಟಿಗೆ ಮಣ್ಣು (5) ಮರುಭೂಮಿ ಮಣ್ಣು ಮತ್ತು (6) ಪರ್ವತ ಮಣ್ಣು

2) ಭಾರತದಲ್ಲಿ ಎಷ್ಟು ಪ್ರದೇಶದಲ್ಲಿ ಮೆಕ್ಕಲು ಮಣ್ಣು ಕಂಡು ಬರುತ್ತದೆ.
ಉತ್ತರ:– ಮೆಕ್ಕಲು ಮಣ್ಣು ಸುಮಾರು 7.7 ದಶಲಕ್ಷ ಚ.ಕಿ.ಮೀ ಪ್ರದೇಶದಲ್ಲಿ ಕಂಡುಬರುವುದು.

3) ಭಾರತದಲ್ಲಿ ಎಲ್ಲೆಲ್ಲಿ ಮೆಕ್ಕಲು ಮಣ್ಣನ್ನು ಹೆಚ್ಚಾಗಿ ನೋಡಬಹುದು?
ಉತ್ತರ:– ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ, ಒಡಿಶಾ, ಪಂಜಾಬ, ಹರಿಯಾಣ, ಅಸ್ಸಾಂ ರಾಜ್ಯದ ಬ್ರಹ್ಮಪುತ್ರಾ ಕಣಿವೆಯ ಭಾಗವನ್ನು ಆವರಿಸಿದೆ ಅಲ್ಲದೆ ನರ್ಮದಾ ಮತ್ತು ತಪತಿ ನದಿಗಳ ಕಣಿವೆಗಳು, ಪರ್ಯಾಯ ಪ್ರಸ್ಥಭೂಮಿಯ ಎರಡು ಕಡೆಗಳಲ್ಲಿರುವ ತೀರ ಪ್ರದೇಶಗಳೂ ಸಹ ಮೆಕ್ಕಲು ಮಣ್ಣಿನಿಂದಲೇ ನಿರ್ಮಿತವಾಗಿವೆ

4) ಮೆಕ್ಕಲು ಮಣ್ಣನ್ನು ಹೊಂದಿರುವ ಪ್ರದೇಶದಲ್ಲಿ ಯಾವೆಲ್ಲಾ ಬೆಳೆಗಳನ್ನು ನೋಡಬಹುದು?
ಉತ್ತರ:– ಗೋಧಿ, ಭತ್ತ, ಕಬ್ಬು, ಹತ್ತಿ ಮತ್ತು ಸೆಣಬು ಈ ಪ್ರದೇಶಗಳಲ್ಲಿ ಬೆಳೆಯುವ ಬೆಳೆಗಳಾಗಿವೆ.

5) ಭಾರತದಲ್ಲಿರುವ ಮೆಕ್ಕಲು ಮಣ್ಣಿನ ಬಗ್ಗೆ ವಿವರವಾಗಿ ವಿವರಿಸಿ
ಉತ್ತರ:– ನದಿಗಳು ಪರ್ವತ ಪ್ರದೇಶಗಳಿಂದ ಹೊತ್ತು ತಂದು ಸಂಚಯಿಸಿರುವ ಮಣ್ಣಿಗೆ ಮೆಕ್ಕಲು ಮಣ್ಣು ಎನ್ನುವರು. ಭಾರತದಲ್ಲಿ ಮೆಕ್ಕಲು ಮಣ್ಣು ಇತರ ಎಲ್ಲಾ ಬಗೆಯ ಮಣ್ಣುಗಳಿಗಿಂತ ಹೆಚ್ಚು ವಿಸ್ತಾರವಾದ ಪ್ರದೇಶದಲ್ಲಿ ಹರಡಿರುವುದು. ಈ ಮಣ್ಣು ಸುಮಾರು 7.7 ದಶಲಕ್ಷ ಚ.ಕಿ.ಮೀ ಪ್ರದೇಶದಲ್ಲಿ ಕಂಡುಬರುವುದು. ಇದು ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ, ಒಡಿಶಾ, ಪಂಜಾಬ, ಹರಿಯಾಣ ಅಸ್ಸಾಂ ರಾಜ್ಯದ ಬ್ರಹ್ಮಪುತ್ರಾ ಕಣಿವೆಯ ಭಾಗವನ್ನು ಆವರಿಸಿದೆ. ಅಲ್ಲದೆ ನರ್ಮದಾ ಮತ್ತು ತಪತಿ ನದಿಗಳ ಕಣಿವೆಗಳು, ಪರ್ಯಾಯ ಪ್ರಸ್ಥಭೂಮಿಯ ಎರಡು ಕಡೆಗಳಲ್ಲಿರುವ ತೀರ ಪ್ರದೇಶಗಳೂ ಸಹ ಮೆಕ್ಕಲು ಮಣ್ಣಿನಿಂದಲೇ ನಿರ್ಮಿತವಾಗಿವೆ. ಗೋಧಿ, ಭತ್ತ, ಕಬ್ಬು, ಹತ್ತಿ ಮತ್ತು ಸೆಣಬು ಈ ಪ್ರದೇಶಗಳಲ್ಲಿ ಬೆಳೆಯುವ ಬೆಳೆಗಳಾಗಿವೆ.

6) ಯಾವ ಮಣ್ಣನ್ನು ರೆಗೂರ್ ಮಣ್ಣು ಎಂದು ಕರೆಯುವರು?
ಉತ್ತರ:– ಕಪ್ಪು

7) ನಮ್ಮ ದೇಶದಲ್ಲಿ ಕಪ್ಪು ಮಣ್ಣು ಎಷ್ಟು ಪ್ರದೇಶದಲ್ಲಿ ಹರಡಿದೆ?
ಉತ್ತರ:– ಸುಮಾರು 5.46 ಲಕ್ಷ ಚ.ಕಿ.ಮೀ ಪ್ರದೇಶ

8) ಕಪ್ಪು ಮಣ್ಣು ಉತ್ಪತ್ತಿ ಹೇಗಾಗಿದೆ?
ಉತ್ತರ:– ಕಪ್ಪು ಮಣ್ಣು ಅಗ್ನಿ ಶಿಲೆಗಳ ಶಿಥಲೀಕರಣದಿಂದ ಉತ್ಪತ್ತಿಯಾಗಿದೆ. ಇದರಲ್ಲಿ ಜೇಡಿ ಮಣ್ಣಿನ ಕಣಗಳು ಹೆಚ್ಚಾಗಿ ಕಂಡುಬರುತ್ತವೆ. ಈ ಮಣ್ಣು ಫಲವತ್ತಾಗಿದ್ದರೂ ತೇವಾಂಶ ಹಿಡಿದಿಟ್ಟುಕೊಳ್ಳಲು ಸಮರ್ಥವಾಗಿದೆ. *(ಮುಂದುವರಿಯುವುದು)*

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

PHYSICS

Chapter – 2

ELECTROSTATIC POTENTIAL AND CAPACITANCE

1. What is electrostatic potential.
Ans:- Electrostatic potential at a point in the electric field is defined as the work done in moving a unit positive test charge from infinity to that point against the electrostatic force of the electric field of the source charge irrespective of the path followed.
Note: Electrostatic potential:
a) determines the degree of electrification of a body.
b) It is equal to zero at infinity.
c) It is a scalar quantity.

2. When is the Electrostatic potential 1 volt.
Ans:- Electrostatic potential at a point in the electric field is one volt if one joule of work is done in moving one coulomb of charge from infinity to that point in the electric field.

3. What is the difference between the Electrostatic potential and Electric potential?
Ans:- The electrostatic potential is the work done in moving a unit positive charge from infinity to that point against the electrostatic force of the electric field and the electric potential is the flow of charges from one body to another body.

4. Define electrostatic potential difference between two points in an electric field. Is it a scalar or vector?
Ans:- It is the work done in moving a unit positive charge from one point to another point in the electric field. It is a scalar quantity.

5. What is electric potential energy?
Ans:- Work done to bring charges from infinity to their respective positions to form a system.

6. Deduce dimensional formula for potential difference.
$$\text{Ans}:- V=\frac{W}{q}=\frac{ML^2T^{-2}}{AT}\quad\left[\because I=\frac{q}{t}\right]$$
$$=[ML^2T^{-3}A^{-1}]$$

7. How many joules are there in 1 Me V?
Ans:- $1\ MeV = 10^6\ eV$
$= 10^6 \times 1.6 \times 10^{-19}\ J$
$= 1.6 \times 10^{-13}\ J$

8. Write down the relation between potential and potential energy.
$$\text{Ans}:-\ V=\frac{U}{q}$$

9. Name the physical quantity whose SI unit is joule coulomb^{-1}. Is it a scalar or a vector?
Ans:- The physical quantity whose SI unit is joule coulomb^{-1} is electric potential or potential difference. It is a scalar quantity.

10. Show that volt and J C^{-1} are the units of same physical quantity.
Ans:-
$$\text{Electric Potential}(V)=\frac{\text{Work done (J)}}{\text{Charge (C)}}=JC^{-1}$$
Unit of electric potential is volt.
∴ Volt and J C^{-1} are the units of same physical quantity i.e., electric potential.

11. Show that V m^{-1} = N C^{-1}.
$$\text{Ans}:-\ Vm^{-1}=\frac{J}{C}m^{-1}=\frac{Nm}{C}m^{-1}=NC^{-1}$$

12. What is the amount of work done in moving a 200 μC charge between two points 5 cm apart on an equipotential surface?
Ans:- $W = q\,(V_1 - V_2)$.
Since $V_1 = V_2$ on equipotential surface, therefore, W = 0.

13. What is an equipotential surface?
Ans:- A surface whose every point has the same value of electric potential is the equipotential surface.

14. A hollow metal sphere of radius 10 cm is charged such that the potential on its surface is 5V. What is the potential at the centre of sphere?
Ans:- 5 V

15. What is the nature of equipotential surfaces around a point charge?
Ans:- Concentric spheres with point charge as a centre.

16. What is the relation between electric field intensity and potential gradient?
$$\text{Ans}:-\ E=-\frac{dV}{dr}$$

17. Illustrate a condition in which electric field is zero but potential is not zero.
Ans:- Electric field inside a hollow charged sphere is zero but potential is not zero.

18. Illustrate a condition in which electric field is not zero but potential is zero.
Ans:- Electric field on the equatorial line of a dipole is not zero but potential is zero.

19. A solid copper sphere of radius r has charge q_1 and another hollow copper sphere of same radius r has a charge q_2. What will be the charge on each sphere when they are connected by a conductor?
Ans :– Charge on each sphere will be equal
$$=\frac{q_1+q_2}{2}.$$

20. How does the value of potential due to dipole varies with distance from the centre of the dipole?
$$\text{Ans}:-\ V\,\alpha\,\frac{1}{r^2}$$

21. What is the unit of potential gradient?
Ans :– Unit of potential gradient $\left(\frac{dV}{dr}\right)$ is Vm^{-1}.

22. Write dimensional formula of potential gradient.

(Contd.........)

ಅಧಿವೇಶನ ಇಂದಿನಿಂದ: ಚರ್ಚೆಯ ಮಳೆಯೋ ಕಲಹದ ಹೊಳೆಯೋ?

ರಸಗೊಬ್ಬರ ಕೊರತೆ, ಅನುದಾನದಲ್ಲಿ ತಾರತಮ್ಯ ಪ್ರಸ್ತಾಪಕ್ಕೆ ವಿಪಕ್ಷ ತಯಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೋಮವಾರದಿಂದ (ಆ.11) ಆರಂಭವಾಗಲಿರುವ ವಿಧಾನ ಮಂಡಲದ ಅಧಿವೇಶನದಲ್ಲಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಪ್ರತಿಪಕ್ಷಗಳು ಅಣಿಯಾಗಿದ್ದರೆ, ಸಚಿವರು–ಶಾಸಕರ ಸರಣಿ ಸಭೆ ನಡೆಸಿ, ಅತೃಪ್ತಿಯನ್ನು ಸಮಾಧಾನ ಪಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ವಿರೋಧ ಪಕ್ಷವನ್ನು ಕಟ್ಟಿಹಾಕುವ ತಂತ್ರ ಹೆಣೆದಿದ್ದಾರೆ.

ಜುಲೈನಲ್ಲಿ ನಡೆಯಬೇಕಿದ್ದ ಅಧಿವೇಶನ ತಡವಾಗಿ ಆರಂಭವಾಗುತ್ತಿದ್ದು, ಒಟ್ಟು 9 ದಿನ ಕಲಾಪ ನಡೆಯಲಿದೆ. ಕಾಂಗ್ರೆಸ್ ಮತ್ತು ಬಿಜೆಪಿ–ಜೆಡಿಎಸ್ ಮೈತ್ರಿ ಕೂಟಗಳು ಪರಸ್ಪರ 'ಅಸ್ತ್ರ' ಗಳನ್ನು ಹರಿತ ಮಾಡಿಕೊಂಡಿವೆ.

ಆರ್‌ಸಿಬಿ ವಿಜಯೋತ್ಸವದ ವೇಳೆ ನಡೆದ ಕಾಲ್ತುಳಿತದ ದುರಂತ, ಮುಂಗಾರು ಹಂಗಾಮಿಗೆ ರಸಗೊಬ್ಬರ ಕೊರತೆ, ಅತಿವೃಷ್ಟಿಯಿಂದ ಕೆಲವೆಡೆ ಆಗಿರುವ ತೊಂದರೆ, ಶಾಸಕರಿಗೆ ಅನುದಾನ ಹಂಚಿಕೆಯಲ್ಲಿ ತಾರತಮ್ಯ, ಕಾನೂನು ಮತ್ತು ಸುವ್ಯವಸ್ಥೆ ವಿಷಯ ಪ್ರಸ್ತಾಪಿಸಲು ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ತಯಾರಿ ಮಾಡಿಕೊಂಡಿವೆ.

ಇದಕ್ಕೆ, ಪ್ರತಿಯಾಗಿ ಲೋಕಸಭೆ ಚುನಾವಣೆಯಲ್ಲಿ ಮತ ಕಳವು ಆರೋಪ, ಅನುದಾನ ನೀಡಿಕೆಯಲ್ಲಿ ಕೇಂದ್ರದ ತಾರತಮ್ಯ, ಚಿಕ್ಕಬಳ್ಳಾಪುರದಲ್ಲಿ ಜಿಲ್ಲಾ ಪಂಚಾಯಿತಿಯ ಚಾಲಕರೊಬ್ಬರು ಬಿಜೆಪಿ ಸಂಸದ ಸುಧಾಕರ್ ಹೆಸರು ಉಲ್ಲೇಖಿಸಿ ಆತ್ಮಹತ್ಯೆ ಮಾಡಿಕೊಂಡಿರುವುದು, ರೌಡಿ ಶೀಟರ್ ಹತ್ಯೆ ಪ್ರಕರಣದಲ್ಲಿ ಕೆ.ಆರ್. ಪುರ ಶಾಸಕ ಬೈರತಿ ಬಸವರಾಜ ಹೆಸರು ಪ್ರಸ್ತಾಪ ಮತ್ತಿತರ ವಿಷಯವನ್ನು ಮುಂದು ಮಾಡಿ, ವಿರೋಧ ಪಕ್ಷಗಳ ಬಾಯಿ ಮುಚ್ಚಿಸುವ ಸಿದ್ಧತೆಯನ್ನು ಆಡಳಿತ ಕಾಂಗ್ರೆಸ್ ನಡೆಸಿದೆ.

> ಸರ್ಕಾರಕ್ಕೆ 2 ವರ್ಷ ತುಂಬಿದ್ದು, ರಾಜ್ಯದಲ್ಲಿ ಇನ್ನೂ ರಸ್ತೆ ಗುಂಡಿಗಳನ್ನು ಮುಚ್ಚಿಲ್ಲ. ಔಷಧಗಳ ಕೊರತೆ ಇದೆ. ಶೇ 60 ಕಮಿಷನ್ ವಸೂಲಿಗೆ ರಾಜ್ಯದ ಎಲ್ಲೆಡೆ ಚೆಕ್‌ಪೋಸ್ಟ್ ಸ್ಥಾಪಿಸಲಾಗಿದೆ
> **ಆರ್.ಅಶೋಕ,** ವಿರೋಧಪಕ್ಷದ ನಾಯಕ

> ಶಾಸಕರ ಅನುದಾನ ನೀಡಿಕೆಯಲ್ಲಿ ತಾರತಮ್ಯ ಆಗಿದೆ. ರಸಗೊಬ್ಬರ ಸಮಸ್ಯೆ, ಕಾಲ್ತುಳಿತ ಹಾಗೂ ಬೆಲೆ ಏರಿಕೆಯ ಬಗ್ಗೆ ಚರ್ಚೆ ಮಾಡುತ್ತೇವೆ
> **ಸುರೇಶ್ ಬಾಬು**
> ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಈ ಬಾರಿ 17 ಮಸೂದೆಗಳ ಮಂಡನೆ

ದೇವದಾಸಿ ಪದ್ಧತಿ ನಿರ್ಮೂಲನೆ, ಸೌಹಾರ್ದ ಸಹಕಾರಿ ತಿದ್ದುಪಡಿ, ಅಂತರ್ಜಲ ಬಳಕೆ ನಿಯಂತ್ರಣದ ಮಸೂದೆಯೂ ಸೇರಿ 17 ಮಸೂದೆಗಳನ್ನು ಅಧಿವೇಶನದಲ್ಲಿ ಮಂಡಿಸಲಾಗುವುದು.

ಪ್ರಮುಖ ಮಸೂದೆಗಳು:

- ಕರ್ನಾಟಕ ದೇವದಾಸಿ ಪದ್ಧತಿ (ತಡೆಗಟ್ಟುವಿಕೆ, ನಿಷೇಧ, ಪರಿಹಾರ ಮತ್ತು ಪುನರ್ವಸತಿ) ಮಸೂದೆ 2025
- ಕರ್ನಾಟಕ ಸೌಹಾರ್ದ ಸಹಕಾರಿ(ತಿದ್ದುಪಡಿ)ಮಸೂದೆ 2025
- ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆ, ನಿಯಂತ್ರಣ) (ತಿದ್ದುಪಡಿ) ಮಸೂದೆ–2025
- ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ (ಅನುಕೂಲ ಮತ್ತು ನಿಯಂತ್ರಣ) (ತಿದ್ದುಪಡಿ) ಮಸೂದೆ 2025
- ಕರ್ನಾಟಕ ಪುರಸಭೆಗಳ ಹಾಗೂ ಇತರೆ ಕಾನೂನುಗಳ(ತಿದ್ದುಪಡಿ) ಮಸೂದೆ 2025
- ಕರ್ನಾಟಕ ಬಂದರು(ಲ್ಯಾಂಡಿಂಗ್ ಮತ್ತು ಶಿಪ್ಪಿಂಗ್ ಫೀಸ್)(ತಿದ್ದುಪಡಿ) ಮಸೂದೆ 2025
- ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ (ತಿದ್ದುಪಡಿ) ಮಸೂದೆ 2025
- ಕರ್ನಾಟಕ ಭೂ ಸುಧಾರಣೆಗಳು ಮತ್ತು ಇತರೆ ಕಾನೂನು(ತಿದ್ದುಪಡಿ) ಮಸೂದೆ 2025

ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಆರ್‌ಸಿಬಿ ವಿಜಯೋತ್ಸವದ ವೇಳೆ ಸಂಭವಿಸಿದ ಕಾಲ್ತುಳಿತದಲ್ಲಿ 11 ಮಂದಿ ಸಾವನ್ನಪ್ಪಿದ ಘಟನೆ ನಿಲುವಳಿ ಸೂಚನೆ ರೂಪದಲ್ಲಿ ಪ್ರಸ್ತಾಪವಾಗಲಿದೆ. ಈ ಘಟನೆಗೆ ಸಂಬಂಧಿಸಿದಂತೆ ಈಗಾಗಲೇ ನ್ಯಾಯಮೂರ್ತಿ ಜಾನ್ ಮೈಕಲ್ ಕುನ್ಹ ನೇತೃತ್ವದ ಆಯೋಗ ತನಿಖೆ ನಡೆಸಿದ್ದು, ಅದರ ವರದಿ ಪಡೆದಿರುವ ಸರ್ಕಾರ, ಘಟನೆಗೆ ಕಾರಣಕರ್ತರ ವಿರುದ್ಧ ಕ್ರಮ ಜರುಗಿಸಿದೆ. ಈ ವಿಚಾರವಾಗಿ ಆಡಳಿತ ಮತ್ತು ವಿರೋಧ ಪಕ್ಷಗಳ ಮಧ್ಯೆ ಜಟಾಪಟಿ ನಡೆಯಲಿದೆ.



ರಾಜ್ಯದಲ್ಲಿ ರಸಗೊಬ್ಬರ ಕೊರತೆ ಮತ್ತು ಅತಿವೃಷ್ಟಿಯಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಬಿಜೆಪಿ– ಜೆಡಿಎಸ್ ಸದಸ್ಯರು ಪ್ರಸ್ತಾಪಿಸಲಿದ್ದಾರೆ. ಆದರೆ, ಕೇಂದ್ರ ಸರ್ಕಾರ ರಾಜ್ಯಕ್ಕೆ ಅಗತ್ಯವಿರುವಷ್ಟು ರಸಗೊಬ್ಬರ ಪೂರೈಸುತ್ತಿಲ್ಲ ಎಂದು ತಿರುಗೇಟು ನೀಡಲು ಕಾಂಗ್ರೆಸ್ ಸಿದ್ಧತೆ ನಡೆಸಿಕೊಂಡಿದೆ. ಇಬ್ಬರೂ ಅಂಕಿ–ಅಂಶಗಳನ್ನು ಅಸ್ತ್ರವನ್ನಾಗಿ ಬಳಸಿಕೊಳ್ಳುವ ಸಂಭವ ಹೆಚ್ಚಾಗಿದೆ.

ಶಾಸಕರಿಗೆ ತಲಾ ₹50 ಕೋಟಿ ವಿಶೇಷ ಅನುದಾನ ಹಂಚಿಕೆ ಮಾಡಿ ಸಿದ್ದರಾಮಯ್ಯ ಆದೇಶ ಹೊರಡಿಸಿದ್ದಾರೆ. ಇದು ಆಡಳಿತ ಪಕ್ಷದ ಶಾಸಕರಿಗೆ ಮಾತ್ರ ಎಂದು ಆಪಾದಿಸಿರುವ ವಿರೋಧ ಪಕ್ಷ, ಅನುದಾನ ತಾರತಮ್ಯವನ್ನು ಮುಂದಿಟ್ಟು ಹೋರಾಟ ನಡೆಸಲು ನಿಶ್ಚಯಿಸಿದೆ.

ಒಳಮೀಸಲಾತಿ ಕುರಿತು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್ ಆಯೋಗ ಸರ್ಕಾರಕ್ಕೆ ಸಲ್ಲಿಸಿರುವ ವರದಿಯನ್ನು ಬಹಿರಂಗಪಡಿಸುವಂತೆ ಆಡಳಿತ ಮತ್ತು ವಿಪಕ್ಷದ ಶಾಸಕರು ಒತ್ತಾಯಿಸುವ ಸಾಧ್ಯತೆ ಇದೆ. ಈ ಬಗ್ಗೆ ಇದೇ 16 ರಂದು ವಿಶೇಷ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಿದ್ದು, ಆ ಬಳಿಕ ಸರ್ಕಾರ ಸದನದಲ್ಲಿ ಹೇಳಿಕೆ ನೀಡುವ ಸಾಧ್ಯತೆ ಇದೆ.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ನೌಕರರ ಮುಷ್ಕರ ಮತ್ತು ಅವರ ಬೇಡಿಕೆಗಳು, ಗ್ರೇಟರ್ ಬೆಂಗಳೂರು ಅಡಿ ಬೆಂಗಳೂರು ವಿಭಜನೆ ಮತ್ತು ಬ್ರ್ಯಾಂಡ್ ಬೆಂಗಳೂರು ವಿಚಾರವಾಗಿಯೂ ಬಿಜೆಪಿ ಮತ್ತು ಕಾಂಗ್ರೆಸ್ ಸದಸ್ಯರ ಮಧ್ಯೆ ಬಿರುಸಿನ ಚರ್ಚೆ ನಡೆಯುವ ಸಂಭವ ಇದೆ.

ರಾಜ್ಯದ ಹಲವು ಕಡೆಗಳಲ್ಲಿ ನಡೆದಿರುವ ಹತ್ಯೆಗಳ ಕುರಿತು ಪ್ರಸ್ತಾಪಿಸಲು ಬಿಜೆಪಿ ತಯಾರಿ ನಡೆಸಿದೆ. ಮಂಗಳೂರಿನಲ್ಲಿ ಮೇ ತಿಂಗಳಿನಲ್ಲಿ ನಡೆದ ಕೋಮು ವೈಷಮ್ಯದ ಹತ್ಯೆಗಳು, ಕೊಪ್ಪಳ ಮತ್ತು ಕೊರಟಗೆರೆಯಲ್ಲಿ ನಡೆದ ಕೊಲೆಗಳು ಮತ್ತು ಬೆಂಗಳೂರಿನಲ್ಲಿ ಬಾಲಕನನ್ನು ಹಣಕ್ಕಾಗಿ ಅಪಹರಿಸಿ ಹತ್ಯೆಗೈದ ಪ್ರಕರಣಗಳು ಪ್ರಸ್ತಾಪವಾಗಲಿವೆ. ಧರ್ಮಸ್ಥಳ ಪ್ರಕರಣದಲ್ಲಿ ವಿಶೇಷ ತನಿಖಾ ತಂಡ ರಚನೆ, ಆ ಗ್ರಾಮದ ಸುತ್ತಮುತ್ತ ಹೂತ ಶವಗಳಿವೆ ಎಂದು ಆಪಾದಿಸಲಾದ ಪ್ರಕರಣದಲ್ಲಿ ನಡೆಯುತ್ತಿರುವ ಶೋಧದ ವಿಚಾರವೂ ಪ್ರಸ್ತಾಪವಾಗುವ ಸಾಧ್ಯತೆ ಇದೆ.

ಕಳೆದ ಅಧಿವೇಶನದ ಕಲಾಪದ ವೇಳೆ ಅಮಾನತ್ತಿಗೆ ಒಳಗಾಗಿದ್ದ 18 ಶಾಸಕರ ಅಮಾನತು ರದ್ದು ಕ್ರಮವನ್ನು ಸಭಾಧ್ಯಕ್ಷರು ಸೋಮವಾರವೇ ಪ್ರಕಟಿಸಲಿದ್ದಾರೆ. ಬಿಜೆಪಿಯಿಂದ ಉಚ್ಚಾಟನೆಗೊಂಡಿರುವ ಬಸನಗೌಡ ಪಾಟೀಲ ಯತ್ನಾಳ ಅವರಿಗೆ ಪ್ರತ್ಯೇಕ ಆಸನ ವ್ಯವಸ್ಥೆ ಮಾಡಲಾಗುವುದು.

ಬಿಜೆಪಿ– ಜೆಡಿಎಸ್ ಸಮನ್ವಯ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಮಂಡಲದ ಉಭಯ ಸದನಗಳಲ್ಲಿ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸುವ ಉದ್ದೇಶದಿಂದ ಬಿಜೆಪಿ–ಜೆಡಿಎಸ್ ಪಕ್ಷಗಳ ಸಮನ್ವಯ ಸಮಿತಿ ಸಭೆ ಭಾನುವಾರ ಸಂಜೆ ಗೋಲ್ಡ್ ಫಿಂಚ್ ಹೋಟೆಲ್‌ನಲ್ಲಿ ನಡೆಯಿತು.

ಸುಮಾರು 1 ತಾಸು ನಡೆದ ಈ ಸಭೆಯಲ್ಲಿ 30 ಕ್ಕೂ ಹೆಚ್ಚು ವಿಷಯಗಳನ್ನು ಅಧಿವೇಶನದಲ್ಲಿ ಪ್ರಸ್ತಾಪಿಸುವ ಕುರಿತು ಚರ್ಚೆ ನಡೆಸಲಾಯಿತು ಎಂದು ಸಭೆಯ ಬಳಿಕ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಸುದ್ದಿಗಾರರಿಗೆ ತಿಳಿಸಿದರು.

'ಪ್ರತಿ ದಿನ ಯಾವ ಯಾವ ವಿಷಯಗಳನ್ನು ಪ್ರಸ್ತಾಪಿಸಬೇಕು ಎಂಬ ಬಗ್ಗೆ ಎರಡೂ ಪಕ್ಷಗಳ ನಾಯಕರು ಮೊದಲೇ ಸಭೆ ಸೇರಿ ತೀರ್ಮಾನಿಸುತ್ತೇವೆ' ಎಂದು ಅಶೋಕ ಹೇಳಿದರು.


ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿ, 'ಸದನವು 15 ರಿಂದ 20 ದಿನಗಳ ಕಾಲ ನಡೆಯಬೇಕಿತ್ತು. ಆದರೆ, 8–9 ದಿನಗಳಿಗೆ ಸೀಮಿತ ಮಾಡಿದ್ದಾರೆ. ಸರ್ಕಾರ ಕಾಟಾಚಾರಕ್ಕೆ ಅಧಿವೇಶನ ನಡೆಸುತ್ತಿದೆ. ರೈತರ ಸಮಸ್ಯೆ, ಉತ್ತರ ಕರ್ನಾಟಕಕ್ಕೆ ಆಗಿರುವ ಅನ್ಯಾಯವನ್ನು ಪ್ರಸ್ತಾಪಿಸಿ, ಸರ್ಕಾರಕ್ಕೆ ಚಾಟಿ ಬೀಸುವ ಕೆಲಸ ಮಾಡುತ್ತೇವೆ' ಎಂದರು.

ಸಭೆಯಲ್ಲಿ ಜೆಡಿಎಸ್ ಗುಂಪಿನ ನಾಯಕ ಸುರೇಶ್ ಬಾಬು, ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ವಿಧಾನಪರಿಷತ್ ವಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಪಾಲ್ಗೊಂಡಿದ್ದರು.

ಭಾರತೀಯ ಸೇನಾ ಪಡೆಗಳ ಮುಖ್ಯಸ್ಥ ಅನಿಲ್ ಚೌಹಾಣ್ ಹೇಳಿಕೆ

'ಆಪರೇಷನ್ ಸಿಂಧೂರ' ಸಮನ್ವಯಕ್ಕೆ ಸಾಕ್ಷಿ

ನವದೆಹಲಿ (ಪಿಟಿಐ): 'ಆಪರೇಷನ್ ಸಿಂಧೂರ ಕಾರ್ಯಾಚರಣೆಯು ಭಾರತೀಯ ಸೇನೆಯ ಮೂರು ಪಡೆಗಳ ಸಮನ್ವಯತೆಗೆ ಸಾಕ್ಷಿಯಾಗಿದೆ' ಎಂದು ಸೇನಾ ಪಡೆಗಳ ಮುಖ್ಯಸ್ಥ (ಸಿಡಿಎಸ್) ಅನಿಲ್ ಚೌಹಾಣ್ ಭಾನುವಾರ ಹೇಳಿದರು.



ಅನಿಲ್ ಚೌಹಾಣ್

ಸಿಕಂದರಾಬಾದ್‌ನಲ್ಲಿ ಇರುವ ಕಾಲೇಜ್ ಆಫ್ ಡಿಫೆನ್ಸ್ ಮ್ಯಾನೇಜ್‌ಮೆಂಟ್‌ನಲ್ಲಿ ಮಾತನಾಡಿದ ಅವರು 'ಹೊಸದಾಗಿ ಸೃಷ್ಟಿಯಾಗುತ್ತಿರುವ ಭದ್ರತಾ ಸವಾಲು ಗಳನ್ನು ಸಮರ್ಥವಾಗಿ ಎದುರಿಸಲು ಹಾಗೂ ಸುಧಾರಣೆಗಳನ್ನು ಜಾರಿಗೊಳಿಸಲು ಮೂರು ಪಡೆಗಳು ತಮ್ಮೊಳಗಿನ ಸಮನ್ವಯತೆಯನ್ನು ಮುಂದುವರಿಸುವ ಅವಶ್ಯಕತೆಯಿದೆ' ಎಂದರು.

ಇಂದಿನ ಆಧುನಿಕ ಯುದ್ಧಕ್ಷೇತ್ರದಲ್ಲಿ ತಂತ್ರಜ್ಞಾನವನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಮಿಲಿಟರಿಯು ಅಳವಡಿಸಿ ಕೊಳ್ಳುತ್ತಿರುವ ತಂತ್ರಗಾರಿಕೆ ಹಾಗೂ ಬದಲಾವಣೆಗಳನ್ನು ಸಿಡಿಎಸ್ ಪ್ರಸ್ತಾಪಿಸಿದರು.

ಮೂರು ಸಶಸ್ತ್ರ ಪಡೆಗಳ ಸಾಮರ್ಥ್ಯ ಹಾಗೂ ಸಮನ್ವಯ ವೃದ್ಧಿಗೆ ಸಂಬಂಧಿಸಿದ ಪ್ರಗತಿಯ ಮುನ್ನೋಟದ ಚಿತ್ರಣವನ್ನು ಸೇನಾ ಪಡೆಗಳ ಮುಖ್ಯಸ್ಥರು ಇದೇ ಸಂದರ್ಭ ಬಿಡುಗಡೆ ಮಾಡಿದರು ಎಂದು ರಕ್ಷಣಾ ಸಚಿವಾಲಯವು ತಿಳಿಸಿದೆ.

ಈ ಮುನ್ನೋಟವು ಸೇನಾಪಡೆಗಳ ಆಧುನೀಕರಣದ ಜೊತೆಗೆ ಕಾರ್ಯಾಚರಣೆಯಲ್ಲಿ ಸಮನ್ವಯ ಹೆಚ್ಚಿಸುವುದು, ದಕ್ಷತೆಯನ್ನು ಸುಧಾರಿಸುವುದು ಮತ್ತು ಯಾವುದೇ ಸವಾಲನ್ನು ಪರಿಣಾಮಕಾರಿಯಾಗಿ ಎದುರಿಸುವ ಖಾತ್ರಿಯನ್ನು ನೀಡಿದೆ.

ಯುದ್ಧಕ್ಷೇತ್ರದಲ್ಲಿ ಭೂಸೇನೆ, ವಾಯುಪಡೆ, ನೌಕಾಪಡೆಯ ಸಾಮರ್ಥ್ಯವನ್ನು ಒಟ್ಟುಗೂಡಿಸುವುದು ಹಾಗೂ ತಮ್ಮಲ್ಲಿನ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಸರ್ಕಾರವು ಮಹತ್ವದ ಯೋಜನೆಯೊಂದನ್ನು ಅನುಷ್ಠಾನಗೊಳಿಸಲು ಕಾರ್ಯೋನ್ಮುಖ ವಾಗಿರುವ ಹೊತ್ತಿನಲ್ಲಿ ಸೇನಾಪಡೆಗಳ ಮುಖ್ಯಸ್ಥರು ನೀಡಿರುವ ಈ ಹೇಳಿಕೆಯು ಮಹತ್ವ ಪಡೆದಿದೆ.

ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯ ಪ್ರಕಾರ, ಯುದ್ಧಕ್ಷೇತ್ರದಲ್ಲಿರುವ ಪ್ರತಿಯೊಂದು ಘಟಕವು ಭೂಸೇನೆ, ವಾಯುಪಡೆ, ನೌಕಾಪಡೆಯನ್ನು ಒಳಗೊಂಡಿರಲಿದ್ದು, ನಿರ್ದಿಷ್ಟ ಪ್ರದೇಶವೊಂದರಲ್ಲಿ ಎದುರಾಗುವ ಭದ್ರತಾ ಸವಾಲುಗಳನ್ನು ಎದುರಿಸಲು ಒಂದೇ ಘಟಕವಾಗಿ ಕಾರ್ಯ ನಿರ್ವಹಿಸಲಿವೆ. ಪ್ರಸ್ತುತ ಈ ಮೂರು ಪಡೆಗಳು ಪ್ರತ್ಯೇಕ ಘಟಕಗಳಾಗಿ ಕಾರ್ಯಾಚರಿಸುತ್ತಿವೆ.

ಚೆಸ್ ಆಟಕ್ಕೆ 'ಸಿಂಧೂರ' ಹೋಲಿಸಿದ ದ್ವಿವೇದಿ

'ಸಿಂಧೂರ ಕಾರ್ಯಾಚರಣೆಯು ಚೆಸ್ ಆಟದಂತಿತ್ತು' ಎಂದು ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಹೇಳಿದ್ದಾರೆ.



ಉಪೇಂದ್ರ ದ್ವಿವೇದಿ

ಐಐಟಿ ಮದ್ರಾಸ್‌ನಲ್ಲಿ ಆ.4ರಂದು ನಡೆದ ಸಮಾರಂಭದಲ್ಲಿ ಮಾತನಾಡಿದ ಅವರು 'ಶತ್ರುಗಳ ಮುಂದಿನ ನಡೆ ಏನು ಎಂಬುದು ನಮಗೆ ತಿಳಿದಿರಲಿಲ್ಲ' ಎಂದಿದ್ದಾರೆ.

'ಆದರೆ, ನಾಲ್ಕನೇ ದಿನವೇ ಟೆಸ್ಟ್ ಪಂದ್ಯ ಮುಗಿಯಿತು' ಎಂದು ಹೇಳಿದ್ದಾರೆ.

'ಸೋತಿದ್ದೀರಾ ಅಥವಾ ಗೆದ್ದಿದ್ದೀರಾ ಎಂದು ನೀವು ಪಾಕಿಸ್ತಾನೀಯರನ್ನು ಕೇಳಿದರೆ ಅವರು, ನಮ್ಮ ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಆಗಿದ್ದಾರೆ. ನಾವು ಮಾತ್ರ ಗೆದ್ದಿರಬೇಕು. ಅದಕ್ಕಾಗಿಯೇ ಅವರು ಫೀಲ್ಡ್ ಮಾರ್ಷಲ್ ಆಗಿದ್ದಾರೆ' ಎಂದು ಹೇಳುತ್ತಾರೆ' ಎಂದರು.

ಸೇನಾ ಮುಖ್ಯಸ್ಥರ ಭಾಷಣದ ಈ ವಿಡಿಯೊವನ್ನು ಸೇನೆಯು ವಾರಾಂತ್ಯದಲ್ಲಿ ಹಂಚಿಕೊಂಡಿದೆ.

'ಮುಂದಿನ ಬಾರಿ ಈಗ ನಡೆದ ಅನಾಹುತಕ್ಕಿಂತಲೂ ಹೆಚ್ಚಿನ ದುರ್ಘಟನೆ ಸಂಭವಿಸಬಹುದು. ಶತ್ರು ದೇಶವು ಅದನ್ನು ಏಕಾಂಗಿಯಾಗಿ ಮಾಡುತ್ತದೆಯೋ ಅಥವಾ ಬೇರೆ ದೇಶದ ಬೆಂಬಲವನ್ನು ಪಡೆಯುತ್ತದೆಯೋ ಎಂಬುದು ನಮಗೆ ಗೊತ್ತಿಲ್ಲ. ಆದರೆ ಈ ಬಗ್ಗೆ ನಮಗೆ ಬಲವಾದ ಸುಳಿವು ಸಿಕ್ಕಿದೆ. ಆ ರಾಷ್ಟ್ರವು ಏಕಾಂಗಿಯಾಗಿರುವುದಿಲ್ಲ ಎಂಬುದು ನಮ್ಮ ಭಾವನೆ. ಆದ್ದರಿಂದ ನಾವು ಸದಾ ಜಾಗರೂಕರಾಗಿರಬೇಕು' ಎಂದು ಯಾವುದೇ ದೇಶದ ಹೆಸರು ಪ್ರಸ್ತಾಪಿಸದೆ ಸೇನಾ ಮುಖ್ಯಸ್ಥರು ತಿಳಿಸಿದರು.

ಆಪರೇಷನ್ ಸಿಂಧೂರ ಕಾರ್ಯಾಚರಣೆಯ ಕುರಿತಂತೆ ಚೆಸ್ ಹಾಗೂ ಕ್ರಿಕೆಟ್ ಆಟವನ್ನು ಉಪೇಂದ್ರ ದ್ವಿವೇದಿ ಅವರು ಉದಾಹರಿಸಿದ್ದಾರೆ.

ಅಮೆರಿಕಕ್ಕೆ ಮುನೀರ್ 2ನೇ ಬಾರಿಗೆ ಭೇಟಿ

ಇಸ್ಲಾಮಾಬಾದ್ (ಪಿಟಿಐ): ಭಾರತದೊಂದಿಗಿನ ನಾಲ್ಕು ದಿನಗಳ ಸಂಘರ್ಷದ ಬಳಿಕ ಪಾಕಿಸ್ತಾನದ ಸೇನಾ ಮುಖ್ಯಸ್ಥ ಆಸಿಂ ಮುನೀರ್ ಅವರು ಅಮೆರಿಕಕ್ಕೆ ಎರಡನೇ ಬಾರಿಗೆ ಭೇಟಿ ನೀಡಿದ್ದಾರೆ ಎಂದು ಪಾಕಿಸ್ತಾನ ಸೇನೆಯು ಭಾನುವಾರ ಹೇಳಿದೆ.



ಮುನೀರ್

'ಆಸಿಂ ಅವರು ಅಮೆರಿಕಕ್ಕೆ ಅಧಿಕೃತವಾಗಿ ಭೇಟಿ ನೀಡಿದ್ದು, ಅಲ್ಲಿನ ರಾಜಕೀಯ ನಾಯಕರು ಮತ್ತು ಸೇನೆಯ ಮುಖ್ಯಸ್ಥರನ್ನು ಭೇಟಿ ಮಾಡಲಿದ್ದಾರೆ. ಪಾಕಿಸ್ತಾನದ ವಲಸಿಗರೊಂದಿಗೂ ಮಾತುಕತೆ ನಡೆಸಲಿದ್ದಾರೆ' ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಅಮೆರಿಕದ ಸೆಂಟ್ರಲ್ ಕಮಾಂಡ್ ಕಮಾಂಡರ್ ಜನರಲ್ ಮೈಕೆಲ್ ಇ. ಕುರಿಲ್ಲಾ ಅವರ ನಿವೃತ್ತಿಯ ಬೀಳ್ಕೊಡುಗೆ ಸಮಾರಂಭದಲ್ಲಿ ಭಾಗಿಯಾಗಿದ್ದ ಆಸಿಂ, ದ್ವಿಪಕ್ಷೀಯ ಮಿಲಿಟರಿ ಸಹಕಾರ ಬಲಪಡಿಸಲು ಕುರಿಲ್ಲಾ ನೀಡಿದ್ದ ಕೊಡುಗೆಯನ್ನು ಸ್ಮರಿಸಿದರು. ಇದೇ ವೇಳೆ ಅಡ್ಮಿರಲ್ ಬ್ರಾಡ್ ಕೂಪರ್‌ಗೆ ಶುಭ ಕೋರುವ ಜೊತೆಗೆ ಭದ್ರತಾ ಸವಾಲುಗಳನ್ನು ಎದುರಿಸುವಲ್ಲಿ ಸಹಯೋಗ ಮುಂದುವರಿಸುವ ವಿಶ್ವಾಸ ವ್ಯಕ್ತಪಡಿಸಿದರು ಎಂದಿದೆ.


ಅಮೆರಿಕ ಸೇನಾ ಪಡೆಯ ಜಂಟಿ ಮುಖ್ಯಸ್ಥ ಜನರಲ್ ಡಾನ್ ಕೇನ್ ಅವರನ್ನು ಭೇಟಿ ಮಾಡಿ ಚರ್ಚಿಸಿದ ಮುನೀರ್ ಅವರು, ಪಾಕಿಸ್ತಾನಕ್ಕೆ ಭೇಟಿ ನೀಡುವಂತೆ ಕೇನ್ ಅವರಿಗೆ ಆಹ್ವಾನ ನೀಡಿದರು ಎಂದು ತಿಳಿಸಿದೆ.

ಜಗದೀಪ್ ಧನಕರ್ ಎಲ್ಲಿದ್ದಾ ರೆ: ಶಿವಸೇನೆಯ ಸಂಜಯ್ ರಾವುತ್ ಪ್ರಶ್ನೆ

ಮುಂಬೈ: ಜಗದೀಪ್ ಧನಕರ್ ಅವರು ಉಪ ರಾಷ್ಟ್ರಪತಿ ಸ್ಥಾನಕ್ಕೆ ರಾಜೀನಾಮೆ ನೀಡಿ ಸಾರ್ವಜನಿಕ ಜೀವನದಿಂದ ದೂರವಿರುವ ಬಗ್ಗೆ ಶಿವಸೇನಾ(ಉದ್ಧವ್ ಬಣ) ಸಂಸದ ಸಂಜಯ್ ರಾವುತ್ ಅವರು ಭಾನುವಾರ ಕಳವಳ ವ್ಯಕ್ತಪಡಿಸಿದರು.

'ಚೀನಾ ಮತ್ತು ರಷ್ಯಾದಲ್ಲಿ ನಾಯಕರು ನಾಪತ್ತೆ ಆಗುವುದು ಸಾಮಾನ್ಯ ಸಂಗತಿ. ಆದರೆ ಕೆಲ ವ್ಯಕ್ತಿಗಳಿಂದ ಭಾರತದಲ್ಲೂ ಇಂತಹ ಬೆಳವಣಿಗೆಗಳು ಆರಂಭವಾಗಿವೆ' ಎಂದು ಯಾರ ಹೆಸರನ್ನೂ ಹೇಳದೇ ಟೀಕಿಸಿದರು.

'ಜುಲೈ 26ರಂದು ಸಂಜೆ 6 ಗಂಟೆಗೆ ರಾಜೀನಾಮೆ ನೀಡಿದ ಬಳಿಕ ಜಗದೀಪ್ ಧನಕರ್ ಬಗೆಗಿನ ಯಾವ ಮಾಹಿತಿ ಲಭ್ಯವಾಗುತ್ತಿಲ್ಲ. ಪ್ರಸ್ತುತ ಅವರು ಎಲ್ಲಿದ್ದಾರೆ? ಆರೋಗ್ಯ ಸ್ಥಿತಿ ಹೇಗಿದೆ? ಏನು ಮಾಡುತ್ತಿದ್ದಾರೆ? ನಿಜವಾಗಿಯೂ ಇದ್ದಾರಾ ಅಥವಾ ಕಣ್ಮರೆಯಾಗಿದ್ದಾರಾ? ಎಂಬೆಲ್ಲ ಅನುಮಾನ ಮೂಡುತ್ತಿವೆ' ಎಂದಿದ್ದಾರೆ.



ಸಂಜಯ್ ರಾವುತ್

'ಧನಕರ್ ಎಲ್ಲಿದ್ದಾರೆ ಎಂಬುದು ಯಾರಿಗೂ ಗೊತ್ತಿಲ್ಲ. ದೇಶದ ಮಾಜಿ ಉಪ ರಾಷ್ಟ್ರಪತಿಯೊಬ್ಬರು ಕಣ್ಮರೆಯಾಗಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಕಳವಳಕಾರಿ ಸಂಗತಿ. ಭಾರತದಲ್ಲಿ ಈ ರೀತಿಯ ಪ್ರಕ್ರಿಯೆ ಆರಂಭವಾಗಿದ್ದರೆ, ರಾಹುಲ್ ಗಾಂಧಿ ಮತ್ತು ಅವರ ಆಪ್ತರು ಎಚ್ಚರಿಕೆಯಿಂದಿರಬೇಕು' ಎಂದರು.

ಗೆಲ್ಲಿಸುವ ಭರವಸೆ: 2024ರ ಮಹಾರಾಷ್ಟ್ರ ವಿಧಾನಸಭೆ ಚುನಾವಣೆಗೂ ಮುನ್ನ ಇಬ್ಬರು ವ್ಯಕ್ತಿಗಳು ಉದ್ಧವ್ ಠಾಕ್ರೆ ಅವರನ್ನು ಭೇಟಿಯಾಗಿ ಗೆಲುವು ಕಠಿಣ ಎನಿಸಿರುವ 60-65 ಕ್ಷೇತ್ರಗಳನ್ನು 'ಇವಿಎಂಗಳ ಮೂಲಕ' ಗೆಲ್ಲಿಸಿಕೊಡುವ ಭರವಸೆ ನೀಡಿದ್ದರು ಎಂದೂ ರಾವುತ್ ಹೇಳಿದ್ದಾರೆ.

‘₹500 ಕೋಟಿ ಪ್ಯಾಕೇಜ್ ಕೊಡಿ’

ಜೀತ ವಿಮುಕ್ತಿ ಕಾರ್ಮಿಕರ ರಾಜ್ಯ ಮಟ್ಟದ ಸಮಾವೇಶ • ಚರ್ಚಿಸಿ ಕ್ರಮ –ಸಚಿವ

ಪ್ರಜಾವಾಣಿ ವಾರ್ತೆ

ಮೈಸೂರು: ‘ಜೀತ ಪದ್ಧತಿಯಿಂದ ಬಿಡುಗಡೆ ಆಗಿರುವ ಕಾರ್ಮಿಕರ ಕಲ್ಯಾಣಕ್ಕೆ ₹500 ಕೋಟಿ ಮೊತ್ತದ ಸಮಗ್ರ ಪ್ಯಾಕೇಜ್ ಘೋಷಿಸಬೇಕು. ಕಾರ್ಮಿಕ ವಿರೋಧಿ ಎಸ್‌ಒಪಿ ರದ್ದುಗೊಳಿಸಬೇಕು’ ಎಂದು ಭಾನುವಾರ ಇಲ್ಲಿ ‘ನಡೆದ ಜೀತ ವಿಮುಕ್ತಿ ಕಾರ್ಮಿಕರ ರಾಜ್ಯ ಮಟ್ಟದ ಸಮಾವೇಶ’ವು ಒತ್ತಾಯಿಸಿತು.

ಜೀತ ವಿಮುಕ್ತಿ ಕರ್ನಾಟಕ (ಜೀವಿಕ) ಹಾಗೂ ಕರ್ನಾಟಕ ಜೀತದಾಳು ಮತ್ತು ಕೃಷಿ ಕಾರ್ಮಿಕರ ಒಕ್ಕೂಟವು ಕಲಾಮಂದಿರದಲ್ಲಿ ಭಾನುವಾರ ಆಯೋಜಿಸಿದ್ದ ಸಮಾವೇಶದಲ್ಲಿ ಜೀವಿಕ ಜಿಲ್ಲಾ ಸಂಚಾಲಕ ಬಸವರಾಜು ಅವರು ಹಕ್ಕೊತ್ತಾಯ ಮಂಡಿಸಿದರು.

‘ರಾಜ್ಯದಲ್ಲಿ 20 ಸಾವಿರ ಜೀತ ವಿಮುಕ್ತ ಕಾರ್ಮಿಕರಿದ್ದು, ಇವರಲ್ಲಿ 7ಸಾವಿರ ಮಂದಿಗೆ ಸರ್ಕಾರ ವಿಮುಕ್ತಿ ಪತ್ರ ನೀಡಿದೆ. ಜೀತಪದ್ಧತಿ ನಿರ್ಮೂಲನೆ ವಿರೋಧಿಯಾಗಿರುವ 2017ರ ಕೇಂದ್ರ ಹಾಗೂ 2022ರ ಕರ್ನಾಟಕದ ಎಸ್‌ಒಪಿಗಳನ್ನು ಕೂಡಲೇ ರದ್ದುಗೊಳಿಸಬೇಕು’ ಎಂದು ಆಗ್ರಹಪಡಿಸಿತು.

‘ಬೆಳಗಾವಿ, ಮೈಸೂರು, ಚಿಕ್ಕಬಳ್ಳಾಪುರ ಹಾಗೂ ಮಂಡ್ಯ ಜಿಲ್ಲೆಗಳ 2 ಸಾವಿರಕ್ಕೂ ಅಧಿಕ ಜೀತವಿಮುಕ್ತಿ ಕಾರ್ಮಿಕರಿಗೆ 2017–2019ರಿಂದಲೂ ಪುನರ್ವಸತಿ ಪ್ಯಾಕೇಜ್ ತಡೆಹಿಡಿದಿದ್ದು, ಕೂಡಲೇ ಅದನ್ನು ಬಿಡುಗಡೆಗೊಳಿಸಲು ಕ್ರಮಕೈಗೊಳ್ಳಬೇಕು’ ಎಂದೂ ಒತ್ತಾಯಿಸಿತು.

ಮುಖ್ಯಾಂಶಗಳು

- ಜೀವಿಕದಿಂದ ಸಮಾವೇಶ ಆಯೋಜನೆ
- ತಡೆಹಿಡಿದಿದ್ದ ಪುನರ್ವಸತಿ ಪ್ಯಾಕೇಜ್ ಬಿಡುಗಡೆ ಮಾಡಿ
- ಸಮಗ್ರ ಕಲ್ಯಾಣ ಯೋಜನೆ ರೂಪಿಸಲು ಆಗ್ರಹ

ಜೀತ ಎಂಬುದು ಅತ್ಯಂತ ಅಮಾನವೀಯವಾದುದು. ಇದರಿಂದ ಶೋಷಣೆಗೆ ಒಳಗಾದ ಎಲ್ಲ ಕಾರ್ಮಿಕರ ಕಲ್ಯಾಣಕ್ಕೆ ಸರ್ಕಾರ ಬದ್ಧವಾಗಿದೆ
ಡಾ.ಎಚ್.ಸಿ. ಮಹದೇವಪ್ಪ
ಸಮಾಜ ಕಲ್ಯಾಣ ಸಚಿವ


ಮೈಸೂರಿನ ಕಲಾಮಂದಿರದಲ್ಲಿ ಆಯೋಜಿಸಿದ್ದ ಜೀವವಿಮುಕ್ತಿ ಕಾರ್ಮಿಕರ ರಾಜ್ಯ ಮಟ್ಟದ ಸಮಾವೇಶದಲ್ಲಿ ಸಭಿಕರು ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

‘ಜೀತದಾಳುಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡದವರೇ ಇದ್ದಾರೆ. ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಸಭೆ ಕರೆದು ಇವರಿಗಾಗಿ ಕಲ್ಯಾಣ ಯೋಜನೆ ರೂಪಿಸಬೇಕು. ಸ್ವ ಉದ್ಯೋಗಕ್ಕೆ ವಿಶೇಷ ಅನುದಾನ ಹಾಗೂ ನೇರ ಸಾಲ ಸೌಲಭ್ಯ ಕಲ್ಪಿಸಬೇಕು’ ಎಂದು ಒತ್ತಾಯಿಸಲಾಯಿತು.

ಬೇಡಿಕೆಗಳ ಪಟ್ಟಿ ಸ್ವೀಕರಿಸಿದ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ, ‘ವಿಧಾನ ಮಂಡಲ ಅಧಿವೇಶನದ ಬಳಿಕ ಮುಖ್ಯಮಂತ್ರಿ ಅವರ ಬಳಿ ಚರ್ಚಿಸಿ, ತೀರ್ಮಾನಿಸುತ್ತೇವೆ’ ಎಂದು ಹೇಳಿದರು.

ಶಾಸಕರಾದ ಅನಿಲ್ ಚಿಕ್ಕಮಾದು, ದರ್ಶನ್ ಧ್ರುವನಾರಾಯಣ, ಉರಿಲಿಂಗ ಪೆದ್ದಿಮಠದ ಜ್ಞಾನಪ್ರಕಾಶ ಸ್ವಾಮೀಜಿ, ರೈತ ಸಂಘ ರಾಜ್ಯ ಅಧ್ಯಕ್ಷ ಬಡಗಲಪುರ ನಾಗೇಂದ್ರ, ದಸಂಸ ಮುಖಂಡರಾದ ಗುರುಪ್ರಸಾದ್ ಕೆರಗೋಡು, ಮಾವಳ್ಳಿ ಶಂಕರ್, ಜೀವಿಕ ಸಂಸ್ಥಾಪಕ ಕಿರಣ್ ಕಮಲ್ ಪ್ರಸಾದ್, ಕರ್ನಾಟಕ ಜೀತದಾಳು ಮತ್ತು ಕೃಷಿ ಕಾರ್ಮಿಕರ ಒಕ್ಕೂಟದ ಅಧ್ಯಕ್ಷ ಮಹದೇವು, ಪ್ರೊ. ಬಾಬು ಮ್ಯಾಥ್ಯು, ಪುರುಷೋತ್ತಮ್ ಅವರಿದ್ದರು

ದುರ್ಗದಲ್ಲಿ ‘ದಯೆ– ಕರುಣೆ’ ಹೆಜ್ಜೆ ಗುರುತು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಟಿಬೆಟ್ ಧರ್ಮಗುರು ದಲೈಲಾಮಾ ಅವರ 90ನೇ ಜನ್ಮದಿನದ ಅಂಗವಾಗಿ ಭಾನುವಾರ ರಾಜ್ಯದ ವಿವಿಧ ಟಿಬೆಟ್ ಪುನರ್ವಸತಿ ಕ್ಯಾಂಪ್‌ಗಳಿಂದ ಬಂದಿದ್ದ 500ಕ್ಕೂ ಹೆಚ್ಚು ಲಾಮಾಗಳು ‘ದಯೆ ಹಾಗೂ ಕರುಣೆ’ಯ ಹೆಸರಿನಲ್ಲಿ ಪಾದಯಾತ್ರೆ ನಡೆಸಿದರು.

‘ಬಸವ ನಾಡಿನಲ್ಲಿ ಬುದ್ಧ ಸ್ಮರಣೆ’ ಶೀರ್ಷಿಕೆಯಡಿ ಮಾದಾರ ಚನ್ನಯ್ಯ ಗುರುಪೀಠ, ಸಂತೋಷ್ ಲಾಡ್ ಫೌಂಡೇಷನ್, ಇಂಡೊ–ಟಿಬೆಟ್ ಸ್ನೇಹ ಸೊಸೈಟಿ ವತಿಯಿಂದ ಪಾದಯಾತ್ರೆ ಆಯೋಜಿಸಲಾಗಿತ್ತು.

ದಲೈಲಾಮಾ ಜನ್ಮದಿನವನ್ನು ‘ಜೀವ ಕಾರುಣ್ಯ’ದ ವರ್ಷವೆಂದು ಘೋಷಣೆ ಮಾಡಲಾಗಿದ್ದು, ಇದರ ಅಂಗವಾಗಿ ನಗರದಲ್ಲಿ ವಿಶೇಷ ಆಚರಣೆ ನಡೆಯಿತು.

ಮೆರವಣಿಗೆಯಲ್ಲಿ ಲಾಮಾ ಗಳು ಧಾರ್ಮಿಕ ಶ್ಲೋಕ ಪಠಿಸಿದರು. ರಾಜ್ಯದಲ್ಲಿ ವೈಭವದಿಂದ ಧರ್ಮಗುರು ಜಯಂತಿ ಆಚರಣೆಗಾಗಿ ‘ಧನ್ಯವಾದ ಭಾರತ, ಧನ್ಯವಾದ ಕರ್ನಾಟಕ’ ಎಂದು ಕೃತಜ್ಞತೆ ಅರ್ಪಿಸಿದರು.

ಮೆರವಣಿಗೆ ವೇಳೆ ಲಾಮಾಗಳು ಅಂಬೇಡ್ಕರ್ ವೃತ್ತದಲ್ಲಿ ಅಂಬೇಡ್ಕರ್ ಪ್ರತಿಮೆಗೆ, ಮದಕರಿ ವೃತ್ತದಲ್ಲಿ ಮದಕರಿ ನಾಯಕರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಸಚಿವ ಸಂತೋಷ್ ಲಾಡ್ ಪಾಲ್ಗೊಂಡಿದ್ದರು.


ಟಿಬೆಟ್ ಧರ್ಮಗುರು ದಲೈಲಾಮಾ ಅವರ 90ನೇ ಜನ್ಮದಿನದ ಅಂಗವಾಗಿ ಲಾಮಾಗಳು ಚಿತ್ರದುರ್ಗದಲ್ಲಿ ಪಾದಯಾತ್ರೆ ನಡೆಸಿದರು

ಬಸವ ಧರ್ಮ ದೊಡ್ಡದು: ನಂತರ ನಡೆದ ವೇದಿಕೆ ಕಾರ್ಯಕ್ರಮ ಉದ್ಘಾಟಿಸಿದ ಸಚಿವ ಎಂ.ಬಿ.ಪಾಟೀಲ ‘ಬಸವ ಧರ್ಮದಲ್ಲಿ ಜಾತಿ ಭೇದವಿಲ್ಲ. ಬಸವೇಶ್ವರರು ಸೃಷ್ಟಿಸಿದ ಅನುಭವ ಮಂಟಪ ಇಂದು ಇದ್ದಿದ್ದರೆ ಅರ್ಧ ದೇಶವೇ ಬಸವ ಧರ್ಮವಾಗುತ್ತಿತ್ತು’ ಎಂದು ಹೇಳಿದರು.

‘ಬಸವಣ್ಣ ಮಾನವತಾವಾದಕ್ಕಾಗಿ 12ನೇ ಶತಮಾನದಲ್ಲೇ ಕ್ರಾಂತಿ ಮಾಡಿದ್ದರು. ದಯೆ ಹಾಗೂ ಕರುಣೆಗೆ ಹೋರಾಡಿದ ಮತ್ತೊಬ್ಬ ದಾರ್ಶನಿಕನನ್ನು ಕಾಣಲು ಸಾಧ್ಯವಿಲ್ಲ’ ಎಂದು ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು.

ದಲೈಲಾಮಾ ಅವರ ಪ್ರತಿನಿಧಿ ಜಿಗ್ಮೇ ಜಗ್ನೆ ಪಾಲ್ಗೊಂಡಿದ್ದರು. ಲಾಮಾಗಳು ಸಂಜೆ ನಗರ ಹೊರವಲಯದಲ್ಲಿರುವ ಮಾಜಿ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ ಅವರ ಸಮಾಧಿ ಸ್ಥಳಕ್ಕೆ ತೆರಳಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

‘ದಲೈಲಾಮಾ ಆಯ್ಕೆ ಚೀನಾ ಮಧ್ಯಪ್ರವೇಶ ಬೇಕಿಲ್ಲ’

ದಲೈಲಾಮಾ ಅವರು ಚಿತ್ರದುರ್ಗದ ಕಾರ್ಯಕ್ರಮ ಕುರಿತು ಸಂದೇಶ ಕಳುಹಿಸಿದ್ದರು.

‘ಚಿತ್ರದುರ್ಗದ ಬಗ್ಗೆ ನನಗೆ ವಿಶೇಷ ಪ್ರೀತಿ ಇದೆ. ನನ್ನ ದೇಶದ ಜನರು ನಿರಾಶ್ರಿತರಾಗಿ ಇದ್ದಾಗ ಬೆಂಬಲಕ್ಕೆ ಬಂದ ಮುಖ್ಯಮಂತ್ರಿಯವರ ಪೈಕಿ ಎಸ್.ನಿಜಲಿಂಗಪ್ಪ ಅವರು ಮುಂಚೂಣಿಯಲ್ಲಿದ್ದರು. ಅವರನ್ನು ಸದಾ ನೆನೆಯುತ್ತೇನೆ’ ಎಂದು ತಿಳಿಸಿದ್ದಾರೆ.

‘ಮುಂದಿನ ದಲೈಲಾಮಾರ ಆಯ್ಕೆಯ ಅಧಿಕಾರ ಟಿಬೆಟ್‌ನ ಜನರಿಗೆ ಮಾತ್ರವಿದೆ. ಈ ವಿಚಾರದಲ್ಲಿ ಚೀನಾದ ಮಧ್ಯಪ್ರವೇಶ ಬೇಡ. ಈ ನಿರ್ಣಯವನ್ನು ಚಿತ್ರದುರ್ಗದ ಸಭೆ ಅಂಗೀಕರಿಸಬೇಕು’ ಎಂಬ ಸಂದೇಶವನ್ನು ಸಭೆಯಲ್ಲಿ ಓದಲಾಯಿತು.

ವಂದೇ ಭಾರತ್: 3 ರೈಲಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಾವಿ–ಬೆಂಗಳೂರು, ಶ್ರೀ ಮಾತಾ ವೈಷ್ಣೋದೇವಿ ಕತ್ರಾ–ಅಮೃತಸರ ಹಾಗೂ ಅಜ್ನಿ (ನಾಗ್ಪುರ)–ಪುಣೆ ಮಾರ್ಗಗಳಲ್ಲಿ ಸಂಚರಿಸುವ ವಂದೇ ಭಾರತ್ ಎಕ್ಸ್‌ಪ್ರೆಸ್‌ನ ಹೊಸ ರೈಲುಗಳಿಗೆ ಪ್ರಧಾನಿ ನರೇಂದ್ರ ಮೋದಿ ಭಾನುವಾರ ಚಾಲನೆ ನೀಡಿದರು.

ಮೋದಿ ಅವರು ನಿಲ್ದಾಣಕ್ಕೆ ಆಗಮಿಸಿದಾಗ, ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ವಿ. ಸೋಮಣ್ಣ ಬರಮಾಡಿಕೊಂಡರು. ಶಾಲಾ ಮಕ್ಕಳೊಂದಿಗೆ ಸಂವಾದ ನಡೆಸಿದ್ದಲ್ಲದೇ ಲೋಕೋ ಪೈಲಟ್‌ಗಳನ್ನು ಭೇಟಿಯಾಗಿ ಮಾತುಕತೆ ನಡೆಸಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಸಂಸದ ಪಿ.ಸಿ. ಮೋಹನ್, ರೈಲ್ವೆ ಮಂಡಳಿಯ ಅಧ್ಯಕ್ಷ ಸತೀಶ್ ಕುಮಾರ್, ನೈಋತ್ಯ ರೈಲ್ವೆ ಮಹಾಪ್ರಬಂಧಕ ಮುಕುಲ್ ಸರನ್ ಮಾಥುರ್ ಹಾಜರಿದ್ದರು.


ನಮ್ಮ ಮೆಟ್ರೊ ಹಳದಿ ಮಾರ್ಗ ಮತ್ತು ವಂದೇ ಭಾರತ್ ರೈಲಿಗೆ ಚಾಲನೆ ನೀಡಲು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಬೆಂಗಳೂರಿಗೆ ಬಂದಾಗ ಅವರನ್ನು ನೋಡಲು ಅಭಿಮಾನಿಗಳು ಭಾರಿ ಸಂಖ್ಯೆಯಲ್ಲಿ ಮೇಖ್ರಿ ವೃತ್ತದಲ್ಲಿ ಸೇರಿದ್ದರು
–ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಬೆಂಗಳೂರಿನಿಂದ ಬೆಳಗಾವಿಗೆ ಹೊರಟ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಯಶವಂತಪುರ, ತುಮಕೂರು, ದಾವಣಗೆರೆ, ಹಾವೇರಿ ಮತ್ತು ಎಸ್‌ಎಸ್‌ಎಸ್ ಹುಬ್ಬಳ್ಳಿ ನಿಲ್ದಾಣಗಳಲ್ಲಿ ಸ್ವಾಗತ ಕೋರಲಾಯಿತು. ಬೆಂಗಳೂರು–ಬೆಳಗಾವಿ ನಡುವಿನ 611 ಕಿ.ಮೀ. ದೂರವನ್ನು 8 ಗಂಟೆ 30 ನಿಮಿಷಗಳಲ್ಲಿ ರೈಲು ಕ್ರಮಿಸಲಿದೆ. ಬುಧವಾರ ಹೊರತುಪಡಿಸಿ ವಾರದ ಆರು ದಿನ ವಂದೇ ಭಾರತ್ ರೈಲು ಸಂಚಾರ ಇರಲಿದೆ.

ಸಂಭ್ರಮದ ಜತೆ ಹಕ್ಕಿನ ಮಾತು

ಒಂದನೇ ಪುಟದಿಂದ...

ಮುಂದುವರಿದು, ‘ಈಗ ಪ್ರತಿನಿತ್ಯ ಸರಾಸರಿ 9 ಲಕ್ಷ ಮಂದಿ ಮೆಟ್ರೊ ಬಳಸುತ್ತಿದ್ದಾರೆ. ಹಳದಿ ಮಾರ್ಗವೂ ಸೇರಿ ಇನ್ನು ಮುಂದೆ ದಿನನಿತ್ಯದ ಸರಾಸರಿ ಪ್ರಯಾಣಿಕರ ಸಂಖ್ಯೆ 12.50 ಲಕ್ಷವಾಗಲಿದೆ. ಮೆಟ್ರೊ 3ನೇ ಹಂತದ ಯೋಜನೆಗೆ ಪ್ರಧಾನಿಯವರು ಚಾಲನೆ ನೀಡಿದ್ದಾರೆ. 3ಎ ಹಂತದ ಪ್ರಸ್ತಾವವನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ. ಅದಕ್ಕೆ ತ್ವರಿತವಾಗಿ ಅನುಮತಿ ನೀಡಬೇಕು ಮತ್ತು ಪ್ರಧಾನಿಯವರು ಅಗತ್ಯ ನೆರವು ಒದಗಿಸಬೇಕು’ ಎಂದು ಕೋರಿಕೆ ಮುಂದಿಟ್ಟರು.

ಆಗ ವೇದಿಕೆಯಲ್ಲಿದ್ದ ನಾಯಕರು ನಕ್ಕರು. ಅತ್ತ ತಿರುಗಿದ ಸಿದ್ದರಾಮಯ್ಯ ಅವರು, ‘ಏಕೆ ನಕ್ಕಿದ್ದು’ ಎಂದು ಪ್ರಶ್ನಿಸಿದರು. ‘2030ರ ವೇಳೆಗೆ ನಗರದ ಮೆಟ್ರೊ ಜಾಲವನ್ನು 220 ಕಿ.ಮೀ.ಗೆ ವಿಸ್ತರಿಸುವ ಗುರಿ ಹಾಕಿಕೊಳ್ಳಲಾಗಿದೆ. ಅದು ಅನುಷ್ಠಾನಕ್ಕೆ ಬಂದರೆ ದಿನನಿತ್ಯದ ಪ್ರಯಾಣಿಕರ ಸಂಖ್ಯೆ 30 ಲಕ್ಷಕ್ಕೆ ಏರಿಕೆಯಾಗಲಿದೆ’ ಎಂದು ಹೇಳಿದರು.

‘ಅಭಿಮನ್ಯು’ ನೇತೃತ್ವದ ಒಂಬತ್ತು ಆನೆಗಳಿಗೆ ಸಚಿವ ಎಚ್.ಸಿ.ಮಹದೇವಪ್ಪ ಪೂಜೆ

ಅರಮನೆ ಅಂಗಳದಲ್ಲಿ ಬೀಡುಬಿಟ್ಟ ‘ಗಜಪಡೆ’

ಪ್ರಜಾವಾಣಿ ವಾರ್ತೆ

ಮೈಸೂರು: ಬಿರುಮಳೆಯ ನಡುವೆಯೂ ರಾಜಠೀವಿಯಿಂದ ಹೆಜ್ಜೆ ಹಾಕಿದ ಅಂಬಾರಿ ಆನೆ ‘ಅಭಿಮನ್ಯು’ ನೇತೃತ್ವದ ಗಜಪಡೆಗೆ ಇಲ್ಲಿನ ಅಂಬಾವಿಲಾಸ ಅರಮನೆಯ ಜಯಮಾರ್ತಾಂಡ ದ್ವಾರದಲ್ಲಿ ಅದ್ಧೂರಿ ಸ್ವಾಗತ ಕೋರಲಾಯಿತು.

‘ಅಭಿಮನ್ಯು’ ಜೊತೆ ಭೀಮ, ಮಹೇಂದ್ರ, ಧನಂಜಯ, ಕಂಜನ್, ಪ್ರಶಾಂತ, ಏಕಲವ್ಯ, ಲಕ್ಷ್ಮಿ ಹಾಗೂ ಕಾವೇರಿ ಆನೆಗಳಿಗೆ ಸಂಜೆ 6.45ಕ್ಕೆ ಅರಮನೆ ಪುರೋಹಿತ ಪ್ರಹ್ಲಾದ್ ರಾವ್ ನೇತೃತ್ವದಲ್ಲಿ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಪೂಜೆ ಸಲ್ಲಿಸಿ ಬರಮಾಡಿಕೊಂಡರು.

ಅರಮನೆ ಪೊಲೀಸ್ ಬ್ಯಾಂಡ್, ಮಂಗಳವಾದ್ಯದೊಂದಿಗೆ ಪೊಲೀಸ್ ಗೌರವವನ್ನೂ ನೀಡಲಾಯಿತು. ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ಆರತಿ ಬೆಳಗಿ ಬೂದುಗುಂಬಳ ಒಡೆದರು.

ವಿದ್ಯುತ್ ದೀಪಾಲಂಕಾರದಲ್ಲಿ ಕಂಗೊಳಿಸುತ್ತಿದ್ದ ಅರಮನೆ ಎದುರಿನ ಮಾರ್ಗದಲ್ಲಿ ಜಾನಪದ ಕಲಾತಂಡಗಳು, ಕಳಶ ಹೊತ್ತ ಮಹಿಳೆಯರು, ಅಶ್ವಾರೋಹಿ ಪಡೆಯ ಹಿಂದೆ ಆನೆಗಳು ಬಂದವು.


ಅಂಬಾರಿ ಆನೆ ‘ಅಭಿಮನ್ಯು’ ನೇತೃತ್ವದ ಗಜಪಡೆಯನ್ನು ಮೈಸೂರಿನ ಅಂಬಾವಿಲಾಸ ಅರಮನೆ ಆವರಣಕ್ಕೆ ಭಾನುವಾರ ಸಂಜೆ ಬರಮಾಡಿಕೊಳ್ಳಲಾಯಿತು –ಚಿತ್ರ: ಅನೂಪ್ ರಾಘ ಟಿ.

ಆ.4ರಂದು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ವೀರನಹೊಸಹಳ್ಳಿಯಿಂದ ಹೊರಟು ಸಾಂಸ್ಕೃತಿಕ ನಗರಿಗೆ ಪ್ರವೇಶ ಪಡೆದಿದ್ದ ಆನೆಗಳು ಅಶೋಕಪುರಂನ ಅರಣ್ಯ ಭವನದಲ್ಲಿ ತಂಗಿದ್ದವು. ಅರಣ್ಯ ಇಲಾಖೆ ಅಧಿಕಾರಿಗಳು ಮಧ್ಯಾಹ್ನ ಪೂಜೆ ಸಲ್ಲಿಸಿ ಅರಮನೆಗೆ ಬೀಳ್ಕೊಟ್ಟಿದ್ದರು.

ಉತ್ಸವದಲ್ಲಿ ತೊಡಗಿಸಿಕೊಳ್ಳುವ ಅಧಿಕಾರಿಗಳಿಗೆ ಅರಮನೆ ಮಂಡಳಿಯಿಂದ ಸನ್ಮಾನಿಸಲಾಯಿತು. ಮಾವುತರು, ಕಾವಾಡಿಗಳಿಗೆ ಅಗತ್ಯ ವಸ್ತುಗಳನ್ನು ಒಳಗೊಂಡ ಕಿಟ್‌ಗಳನ್ನು ಸಚಿವ ಎಚ್.ಸಿ. ಮಹದೇವಪ್ಪ ವಿತರಿಸಿದರು. ಅರಮನೆ ಆವರಣದಲ್ಲಿ ನಿರ್ಮಿಸಿರುವ ಬಿಡಾರಗಳಿಗೆ ಆನೆಗಳು ತೆರಳಿದವು. ಸೋಮವಾರ (ಆ.11) ಬೆಳಿಗ್ಗೆ 8ಕ್ಕೆ ಆನೆಗಳ ತೂಕ ಪರೀಕ್ಷೆ ನಡೆಯಲಿದೆ.

ಗೋದ್ನಾ ವಿದ್ಯುತ್ ಯೋಜನೆಗೆ ಮರುಜೀವ

• ಎ.ಎಂ.ಸುರೇಶ

ಬೆಂಗಳೂರು: ಹದಿನೇಳು ವರ್ಷಗಳಿಂದ ನನೆಗುದಿಯಲ್ಲಿದ್ದ 1,600 ಮೆಗಾವಾಟ್ ಸಾಮರ್ಥ್ಯದ ಗೋದ್ನಾ ಶಾಖೋತ್ಪನ್ನ ವಿದ್ಯುತ್ ಯೋಜನೆಗೆ ಮರುಜೀವ ನೀಡಿರುವ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (ಕೆಪಿಸಿಎಲ್), ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ಅನುಷ್ಠಾನಗೊಳಿಸಲು ಟೆಂಡರ್ ಕರೆದಿದೆ.

ರಾಜ್ಯ ಸರ್ಕಾರ ಮೊದಲ ಬಾರಿಗೆ ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ವಿದ್ಯುತ್ ಯೋಜನೆಯನ್ನು ಕೈಗೆತ್ತಿಕೊಳ್ಳಲು ಮುಂದಾಗಿದೆ. ಟೆಂಡರ್‌ನಲ್ಲಿ ಭಾಗಿಯಾಗಲು ಈ ತಿಂಗಳ 14ರವರೆಗೂ ಅವಕಾಶ ಇದೆ. ಈ ಯೋಜನೆಗೆ ಸುಮಾರು ₹18 ಸಾವಿರ ಕೋಟಿ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ. ಶೇ 74ರಷ್ಟನ್ನು ಖಾಸಗಿಯವರು ಹಾಗೂ ಉಳಿದ 26ರಷ್ಟನ್ನು ಕೆಪಿಸಿಎಲ್ ಭರಿಸಲಿದೆ.

ಅದಾನಿ ಪವರ್ ಲಿಮಿಟೆಡ್, ಜೆಎಸ್‌ಡಬ್ಲ್ಯು ಎನರ್ಜಿ, ಹಲ್ದಿಯಾ ಎನರ್ಜಿ ಕಂಪನಿ ಹಾಗೂ ಮೇಘಾ ಎಂಜಿನಿಯರಿಂಗ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್‌ನ ಪ್ರತಿನಿಧಿಗಳು ಈಗಾಗಲೇ ಗೋದ್ನಾಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದ್ದಾರೆ. ಟೆಂಡರ್ ಅಂತಿಮವಾಗಿ, ಎಲ್ಲ ಪ್ರಕ್ರಿಯೆಗಳು ಅಂದುಕೊಂಡಂತೆ ಆದರೆ, ಐದು ವರ್ಷಗಳಲ್ಲಿ ಯೋಜನೆ ಪೂರ್ಣಗೊಳ್ಳಲಿದೆ ಎಂದು ಕೆಪಿಸಿಎಲ್‌ನ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಛತ್ತೀಸಗಢದ ಗೋದ್ನಾದಲ್ಲಿ ಈ ಯೋಜನೆಯನ್ನು ಆರಂಭಿಸುವ ಸಂಬಂಧ 2008ರಲ್ಲಿ ಆಗಿನ ಬಿಜೆಪಿ ಸರ್ಕಾರವು ಅಲ್ಲಿನ ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡಿತ್ತು. ಇದಾದ ಬಳಿಕ ಭೂ ಸ್ವಾಧೀನ, ಕಲ್ಲಿದ್ದಲು ಗಣಿ ಹಂಚಿಕೆಯಲ್ಲಿ ಆದ ವಿಳಂಬ ಸೇರಿದಂತೆ ಹಲವು ಕಾರಣಗಳಿಂದ ಈ ಯೋಜನೆ ನನೆಗುದಿಯಲ್ಲಿತ್ತು. ಈಗ ಪೂರ್ವಭಾವಿ ಪ್ರಕ್ರಿಯೆಗಳು ಒಂದು ಹಂತಕ್ಕೆ ಬಂದಿದ್ದು, ಇದಕ್ಕೆ ಇದ್ದ ಬಹುತೇಕ ಅಡೆತಡೆಗಳು ನಿವಾರಣೆಯಾಗಿವೆ.

ಈ ಯೋಜನೆಗಾಗಿ 1,016 ಎಕರೆ ಖಾಸಗಿ ಜಮೀನು ಹಾಗೂ 160 ಎಕರೆ ಸರ್ಕಾರಿ ಜಮೀನನ್ನು 2013ರಲ್ಲಿ ಸ್ವಾಧೀನಪಡಿಸಿಕೊಳ್ಳಲಾಗಿದೆ. ಇದಕ್ಕಾಗಿ ಸುಮಾರು ₹220 ಕೋಟಿ ಖರ್ಚಾಗಿದೆ. ಈ ಯೋಜನೆಗೆ ಅಗತ್ಯವಿರುವ ನೀರನ್ನು ಮಹಾನದಿಯಿಂದ ನೀಡಲು ಛತ್ತೀಸಗಢ ಸರ್ಕಾರ ಸಮ್ಮತಿಸಿದೆ. ಇದಕ್ಕೆ ಅಗತ್ಯವಿರುವ ಬ್ಯಾರೇಜ್ ನಿರ್ಮಿಸಲು ₹64 ಕೋಟಿ ವೆಚ್ಚವಾಗಿದೆ. ಇದೂ ಸೇರಿದಂತೆ ಗೋದ್ನಾದಲ್ಲಿ ಕಚೇರಿ ಆರಂಭ, ಸಿವಿಲ್ ಕಾಮಗಾರಿ, ಬ್ಯಾಂಕ್ ಖಾತರಿ ಇತ್ಯಾದಿಗಳಿಗೆ ಒಟ್ಟು ₹350 ಕೋಟಿ ವೆಚ್ಚ ಮಾಡಲಾಗಿದೆ.

ಕಲ್ಲಿದ್ದಲು ಹಂಚಿಕೆ: ಗೋದ್ನಾ ಸಮೀಪದಲ್ಲೇ ಎರಡು ಕಲ್ಲಿದ್ದಲು ಗಣಿಗಳನ್ನು ಕೇಂದ್ರ ಸರ್ಕಾರವು 2019ರಲ್ಲಿ ಕೆಪಿಸಿಎಲ್‌ಗೆ ಹಂಚಿಕೆ ಮಾಡಿದೆ. 1,600 ಮೆಗಾವಾಟ್ ವಿದ್ಯುತ್ ಉತ್ಪಾದನೆಗಾಗಿ ವರ್ಷಕ್ಕೆ 70 ಲಕ್ಷ ಟನ್ ಕಲ್ಲಿದ್ದಲು ಬೇಕಾಗುತ್ತದೆ. 21 ಕೋಟಿ ಟನ್ ಕಲ್ಲಿದ್ದಲು ಅಲ್ಲಿ ಲಭ್ಯವಿದ್ದು, 30 ವರ್ಷಗಳವರೆಗೆ ಬಳಸಬಹುದು.

ಕಲ್ಲಿದ್ದಲು ಹಗರಣ ಬಯಲಿಗೆ ಬಂದ ನಂತರ, ವಿವಿಧ ಕಂಪನಿಗಳಿಗೆ ನೀಡಿದ್ದ ಕಲ್ಲಿದ್ದಲು ಗಣಿಗಳ ಹಂಚಿಕೆಯನ್ನು ಕೇಂದ್ರ ಸರ್ಕಾರ 2014ರಲ್ಲಿ ರದ್ದುಪಡಿಸಿತು. ಇದಾದ ನಂತರ ಕೆಲವು ವರ್ಷ ಹೊಸದಾಗಿ ಯಾರಿಗೂ ಕಲ್ಲಿದ್ದಲು ಹಂಚಿಕೆ ಮಾಡಲಿಲ್ಲ. 2018ರಲ್ಲಿ ಕೇಂದ್ರ ಸರ್ಕಾರವು ಕಲ್ಲಿದ್ದಲು ಗಣಿಗಳ ಹಂಚಿಕೆಗೆ ಅರ್ಜಿ ಆಹ್ವಾನಿಸಿತ್ತು. ಆ ವರ್ಷ ನಮಗೆ ಸಿಗಲಿಲ್ಲ. ಅಂತಿಮವಾಗಿ 2019ರಲ್ಲಿ ಹಂಚಿಕೆಯಾಯಿತು ಎಂದು ಅಧಿಕಾರಿಯೊಬ್ಬರು ವಿವರಿಸಿದರು.



ಯೋಜನೆಯ ಹಾದಿ...

2008ರಲ್ಲಿ ರಾಜ್ಯದಲ್ಲಿ ವಿದ್ಯುತ್ ಕೊರತೆ ತೀವ್ರವಾಗಿತ್ತು. ಆಗ ಕಲ್ಲಿದ್ದಲಿನ ಪೂರೈಕೆಯಲ್ಲೂ ವ್ಯತ್ಯಯವಾಗುತ್ತಿತ್ತು. ಇದನ್ನು ಮನಗಂಡ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಛತ್ತೀಸಗಢದ ಗೋದ್ನಾದಲ್ಲಿ ಶಾಖೋತ್ಪನ್ನ ವಿದ್ಯುತ್ ಯೋಜನೆ ಆರಂಭಿಸಲು ಮುಂದಾಯಿತು. ಆಗ ಛತ್ತೀಸಗಢದಲ್ಲೂ ಬಿಜೆಪಿ ಸರ್ಕಾರವೇ ಅಧಿಕಾರದಲ್ಲಿ ಇತ್ತು. ಹೀಗಾಗಿ ಎರಡೂ ರಾಜ್ಯಗಳ ಮಧ್ಯೆ ತ್ವರಿತ ಒಪ್ಪಂದ ಆಯಿತು.

ಆದರೆ, ಭೂ ಸ್ವಾಧೀನ, ಕಲ್ಲಿದ್ದಲು ಗಣಿ ಹಂಚಿಕೆ ಆಗದ ಕಾರಣ ಯೋಜನೆಗೆ ಚಾಲನೆ ಸಿಗಲಿಲ್ಲ. ಅಲ್ಲದೆ ಯರಮರಸ್, ಕೂಡಗಿ ಶಾಖೋತ್ಪನ್ನ ವಿದ್ಯುತ್ ಯೋಜನೆ, ಪಾವಗಡದ ಸೌರವಿದ್ಯುತ್ ಯೋಜನೆಗಳತ್ತ ಸರ್ಕಾರ ಹೆಚ್ಚು ಗಮನಹರಿಸಿದ್ದರಿಂದ ಛತ್ತೀಸಗಢ ಯೋಜನೆ ಬಹುತೇಕ ಮೂಲೆಗುಂಪಾಗಿತ್ತು. ಈ ಮಧ್ಯೆ ಕೋವಿಡ್‌ನಿಂದಾಗಿ 2–3 ವರ್ಷ ಯಾವುದೇ ಹೊಸ ಯೋಜನೆಗಳತ್ತ ಸರ್ಕಾರ ಗಮನಹರಿಸಲಿಲ್ಲ.

ಕೋವಿಡ್ ನಂತರ ವಿದ್ಯುತ್‌ಗೆ ಬೇಡಿಕೆ ಹೆಚ್ಚಾದ ಕಾರಣ, ನನೆಗುದಿಯಲ್ಲಿದ್ದ ಗೋದ್ನಾ ಯೋಜನೆಗೆ ಮರು ಜೀವ ನೀಡುವ ಮೂಲಕ ಅನುಷ್ಠಾನಕ್ಕೆ ಬೇಕಾದ ಸಿದ್ಧತೆಗಳನ್ನು ಕೆಪಿಸಿಎಲ್ ಆರಂಭಿಸಿದೆ.

ದರ ನಿಗದಿಪಡಿಸಲಿರುವ ಕೆಇಆರ್‌ಸಿ

ಟೆಂಡರ್ ಅಂತಿಮಗೊಂಡ ಬಳಿಕ ಯೋಜನೆ ಅನುಷ್ಠಾನ ಕುರಿತು ಸಂಬಂಧಪಟ್ಟ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗುತ್ತದೆ. ಅದರಲ್ಲಿ ಯೂನಿಟ್‌ಗೆ ಎಷ್ಟು ಹಣ ಎಂದು ನಮೂದಿಸಲಾಗುತ್ತದೆ. ಆದರೆ, ಅಂತಿಮವಾಗಿ ಯೂನಿಟ್‌ಗೆ ಎಷ್ಟು ದರ ಎಂಬುದನ್ನು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ನಿಗದಿ ಮಾಡುತ್ತದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಛತ್ತೀಸಗಢದಲ್ಲಿ ರಾಜ್ಯದ ಯೋಜನೆ 1,600 ಮೆಗಾವಾಟ್ ಸಾಮರ್ಥ್ಯ

ಚಿಟಿಕೆ ಸುದ್ದಿ

ರಾಯರ ಪೂರ್ವಾರಾಧನೆ ಸಂಭ್ರಮ



ಸುಬುಧೇಂದ್ರ ತೀರ್ಥರು ಭಾನುವಾರ ರಾಯರ ಚಿನ್ನದ ಪಾದುಕೆಗಳಿಗೆ ಪೂಜೆ ಸಲ್ಲಿಸಿದರು

ರಾಯಚೂರು: ರಾಘವೇಂದ್ರ ಸ್ವಾಮಿಗಳ 354ನೇ ಆರಾಧನೆ ನಿಮಿತ್ತ ಮಂತ್ರಾಲಯದಲ್ಲಿ ಭಾನುವಾರ ಸುಬುಧೇಂದ್ರ ತೀರ್ಥ ಶ್ರೀಗಳ ನೇತೃತ್ವದಲ್ಲಿ ಪೂರ್ವಾರಾಧನೆ ವಿಜೃಂಭಣೆಯಿಂದ ಜರುಗಿತು.

ಪೂರ್ವಾರಾಧನೆ ಪ್ರಯುಕ್ತ ಶ್ರೀರಂಗಂ ದೇವಸ್ಥಾನದ ಅಧಿಕಾರಿಗಳು, ಪುರೋಹಿತರು ಪವಿತ್ರ ಶೇಷವಸ್ತ್ರ ತಂದರು. ಕಲಾ–ತಂಡಗಳ ವಾದ್ಯಗಳೊಂದಿಗೆ ಅವರಿಗೆ ಸಾಂಪ್ರದಾಯಿಕ ಸ್ವಾಗತ ನೀಡಲಾಯಿತು.

ಸುಬುಧೇಂದ್ರ ತೀರ್ಥ ಸ್ವಾಮೀಜಿ ಶೇಷವಸ್ತ್ರವನ್ನು ರಾಯರಿಗೆ ಅರ್ಪಿಸಿದ್ದು, ಶ್ರೀರಂಗಂ ಅಧಿಕಾರಿಗಳಿಗೆ ಸನ್ಮಾನಿಸಿದರು. ನಂತರ ಭಕ್ತರಿಗೆ ಅನುಗ್ರಹ ಸಂದೇಶ ನೀಡಿದರು.

ಬೆಳಗಿನ ಜಾವ ಪಂಚಾಮೃತ ಅಭಿಷೇಕ, ಉತ್ಸವ ರಾಯರ ಪಾದಪೂಜೆ, ರಜತ ಸಿಂಹವಾಹನೋತ್ಸವ ಇನ್ನಿತರ ಧಾರ್ಮಿಕ ಕಾರ್ಯಗಳು ವಿಧಿವತ್ತಾಗಿ ನಡೆದವು. ರಾಯರು ರಚಿಸಿರುವ ಪರಿಮಳ ಗ್ರಂಥವನ್ನು ಪಲ್ಲಕ್ಕಿಯಲ್ಲಿ ಇರಿಸಿ ಮಠದ ಪ್ರಾಂಗಣದಲ್ಲಿ ಸಕಲ ಭಕ್ತರೊಂದಿಗೆ ಮೆರವಣಿಗೆ ಮಾಡಲಾಯಿತು.

ಚಿಕ್ಕಬಳ್ಳಾಪುರದಲ್ಲಿ ಕರಪತ್ರ ಸಮರ

ಚಿಕ್ಕಬಳ್ಳಾಪುರ: ಸಂಸದ ಡಾ.ಕೆ. ಸುಧಾಕರ್ ಮೊದಲ ಆರೋಪಿ ಆಗಿರುವ ಕಾರು ಚಾಲಕ ಬಾಬು ಆತ್ಮಹತ್ಯೆ ಪ್ರಕರಣ ಜಿಲ್ಲೆಯಲ್ಲಿ ಕಾಂಗ್ರೆಸ್–ಬಿಜೆಪಿ ನಡುವೆ ರಾಜಕೀಯ ಜಟಾಪಟಿಗೆ ಕಾರಣವಾಗಿದೆ.

'ಸಂಸದ ಡಾ.ಕೆ.ಸುಧಾಕರ್ ದಲಿತ ವಿರೋಧಿ' ಎಂಬ, ಭಾವಚಿತ್ರ ಸಮೇತ ಪೋಸ್ಟರ್ ಅಂಟಿಸಲು ಶನಿವಾರ ರಾತ್ರಿ ಕಾಂಗ್ರೆಸ್ ಮುಖಂಡರು ಯತ್ನಿಸಿದ್ದಾರೆ. ಕಾರು ತಡೆದು ಬಿಜೆಪಿಯವರು ಪ್ರತಿಭಟಿಸಿದ್ದಾರೆ.

ಕರಪತ್ರ ಅಂಟಿಸಲು ಮುಂದಾಗಿದ್ದವರನ್ನು ಪೊಲೀಸರು ಕರೆದೊಯ್ದರು. ನಡುರಾತ್ರಿಯೇ ನಗರ ಪೊಲೀಸ್ ಠಾಣೆ ಎದುರು ಎರಡೂ ಪಕ್ಷದವರು ಸೇರಿದ್ದರು. ಪರಸ್ಪರರ ವಿರುದ್ಧ ದೂರು ದಾಖಲಿಸಿದ್ದಾರೆ.

'ರೊಕ್ಕ ಕೊಡದೇ ಆರಿಸಿ ಬಂದವರಾರು?'



ಯತ್ನಾಳ

ಬಾಗಲಕೋಟೆ: 'ರೊಕ್ಕ ಕೊಡದೇ ಎಷ್ಟು ಮಂದಿ ವಿಧಾನಸಭೆಗೆ ಆರಿಸಿ ಬಂದಿದ್ದಾರೆ ಹೇಳಿ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಇಲ್ಲಿ ಪ್ರಶ್ನಿಸಿದರು.

'ಸಿದ್ದರಾಮಯ್ಯ ಮತ ಖರೀದಿ ಮಾಡಿದ್ದರು ಎಂಬ ಆರೋಪ' ಕುರಿತ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

'ಈಗ ಸಿದ್ದರಾಮಯ್ಯನ ದೋಸ್ತ ಹೇಳಿದ್ದಾನೆ. ಒಂದೆರಡು ವರ್ಷ ತಡೆಯಿರಿ. ಜಮೀರ್ ಅಹಮ್ಮದ್ ಅದನ್ನೇ ಹೇಳುತ್ತಾನೆ' ಎಂದರು.

'ಮುಸ್ಲಿಂ ಯುವತಿ ಮದುವೆಯಾದರೆ ₹5 ಲಕ್ಷ': (ಕೊಪ್ಪಳ ವರದಿ): 'ಮುಸ್ಲಿಂ ಯುವತಿಯರನ್ನು ಮದುವೆಯಾಗುವ ಹಿಂದೂ ಯುವಕರಿಗೆ ₹5 ಲಕ್ಷ ನೀಡುವೆ. ಇದಕ್ಕಾಗಿ ಅಭಿಯಾನ ಆರಂಭಿಸಿ ಹಿಂದೂಗಳನ್ನು ಕೊಲೆ ಮಾಡುವ ಮನಸ್ಥಿತಿಯ ಮುಸ್ಲಿಮರಿಗೆ ತಕ್ಕ ಉತ್ತರ ನೀಡುವೆ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ನಗರದ ಕುರುಬರ ಓಣಿಯಲ್ಲಿ ಆ.3ರಂದು ಮುಸ್ಲಿಂ ಯುವಕನಿಂದ ಕೊಲೆಯಾದ ಗವಿಸಿದ್ದಪ್ಪ ನಾಯಕ ಅವರ ಮನೆಯವರಿಗೆ ಭಾನುವಾರ ಸಾಂತ್ವನ ಹೇಳಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದರು.

ಮಳೆ: ದೇವಸ್ಥಾನ ಜಲಾವೃತ

ಪ್ರಜಾವಾಣಿ ವಾರ್ತೆ

ಅಥಣಿ (ಬೆಳಗಾವಿ ಜಿಲ್ಲೆ): ಎರಡು ದಿನಗಳಿಂದ ಸುರಿಯುತ್ತಿರುವ ಮಳೆಯಿಂದ ತಾಲ್ಲೂಕಿನ ಯಲ್ಲಮ್ಮನ ವಾಡಿಯ ಹಳ್ಳ ಉಕ್ಕಿ ಹರಿಯುತ್ತಿದೆ. ಹಳ್ಳದ ಪಕ್ಕದಲ್ಲೇ ಇರುವ ಯಲ್ಲಮ್ಮ ದೇವಿ ದೇವಸ್ಥಾನ ಶನಿವಾರ ತಡರಾತ್ರಿ ಭಾಗಶಃ ಮುಳುಗಡೆಯಾಗಿದೆ.

ಶ್ರಾವಣ ಮಾಸದಲ್ಲಿ ಕರ್ನಾಟಕ, ಮಹಾರಾಷ್ಟ್ರದಿಂದ ನಿತ್ಯ ಅಪಾರ ಸಂಖ್ಯೆಯಲ್ಲಿ ಭಕ್ತರು ದೇವಸ್ಥಾನಕ್ಕೆ ಆಗಮಿಸುತ್ತಾರೆ. ದೇವಿಯ ಮೂಲ ವಿಗ್ರಹ ಅರ್ಧದಷ್ಟು ಮುಳುಗಿದೆ. ದೂರದಿಂದಲೇ ದೇವಿ ದರ್ಶನ ಪಡೆಯುತ್ತಿದ್ದಾರೆ. ನಾಲ್ಕು ವರ್ಷದ ಹಿಂದೆ ಹಳ್ಳದ ನೀರು ನುಗ್ಗಿ ಈ ದೇವಸ್ಥಾನ ಮುಳುಗಿತ್ತು.

ಸಿಡಿಲು ಬಡಿದು ಮಹಿಳೆ ಸಾವು: (ರಾಯಚೂರು ವರದಿ): ಜಿಲ್ಲೆಯ ವಿವಿಧೆಡೆ ಭಾನುವಾರ ಗುಡುಗು ಸಹಿತ ಮಳೆಯಾಗಿದೆ. ಯರಗೇರಾದಲ್ಲಿ ಹೊಲದಲ್ಲಿ ಕೆಲಸ ಮಾಡುತ್ತಿದ್ದ ಭವಾನಿ ನಾಗರಾಜ ನಾಯಕ (26) ಸಿಡಿಲು ಬಡಿದು ಮೃತಪಟ್ಟಿದ್ದಾರೆ.

ಲಿಂಗಸುಗೂರಿನ ಟಣಮನಕಲ್ ಸಮೀಪದ ಹಿರೇಹಳ್ಳ, ಗಬ್ಬೂರು ಸಮೀಪದ ಗಣೇಕಲ್ ಹಳ್ಳ ತುಂಬಿ ಹರಿದು ಸಂಚಾರಕ್ಕೆ ತೊಂದರೆ ಆಯಿತು. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಆವರಣದಲ್ಲಿ 3.2 ಮಿ.ಮೀ ಮಳೆ ದಾಖಲಾಗಿದೆ.

ಭಾರಿ ಮಳೆ: (ಗೌರಿಬಿದನೂರು ವರದಿ): ತಾಲ್ಲೂಕಿನಲ್ಲಿ ಶನಿವಾರ ಸಂಜೆಯಿಂದ ತಡರಾತ್ರಿವರೆಗೆ ಸುರಿದ ಧಾರಾಕಾರ ಮಳೆಗೆ ತುಮಕೂರು ರಸ್ತೆ ಪಕ್ಕದ ಸ್ಮಶಾನ ಮುಳುಗಡೆಯಾಗಿದೆ.

ರೈಲ್ವೆ ಮೇಲ್ಸೇತುವೆ ಕೆಳಗೆ ಮೂರ್ನಾಲ್ಕು ಅಡಿ ನೀರಿನಲ್ಲಿ ಕಾರು ಮುಳುಗಿದೆ. ಕೋಟೆ ಬಳಿ ಬನ್ನಿಮರ ರಸ್ತೆಗೆ ಉರುಳಿ ಸಂಚಾರಕ್ಕೆ ಅಡಚಣೆಯಾಯಿತು. ಇಡಗೂರಿನಲ್ಲಿ 13 ಸೆಂ. ಮೀ ಮಳೆ ಸುರಿದಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)


ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124.42	11,979	12,803
ಹಾರಂಗಿ	2,859	2,855.86	1,585	1,600
ಕಬಿನಿ	2,284.00	2,281.69	3,716	4,300
ಹೇಮಾವತಿ	2,922	2,921.98	6,830	6,995
ಲಿಂಗನಮಕ್ಕಿ	1,819	1,811.95	7,737	7,562
ಸೂಪಾ (ಮೀ)	564	551.68	2,945.15	1,329.82
ಮಾಣಿ	595	590.79	965	575
ತುಂಗಭದ್ರಾ	1,633	1,626.06	38,772	38,618
ಮಲಪ್ರಭಾ	2,079.50	2,076.20	3,261	194
ಘಟಪ್ರಭಾ	2175	2,172.25	2,790	2,790
ಭದ್ರಾ *	186	183.3	7,406	6,214
ಆಲಮಟ್ಟಿ (ಮೀ)	519.6	519.51	37,974	20,370
ನಾರಾಯಣಪುರ (ಮೀ)	492.25	492.19	55,000	56,000

* ನೆಲಮಟ್ಟದಿಂದ

'ದೇಗುಲ ಬಳಿ ಹೂಳುವುದು ಸಂಸ್ಕೃತಿ'

ಧರ್ಮಸ್ಥಳದ ಹೆಸರು ಕೆಡಿಸಲು ಬಿಡುವುದಿಲ್ಲ: ಜನಾರ್ದನ ಪೂಜಾರಿ

ಪ್ರಜಾವಾಣಿ ವಾರ್ತೆ



ಜನಾರ್ದನ ಪೂಜಾರಿ

ಉಳ್ಳಾಲ (ದಕ್ಷಿಣ ಕನ್ನಡ): 'ದೇವಸ್ಥಾನದ ವಠಾರದಲ್ಲಿ ಶವ ಹೂಳುವುದು ಭಾರತದ ಸಂಸ್ಕೃತಿ. ಮಸೀದಿ, ಚರ್ಚ್‌ಗಳಲ್ಲೂ ಹೂಳಲಾಗುತ್ತದೆ' ಎಂದು ಹಿರಿಯ ರಾಜಕಾರಣಿ ಬಿ.ಜನಾರ್ದನ ಪೂಜಾರಿ ಹೇಳಿದರು.

ಮುದ್ದುಕೃಷ್ಣ ಸಾಂಸ್ಕೃತಿಕ ಟ್ರಸ್ಟ್ ತೊಕ್ಕೊಟ್ಟಿನಲ್ಲಿ ಭಾನುವಾರ ಏರ್ಪಡಿಸಿದ್ದ 'ಮುದ್ದುಕೃಷ್ಣ-2025' ಸ್ಪರ್ಧೆ ಉದ್ಘಾಟಿಸಿ ಅವರು ಮಾತನಾಡಿದರು.

'ಧರ್ಮಸ್ಥಳದ ವಠಾರದಲ್ಲಿ ಎಸ್‌ಐಟಿ ಅವರು ಅಗೆಯುತ್ತಿದ್ದಾರೆ. ಆರೋಪ ಆಧರಿಸಿ ಶವಗಳನ್ನು ಹುಡುಕುತ್ತಿದ್ದಾರೆ. ಅಲ್ಲಿ ಏನೂ ಸಿಗಲಿಲ್ಲ. ಎಷ್ಟು ಹುಡುಕಿದರೂ ಸಿಗುವುದಿಲ್ಲ. ಆದರೆ, ಧರ್ಮಸ್ಥಳದ ಹೆಸರು ಹಾಳಾಗುತ್ತಿದೆ. ಆದರೂ ಮುಖ್ಯಮಂತ್ರಿ ಏಕೆ ಬಾಯಿ ಬಿಡುತ್ತಿಲ್ಲ. ಅವರು ಏನು ಮಾಡುತ್ತಿದ್ದಾರೆ' ಎಂದು ಪ್ರಶ್ನಿಸಿದರು.

'ಧರ್ಮಸ್ಥಳ ಜೈನರಿಗೆ ಮಾತ್ರ ಸೇರಿದ್ದಲ್ಲ. ಅದರ ಹೆಸರು ಹಾಳು ಮಾಡಲು ಯಮನಿಂದಲೂ ಸಾಧ್ಯವಿಲ್ಲ. ವೀರೇಂದ್ರ ಹೆಗ್ಗಡೆಯವರೇ, ನಿಮ್ಮ ಜೊತೆಗೆ ದೇಶ ಮಾತ್ರವಲ್ಲ, ಇಡೀ ಜಗತ್ತೇ ಇದೆ. ಈ ಪೂಜಾರಿ ಇದ್ದಾನೆ. ಕುದ್ರೋಳಿ ದೇವಸ್ಥಾನವಿದೆ' ಎಂದರು.

'ಪ್ರಧಾನಿ ಮೋದಿಯವರಿಗೆ ಧೈರ್ಯ, ತಾಕತ್ತು ಇದ್ದರೆ ಧರ್ಮಸ್ಥಳದಲ್ಲಿ ಭಾಷಣ ಮಾಡಬೇಕು. ಮಸೀದಿಗಳಲ್ಲಿ ಶವ ಹೂತಿಲ್ಲವೇ, ದೇವಸ್ಥಾನಗಳಲ್ಲಿ ಮಾತ್ರವೇ ಎಂದು ಕೇಳಬೇಕು' ಎಂದರು.

> ಹಿಂದೂ ದೇಗುಲಗಳನ್ನು ಟಾರ್ಗೆಟ್ ಮಾಡಲಾಗಿದೆ. ಎಸ್‌ಡಿಪಿಐ ಏಕೆ ಪ್ರತಿಭಟಿಸುತ್ತದೆ? ಅವರು ದೇಶದ್ರೋಹಿಗಳು. ಹಿಂದೆ ಅಯ್ಯಪ್ಪ ಸ್ವಾಮಿ, ಶನಿ ಶಿಂಗ್ಣಾಪುರ ದೇಗುಲ ಟಾರ್ಗೆಟ್ ಮಾಡಿದ್ದರು.
> **ಬಸನಗೌಡ ಪಾಟೀಲ ಯತ್ನಾಳ,** ಶಾಸಕ

ಎಡಪಂಥೀಯರ ಷಡ್ಯಂತ್ರ: ಪ್ರಲ್ಹಾದ ಜೋಶಿ

ಹುಬ್ಬಳ್ಳಿ: 'ಧರ್ಮಸ್ಥಳ ಪ್ರಕರಣದಲ್ಲಿ ಎಡಪಂಥೀಯರ ಷಡ್ಯಂತ್ರವಿದ್ದು, ಸರ್ಕಾರ ಎಚ್ಚೆತ್ತುಕೊಳ್ಳಬೇಕು. ಇಲ್ಲದಿದ್ದರೆ ಪ್ರತಿಭಟನೆ ನಡೆಸಬೇಕಾಗುತ್ತದೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಎಚ್ಚರಿಸಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಧರ್ಮಸ್ಥಳ ಹಿಂದೂಗಳ ಧಾರ್ಮಿಕ ಶ್ರದ್ಧಾ ಕೇಂದ್ರ. ಇದರ ಮೇಲೆ ದಾಳಿ ನಡೆಸಲು ಎಡಪಂಥೀಯರ ಟೂಲ್‌ಕಿಟ್ ಸಿದ್ಧವಾಗಿದೆ. ಈ ಕುರಿತು ಸರ್ಕಾರ ನಡೆದುಕೊಳ್ಳುವ ರೀತಿ ಸಹ ಆಕ್ಷೇಪಾರ್ಹವಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಧರ್ಮಸ್ಥಳ ಪ್ರಕರಣ ದಿನಕ್ಕೊಂದು ತಿರುವು ಪಡೆಯುತ್ತಿದೆ. ಶವ ಹೂತು ಹಾಕಿದ್ದೇನೆಂದು ಸಾಕ್ಷಿ ದೂರುದಾರ ತೋರಿಸಿದ್ದು 13 ಜಾಗ. ಆದರೆ, ಈಗ 19 ಸ್ಥಳಗಳನ್ನು ಗುರುತು ಮಾಡಿ ಕಾರ್ಯಾಚರಣೆ ನಡೆಸಲಾಗುತ್ತಿದೆ. ಇದಕ್ಕೆ ಸರ್ಕಾರ ಸಹ ಸೊಪ್ಪು ಹಾಕುತ್ತಿದೆ' ಎಂದು ಆರೋಪಿಸಿದರು.

ಕರ್ತವ್ಯಕ್ಕೆ ಅಡ್ಡಿ: 6 ಮಂದಿ ಬಂಧನ

ಮಂಗಳೂರು: ಜಿಲ್ಲೆಯ ಧರ್ಮಸ್ಥಳ ಗ್ರಾಮದ ಬಳಿ ಯೂಟ್ಯೂಬರ್‌ಗಳ ಮೇಲೆ ಹಲ್ಲೆ ನಡೆದ ವೇಳೆ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದ ಆರೋಪದಡಿ ಸ್ಥಳೀಯ ಪೊಲೀಸರು 6 ಮಂದಿಯನ್ನು ಬಂಧಿಸಿದ್ದಾರೆ.

ಧರ್ಮಸ್ಥಳದ ಪದ್ಮಪ್ರಸಾದ್ (32), ಸುಹಾಸ್ (22), ಶಶಿಧರ್ (30), ಉಜಿರೆಯ ಖಲಂದರ್ ಪುತ್ತುಮೋನು (42), ಕಳೆಂಜದ ಚೇತನ್ (21) ಹಾಗೂ ಕಲ್ಮಂಜದ ಗುರುಪ್ರಸಾದ್ (19) ಬಂಧಿತರು. ಬಂಧಿತರು ಜಾಮೀನಿನ ಮೇಲೆ ಬಿಡುಗಡೆಗೊಂಡಿದ್ದಾರೆ.

ಗ್ರಾಮದ ಪಾಂಗಾಳ ರಸ್ತೆ ಬಳಿ ಆ.6ರ ಸಂಜೆ ಯೂಟ್ಯೂಬರ್‌ಗಳ ಮೇಲೆ ಗುಂಪು ಹಲ್ಲೆ ನಡೆಸಿತ್ತು. ಎಸ್‌ಐ ಸಮರ್ಥ್ ಗಾಣಿಗೇರ ದೂರು ಆಧರಿಸಿ 27 ಮಂದಿ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

ಸ್ಥಳೀಯರ ನೇಮಕ ನಿರ್ನಾಮ

ಉಗ್ರ ಸಂಘಟನೆಗಳಿಗೆ 2018ರಲ್ಲಿ 200 ಮಂದಿ ಸೇರ್ಪಡೆ

• ಝುಲ್ಫೀಕರ್ ಮಜೀದ್

ಶ್ರೀನಗರ: ಜಮ್ಮು–ಕಾಶ್ಮೀರದಲ್ಲಿ ಭಯೋತ್ಪಾದಕ ಕೃತ್ಯಗಳಿಗೆ ಸ್ಥಳೀಯ ಯುವಕರನ್ನು ನೇಮಕ ಮಾಡಿಕೊಳ್ಳುವ ಪ್ರಕ್ರಿಯೆ ಬಹುತೇಕ ನಿರ್ನಾಮವಾಗಿದೆ. ಕಳೆದ ಮೂರು ದಶಕಗಳಿಂದ ಸಂಘರ್ಷ ಪೀಡಿತವಾಗಿರುವ ಈ ಪ್ರದೇಶದಲ್ಲಿ ಇಂತಹ ಪರಿವರ್ತನೆ ಕಂಡುಬಂದಿರುವುದು ಗಮನಾರ್ಹ.

2017ರಲ್ಲಿ 126 ಕಾಶ್ಮೀರಿ ಯುವಕರನ್ನು ಉಗ್ರ ಸಂಘಟನೆಯ ವಿವಿಧ ಶ್ರೇಣಿಗಳಿಗೆ ನೇಮಕ ಮಾಡಿಕೊಳ್ಳಲಾಗಿತ್ತು. ನಂತರದ ವರ್ಷ, ಈ ಸಂಖ್ಯೆಯಲ್ಲಿ ದಿಢೀರ್ ಏರಿಕೆ ಕಂಡುಬಂತು. 2018ರಲ್ಲಿ 200 ಯುವಕರು ವಿವಿಧ ಉಗ್ರ ಸಂಘಟನೆಗಳಿಗೆ ಸೇರಿದ್ದರು. ಈ ವರ್ಷ ಕೇವಲ ಒಬ್ಬ ಯುವಕ ಉಗ್ರ ಸಂಘಟನೆಗೆ ಸೇರಿದ್ದಾಗಿ ಅಂಕಿ–ಅಂಶಗಳು ಹೇಳುತ್ತವೆ.

ಗಡಿಗೆ ಬೇಲಿ ಹಾಕುವ ಮೂಲಕ ಗಡಿಯಾಚೆಯಿಂದ ನುಸುಳುವಿಕೆಗೆ ಕಡಿವಾಣ ಹಾಕಲಾಗಿದೆ. ಡ್ರೋನ್‌ಗಳ ನಿಯೋಜನೆಯಿಂದ ಕಣ್ಗಾವಲು ಹೆಚ್ಚಿಸಲಾಗಿದೆ. ಇದರಿಂದ, ದೇಶದೊಳಗೆ ಶಸ್ತ್ರಾಸ್ತ್ರಗಳನ್ನು ಸಾಗಣೆ ಮಾಡುವುದನ್ನು ಕೂಡ ತಡೆಗಟ್ಟಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳುತ್ತಾರೆ.

'ಉಗ್ರ ಸಂಘಟನೆಗಳಿಗೆ ಯುವಕರ ನೇಮಕ ಬಹುತೇಕ ಸ್ಥಗಿತಗೊಂಡಿರುವುದು ತಂತ್ರಗಾರಿಕೆ ದೃಷ್ಟಿಯಿಂದ ಭದ್ರತಾ ಪಡೆಗಳಿಗೆ ಸಂದ ಗೆಲುವು. ಇದು, ಜಮ್ಮು–ಕಾಶ್ಮೀರದಲ್ಲಿ ಶಾಂತಿ ನೆಲಸಿದೆ ಎಂಬುದರ ಅರ್ಥವಲ್ಲ' ಎಂದು ರಕ್ಷಣಾ ತಜ್ಞರು ಎಚ್ಚರಿಸುತ್ತಾರೆ.

'ಅತ್ಯಂತ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇದು, ಸ್ಥಳೀಯರಲ್ಲಿ ಅಸಮಾಧಾನ ಭುಗಿಲೇಳಲು ಕಾರಣವಾಗದಂತೆ ನೋಡಿಕೊಳ್ಳುವುದು ಸವಾಲಿನ ಕೆಲಸ' ಎಂದೂ ಹೇಳಿದ್ದಾರೆ.

ಕಡಿವಾಣ ಬಿದ್ದದ್ದು ಹೇಗೆ?

- ಸಂವಿಧಾನದ 370ನೇ ವಿಧಿಯಡಿ ಜಮ್ಮು–ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ಕೇಂದ್ರ ಸರ್ಕಾರ ಹಿಂಪಡೆಯಿತು. ಇದು ಈ ವಿಚಾರದಲ್ಲಿ ಪ್ರಮುಖ ಪಾತ್ರ ವಹಿಸಿತು
- ಗುಪ್ತಚರ ಸಂಸ್ಥೆಗಳು ಒದಗಿಸುವ ಮಾಹಿತಿ ಆಧರಿಸಿ ಉಗ್ರ ನಿಗ್ರಹ ಕಾರ್ಯಾಚರಣೆ ತೀವ್ರಗೊಳಿಸಲಾಯಿತು
- ಉಗ್ರ ಸಂಘಟನೆಗಳನ್ನು ಸೇರುವ ಸಾಧ್ಯತೆ ಇದ್ದ/ಒಲವು ಹೊಂದಿದ್ದ ಯುವಕರ ಮೇಲೆ ಹಾಗೂ ನೇಮಕಾತಿ ಮಾಡಿಕೊಳ್ಳುವವರ ಮೇಲೆ ನಿರಂತರ ಕಣ್ಗಾವಲು ಇಡಲಾಯಿತು

ನೇಮಕಕ್ಕೆ ಕಾರಣವಾದ ಸಂಗತಿಗಳು

- 2016ರ ಜುಲೈನಲ್ಲಿ ಉಗ್ರ ಬುರ್ಹಾನ್ ವಾನಿ ಹತ್ಯೆ ನಡೆಯಿತು. ಈತ ಆಗ ಕಾಶ್ಮೀರದಲ್ಲಿ ಉಗ್ರವಾದದ ಪ್ರತಿಪಾದನೆಯಲ್ಲಿ ಮುಂಚೂಣಿಯಲ್ಲಿದ್ದ. ಈತನ ಹತ್ಯೆಯು ಯುವಕರನ್ನು ಭಯೋತ್ಪಾದಕ ಸಂಘಟನೆಗಳನ್ನು ಸೇರುವುದಕ್ಕೆ ಪ್ರಚೋದಿಸಿತು
- ಹತ್ಯೆಯಾದ ಉಗ್ರರ ಸಾಮೂಹಿಕ ಅಂತ್ಯಕ್ರಿಯೆ ಕುರಿತ ವಿಡಿಯೊಗಳು ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿದ್ದವು. ಕಾಶ್ಮೀರದಲ್ಲಿನ ಇಂತಹ ಬೆಳವಣಿಗೆಗಳಿಂದ ನಿರಾಶೆಗೊಂಡಿದ್ದ ಯುವಕರು ಉಗ್ರ ಸಂಘಟನೆಗಳನ್ನು ಸೇರಿಕೊಳ್ಳಲು ಮುಂದಾದರು
- ಉಗ್ರರ ಅಂತ್ಯಕ್ರಿಯೆಗಳು ನಡೆದ ಸ್ಥಳಗಳೇ ಯುವಕರ ನೇಮಕಾತಿಯ ತಾಣಗಳಾಗಿ ಪರಿವರ್ತನೆಗೊಂಡವು. ಗುಂಡು ಹಾರಿಸುವುದು ಹಾಗೂ ಪ್ರಚೋದನಕಾರಿ ಭಾಷಣಗಳ ಮೂಲಕ ಯುವಕರು ಆ ಸ್ಥಳದಲ್ಲಿಯೇ ಉಗ್ರ ಸಂಘಟನೆ ಸೇರುವಂತೆ ಮಾಡಲಾಗುತ್ತಿತ್ತು

ರಾಜ್ಯದಲ್ಲೂ ಮತ ಪಟ್ಟಿ ಪರಿಷ್ಕರಣೆ?

ಒಂದನೇ ಪುಟದಿಂದ...

'ಬಿಹಾರದಲ್ಲಿ ನಡೆದ ಪರಿಷ್ಕರಣೆಯು ಯಶಸ್ವಿಯಾಗಿದ್ದು, ಅದನ್ನು ಕರ್ನಾಟಕದಲ್ಲೂ ಅನುಷ್ಠಾನಕ್ಕೆ ತರಲಾಗುತ್ತದೆ. ಪರಿಷ್ಕರಣೆ ಹೇಗೆ ನಡೆಯಲಿದೆ ಮತ್ತು ಯಾವ ಹಂತದ ಅಧಿಕಾರಿಯ ಹೊಣೆಗಾರಿಕೆ ಏನು ಎಂಬುದರ ಬಗ್ಗೆ ಸಭೆಯಲ್ಲಿ ಸಂಕ್ಷಿಪ್ತ ವಿವರ ನೀಡಲಾಗಿದೆ. ಜಿಬಿಎಯ ಒಂದು ವಲಯದಲ್ಲಿ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿತ್ತು. ಆದರೆ ತಾಂತ್ರಿಕ ಕಾರಣದಿಂದ ತರಬೇತಿ ನಡೆಯಲಿಲ್ಲ. ಆ ಸಮಸ್ಯೆಗಳನ್ನು ಪರಿಹರಿಸಿಕೊಂಡು ಆಗಸ್ಟ್‌ನಲ್ಲಿ ಪೂರ್ಣ ಪ್ರಮಾಣದ ತರಬೇತಿ ನೀಡಲಾಗುತ್ತದೆ ಎಂದು ತಿಳಿಸಲಾಗಿದೆ' ಎಂದು ವಿವರಿಸಿವೆ.

ಬಿಹಾರ ಮಾದರಿಗೆ ಕಟು ವಿರೋಧ

ಒಂದನೇ ಪುಟದಿಂದ...

ಈ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸುತ್ತಿದೆ.

ಚುನಾವಣಾ ಆಯೋಗವು ಈಚೆಗೆ ಪ್ರಕಟಿಸಿದ ಸಮಗ್ರ ಪರಿಷ್ಕರಣೆಯ ಮತದಾರರ ಪಟ್ಟಿಯಲ್ಲಿ ಸುಮಾರು 65 ಲಕ್ಷ ಮತದಾರರನ್ನು ಕೈಬಿಡಲಾಗಿದೆ. ಅವುಗಳಲ್ಲಿ ಅರ್ಹ ಮತದಾರರೂ ಸೇರಿದ್ದಾರೆ ಎಂದು ಆಕ್ಷೇಪ ವ್ಯಕ್ತವಾಗಿದೆ. 65 ಲಕ್ಷ ಮಂದಿಯ ಪಟ್ಟಿಯನ್ನು ಸಲ್ಲಿಸುವಂತೆ ಸುಪ್ರೀಂ ಕೋರ್ಟ್, ಆಯೋಗಕ್ಕೆ ಸೂಚಿಸಿದೆ.

ವೃದ್ಧೆ ಹೆಸರಿನಲ್ಲಿ ಫೈನಾನ್ಸ್ ಕಂಪನಿ: ತೆರಿಗೆ ವಂಚನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ನಗರ: ಬೆಂಗಳೂರಿನ ಕೃಷ್ಣ ರಾಘವನ್ ಎಂಬುವವರು ಇಲ್ಲಿನ ನಿವಾಸಿ ಎ.ಜಿ.ನಂಜೇಶ್ ಅವರ ಪತ್ನಿ ಪಿ.ಎಸ್.ಶಶಿಕಲಾ (73) ಹೆಸರಿನಲ್ಲಿ ಫೈನಾನ್ಸ್ ಕಂಪನಿ ತೆರೆದು ಕೋಟ್ಯಂತರ ರೂಪಾಯಿ ತೆರಿಗೆ ವಂಚಿಸಿರುವ ಕುರಿತು ದೂರು ದಾಖಲಾಗಿದೆ.

'ರಾಘವನ್ ಹಲವು ವರ್ಷಗಳಿಂದ ಪರಿಚಿತರು. ಆಗಾಗ ಮನೆಗೆ ಬರುತ್ತಿದ್ದರು. ಎರಡು ಫೈನಾನ್ಸ್ ಕಂಪನಿ ಇದೆ, 'ಎಎಲ್‌ಪಿಎಚ್‌ಎ' ಕಂಪನಿಗೆ ತಾಯಿ ಶಶಿಕಲಾ ಅವರನ್ನು ಷೇರುದಾರರು, ಪಾಲುದಾರರನ್ನಾಗಿ ಮಾಡುತ್ತೇನೆ ಎನ್ನುತ್ತಿದ್ದರು. 2015ರಲ್ಲಿ ಒತ್ತಾಯದಿಂದ ತಾಯಿಯ ಫೋಟೊ, ಆಧಾರ್, ಪ್ಯಾನ್, ಐಡಿ ಕಾರ್ಡ್ ಪಡೆದಿದ್ದರು' ಎಂದು ಶಶಿಕಲಾ ಪುತ್ರ ನಿರಂಜನ್ ಸ್ವಾಮಿ 'ಪ್ರಜಾವಾಣಿ'ಗೆ ತಿಳಿಸಿದರು.

'ತಾಯಿ ಹೆಸರಿನಲ್ಲಿ ನಕಲಿ ಸಹಿ ಮಾಡಿ 'ಎಎಲ್‌ಪಿಎ' ಎಂಬ ಕಂಪನಿ ಸ್ಥಾಪಿಸಿ ವ್ಯವಹಾರ ಮಾಡಿದ್ದಾರೆ. ಈಗ, ₹14 ಕೋಟಿಗೂ ಅಧಿಕ ತೆರಿಗೆ ಕಟ್ಟುವಂತೆ ನಮಗೆ ನೋಟಿಸ್ ಬಂದಿದೆ' ಎಂದರು

ಗಣಪ ಬಂದ...

ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್



ಮಂಗಳೂರಿನ ಮಣ್ಣಗುಡ್ಡೆಯಲ್ಲಿ ಕಲಾವಿದ ಪ್ರಭಾಕರ ಎಂ. ರಾವ್ ಅವರು ಗಣೇಶ ಮೂರ್ತಿಗಳ ತಯಾರಿಯಲ್ಲಿ ಭಾನುವಾರ ನಿರತರಾಗಿದ್ದರು

'ಬುಕ್‌ಬ್ರಹ್ಮ ಸಾಹಿತ್ಯ ಉತ್ಸವ 2025': 'ಯುದ್ಧಭೂಮಿಯಲ್ಲಿ ತಾಯಂದಿರು' ಗೋಷ್ಠಿಯಲ್ಲಿ ಚರ್ಚೆ

'ಸಮರ ಸಲ್ಲದು, ಬೇಕಿದೆ ಮಮತೆ'

• ಸುಕೃತ ಎಸ್.

ಬೆಂಗಳೂರು: ಯುದ್ಧ ಮತ್ತು ತಾಯ್ತನವು ಒಂದಕ್ಕೊಂದು ವಿರುದ್ಧವಾದವು. ಆಧುನಿಕ ಯುಗದಲ್ಲಿ ಯುದ್ಧಭೂಮಿಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಪ್ರಮಾಣ ಏರಿಕೆಯಾಗಿದೆ. ಇದರಿಂದ ಯುದ್ಧದಂಥ ಪುರುಷ ಕೇಂದ್ರಿತ ಆಲೋಚನೆ ಮತ್ತು ಕಾರ್ಯಚಟುವಟಿಕೆಯಲ್ಲಿ ತಾಯ್ತನವನ್ನು ಕಾಣುತ್ತಿದ್ದೇವೆಯೇ? ಈ ಹುಡುಕಾಟ ಸಾಧ್ಯವೇ? ಅದು ಅಗತ್ಯವೇ?

ಬುಕ್‌ಬ್ರಹ್ಮ ಸಂಸ್ಥೆಯು ನಗರದಲ್ಲಿ ಆಯೋಜಿಸಿದ್ದ 'ಸಾಹಿತ್ಯ ಉತ್ಸವ 2025'ರ ಕೊನೇ ದಿನದ, 'ಯುದ್ಧಭೂಮಿಯಲ್ಲಿ ತಾಯಂದಿರು: ಧೈರ್ಯ, ಸಂಘರ್ಷ ಮತ್ತು ಆರೈಕೆ' ಗೋಷ್ಠಿಯಲ್ಲಿ ಈ ತೆರನ ವಿಶ್ಲೇಷಣೆ ನಡೆಯಿತು.

ಯುದ್ಧದಾಹಿ ಆಗಿರುವ ಇಂದಿನ ಜಗತ್ತಿಗೆ ಬೇಕಾದ ತಾಯ್ತನವನ್ನು, ಶಾಂತಿ ಸ್ಥಾಪನೆಯ ಅಗತ್ಯವನ್ನು ಗೋಷ್ಠಿಯು ಒತ್ತಿ ಹೇಳಿತು. ಲೆಫ್ಟಿನೆಂಟ್ ಕರ್ನಲ್ ವಿಜಯಲಕ್ಷ್ಮಿ, ಫ್ಲೈಟ್ ಲೆಫ್ಟಿನೆಂಟ್ ಪೂರ್ಣಿಮಾ ಮಾಳಗಿಮನಿ ಮತ್ತು ಕ್ಯಾಪ್ಟನ್ ಸಜಿತಾ ನಾಯರ್ ತಮ್ಮ ಅಭಿಪ್ರಾಯಗಳನ್ನು ನೇರವಾಗಿ ಹಂಚಿಕೊಂಡರು.

'ಯಾವುದಕ್ಕಾಗಿ ಜಗಳ ಮಾಡಬಹುದು. ಜಗಳ ಮಾಡುವುದಕ್ಕೂ ಒಂದು ಮಹತ್ವದ ಕಾರಣ ಬೇಕಲ್ಲವೇ? ನಾವು ಮಕ್ಕಳು ಹೊಡೆದಾಡಿಕೊಂಡಾಗ ಅಮ್ಮ ಕಲಿಸುವ ಪಾಠವಿದು. ಸಣ್ಣವರ ಬಗ್ಗೆ ಸಹಾನುಭೂತಿ ಇರಬೇಕು. ಜೊತೆಗೆ, ಜಗಳವನ್ನು ಹೇಗೆ ಬಗೆಹರಿಸಿಕೊಳ್ಳಬೇಕು ಎನ್ನುವುದೂ ಅವಳ ಪಾಠವೇ ಆಗಿದೆ. ಆದ್ದರಿಂದ, ಯುದ್ಧಭೂಮಿಯ ವಿಚಾರಗಳು ಮಹಿಳೆಗೆ ಮನೆಯಲ್ಲಿಯೇ ಕರಗತವಾಗಿರುತ್ತದೆ' ಎಂದರು ಪೂರ್ಣಿಮಾ.

ಇದಕ್ಕೆ ದನಿಗೂಡಿಸಿದ ವಿಜಯಲಕ್ಷ್ಮಿ ಅವರು , 'ನಾನೊಂದು ಸಣ್ಣ ಅಂಕಿ–ಅಂಶ ನೀಡುತ್ತೇನೆ. 1992ರಿಂದ 2009ರವರೆಗೆ ಶಾಂತಿ ಸ್ಥಾಪನೆಗಾಗಿ ಜಗತ್ತಿನೆಲ್ಲೆಡೆ ನಡೆದ ಮಾತುಕತೆಗಳಲ್ಲಿ ಮಹಿಳೆಯರ ಪಾತ್ರ ಶೇ 13ರಷ್ಟಿತ್ತು. ಒಂದು ಅಂದಾಜಿನ ಪ್ರಕಾರ, ಮಹಿಳೆಯರು ಶಾಂತಿ ಸ್ಥಾಪನೆ ಮಾತುಕತೆಯಲ್ಲಿ ಭಾಗವಹಿಸಿದರೆ ಶಾಂತಿ ಸ್ಥಾಪನೆಯಾಗುವುದು ಶೇ 35ರಷ್ಟು ಖಚಿತ ಎನ್ನಲಾಗುತ್ತದೆ. ಜೊತೆಗೆ, ಮಹಿಳೆಯರು ನಡೆಸುವ ಮಾತುಕತೆಗಳಲ್ಲಿ ಸರಾಸರಿಯಲ್ಲಿ 15 ವರ್ಷಗಳವರೆಗೆ ಶಾಂತಿ ಸ್ಥಾಪನೆ ಸಾಧ್ಯವಾಗುತ್ತದೆ ಎನ್ನುತ್ತಾರೆ' ಎಂದರು.

'ಯುದ್ಧಭೂಮಿಯಲ್ಲಿ ಅಥವಾ ಸೇನೆಯ ಸಾಂಸ್ಥಿಕ ವ್ಯವಸ್ಥೆಯಲ್ಲಿ ಮಹಿಳೆಯು ಪುರುಷನ ಬದಲಿಗೆ ಬರುತ್ತಿಲ್ಲ. ಆದರೆ, ಈ ವ್ಯವಸ್ಥೆಯಲ್ಲಿ, ಯುದ್ಧಭೂಮಿಯಲ್ಲಿ ತನ್ನ ಶಕ್ತಿಯನ್ನು, ತನ್ನ ತನವನ್ನು ಧಾರೆ ಎರೆಯುತ್ತಿದ್ದಾಳೆ' ಎಂದು ಸಜಿತಾ ಅಭಿಪ್ರಾಯಪಟ್ಟರು.

ಈ ಮೂವರು ತಮ್ಮ ಸೇವಾವಧಿಯನ್ನು ಪೂರ್ಣಗೊಳಿಸಿ, ಸಾಹಿತ್ಯ ರಚನೆಯಲ್ಲಿ ತೊಡಗಿಕೊಂಡಿದ್ದಾರೆ. ಹಲವು ಪುಸ್ತಕಗಳನ್ನು ಬರೆದಿದ್ದಾರೆ. ಪಿ.ಎಂ. ನಾರಾಯಣನ್ ಗೋಷ್ಠಿಯನ್ನು ಸಮನ್ವಯಕಾರರಾಗಿದ್ದರು.

'ಯುದ್ಧವು ಐಪಿಎಲ್ ಪಂದ್ಯವೇ?'

'ಆಪರೇಷನ್ ಸಿಂಧೂರ'ದ ಬಳಿಕ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಸಂಖ್ಯೆಯಲ್ಲಿ ಚರ್ಚೆ ನಡೆದಿತ್ತು. 'ನಾವು ಪಾಕಿಸ್ತಾನವನ್ನು ನಾಶ ಮಾಡಿಬಿಡಬೇಕಿತ್ತು' ಎಂದೆಲ್ಲಾ ವೀರಾವೇಶದ ಪೋಸ್ಟ್‌ಗಳನ್ನು ಹಂಚಿಕೊಳ್ಳಲಾಯಿತು. ಇಂಥ ಪೋಸ್ಟ್‌ಗಳನ್ನು ಹಂಚಿಕೊಂಡ ಯಾರಿಗೂ ಯುದ್ಧ ಎಂದರೇನು ಎನ್ನುವುದೇ ತಿಳಿದಿಲ್ಲ. ಯುದ್ಧದ ಪರಿಣಾಮಗಳ ಬಗ್ಗೆಯೂ ಅರಿವಿಲ್ಲ' ಎಂದು ಫ್ಲೈಟ್ ಲೆಫ್ಟಿನೆಂಟ್ ಪೂರ್ಣಿಮಾ ಮಾಳಗಿಮನಿ ಬೇಸರ ವ್ಯಕ್ತಪಡಿಸಿದರು.

'ಭಾರತದ ಗೆದ್ದುಬಿಟ್ಟಿತು ಎಂದು ಪೋಸ್ಟ್ ಹಂಚಿಕೊಳ್ಳುತ್ತಾರೆ. ಯುದ್ಧ ಎನ್ನುವುದು ಐಪಿಎಲ್ ಪಂದ್ಯವೇ? ಜನರು ಮನೆ ಕಳೆದುಕೊಳ್ಳುತ್ತಾರೆ. ಮಕ್ಕಳು ಅನಾಥರಾಗುತ್ತಾರೆ. ಯುದ್ಧದಲ್ಲಿ ಭಾಗವಹಿಸಿದವರೇ ಯುದ್ಧದ ಭೀಕರತೆಯ ಬಗ್ಗೆ ತಮ್ಮ ಅನುಭವಗಳನ್ನು ಬರೆಯುವಂತಾಗಬೇಕು. ಆ ಮೂಲಕ ಜನರಿಗೆ ಯುದ್ಧದ ಪರಿಣಾಮಗಳ ಬಗ್ಗೆ ಮಾಹಿತಿ ನೀಡಬೇಕು. ಏಕೆ ಯುದ್ಧವಾಗಬಾರದು ಎನ್ನುವುದನ್ನು ತಿಳಿಸಿಕೊಡಬೇಕು. ಸಾಹಿತ್ಯಕ್ಕೆ 'ಇಂಥದ್ದೊಂದು ಶಕ್ತಿ ಇದೆ' ಎಂದರು.

> ಶಾಂತಿ ತಂದುಕೊಡುವುದಾದರೆ ಯುದ್ಧ ಮಾಡುವುದು ಸರಿ. ಈ ಕಾರಣವಲ್ಲದಿದ್ದರೆ ಜಗಳವನ್ನು ಬಗೆಹರಿಸಿಕೊಳ್ಳುವುದೇ ಉತ್ತಮ. ಯುದ್ಧವೇ ಗೆಲುವಲ್ಲ. ಶಾಂತಿಯನ್ನು ಕಾಪಾಡಿಕೊಳ್ಳುವುದೇ ನಿಜವಾದ ಗೆಲುವು. ಆಗ ಮಾತ್ರ ಕರುಣೆ, ಸಹಾನುಭೂತಿ ಹುಟ್ಟಿಕೊಳ್ಳುತ್ತದೆ
> **ಲೆಫ್ಟಿನೆಂಟ್ ಕರ್ನಲ್ ವಿಜಯಲಕ್ಷ್ಮಿ**


'ಕನ್ನಡ ಚಿಂತನ ಕ್ರಮ ಬದಲಾಗುತ್ತಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಲದಿಂದ ಕಾಲಕ್ಕೆ ಕನ್ನಡ ಚಿಂತನ ಕ್ರಮ ಬದಲಾಗುತ್ತಿದೆ. ಕನ್ನಡ ಭಾಷೆ ನಿಂತ ನೀರಾಗಿರದೆ, ಸದಾ ಹರಿಯುತ್ತಿದೆ' ಎಂದು ಹೈದರಾಬಾದ್‌ನ ಇಂಗ್ಲಿಷ್ ಮತ್ತು ವಿದೇಶಿ ಭಾಷೆಗಳ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ವಿ.ಬಿ. ತಾರಕೇಶ್ವರ್ ಅಭಿಪ್ರಾಯಪಟ್ಟರು.

ಬುಕ್ ಬ್ರಹ್ಮ ಸಾಹಿತ್ಯ ಉತ್ಸವದ 'ಕನ್ನಡದ್ದೇ ಚಿಂತನ ಕ್ರಮ ಇದೆಯೇ?' ಗೋಷ್ಠಿಯಲ್ಲಿ ಮಾತನಾಡಿ, 'ಭಾಷೆಯ ಆಧಾರದ ಮೇಲೆಯೇ ನಮ್ಮ ಸಂಸ್ಕೃತಿ ರೂಪುಗೊಂಡಿದೆ. ಎಲ್ಲ ಭಾರತೀಯ ಭಾಷೆಗಳಿಗೆ ತನ್ನದೇ ಆದ ಚಿಂತನ ಕ್ರಮವಿದೆ. ಚಿಂತನ ಕ್ರಮವನ್ನು ಭಾಷೆಯ ಆಧಾರದ ಮೇಲೆ ವಿಂಗಡಿಸುತ್ತೇವೆ. ಕನ್ನಡ ಭಾಷೆ ತನ್ನ ಆಯಾಮಕ್ಕೆ ತಕ್ಕಂತೆ ಬದಲಾಗುವುದರ ಜೊತೆಗೆ, ಹಲವು ಭಾಷೆಯ ಸಂಸ್ಕೃತಿ, ಪರಿಕರಗಳನ್ನು ಅನುಸರಿಸುತ್ತದೆ' ಎಂದು ಹೇಳಿದರು.

'ಯಾವುದೇ ಒಂದು ಚಿಂತನೆಯು ಕನ್ನಡಕ್ಕೆ ಮಾತ್ರ ಸೀಮಿತವಾದ ಚಿಂತನೆಯೆಂದು ಎನ್ನಲಾಗದು' ಎಂದರು.



ಬುಕ್ ಬ್ರಹ್ಮ ಸಂಸ್ಥೆಯು ಬೆಂಗಳೂರಿನಲ್ಲಿ ಹಮ್ಮಿಕೊಂಡಿದ್ದ ಬುಕ್ ಬ್ರಹ್ಮ ಸಾಹಿತ್ಯ ಉತ್ಸವದಲ್ಲಿ ಮಲಯಾಳ ಲೇಖಕಿ ಕೆ.ಆರ್. ಮೀರಾ ಅವರಿಗೆ 'ಬುಕ್ ಬ್ರಹ್ಮ ಸಾಹಿತ್ಯ ಪುರಸ್ಕಾರ'ವನ್ನು ಸಾಹಿತಿ ಚಂದ್ರಶೇಖರ ಕಂಬಾರ ಭಾನುವಾರ ಪ್ರದಾನ ಮಾಡಿದರು. (ಎಡದಿಂದ) ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್‌ನ ಸಹಕುಲಾಧಿಪತಿ ಮಧು ವೀರರಾಘವನ್, ಸಾಹಿತಿಗಳಾದ ಹಂಪ ನಾಗರಾಜಯ್ಯ ಮತ್ತು ದಾಮೋದರ್ ಮಾವಜೋ ಉಪಸ್ಥಿತರಿದ್ದರು. ಈ ಪುರಸ್ಕಾರವು ₹2 ಲಕ್ಷ ನಗದು ಒಳಗೊಂಡಿದೆ. – ಪ್ರಜಾವಾಣಿ ಚಿತ್ರ

ಪ್ರಜಾವಾಣಿ ಸೋಮವಾರ ● ಆಗಸ್ಟ್ 11, 2025

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ನಾವೆಲ್ಲರೂ ಒಂದೇ ಜಾತಿ, ಒಂದೇ ಮತ, ಒಂದೇ ಕುಲ; ನಾವು ಮನುಜರು.

–ಎಂ. ಗೋಪಾಲಕೃಷ್ಣ ಅಡಿಗ

ಸಂಪಾದಕೀಯ

ಮತ ಕಳವಿನ ಗಂಭೀರ ಆರೋಪ ಜನರಿಗೆ ಸತ್ಯಸಂಗತಿ ತಿಳಿಯಲಿ

‘ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರ’ದಲ್ಲಿ, 2024ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಬಹುದೊಡ್ಡ ಚುನಾವಣಾ ಅಕ್ರಮ ಮತ್ತು ಮತ ಕಳವು ನಡೆದಿದೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಆಪಾದಿಸಿದ್ದಾರೆ. ಮೇಲ್ನೋಟಕ್ಕೆ ಚುನಾವಣಾ ಪ್ರಕ್ರಿಯೆಯಲ್ಲಿನ ಗಂಭೀರ ಲೋಪದಂತೆ ಕಾಣಿಸುತ್ತಿರುವ ಆರೋಪದ ಬಗ್ಗೆ ವಿಳಂಬ ಮಾಡದೆ ಲೆಕ್ಕಪರಿಶೋಧನೆ– ತನಿಖೆ ನಡೆಯಬೇಕಾಗಿದೆ. ಮಹದೇವಪುರ ವಿಧಾನಸಭಾ ಕ್ಷೇತ್ರವೊಂದರಲ್ಲೇ ಒಂದು ಲಕ್ಷಕ್ಕೂ ಹೆಚ್ಚು ನಕಲಿ ಮತಗಳು ಪತ್ತೆಯಾಗಿವೆ; ಅವುಗಳಲ್ಲಿ 11,000 ನಕಲಿ ನೋಂದಣಿಗಳಾಗಿದ್ದು, 40,000 ಮತದಾರರ ವಿಳಾಸಗಳು ಅನುಮಾನ ಹುಟ್ಟಿಸುವಂತಿವೆ; 33 ಸಾವಿರ ಪ್ರಕರಣಗಳಲ್ಲಿ ‘ನಮೂನೆ–6’ರ ದುರುಪಯೋಗ ನಡೆದಿದೆ; 4,000 ಪ್ರಕರಣಗಳು ಅಮಾನ್ಯ ಛಾಯಾಚಿತ್ರಗಳಿಗೆ ಸಂಬಂಧಿಸಿದವು ಎಂದು ಕಾಂಗ್ರೆಸ್ ಆರೋಪಿಸಿದೆ. ಈ ಅಂಕಿಅಂಶಗಳು ನಿಜವಾಗಿದ್ದಲ್ಲಿ, ಚುನಾವಣಾ ಪ್ರಕ್ರಿಯೆ ದೋಷಪೂರಿತವಾಗಿದೆ ಎಂದು ಭಾವಿಸಬೇಕಾಗುತ್ತದೆ. ಚುನಾವಣಾ ಅಕ್ರಮಕ್ಕಾಗಿ ಬೇರೆಯವರನ್ನು ದೂಷಿಸುವ ಮೊದಲು, ಕಾಂಗ್ರೆಸ್ ಪಕ್ಷ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಮತದಾರರ ಅಂತಿಮ ಪಟ್ಟಿಯನ್ನು ಮತದಾನಕ್ಕೆ ಮೊದಲೇ ಎಲ್ಲ ರಾಜಕೀಯ ಪಕ್ಷಗಳಿಗೂ ನೀಡಲಾಗುತ್ತದೆ. ಆ ಸಂದರ್ಭದಲ್ಲಿ, ಲೋಪದೋಷಗಳನ್ನು ಕಾಂಗ್ರೆಸ್ ಏಕೆ ಗಮನಿಸಲಿಲ್ಲ? ಮತಪಟ್ಟಿಯಲ್ಲಿನ ವ್ಯತ್ಯಾಸಗಳನ್ನು ಮನೆ ಮನೆಗೆ ಹೋಗಿ ಪ್ರಚಾರ ನಡೆಸುವ ಬೂತ್ ಮಟ್ಟದ ಕಾರ್ಯಕರ್ತರು ಏಕೆ ಗಮನಿಸಲಿಲ್ಲ? ಮತದಾನದ ದಿನವೂ ಶಂಕಿತ ನಕಲಿ ಮತದಾನದ ಬಗ್ಗೆ ಪಕ್ಷದ ಚುನಾವಣಾ ಏಜೆಂಟರು ಪ್ರತಿಭಟನೆ ನಡೆಸಬಹುದಿತ್ತು. ಫಲಿತಾಂಶದ ನಂತರವೂ ಚುನಾವಣಾ ಅಕ್ರಮದ ಬಗ್ಗೆ ದೂರು ಸಲ್ಲಿಸಲು ಕಾಂಗ್ರೆಸ್‌ಗೆ ಅವಕಾಶವಿತ್ತು.



> ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದಲ್ಲಿ ನಡೆದಿದೆ ಎನ್ನಲಾದ ಮತ ಕಳವು ಆರೋಪ, ಚುನಾವಣಾ ಪಾವಿತ್ರ್ಯದ ಬಗ್ಗೆ ಅನುಮಾನ ಮೂಡಿಸುವಂತಿದೆ.

ಚುನಾವಣೆಗೆ ಮುನ್ನ ಹಾಗೂ ಚುನಾವಣೆಯ ನಂತರ ಪ್ರತಿಭಟಿಸುವ ಅವಕಾಶಗಳನ್ನು ಕಾಂಗ್ರೆಸ್ ಬಿಟ್ಟುಕೊಟ್ಟಿದ್ದರೂ, ಮರಣೋತ್ತರ ಪರೀಕ್ಷೆಗೆ ಅವಕಾಶ ಇನ್ನೂ ಇದೆ. ಮತದಾರರು ತಮ್ಮ ವಾಸಸ್ಥಳ ಬದಲಿಸಿದಾಗ, ಹಳೆಯ ನೋಂದಣಿಗಳನ್ನು ರದ್ದುಪಡಿಸದೆ ಹೋದಲ್ಲಿ, ನಕಲಿ ನಮೂದುಗಳು ದಾಖಲಾಗುತ್ತವೆ. ಅಂತಹ ಸಂದರ್ಭದಲ್ಲಿ ಆಧುನಿಕ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ದೋಷಗಳನ್ನು ಸರಿಪಡಿಸಬಹುದಾಗಿದೆ. ಪ್ರಸಕ್ತ ಪ್ರಕರಣದಲ್ಲಿ ಚುನಾವಣಾ ಆಯೋಗದ ಲೋಪವನ್ನು ತಳ್ಳಿಹಾಕುವಂತಿಲ್ಲ. ನಕಲಿ ಮತದಾರರು ಚುನಾವಣೆಯಲ್ಲಿ ಮತದಾನ ಮಾಡಿದ್ದಾರೆಯೇ ಹಾಗೂ ಆ ಮತದಾನ ಚುನಾವಣಾ ಫಲಿತಾಂಶದ ಮೇಲೆ ಪ್ರಭಾವ ಬೀರಿದೆಯೇ ಅಥವಾ ಈ ಹೆಸರುಗಳು ಬರೀ ಮತದಾರರ ಪಟ್ಟಿಯಲ್ಲಷ್ಟೇ ಕಾಣಿಸಿಕೊಂಡಿವೆಯೇ– ಪ್ರಸ್ತುತ ಉತ್ತರ ದೊರಕಬೇಕಾಗಿರುವ ಮುಖ್ಯ ಪ್ರಶ್ನೆಗಳಿವು. ಹೆಸರು ಮತ್ತು ವಿಳಾಸದಲ್ಲಿ ಸಾಮ್ಯತೆಯಿರುವ ಒಬ್ಬನೇ ವ್ಯಕ್ತಿ ಎರಡು ಕಡೆಗಳಲ್ಲಿ ಮತದಾನ ಮಾಡಿರುವುದನ್ನು ರಾಹುಲ್ ಗಾಂಧಿ ಅವರು ನೀಡಿರುವ ಸಾಕ್ಷ್ಯಗಳು ಸೂಚಿಸುತ್ತಿವೆ.

ಆರೋಪಗಳನ್ನು ಸಹಿ ಮಾಡಿದ ಪ್ರಮಾಣ ಪತ್ರದೊಂದಿಗೆ ಸಲ್ಲಿಸುವಂತೆ ಚುನಾವಣಾ ಆಯೋಗ ರಾಹುಲ್ ಗಾಂಧಿ ಅವರಿಗೆ ತಿಳಿಸಿದೆ. ಆರೋಪ ಸುಳ್ಳಾದಲ್ಲಿ ಕಾನೂನು ಕ್ರಮ ಎದುರಿಸಬೇಕಾಗುತ್ತದೆಂದು ಪರೋಕ್ಷವಾಗಿ ಬೆದರಿಸಿದೆ. ಈ ಬೆದರಿಕೆಗೆ ಬದಲು, ಆಯೋಗ ಹೆಚ್ಚು ಕ್ರಿಯಾಶೀಲ ವಿಧಾನ ಅನುಸರಿಸಬಹುದಾಗಿತ್ತು. ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗಳನ್ನು ನಡೆಸಬೇಕಾದ ಸಂಸ್ಥೆಯ ವಿಶ್ವಾಸಾರ್ಹತೆಯೇ ಪ್ರಶ್ನೆಗೊಳಗಾದಾಗ, ತೀರ್ಪು ನೀಡುವ ಸ್ಥಾನದಲ್ಲಿ ಆರೋಪಕ್ಕೆ ಗುರಿಯಾದ ಸಂಸ್ಥೆಯೇ ಇರುವುದನ್ನು ಒಪ್ಪಿಕೊಳ್ಳಲಾಗದು. ಮತದಾರರ ಪಟ್ಟಿ ಮತ್ತು ಚುನಾವಣಾ ಪ್ರಕ್ರಿಯೆಯಲ್ಲಿ ಆಗಿರಬಹುದಾದ ಅಕ್ರಮಗಳ ಬಗ್ಗೆ ತನಿಖೆ ನಡೆಸಲು, ಹೈಕೋರ್ಟ್ ಮೇಲ್ವಿಚಾರಣೆಯಲ್ಲಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸುವಂತೆ ಕಾಂಗ್ರೆಸ್ ಒತ್ತಾಯಿಸಬೇಕಾಗಿದೆ. ಒಂದುವೇಳೆ, ರಾಹುಲ್ ಅವರ ಆರೋಪಗಳು ಆಧಾರ ರಹಿತ ಆಗಿದ್ದಲ್ಲಿ ಅವರನ್ನು ಕಾನೂನು ಕ್ರಮಕ್ಕೆ ಒಳಪಡಿಸಬೇಕು. ಆರೋಪ ದೃಢಪಟ್ಟಲ್ಲಿ, ತಳಮಟ್ಟದ ಅಧಿಕಾರಿಗಳಿಂದ ಹಿಡಿದು ಕಳಂಕಿತ ಮತದಾರರ ಪಟ್ಟಿಗೆ ಅನುಮೋದನೆ ನೀಡಿದ ಎಲ್ಲರೂ ಗುರುತರ ಲೋಪದ ಜವಾಬ್ದಾರಿ ಹೊರಬೇಕಾಗುತ್ತದೆ. ಇದು ಎರಡು ಪಕ್ಷಗಳಿಗೆ ಸಂಬಂಧಿಸಿದ ವಿದ್ಯಮಾನವಷ್ಟೇ ಅಲ್ಲ; ಚುನಾವಣೆಗಳಲ್ಲಿ ಅಕ್ರಮ ಎಸಗುವುದು ಹಾಗೂ ಮತದಾರರ ಅಭಿಪ್ರಾಯವನ್ನು ಕದಿಯುವುದೆಂದರೆ, ಅದು ಸಂವಿಧಾನಕ್ಕೆ ಎಸಗುವ ದ್ರೋಹ ಹಾಗೂ ಪ್ರಜಾಪ್ರಭುತ್ವದ ಮೇಲೆ ನಡೆಸುವ ಆಕ್ರಮಣ.

ಒಳಮೀಸಲು ವರದಿಯ ಒಳನೋಟ



ವಿಶ್ಲೇಷಣೆ

ಸಿ.ಎಸ್. ದ್ವಾರಕಾನಾಥ್

ಒಳಮೀಸಲಾತಿಗೆ ಸಂಬಂಧಿಸಿದ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಅವರ ಬಹು ನಿರೀಕ್ಷಿತ ವರದಿ ರಾಜ್ಯ ಸರ್ಕಾರದ ಕೈ ಸೇರಿದೆ. ಕೆಲವರು ಹೇಳುವಂತೆ, ಈ ವರದಿ ಮೇಲ್ನೋಟಕ್ಕೆ ನ್ಯಾಯಮೂರ್ತಿ ಸದಾಶಿವ ವರದಿಯ ನಕಲಿನಂತೆ ಕಾಣಿಸಿದರೂ, ನಾಗಮೋಹನದಾಸ್ ಅವರು ಸಾಕಷ್ಟು ಶ್ರಮವಹಿಸಿ ಸೀಮಿತ ಸಮಯದಲ್ಲಿ ಪರಿಶಿಷ್ಟ ಜಾತಿಯಲ್ಲಿನ ಒಳಪಂಗಡಗಳನ್ನು ವಿಭಜಿಸಿ ಒಳಮೀಸಲಾತಿಯ ಶಿಫಾರಸುಗಳನ್ನು ಮಾಡಿದ್ದಾರೆ. ಈ ಪ್ರಕ್ರಿಯೆಗೆ ಭಾರತದ ಮೀಸಲಾತಿಯ ಇತಿಹಾಸದಿಂದ ಆರಂಭಿಸಿ, ಕರ್ನಾಟಕದ ಜಸ್ಟೀಸ್ ಲೆಸ್ಲಿ ಮಿಲ್ಲರ್ ವರದಿಯಿಂದ ಹಿಡಿದು, ನಂತರದ ಹಿಂದುಳಿದ ವರ್ಗಗಳ ಆಯೋಗಗಳ ವರದಿಗಳನ್ನು ಸಂಕ್ಷಿಪ್ತ ಹಿನ್ನೆಲೆಯಾಗಿ ಬಳಸಿಕೊಳ್ಳಲಾಗಿದೆ. ಅಂತೆಯೇ ಒಳಮೀಸಲಾತಿಗೆ ಸಂಬಂಧಿಸಿದಂತೆ ಸದಾಶಿವ ವರದಿ, ಮಾಜಿ ಸಚಿವ ಮಾಧುಸ್ವಾಮಿ ಸಮಿತಿಯ ವರದಿಯನ್ನೂ ಗಂಭೀರವಾಗಿ ಪರಿಶೀಲಿಸಲಾಗಿದೆ.

ನಾಗಮೋಹನದಾಸ್ ವರದಿಯನ್ನು ವಿಸ್ತೃತ ಚರ್ಚೆಗೊಳಪಡಿಸಲು ಅನುಕೂಲ ಆಗಲೆಂದು ಈ ಬರಹದಲ್ಲಿ ಕೆಲವು ಪ್ರಶ್ನೆಗಳನ್ನೆತ್ತಲಾಗಿದೆ.

ವರದಿಯನ್ನು ಏಳು ಭಾಗಗಳಾಗಿ ವಿಂಗಡಿಸಲಾಗಿದೆ. ಅದರಲ್ಲಿ ಮೂರು ಭಾಗಗಳನ್ನು ಪ್ರಾಥಮಿಕ ಅಂಶಗಳೆಂದು ಕೈಬಿಟ್ಟರೂ, ಕಡೆಯ ನಾಲ್ಕು ಭಾಗಗಳು ಗಂಭೀರವಾಗಿ ಪರಿಗಣಿಸಬೇಕಾದವು. ಆ ಭಾಗಗಳಲ್ಲಿ, ಸಮಗ್ರ ಸಮೀಕ್ಷೆಯ ಮುಖ್ಯಾಂಶಗಳಿಂದ ಹಿಡಿದು, ನಾಮನಿರ್ದೇಶನದಲ್ಲಿ ಪ್ರಾತಿನಿಧ್ಯದ ಅವಶ್ಯಕತೆ, ಹಿಂದುಳಿದಿರುವಿಕೆಯ ಮಾನದಂಡಗಳು, ಪರಿಶಿಷ್ಟ ಜಾತಿಗಳ ವರ್ಗೀಕರಣ, ಮೀಸಲಾತಿ– ಆದ್ಯತೆಯ ಮೇಲೆ ಹಂಚಿಕೆ ಮತ್ತು ಸಮಿತಿಯ ಶಿಫಾರಸುಗಳಿವೆ.

ಒಳಮೀಸಲಾತಿ ಕುರಿತು ಜಾತಿ, ಉಪಜಾತಿಗಳ ಒಳವರ್ಗೀಕರಣದ ಪಟ್ಟಿಯನ್ನು ನೀಡುತ್ತಾ ವೈವಿಧ್ಯಮಯ (ಹೆಟರೊಜೀನಿಯಸ್) ಮತ್ತು ಏಕರೂಪದ (ಹೋಮೊಜೀನಿಯಸ್) ಜಾತಿಗಳ ಪಂಗಡಗಳನ್ನು ವಿಂಗಡಿಸಿ, ಅವುಗಳ ಶೈಕ್ಷಣಿಕ, ಔದ್ಯೋಗಿಕ, ರಾಜಕೀಯ ಪ್ರಾತಿನಿಧ್ಯದ ಅಸಮಾನತೆಗಳನ್ನು ಬೇರೆ ಬೇರೆ ಮೂಲಗಳಿಂದ ಗುರುತಿಸಲು ವರದಿ ಪ್ರಯತ್ನಿಸಿದೆ. ಶಿಕ್ಷಣದಲ್ಲಿ ಹಿಂದುಳಿದಿರುವಿಕೆಯನ್ನು ಕೆಲವು ಕೋಷ್ಟಕಗಳ ಮೂಲಕ ಕಲೆ ಹಾಕಲಾಗಿದೆ. ಅಂತೆಯೇ ಉದ್ಯೋಗದ ಪ್ರಾತಿನಿಧ್ಯವನ್ನು ‘ರತ್ನಪ್ರಭ ಸಮಿತಿ’ಯ ವರದಿ ಆಧರಿಸಿ ಮಾಹಿತಿ ಕಲೆ ಹಾಕಲಾಗಿದೆ. ಆದರೆ, ಇಲ್ಲಿ ಅಗತ್ಯವಾಗಿ ಪಡೆಯಲೇಬೇಕಾದುದು ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಮಾಹಿತಿ. ಅದನ್ನು ಪಡೆದಂತೆ ಎಲ್ಲಿಯೂ ಕಾಣುವುದಿಲ್ಲ.

ಕರ್ನಾಟಕ ಲೋಕಸೇವಾ ಆಯೋಗ ಆರಂಭವಾಗಿದ್ದು 1951ರಲ್ಲಿ. ಇಲ್ಲಿಯವರೆಗೂ ಗೆಜೆಟೆಡ್ (ಕೆಎಎಸ್) ಮತ್ತು ನಾನ್ ಗೆಜೆಟೆಡ್ ವಿಭಾಗಗಳಲ್ಲಿ ಅದೆಷ್ಟು ಲಕ್ಷ ಉದ್ಯೋಗಗಳ ನೇಮಕಾತಿ ಲೋಕಸೇವಾ ಆಯೋಗದಿಂದ ನಡೆದಿರಬಹುದು. ಆ ನೇಮಕಗಳಲ್ಲಿ ಮೀಸಲಾತಿಯ ಹುದ್ದೆಗಳೆಷ್ಟು? ಯಾವ ಯಾವ ಜಾತಿಗೆ ಎಷ್ಟೆಷ್ಟು ಹುದ್ದೆಗಳು ಸಿಕ್ಕಿವೆ? ಅದರಲ್ಲೂ, ಹೆಚ್ಚು ಪ್ರಾತಿನಿಧ್ಯ ಪಡೆದ ಜಾತಿಗಳೆಷ್ಟು ಮತ್ತು ಕಡಿಮೆ ಆದ್ಯತೆ ಪಡೆದ ಅಥವಾ ಪಡೆಯದೆಯೇ ಇರುವ ಜಾತಿಗಳೆಷ್ಟು ಎನ್ನುವುದು ಒಳಮೀಸಲಾತಿ ನಿರ್ಧರಿಸಲು ಇಟ್ಟುಕೊಳ್ಳಲೇಬೇಕಾದ ಅಗತ್ಯ ಮಾನದಂಡ ಅಲ್ಲವೇ? ಇಂತಹ ಅತ್ಯಗತ್ಯ ಅಂಕಿಅಂಶವನ್ನು ಕೈಬಿಟ್ಟು ಒಳಮೀಸಲಾತಿ ನೀಡಲು ಹೊರಟಿರುವುದು ಗಂಭೀರ ಲೋಪ ಹಾಗೂ ಅವೈಜ್ಞಾನಿಕವಾದ ಪ್ರಕ್ರಿಯೆ ಅಲ್ಲವೇ?

ಮತ್ತೊಂದು ಮೂಲದಿಂದ ಪಡೆಯುವ ಮಾಹಿತಿಯನ್ನು ಆಯೋಗಗಳ ವರದಿಗಳ ಪರಿಭಾಷೆಯಲ್ಲಿ ‘ದ್ವಿತೀಯ ಮೂಲದ ಮಾಹಿತಿ’ ಎನ್ನುತ್ತೇವೆ. ಪ್ರಾಥಮಿಕ ಮಾಹಿತಿ ಪಡೆದ ಅಂಕಿಅಂಶವನ್ನು ದ್ವಿತೀಯ ಮೂಲದ ಮಾಹಿತಿಯೊಂದಿಗೆ ಹೋಲಿಸಿದಾಗಷ್ಟೇ ನಿಖರವಾಗಿ ಯಾವ ಯಾವ ಜಾತಿಗಳಿಗೆ ಎಷ್ಟೆಷ್ಟು ಪ್ರಾತಿನಿಧ್ಯ ದೊರೆತಿದೆ ಎಂಬ ಸ್ಪಷ್ಟ ಮಾಹಿತಿ ಸಿಗುವುದು. ಈ ಲೋಪದ ಕಾರಣಕ್ಕೇ ಸದರಿ ವರದಿಯನ್ನು ಯಾರಾದರೂ ನ್ಯಾಯಾಲಯಗಳ ಮುಂದೆ ಪ್ರಶ್ನಿಸುವ ಅವಕಾಶ ಇದ್ದೇ ಇದೆ.

> ಒಳ ಮೀಸಲಾತಿಗೆ ಸಂಬಂಧಿಸಿದ ‘ನ್ಯಾಯಮೂರ್ತಿ ನಾಗಮೋಹನದಾಸ್ ವರದಿ’ ಅಪಾರ ಶ್ರಮ ಹಾಗೂ ಕಾಳಜಿಯಿಂದ ಸಿದ್ಧಗೊಂಡಿದೆ. ಆದರೆ, ದೇಶದ ಕೆಲವು ರಾಜ್ಯಗಳಲ್ಲಿ ಒಳ ಮೀಸಲಾತಿಗೆ ಸಂಬಂಧಿಸಿದ ಪ್ರಕರಣಗಳು ಎದುರಿಸುತ್ತಿರುವ ಕಾನೂನು ತೊಡಕುಗಳನ್ನು ನಿವಾರಿಸಿಕೊಳ್ಳುವ ನಿಟ್ಟಿನಲ್ಲಿ ಸಮಿತಿ ಯೋಚಿಸಿದಂತಿಲ್ಲ. ತೆಲಂಗಾಣ ಮಾದರಿಯನ್ನು ಅನುಸರಿಸಿದ್ದರೂ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳಬಹುದಾಗಿತ್ತು.

ಸಮಿತಿ ಮಾಡಿರುವ ಶಿಫಾರಸುಗಳನ್ನು ಗಮನಿಸುವುದಾದರೆ, ಆ ವಿಭಾಗದಲ್ಲಿ ಐದು ಪ್ರವರ್ಗಗಳನ್ನು ಮಾಡಲಾಗಿದೆ. ‘ಎ’ ಪ್ರವರ್ಗದಲ್ಲಿ ಅಂದಾಜು 90 ಸಣ್ಣಪುಟ್ಟ ಅಲೆಮಾರಿ ಸಮುದಾಯಗಳನ್ನು ಸೇರಿಸಿ, ಅವರ ಸಂಖ್ಯೆ ಶೇ 4.97ರಷ್ಟು ಎಂದು ಪರಿಗಣಿಸಲಾಗಿದೆ ಹಾಗೂ ಶೇ 1ರಷ್ಟು ಮೀಸಲಾತಿ ನೀಡಲಾಗಿದೆ. ಪ್ರವರ್ಗ ‘ಬಿ’ ಅಡಿಯಲ್ಲಿ ಮಾದಿಗ ಮತ್ತಿತರ ಅಧೀನ ಜಾತಿಗಳನ್ನು ಸೇರಿಸಿ, ಅವರ ಶೇಕಡವಾರು ಪ್ರಮಾಣ 34.91ರಷ್ಟು ಎಂದು ಪರಿಗಣಿಸಲಾಗಿದೆ ಹಾಗೂ ಅವರಿಗೆ ಶೇ 6ರಷ್ಟು ಮೀಸಲಾತಿ ನೀಡಲಾಗಿದೆ. ಪ್ರವರ್ಗ ‘ಸಿ’ಯಲ್ಲಿ ಹೊಲೆಯ ಮತ್ತಿತರ ಸಮಾನಾಂತರ ಜಾತಿಗಳನ್ನು ಸೇರಿಸಿ, ಅವರ ಪ್ರಮಾಣವನ್ನು ಶೇ 28.53ರಷ್ಟು ಎಂದು ಗುರ್ತಿಸಿ, ಶೇ 5ರಷ್ಟು ಮೀಸಲಾತಿ ಒದಗಿಸಲಾಗಿದೆ.

‘ಡಿ’ ಪ್ರವರ್ಗದಲ್ಲಿ ಸ್ಪೃಶ್ಯ ಜಾತಿಗಳು ಶೇ 26.97ರಷ್ಟಿದ್ದು, ಅವುಗಳಿಗೆ ಶೇ 4ರಷ್ಟು ಮೀಸಲಾತಿ ಕಲ್ಪಿಸಲಾಗಿದೆ. ಆಶ್ಚರ್ಯವೆಂದರೆ, ಆದಿ ಕರ್ನಾಟಕ, ಆದಿ ದ್ರಾವಿಡ ಮತ್ತು ಆದಿ ಆಂಧ್ರರ ಜನಸಂಖ್ಯೆ ಶೇ 4.52ರಷ್ಟು ಎಂದು ಪರಿಗಣಿಸಿ, ‘ಇ’ ಪ್ರವರ್ಗದಲ್ಲಿ ಗುರ್ತಿಸಲಾಗಿರುವ ಅವರಿಗೆ ಶೇ 1ರಷ್ಟು ಮೀಸಲಾತಿ ನೀಡಲಾಗಿದೆ. ಪ್ರವರ್ಗ ‘ಬಿ’ ಮತ್ತು ‘ಸಿ’ನಲ್ಲಿ ಇರುವ ಜಾತಿಗಳೇ ಇಲ್ಲಿ ಆದಿ ಕರ್ನಾಟಕ, ಆದಿ ದ್ರಾವಿಡ ಮತ್ತು ಆದಿ ಆಂಧ್ರ ಆಗಿರುವುದರಿಂದ ಸದರಿ ಜಾತಿಗಳು ತಮ್ಮ ಮೂಲ ಜಾತಿ ಮತ್ತು ಆದಿ ಕರ್ನಾಟಕ, ಆದಿ ದ್ರಾವಿಡ ಮತ್ತು ಆದಿ ಆಂಧ್ರ– ಎರಡೂ ಕಡೆ ಮೀಸಲಾತಿ ಪಡೆಯುವ ಸಾಧ್ಯತೆಯಿದೆ; ಅವುಗಳಿಗೆ ಮೀಸಲಾತಿ ಪ್ರಮಾಣವೂ ಹೆಚ್ಚಲಿದೆ.

ಪ್ರವರ್ಗ ‘ಇ’ ಅನ್ನು ಸೃಷ್ಟಿಸಿರುವುದು ಅಷ್ಟೇನೂ ಸಮರ್ಥನೀಯ ಎನಿಸುವುದಿಲ್ಲ. ಹಾಗೆ ನೋಡಿದರೆ, ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರಗಳು ನಿರ್ದಿಷ್ಟವಾಗಿ ಜಾತಿಗಳೇ ಅಲ್ಲ. ಅವು ಗುಂಪುಗಳಷ್ಟೇ. ಇದಕ್ಕೆ ಬದಲಾಗಿ ಪ್ರವರ್ಗ ‘ಎ’ನಲ್ಲಿರುವ, ಈವರೆಗೂ ಪ್ರಾತಿನಿಧ್ಯವನ್ನೇ ಪಡೆಯದ ಅಲೆಮಾರಿ ಜಾತಿಗಳಿಗೆ ಶೇ 1ರಷ್ಟು ಮೀಸಲಾತಿ ಹೆಚ್ಚಿಸಬಹುದಿತ್ತು.

ಗಮನಿಸಲೇಬೇಕಾದ ಬಹುಮುಖ್ಯವಾದ ಮತ್ತೊಂದು ಸಂಗತಿ, ಬೇಡ ಜಂಗಮ/ ಬುಡ್ಗ ಜಂಗಮದ ಸಮಸ್ಯೆ. ವರದಿಯ 130ನೇ ಪುಟದಲ್ಲಿ ಇದನ್ನು ಚರ್ಚಿಸಲಾಗಿದೆ. ವೀರಶೈವರು ಬೇಡ/ ಬುಡ್ಗ ಜಂಗಮ ಪ್ರಮಾಣ ಪತ್ರ ಪಡೆಯುತ್ತಿದ್ದಾರೆ ಎನ್ನುವ ಕಾರಣಕ್ಕೆ ಬೇಡ/ ಬುಡ್ಗ ಜಂಗಮರ ಜನಸಂಖ್ಯೆ ಅತ್ಯಧಿಕವಾಗಿದೆ ಎಂದು, ಇವರ ಜನಸಂಖ್ಯೆಯನ್ನು 3,22,049 ಇದ್ದುದನ್ನು 1,44,387ಕ್ಕೆ ಮಾತ್ರ ಗಣನೆಗೆ ತೆಗೆದುಕೊಂಡಿದ್ದಾರೆ. ಯಾವ ಮಾನದಂಡ ಅನುಸರಿಸಿ ಈ ಬದಲಾವಣೆ ಮಾಡಲಾಗಿದೆಯೋ ಗೊತ್ತಿಲ್ಲ. ಆದರೆ, ಅಸಲಿ ಬೇಡ/ ಬುಡ್ಗ ಜಂಗಮರ ಜನಸಂಖ್ಯೆ ಇರುವುದು ಬರೀ ಕೆಲವು ಸಾವಿರಗಳಷ್ಟೇ. ಮಿಕ್ಕಂತೆ, ಇಲ್ಲಿ ಇರುವವರು ನಕಲಿ ಸರ್ಟಿಫಿಕೇಟ್ ಪಡೆದ ವೀರಶೈವರೇ. ಹಾಗಾಗಿ, ಇಷ್ಟು ದೊಡ್ಡ ಪ್ರಮಾಣದ ವೀರಶೈವರನ್ನು ಬೇರ್ಪಡಿಸದೆ ಬೇಡ/ ಬುಡ್ಗ ಜಂಗಮರನ್ನು ಪ್ರವರ್ಗ ‘ಎ’ಗೆ ಹಾಕಿದರೆ, ಅಲ್ಲಿರುವ ಬರೀ ನೂರು, ಸಾವಿರಗಳ ಪ್ರಮಾಣದ ಸೂಕ್ಷ್ಮ ಅತಿಸೂಕ್ಷ್ಮ ತಬ್ಬಲಿ ಸಮುದಾಯಗಳ ಗತಿ ಏನಾಗಬೇಕು? ಕೇವಲ ಸಾವಿರಗಳಷ್ಟಿರುವ ಅಸಲಿ ಬೇಡ/ ಬುಡ್ಗ ಜಂಗಮರನ್ನಷ್ಟೇ ಈ ಗುಂಪಿಗೆ ಹಾಕಿದ್ದರೆ ತೊಂದರೆ ಇರಲಿಲ್ಲ.

ಮೀಸಲಾತಿ ನೀಡುವಾಗ ಜಾತಿಗಳ ಜನಸಂಖ್ಯೆಗೆ ಅನುಗುಣವಾಗಿ ನೀಡಬಹುದೇನೊ. ಆದರೆ, ಒಳ ಮೀಸಲಾತಿ ನೀಡುವಾಗಲೂ ಜಾತಿ ಜನಸಂಖ್ಯೆಯನ್ನೇ ಪರಿಗಣಿಸಬೇಕೇ ಎನ್ನುವ ಬಹು ಮುಖ್ಯವಾದ ಪ್ರಶ್ನೆಯನ್ನೂ ನಾವಿಲ್ಲಿ ಕೇಳಿಕೊಳ್ಳಬೇಕು. ಒಳ ಮೀಸಲಾತಿ ಸಂದರ್ಭದಲ್ಲಿ ನಾವು ಪ್ರಮುಖವಾಗಿ ನೋಡಬೇಕಾದುದು ಜಾತಿ ಪ್ರಾತಿನಿಧ್ಯವನ್ನು ಅಲ್ಲವೇ?

ಏನೆಲ್ಲ ಗೊಂದಲಗಳ ನಂತರ ಪರಿಶಿಷ್ಟ ಜಾತಿಯ ಮೀಸಲಾತಿ ಪ್ರಮಾಣವನ್ನು ಶೇ 15ರಿಂದ 17ಕ್ಕೆ ಏರಿಸಲಾಗಿದೆ. ಬಿಹಾರದಲ್ಲಿ ಪರಿಶಿಷ್ಟ ಜಾತಿಗೆ ಮೀಸಲಾತಿಯನ್ನು 15ರಿಂದ 20ಕ್ಕೆ ಏರಿಸಿದ ಪ್ರಕರಣ ಈಗಾಗಲೇ ಸುಪ್ರೀಂ ಕೋರ್ಟಿನ ಮುಂದಿದೆ. ಅದೇ ರೀತಿ, ರಾಜಸ್ಥಾನ ಮತ್ತು ಮರಾಠ ಪ್ರಕರಣದಲ್ಲೂ ಸುಪ್ರೀಂ ಕೋರ್ಟ್, ಶೇ 17ರಷ್ಟು ಮೀಸಲಾತಿ ಏರಿಸಲು ಇನ್ನೂ ಒಪ್ಪಿಲ್ಲ.

ಕರ್ನಾಟಕದಲ್ಲಿ ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿ ಆಗಿದ್ದಾಗ– ಪರಿಶಿಷ್ಟ ಜಾತಿಗೆ ಶೇ 15ರಿಂದ 17ಕ್ಕೆ ಮೀಸಲಾತಿ ಹೆಚ್ಚಿಸಿದ್ದು ಮತ್ತು ಪರಿಶಿಷ್ಟ ಪಂಗಡಕ್ಕೆ ಶೇ 3ರಿಂದ 7ಕ್ಕೆ ಏರಿಸಿದ್ದನ್ನು ಅವರದೇ ಪಕ್ಷದ ಕೇಂದ್ರ ಸರ್ಕಾರಕ್ಕೆ, ಸಂವಿಧಾನದ 9ನೇ ಶೆಡ್ಯೂಲ್ ಅನ್ವಯ ಪರಿಗಣಿಸಬೇಕೆಂದು 2023ರ ಮಾರ್ಚ್ 24ರಂದು ಕಳುಹಿಸಿದ ಪ್ರಸ್ತಾವ ಇನ್ನೂ ದೂಳು ತಿನ್ನುತ್ತಿದೆ. ಈಚೆಗೆ, ಇದೇ ಶೇ 15 ಮತ್ತು ಶೇ 17ರ ಗೊಂದಲದ ಕುರಿತ ಪ್ರಕರಣವೊಂದು ಕೆಎಟಿಯಿಂದ ಹೈಕೋರ್ಟ್‌ಗೆ ಅಪೀಲು ಹೋಗಿ ತಡೆಯಾಜ್ಞೆ ಪಡೆದು ಕುಂತಿದೆ! ಈ ಎಲ್ಲಾ ಕಾನೂನಿನ ತೊಡಕುಗಳ ಹಿನ್ನೆಲೆಯಲ್ಲಿ ಸದರಿ ವರದಿಯನ್ನು ಜಾರಿಗೆ ತರಲು ಸಾಧ್ಯವೆ? ಶೇ 17ಕ್ಕೆ ಮೀಸಲಾತಿಯನ್ನು ಏರಿಸುವಾಗ ನ್ಯಾಯಮೂರ್ತಿಗಳು ಇಷ್ಟೆಲ್ಲ ಕಾನೂನಾತ್ಮಕ ಅಡ್ಡಿ ಆತಂಕಗಳ ಕುರಿತು ಅಗತ್ಯವಾಗಿ ಸಮಾಲೋಚನೆ ನಡೆಸಬೇಕಿತ್ತಲ್ಲವೆ?

ಶೇ 50ರಷ್ಟು ಮೀಸಲಾತಿ ಮಿತಿ ಮೀರಿದ ಅನೇಕ ರಾಜ್ಯಗಳು, ಸುಪ್ರೀಂ ಕೋರ್ಟಿನ ತೀರ್ಪಿಗಾಗಿ ಕಾಯುತ್ತಿವೆ. ಆದರೆ, ತೆಲಂಗಾಣದ ಒಳ ಮೀಸಲಾತಿ ವರದಿ ಮಾತ್ರ, ದೇಶದಲ್ಲೇ ಮೊಟ್ಟಮೊದಲು ಜಾರಿಗೊಂಡ ಒಳ ಮೀಸಲಾತಿ ವರದಿಯಾಗಿ ಅನುಷ್ಠಾನಕ್ಕೆ ಬಂದಿದೆ. ಅದಕ್ಕೆ ಪ್ರಮುಖ ಕಾರಣ, ಅವರು ಕಾನೂನಾತ್ಮಕ ಅರಿವಿನಿಂದ ಶೇ 50ರ ಮಿತಿ ಮೀರದಿರುವುದು.

ನಮ್ಮಲ್ಲೂ ಸದರಿ ವರದಿಯನ್ನು ಶೇ 15ಕ್ಕೆ ಸೀಮಿತಗೊಳಿಸಿ ಒಳ ಮೀಸಲಾತಿ ನೀಡಿದ್ದರೆ ಅನುಷ್ಠಾನದ ಸಾಧ್ಯತೆ ಇತ್ತು. ಅಂತೆಯೇ, ಮುಂದೆಂದಾದರೂ ನ್ಯಾಯಾಲಯ ಶೇ 17ಕ್ಕೆ ಮೀಸಲಾತಿಯನ್ನು ಹೆಚ್ಚಿಸಿದ ಪಕ್ಷದಲ್ಲಿ, ನಾವೂ ಆ ಸಂದರ್ಭದಲ್ಲಿ ನಮ್ಮ ಆಶಯವನ್ನು ತಿದ್ದುಪಡಿ ಮಾಡಿಕೊಳ್ಳಬಹುದಿತ್ತು.



ವಾಚಕರ ವಾಣಿ

‘ಸುಶ್ರೀ’ ಎಂದರೆ ಏನರ್ಥ?

ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಚಾಲನೆ ನೀಡುವ ಕಾರ್ಯಕ್ರಮದ ಜಾಹೀರಾತಿನಲ್ಲಿ ಘನ ಉಪಸ್ಥಿತರ ಪೈಕಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರ ಹೆಸರಿನ ಮುಂದೆ ಹೊಸದಾಗಿ ‘ಸುಶ್ರೀ’ ಎನ್ನುವ ಉಪಾಧಿ ಇತ್ತು. ಈ ತನಕ ಮಹಿಳೆಯರ ಹೆಸರಿನ ಮುಂದೆ ಕುಮಾರಿ/ ಶ್ರೀಮತಿ ಎಂದು ಬಳಸುವುದು ವಾಡಿಕೆಯಾಗಿತ್ತು. ‘ಸುಶ್ರೀ’ ಎಂಬುದು ‘ಸುಮಂಗಲಿಶ್ರೀ’ ಪದದ ಸಂಕ್ಷಿಪ್ತ ರೂಪ ಆಗಿರಬಹುದೇ ಎಂಬ ಸಂದೇಹ– ಗೊಂದಲ ಕಾಡುತ್ತಿದೆ. ಬಲ್ಲವರು ಈ ಬಗ್ಗೆ ಬೆಳಕು ಚೆಲ್ಲುವರೆ?

ಈರಪ್ಪ ಎಂ. ಕಂಬಳಿ, ಬೆಂಗಳೂರು

ಸ್ತ್ರೀರೋಗ ತಜ್ಞರ ವರ್ಗಾವಣೆ ಬೇಡ

ಮಕ್ಕಳ ಜನನ ಪ್ರಮಾಣ ಕಡಿಮೆಯಾಗುತ್ತಿರುವ ಆಧಾರದ ಮೇಲೆ ಗ್ರಾಮೀಣ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿರುವ ಸ್ತ್ರೀರೋಗ ತಜ್ಞರನ್ನು ತಾಲ್ಲೂಕು ಆಸ್ಪತ್ರೆಗಳಿಗೆ ವರ್ಗಾಯಿಸಲು ಸರ್ಕಾರ ಮುಂದಾಗಿದೆ. ಯಾವುದೇ ಯೋಜನೆ ಅಥವಾ ಸೇವೆಯ ವೆಚ್ಚ ಕಡಿತಗೊಳಿಸುವ ಆಲೋಚನೆ ಸ್ವಾಗತಾರ್ಹ. ಆದರೆ, ಕೆಲವು ವಿಷಯಗಳಲ್ಲಿ ವೆಚ್ಚಕ್ಕಿಂತ ಯೋಜನೆ ಅಥವಾ ಸೇವೆಯ ಕೊರತೆಯಿಂದ ಆಗುವ ದುಷ್ಪರಿಣಾಮವನ್ನು ಊಹಿಸಿ ಲೆಕ್ಕ ಹಾಕದೆ ವೆಚ್ಚ ಮಾಡಬೇಕಾಗುತ್ತದೆ.

ದುಬಾರಿ ಜೀವನಮಟ್ಟ ಇತ್ಯಾದಿ ಕಾರಣಗಳಿಂದ ಒಂದೇ ಮಗು ಸಾಕು ಎನ್ನುವ ಮನಃಸ್ಥಿತಿ; ಹೆಚ್ಚಿನ ವೈದ್ಯಕೀಯ ಸೌಲಭ್ಯ ಬಯಸಿ ಹೆರಿಗೆಗಾಗಿ ನಗರ ಪ್ರದೇಶದ ಆಸ್ಪತ್ರೆಗಳನ್ನು ಗರ್ಭಿಣಿಯ ಕುಟುಂಬದವರು ಆಯ್ಕೆ ಮಾಡಿಕೊಳ್ಳುತ್ತಾರೆ. ಇದರಿಂದ ಗ್ರಾಮೀಣ ಪ್ರದೇಶದ ಆಸ್ಪತ್ರೆಗಳಲ್ಲಿ ಮಕ್ಕಳ ಜನನ ಪ್ರಮಾಣ ಸಹಜವಾಗಿ ಕಡಿಮೆಯಾಗುತ್ತದೆ. ಆದರೆ, ಸ್ತ್ರೀ ರೋಗಗಳಿಗೆ ಗ್ರಾಮೀಣ ಆಸ್ಪತ್ರೆಗಳಲ್ಲಿನ ಸ್ತ್ರೀರೋಗ ತಜ್ಞರನ್ನೇ ಮಹಿಳೆಯರು ಅವಲಂಬಿಸಿರುವುದು ಹೆಚ್ಚು. ಹಾಗಾಗಿ, ಸ್ತ್ರೀರೋಗ ತಜ್ಞರ ವರ್ಗಾವಣೆ ಆಲೋಚನೆಯನ್ನು ಸರ್ಕಾರ ಪುನರ್ ಪರಿಶೀಲಿಸಬೇಕಿದೆ.

ತೇಜಸ್ವಿ ವಿ. ಪಟೇಲ್, ಕಾರಿಗನೂರು

‘ಗ್ಯಾರಂಟಿ’ ಗುಟ್ಟು ಟ್ರಂಪ್‌ಗೆ ತಿಳಿಯಿತೇ?

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ, ಭಾರತದ ಕೆಲವು ರಾಜ್ಯಗಳಲ್ಲಿ ಜಾರಿಯಲ್ಲಿರುವ ಉಚಿತ ಸಾರಿಗೆ ಯೋಜನೆ ಬಗ್ಗೆ ಗೊತ್ತಾಗಿರಬಹುದು. ಸರ್ಕಾರವೇ ಪ್ರಜೆಗಳ ಖಾತೆಗೆ ಹಣ ಹಾಕುತ್ತಿರುವುದನ್ನು ಟ್ರಂಪ್ ಪತ್ತೆ ಹಚ್ಚಿರಬಹುದು. ಮನೆಗಳಿಗೆಲ್ಲಾ ಪುಕ್ಕಟೆ ವಿದ್ಯುತ್ ನೀಡುತ್ತಿರುವ ಮಾಹಿತಿಯನ್ನು ತರಿಸಿಕೊಂಡಿರಬಹುದು.

ಐ.ಟಿ, ಇ.ಡಿ, ಲೋಕಾಯುಕ್ತ ದಾಳಿ ವೇಳೆ ಅಟೆಂಡರ್‌ನಿಂದ ಹಿಡಿದು ಕಮಿಷನರ್ ಹಂತದ ಅಧಿಕಾರಿಗಳ ಮನೆಗಳಲ್ಲಿ ಕೋಟಿ ಕೋಟಿ ಅಕ್ರಮ ಆಸ್ತಿ ಪತ್ತೆಯಾಗುತ್ತಿರುವ ಸಂಗತಿಯನ್ನೂ ಟ್ರಂಪ್ ಸಂಗ್ರಹಿಸಿರಬಹುದು. ಅಗತ್ಯ ವಸ್ತುಗಳ ಬೆಲೆ ವಿಪರೀತ ಹೆಚ್ಚಿಸುತ್ತಿದ್ದರೂ ನಾಗರಿಕರು ಪ್ರತಿರೋಧ ವ್ಯಕ್ತಪಡಿಸದೆ ಆರಾಮವಾಗಿರುವುದನ್ನೂ ಶ್ವೇತಭವನ ಗಮನಿಸಿರಬಹುದು. ಹಾಗಾಗಿ, ಭಾರತ ಶ್ರೀಮಂತ ರಾಷ್ಟ್ರವೆಂದು ಹೊಟ್ಟೆಕಿಚ್ಚು ಪಟ್ಟು ನಮ್ಮ ಸರಕುಗಳ ಮೇಲೆ ಸುಂಕ ಹೆಚ್ಚಿಸಿರಬಹುದೇನೋ!

ಜೆ.ಬಿ. ಮಂಜುನಾಥ, ಪಾಂಡವಪುರ

ಕನ್ನಡ ಶಿಕ್ಷಕರ ಭವಿಷ್ಯ ಅಯೋಮಯ

ಕರ್ನಾಟಕದಲ್ಲಿ ದ್ವಿಭಾಷಾ ನೀತಿ ಜಾರಿಗೆ ತಯಾರಿ ನಡೆಸುತ್ತಿರುವುದು ಸ್ವಾಗತಾರ್ಹ. ಆದರೆ, ನನಗೆ ಕೆಲವು ಪ್ರಶ್ನೆಗಳು ಕಾಡುತ್ತಿವೆ. ಕನ್ನಡ ಮಾಧ್ಯಮದ ಮಕ್ಕಳು ಪ್ರಥಮ ಭಾಷೆಯಾಗಿ ಕನ್ನಡ ಮತ್ತು ದ್ವಿತೀಯ ಭಾಷೆಯಾಗಿ ಇಂಗ್ಲಿಷ್ ಓದುತ್ತಾರೆ. ಹಾಗೆಯೇ ಇಂಗ್ಲಿಷ್ ಮಾಧ್ಯಮದ ಮಕ್ಕಳು ಮೊದಲ ಭಾಷೆಯಾಗಿ ಇಂಗ್ಲಿಷ್ ಅಥವಾ ಕನ್ನಡ ಭಾಷೆ ಓದುತ್ತಾರೆ. ದ್ವಿತೀಯ ಭಾಷೆಯಾಗಿ ಕನ್ನಡ ಅಥವಾ ಇಂಗ್ಲಿಷ್ ಓದುತ್ತಾರೆ.

ಆದರೆ, ಕನ್ನಡೇತರ ವಿದ್ಯಾರ್ಥಿಗಳಾದ ಗಡಿಭಾಗದ ಮರಾಠಿ, ತಮಿಳು, ತೆಲುಗು, ಮಲಯಾಳ ಮತ್ತು ಉರ್ದು ಮಾಧ್ಯಮದ ವಿದ್ಯಾರ್ಥಿಗಳು ಪ್ರಥಮ ಭಾಷೆಯಾಗಿ ತಮ್ಮ ಮಾತೃಭಾಷೆಯಾದ ಮರಾಠಿ, ತಮಿಳು, ತೆಲುಗು, ಮಲಯಾಳ, ಉರ್ದು ಓದಿದರೆ; ದ್ವಿತೀಯ ಭಾಷೆಯಾಗಿ ಇಂಗ್ಲಿಷ್ ಓದುತ್ತಾರಲ್ಲವೇ? ರಾಜ್ಯದಲ್ಲಿ 1986ರಿಂದ ಕನ್ನಡ ಶಕ್ತಿ ಜಾರಿಗೆ ಬಂದಾಗಿನಿಂದ ಕನ್ನಡವನ್ನು ಅವರು ಕಡ್ಡಾಯವಾಗಿ ಓದುತ್ತಿದ್ದಾರೆ. ಈಗ ದ್ವಿಭಾಷಾ ನೀತಿ ಜಾರಿಯಾದರೆ ಅವರು ಕನ್ನಡ ಓದುವುದು ಹೇಗೆ? ಅಥವಾ ಅವರಿಗೆ ಕನ್ನಡ ಕಲಿಸುವುದರ ಅವಶ್ಯಕತೆ ಇಲ್ಲವೇ? ಕನ್ನಡೇತರರಿಗೆ ಕನ್ನಡ ಕಡ್ಡಾಯವಾಗದಿದ್ದರೆ ರಾಜ್ಯದಲ್ಲಿ ದ್ವಿತೀಯ ಭಾಷೆಯಾಗಿ ಕನ್ನಡ ಬೋಧಿಸುವ ಶಿಕ್ಷಕರ ಮುಂದಿನ ಭವಿಷ್ಯವೇನು?

ಜೆ.ಪಿ. ಅಗಸಿಮನಿ, ಬೆಳಗಾವಿ

ಆಯೋಗದ ಆತುರ: ಜನರಿಗೆ ಸೋಜಿಗ

ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರು ಕೇಂದ್ರ ಕ್ಷೇತ್ರದ ಮಹದೇವಪುರದಲ್ಲಿ ಮತ ಕಳ್ಳತನ ನಡೆದಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಚುನಾವಣಾ ಆಯೋಗದ ಅಧಿಕಾರಿಗಳು ತೋರುತ್ತಿರುವ ಆತುರ, ಮತದಾರರಲ್ಲಿ ಆಯೋಗದ ಕುರಿತು ಸಂಶಯ ಮೂಡುವಂತೆ ಮಾಡಿದೆ. ಸಾಂವಿಧಾನಿಕ ಸಂಸ್ಥೆಯಾದ ಆಯೋಗವು ಜನತಾ ಪ್ರಾತಿನಿಧ್ಯ ಕಾಯ್ದೆ ಮತ್ತು ಸಂವಿಧಾನದ ನಿಬಂಧನೆಗಳ ಅನುಸಾರ ನಡೆದುಕೊಳ್ಳಬೇಕು. ವಿರೋಧ ಪಕ್ಷಗಳು ಈ ಕುರಿತು ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಸೂಕ್ತ ದಾಖಲೆ ಸಮೇತ ಪ್ರತಿಕ್ರಿಯಿಸುವುದು ಆಯೋಗದ ಕರ್ತವ್ಯ. ಅದರ ಬದಲು ರಾಜಕೀಯ ಪಕ್ಷಗಳ ರೀತಿ ಪ್ರತಿ ಆರೋಪಕ್ಕೂ ಸಾಮಾಜಿಕ ಮಾಧ್ಯಮಗಳ ಮೂಲಕ ಉತ್ತರಿಸುವ ಅನಿವಾರ್ಯಕ್ಕೆ ಒಳಗಾಗುವುದರ ಔಚಿತ್ಯವಾದರೂ ಏನಿದೆ?

ರಾಜು ಬಜಂತ್ರಿ, ಅಥಣಿ

ಚಾಟಿ

ವಂಶಪಾರಂಪರ್ಯ ರಾಜಕಾರಣ ಕಂಟಕ

ಚುನಾವಣೆಗಳು ಈಗ ನಡೆಯುತ್ತಿರುವ ರೀತಿ ಬದಲಾಗದೆ ಪ್ರಾಮಾಣಿಕರು ರಾಜಕಾರಣ ಮಾಡಲು ಸಾಧ್ಯವಿಲ್ಲ. ಹಾಗೆಯೇ ವಂಶಪಾರಂಪರ್ಯ ರಾಜಕಾರಣವೂ ತೊಲಗಬೇಕು. ಪಕ್ಷಗಳು ಸದಸ್ಯರ ಮತ್ತು ಸಾರ್ವಜನಿಕರ ಹಿಡಿತದಲ್ಲಿ ಇರಬೇಕೇ ಹೊರತು ವ್ಯಕ್ತಿ ಅಥವಾ ಕುಟುಂಬಗಳ ಹಿಡಿತದಲ್ಲಿ ಅಲ್ಲ.



ರವಿ ಕೃಷ್ಣಾರೆಡ್ಡಿ, ಗೌರವಾಧ್ಯಕ್ಷ, ಕೆಆರ್‌ಎಸ್ ರಾಜ್ಯ ಘಟಕ

ಕಿಡಿನುಡಿ

ಕೇಂದ್ರಕ್ಕೆ ರಾಜ್ಯದ ತೆರಿಗೆ ಪಾಲು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದ್ದರೂ ರಾಜ್ಯಕ್ಕೆ ಬರುವ ಆದಾಯದಲ್ಲಿ ಮಾತ್ರ ಕಡಿಮೆಯಾಗುತ್ತಿದೆ. ಮೆಟ್ರೊ ಹಳದಿ ಮಾರ್ಗ ಇದಕ್ಕೆ ಸ್ಪಷ್ಟ ಉದಾಹರಣೆಯಾಗಿದೆ.



ಪ್ರಿಯಾಂಕ್ ಖರ್ಗೆ, ಐ.ಟಿ–ಬಿಟಿ ಸಚಿವ

25 ವರ್ಷಗಳ ಹಿಂದೆ

ಶುಕ್ರವಾರ, 11-8-2000

● **ದುಷ್ಕರ್ಮಿಯ ಗುಂಡೇಟಿನಿಂದ ಬೇತಮಂಗಲ ಶಾಸಕರಿಗೆ ಗಾಯ**

ಭುವನಹಳ್ಳಿ (ಬಂಗಾರಪೇಟೆ ತಾಲ್ಲೂಕು), ಆಗಸ್ಟ್ 10– ಬೇತಮಂಗಲ ಕ್ಷೇತ್ರದ ಕಾಂಗ್ರೆಸ್ ಶಾಸಕ ಸಿ. ವೆಂಕಟೇಶಪ್ಪ ಅವರ ಮೇಲೆ ಅವರ ತೋಟದಲ್ಲೇ ಅಪರಿಚಿತ ದುಷ್ಕರ್ಮಿಯೊಬ್ಬ ಗುಂಡು ಹಾರಿಸಿ ತೀವ್ರವಾಗಿ ಗಾಯಗೊಳಿಸಿದ್ದಾನೆ.

ಇಂದು ಬೆಳಿಗ್ಗೆ 6 ಗಂಟೆ ಸಮಯದಲ್ಲಿ ಭುವನಹಳ್ಳಿಯ ತಮ್ಮ ತೋಟದಲ್ಲಿ ವಾಯುವಿಹಾರಕ್ಕೆ ಹೋಗಿದ್ದ ವೆಂಕಟೇಶಪ್ಪ ಅವರ ಮೇಲೆ ಅಪರಿಚಿತ ವ್ಯಕ್ತಿಯೊಬ್ಬ, ಮಜ್ಜಲ್ ಲೋಡ್ ಬಂದೂಕಿನಿಂದ ಬೇಲಿಯ ಮರೆಯಿಂದ ಗುಂಡು ಹಾರಿಸಿದ್ದರಿಂದ ಗುಂಡು ಎಡತೊಡೆಗೆ ಬಿದ್ದು ತೂರಿ ಬಲ ತೊಡೆಯನ್ನು ಹೊಕ್ಕಿದೆ.

● **ಕಾಶ್ಮೀರ: ಉಗ್ರಗಾಮಿಗಳ ಬಾಂಬ್ ಸ್ಫೋಟಕ್ಕೆ 12 ಬಲಿ**

ಶ್ರೀನಗರ, ಆಗಸ್ಟ್ 10 (ಪಿಟಿಐ)– ಕಾಶ್ಮೀರದಲ್ಲಿ ಹಿಜ್‌ಬುಲ್ ಮುಜಾಹಿದ್ದೀನ್ ಕದನ ವಿರಾಮ ವಾಪಸು ಪಡೆದ 48 ಗಂಟೆಯಲ್ಲೇ ಕೊಠಿಬಾಗ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸಂಭವಿಸಿದ ಕಾರ್ ಬಾಂಬ್ ಸ್ಫೋಟದಲ್ಲಿ 12 ಮಂದಿ ಸತ್ತಿದ್ದು, 40 ಮಂದಿ ಗಾಯಗೊಂಡಿದ್ದಾರೆ.

75 ವರ್ಷಗಳ ಹಿಂದೆ

ಶುಕ್ರವಾರ, 11-8-1950

● **ಭಟ್ಕಲ್ ಬಳಿ ನೌಕಾ ನಿರ್ಮಾಣ**

ಬೊಂಬಾಯಿ, ಆಗಸ್ಟ್ 10– ಉತ್ತರ ಕೆನರಾ ಜಿಲ್ಲೆಯ ಭಟ್ಕಲ್ ಬಂದರಿನ ಬಳಿ, ಒಂದು ನೌಕಾ ಕೇಂದ್ರವನ್ನು ಪ್ರಾರಂಭಿಸಲು ಬೊಂಬಾಯಿ ಸರ್ಕಾರದವರು ಐದು ಚದರ ಮೈಲಿ ಭೂಪ್ರದೇಶವನ್ನು ವಶಪಡಿಸಿಕೊಳ್ಳಲು ನಿರ್ಧರಿಸಿದ್ದಾರೆ.

ಈ ಬಗ್ಗೆ ಬೊಂಬಾಯಿ ಸರ್ಕಾರದವರು ಭಾರತ ಸರ್ಕಾರದೊಡನೆ ವ್ಯವಹಾರ ನಡೆಸುತ್ತಿದ್ದಾರೆ.

● **ಬೆಲೆ ಹೆಚ್ಚಳಕ್ಕೆ ಕಾರಣ**

ಬೆಂಗಳೂರು, ಆಗಸ್ಟ್ 10– ಆಹಾರ ಪದಾರ್ಥಗಳ ಬೆಲೆ ಹೆಚ್ಚಿಸಿರುವುದಕ್ಕೆ ಆರ್ಥಿಕ ಪರಿಸ್ಥಿತಿಯೇ ಕಾರಣ. ರೈತರಿಂದ ಧಾನ್ಯಗಳನ್ನು ಕೊಳ್ಳುವ ಬೆಲೆಯನ್ನು ಇಳಿಸಿ ಹಣದ ವ್ಯಯವನ್ನು ಕಡಿಮೆ ಮಾಡಬಹುದಾಗಿದ್ದ ಮಾರ್ಗವನ್ನು ಅಧಿಕ ಆಹಾರೋತ್ಪತ್ತಿಗೆ ಧಕ್ಕೆ ಬರಬಾರದೆಂಬ ಕಾರಣದ ಮೇಲೆ ಸರ್ಕಾರ ಅನುಸರಿಸಿರಲಿಲ್ಲ ಎಂದು ಮುಖ್ಯಮಂತ್ರಿ ಕೆ. ಚೆಂಗಲ ರಾಯರೆಡ್ಡಿ ಇಂದು ಸಂಜೆ ತಿಳಿಸಿದರು.

ಚುರುಮುರಿ



ಸು ಫ್ರಮ್ ಸೋ!

● ತುರುವೇಕೆರೆ ಪ್ರಸಾದ್

‘ಅಂತೂ ಇಂತೂ ಪೇಟಾನೇ ಗೆದ್ ಬಿಡ್ತು’ ಎಂದು ಸಿಬಿರೆಬ್ಬಿದ ಗುದ್ಲಿಂಗ ಹರಟೇಕಟ್ಟೇಲಿ!

‘ಪಾಪ! ಮೈಸೂರ್ ಪೇಟ, ಅದನ್ನ ಧರಿಸಿದ ರಾಜ್ರನ್ನ ಸುಮ್ನೆ ವಿವಾದಕ್ ಎಳೀತಾವ್ರೆ ನಮ್ ರಾಜಕೀಯದೋರು’ ಎಂದ ಮಾಲಿಂಗ.

‘ಪೀಠ ಗಟ್ಟಿಯಾಗಿರ್ಬೇಕು ಅಂದ್ರೆ ಇಂಗೆ ಅವಾಗವಾಗ ಅವರಿವರ ಪೇಟನ ಟೋಪಿ ಮಾಡ್ಬೇಕಾಯ್ತದೇ ಕಣ್ಲಾ’ ಎಂದ ಕಲ್ಲೇಶಿ.

‘ಏಯ್, ನಾನು ಯೋಳ್ತಿರೋದು ಆ ಪೇಟ ಅಲ್ಲ, ಅದೇ ಈ ಪ್ರಾಣಿ ಪಕ್ಷಿಗುಳ್ಗೆ ಇಂಸೆ ಆಗ್ದಂಗೆ ನೋಡ್ಕತರಲ್ಲ, ಆ ಪೇಟಾ ಬಗ್ಗೆ. ಅವರು ಜೈನಮಠದಲ್ಲಿದ್ದ ಮಾಧುರಿ ಹೆಸರಿನ ಆನೇನ ಕೊಲ್ಹಾಪುರದಿಂದ ಕಳಿಸಿಬುಟ್ರಲ್ಲ, ಅದ್ನ ಯೋಳಿದ್ದು...’

‘ಕರಿ ಆನೆಗಳಿಗೆ ಅಯ್ಯೋ ಅಂತಾರೆ. ಬಿಳಿ ಆನೆಗಳು ಇಡೀ ದೇಶನೇ ಅಭಯಾರಣ್ಯ ಮಾಡ್ಕಂಡು ಮೇಯ್ತವೆ’.

‘ಆದ್ರೂ ಪೀಠ ಸಂಘರ್ಷ ಬಂದಾಗ ಅವರನ್ನೂ ಸ್ಟೇಟಿಂದ ಸೆಂಟ್ರಲ್ಗೆ ಎತ್ತಂಗಡಿ ಮಾಡಕಿಲ್ವಾ?’

‘ವ್ಹಾ ಕಣ್ಲಾ! ಇಂಗೇ ನಮ್ ಖರ್ಗೆ ಸಾಹೇಬ್ರು ಪೀಠ ಮಿಸ್ ಮಾಡ್ಕಂಡಿದ್ದು. ಇದಕ್ಕೂ ಒಂದು ಇಂಟರ್‌ನಲ್ ಪೇಟಾ (ಪೀಠ ಎಡವಟ್ಟು ತನಿಖಾ ಅಥಾರಿಟಿ) ಮಾಡ್ಬೇಕು’.

‘ಕಮಲ ಪಾಳೆಯದಾಗೆ ಆ ತರ ಪೇಟಾ ವಿಂಗ್ ಚೆನ್ನಾಗೇ ಕೆಲಸ ಮಾಡ್ತಾ ಐತೆ!’

‘ವ್ಹಾ! ಅವರಿಗೆ ಹಸು ಕರು ಅಂದ್ರೆ ಬಾಳಾ ಪ್ರೀತಿ ಅಲ್ವಾ?’

‘ಅವರೂ ಉಲ್ಟಾ ಒಡೆದವ್ರೆ... ಅಂಗ್ ಅಭಿಮಾನ ಇದ್ದಿದ್ರೆ ಧನಕರುನ ಅರ್ಧಕ್ಕೆ ಪೀಠದಿಂದ ಇಳುಸ್ತಿದ್ರೇನ್ಲಾ?’

‘ನೀ ಯೋಳೋದೂ ನಿಜನೇ ಬುಡು! ಜನ–ಧನ ಮೂಲಕ ಕಮಲ ಎಲೆಕ್ಷನ್ನಾಗೆ ಮೋಸ ಮಾಡ್ತೈತೆ ಅಂತ ರಾಹುಲಣ್ಣ ಸಿನಿಮಾ ತೋರ್ಸವ್ರಲ್ಲ?’

‘ಆದ್ರೆ ಇಷ್ಟು ದಿನ ಯಾಕ್ ಲೇಟು?’

‘ಮೇಲಿಂದ ಮೇಲೆ ‘ಸು ಫ್ರಮ್ ಸೋ’ ಬತ್ತಿದ್ರೆ ಬೇರೆ ಕೇಸ್ ಎಲ್ ಮಾಡಕಾಯ್ತದೆ ಅಂತಾವ್ರೆ ಕೈ ಮುಖಂಡ್ರು’.

‘ಸು ಫ್ರಮ್ ಸೋ ಅಂದ್ರೆ?’

‘ಸುರ್ಜೇವಾಲಾ ಫ್ರಂ ಸೋನಿಯಾ’ ಎಂದ ಪರ್ಮೇಶಿ.

ಸಂಗತ

ಭ್ರಷ್ಟರಿಗೆ ಶಿಕ್ಷೆ ಅಪರೂಪವೇಕೆ?

ಲಂಚಗುಳಿಗಳು ಸಿಕ್ಕಿಬೀಳುವುದು ಹಾಗೂ ಅಪಾರ ಪ್ರಮಾಣದ ಅಕ್ರಮ ಹಣ– ಆಸ್ತಿ ಪತ್ತೆಯಾಗುವ ಪ್ರಕರಣಗಳು ಸಾಮಾನ್ಯ. ಆದರೆ, ಶಿಕ್ಷೆ ಆಗುವುದು ವಿರಳ.

● ಸಿದ್ದಯ್ಯ ಹಿರೇಮಠ

ಲಂಚ ಪಡೆದ ಆರೋಪ ಸಾಬೀತಾದ ಕಾರಣ ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಹುತ್ರಿದುರ್ಗ ಹೋಬಳಿಯ ಇಪ್ಪಾಡಿ ಕಂದಾಯ ವೃತ್ತದ ಗ್ರಾಮ ಲೆಕ್ಕಾಧಿಕಾರಿ ಕೆ.ಬಿ. ಲೋಕೇಶ್ ಎನ್ನುವವರಿಗೆ 7ನೇ ಹೆಚ್ಚುವರಿ ಜಿಲ್ಲಾ ಹಾಗೂ ಸೆಷನ್ಸ್ ನ್ಯಾಯಾಲಯವು 4 ವರ್ಷ ಜೈಲು ಶಿಕ್ಷೆ, ₹20 ಸಾವಿರ ದಂಡ (ಆತ ಪಡೆದಿದ್ದು ಅಷ್ಟೇ ಲಂಚ) ವಿಧಿಸಿದೆ.

2021ರಲ್ಲಿ ಲಂಚ ಪಡೆಯುತ್ತಿದ್ದಾಗಲೇ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ಅವರನ್ನು ಬಂಧಿಸಿದ್ದರು. ಲಂಚ ಪಡೆದ ಸರ್ಕಾರಿ ಸಿಬ್ಬಂದಿಗೆ ಶಿಕ್ಷೆ ಆಗುವುದು ಅಪರೂಪ. ಇತ್ತೀಚಿನ ದಿನಗಳಲ್ಲಂತೂ ಭ್ರಷ್ಟರಿಗೆ ಶಿಕ್ಷೆಯಾಗಿರುವ ಇಂಥ ಪ್ರಕರಣಗಳು ಅಪರೂಪದಲ್ಲೇ ಅಪರೂಪ.

ಕಾಮಗಾರಿಯೊಂದರ ಬಿಲ್ ಬಿಡುಗಡೆ ಮಾಡಲು ಗುತ್ತಿಗೆದಾರರೊಬ್ಬರಿಂದ ಲಂಚ ಪಡೆಯುವಾಗ ಲೋಕಾಯುಕ್ತರ ದಾಳಿಯಲ್ಲಿ ಸಿಕ್ಕಿಬಿದ್ದಿದ್ದ ದಾವಣಗೆರೆ ಜಿಲ್ಲೆಯ ಹರಿಹರ ನಗರಸಭೆಯ 5ನೇ ವಾರ್ಡ್ ಸದಸ್ಯರೊಬ್ಬರ ಸದಸ್ಯತ್ವವನ್ನು ಈಚೆಗಷ್ಟೇ ರದ್ದುಪಡಿಸಲಾಗಿದೆ. ಆರೋಪ ಮೇಲ್ನೋಟಕ್ಕೆ ಸಾಬೀತಾಗಿದ್ದರಿಂದ ಪ್ರಾದೇಶಿಕ ಆಯುಕ್ತರು ಕರ್ನಾಟಕ ಪುರಸಭೆಗಳ ಅಧಿನಿಯಮ 1964ರ ಕಲಂ 41(1)ರ ಅಡಿ ಸದಸ್ಯತ್ವ ರದ್ದುಪಡಿಸಿದ್ದಾರೆ. ಲಂಚ ಪಡೆದ ಆರೋಪದ ಪ್ರಕರಣವು ವಿಚಾರಣೆ ಹಂತದಲ್ಲಿದ್ದು, ಶಿಕ್ಷೆಯ ಬಗ್ಗೆ ನ್ಯಾಯಾಲಯದ ಆದೇಶಕ್ಕೆ ಕಾಯಬೇಕು. ಲಂಚ ಮತ್ತು ಅಕ್ರಮ ಆಸ್ತಿ ಗಳಿಕೆ ಪ್ರಕರಣದಲ್ಲಿ ಅಲ್ಲಲ್ಲಿ ಶಿಕ್ಷೆ ಆಗುತ್ತಿದೆಯೇನೋ ಸರಿ. ಆದರೆ, ಅದರ ಪ್ರಮಾಣ ಅತ್ಯಂತ ಕಡಿಮೆ.

ಪೊಲೀಸರು ಎಷ್ಟೇ ಚುರುಕಾದ ತನಿಖೆ ನಡೆಸಿದರೂ ಕೊನೆಗೆ ಸಾಕ್ಷ್ಯಾಧಾರಗಳ ಕೊರತೆ ಅಥವಾ ಸಾಕ್ಷಿಗಳು ತಿರುಗಿ ಬೀಳುತ್ತಿರುವುದರಿಂದ ಭ್ರಷ್ಟರ ಹೆಡೆಮುರಿ ಕಟ್ಟುವುದು ಅಸಾಧ್ಯ ಎಂಬಂತಾಗಿದೆ. ದೂರು ಕೊಟ್ಟವರು, ಆ ಸಂದರ್ಭಕ್ಕೆ ಸಾಕ್ಷಿಯಾಗಿ ಹೇಳಿಕೆ ನೀಡಿ ಸಹಿ ಮಾಡಿದ ಇತರ ಸಿಬ್ಬಂದಿ ಹಾಗೂ ಪಂಚನಾಮೆ ವೇಳೆ ಇದ್ದ ಪಂಚರು ಸೇರಿ ಬಹುತೇಕರು ಆರೋಪಿ ಒಡ್ಡುವ ಆಮಿಷಗಳಿಗೆ ಬಲಿಯಾಗುವ ಮೂಲಕ ತಿರುಗಿ ಬೀಳುವ ಸಾಧ್ಯತೆ ಇರುವುದರಿಂದ– ಲಂಚಕ್ಕೂ, ಲಂಚ ಪಡೆಯುವ ಭ್ರಷ್ಟರಿಗೂ ಕಡಿವಾಣವೇ ಇಲ್ಲದಂತೆ ಆಗಿದೆ.



ಭ್ರಷ್ಟರಿಗೆ ಶಿಕ್ಷೆ ಆದ ನಿದರ್ಶನಗಳು ಕಣ್ಣೆದುರು ಇಲ್ಲದಿದ್ದರೆ, ‘ನಮ್ಮನ್ನು ಯಾರೇನು ಮಾಡಿಯಾರು?’ ಎಂಬ ಅಸಡ್ಡೆಯೂ, ಅಹಂಕಾರವೂ ಭ್ರಷ್ಟರಲ್ಲಿ ಮನೆಮಾಡಲು ಕಾರಣವಾಗುತ್ತಿದೆ.

ರಾಜಾರೋಷವಾಗಿ ಲಂಚ ಪಡೆದು ಸಿಕ್ಕಿಹಾಕಿಕೊಂಡವರು ಮುಂದೆಯೂ ಸಮಾಜದ ಪ್ರೀತ್ಯಾದರಗಳನ್ನು ಗಳಿಸುತ್ತ ಸಾಗಿರುವುದು ನೈತಿಕತೆಯ ಅಧಃಪತನದ ಸಂಕೇತವೂ, ಭ್ರಷ್ಟಾಚಾರವನ್ನು ಎಲ್ಲರೂ ಸಹಿಸಿಕೊಳ್ಳುತ್ತಿರುವುದರ ದ್ಯೋತಕ ಎಂಬಂತಾಗಿದೆ. ಈ ಬೆಳವಣಿಗೆ, ನೈತಿಕತೆಯ ಗಂಧ–ಗಾಳಿಯ ಸಂಪರ್ಕವೇ ಇಲ್ಲವೇನೋ ಎಂಬಂತೆ ಸಮಾಜ ಬದಲಾಗಿರುವುದನ್ನು ಸ್ಪಷ್ಟಪಡಿಸುತ್ತದೆ.

ಇತ್ತೀಚಿನ ದಿನಗಳಲ್ಲಿ ಆದಾಯಕ್ಕಿಂತ ಅಧಿಕ ಆಸ್ತಿ ಸಂಪಾದಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯದ ವಿವಿಧೆಡೆ ತಾಲ್ಲೂಕು, ಜಿಲ್ಲಾಮಟ್ಟದ ಹಿರಿಯ, ಕಿರಿಯ ಅಧಿಕಾರಿಗಳ ಮನೆ, ಕಚೇರಿಗಳ ಮೇಲೆ ಬೆಳ್ಳಂಬೆಳಗ್ಗೆ ದಿಢೀರ್ ದಾಳಿ ಮಾಡುತ್ತಿರುವ ಲೋಕಾಯುಕ್ತ ಸಿಬ್ಬಂದಿ, ಭ್ರಷ್ಟರ ಅಕ್ರಮವನ್ನು ಬಯಲಿಗೆ ಎಳೆಯುತ್ತಿದ್ದಾರೆ ಹಾಗೂ ಅವರು ಸಂಪಾದಿಸಿರುವ ಅಪಾರ ಆಸ್ತಿಯ ವಿವರವನ್ನೂ ಬಹಿರಂಗಪಡಿಸುತ್ತಿದ್ದಾರೆ. ಜವಾನ ಹುದ್ದೆಯಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡಿ ನಿವೃತ್ತರಾಗಿರುವ ಕೊಪ್ಪಳ ಜಿಲ್ಲೆಯ ಒಬ್ಬರ ಬಳಿ 24 ಮನೆ, ಕೆಲವು ನಿವೇಶನ, ನಗದು, ಬ್ಯಾಂಕ್ ಖಾತೆಯಲ್ಲಿ ಅಪಾರ ಮೊತ್ತದ ಹಣ, ಭಾರಿ ಪ್ರಮಾಣದ ಚಿನ್ನ, ಒಂದೂವರೆ ಕೆ.ಜಿ ಬೆಳ್ಳಿ ಮತ್ತು ಇತರೆ ಆಸ್ತಿ– ಅಡವು ಪತ್ರಗಳು ದೊರೆತಿವೆ.

ಲೋಕಾಯುಕ್ತರು ವಶಪಡಿಸಿಕೊಂಡ ನಗದು, ಚಿನ್ನಾಭರಣ, ಆಸ್ತಿಪತ್ರಗಳು ಮುಂದೇನಾಗುತ್ತವೆ ಎಂಬುದು ಮಾತ್ರ ಯಾರಿಗೂ ಗೊತ್ತಾಗುವುದಿಲ್ಲ. ವಶಪಡಿಸಿಕೊಂಡ ಎಲ್ಲವನ್ನೂ ಲೋಕಾಯುಕ್ತ ಸಿಬ್ಬಂದಿ ನ್ಯಾಯಾಲಯದ ಸುಪರ್ದಿಗೆ ಒಪ್ಪಿಸಿ ಜಿಲ್ಲಾ ಖಜಾನೆಯಲ್ಲಿ ಇರಿಸುತ್ತಾರೆ. ದೋಷಾರೋಪ ಪಟ್ಟಿಯೂ ಸಲ್ಲಿಕೆಯಾಗುತ್ತದೆ. ಪ್ರಕರಣದ ಸಾಕ್ಷ್ಯಾಧಾರಗಳ ಪರಿಶೀಲನೆಯೇ ಸುಮಾರು ಎರಡು ವರ್ಷ ನಡೆಯುತ್ತದೆ. ನಂತರ ನ್ಯಾಯಾಲಯದಲ್ಲಿ 10–15 ವರ್ಷ ಪ್ರಕರಣದ ವಿಚಾರಣೆ ನಡೆಯುತ್ತದೆ (2008ರಲ್ಲಿ ನಡೆದ ದಾಳಿಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆಗಳು ಇನ್ನೂ ನಡೆಯುತ್ತಿವೆಯಂತೆ). ಕೆಲವರಿಗೆ ಶಿಕ್ಷೆಯಾಗುತ್ತದೆ. ಅನೇಕರು ಖುಲಾಸೆ ಆಗುತ್ತಾರೆ. ಒಮ್ಮೆ ಖುಲಾಸೆ ಆದರೆಂದರೆ, ವಶಪಡಿಸಿಕೊಂಡ ಆಸ್ತಿ ಮತ್ತೆ ಅವರ ಕೈಸೇರುತ್ತದೆ.

ವಿಚಾರಣೆ ಮುಗಿಯುವುದರೊಳಗೆ ಲಂಚ ಪಡೆದವನು ಪಡೆದಿದ್ದನ್ನೂ, ಕೊಟ್ಟವನು ಕೊಟ್ಟಿದ್ದನ್ನೂ ಮರೆತಿರುತ್ತಾನೆ. ಜನರಂತೂ ಪ್ರಕರಣವನ್ನು ಎಂದೋ ಮರೆತಿರುತ್ತಾರೆ. ಲಂಚ ಕೊಡುವುದೂ, ಪಡೆಯುವುದೂ ಸರ್ವೇಸಾಮಾನ್ಯ ಎಂಬಂತಾಗಿದ್ದರಿಂದ ಭ್ರಷ್ಟರು ಒಂದಿನಿತೂ ಸಂಕೋಚ, ನಾಚಿಕೆ ಪಟ್ಟುಕೊಳ್ಳದೆ ತಮ್ಮ ಎಂದಿನ ಕಾಯಕವನ್ನು ಮುಂದುವರಿಸಿರುತ್ತಾರೆ. ಭ್ರಷ್ಟರನ್ನು ಹೆಡೆಮುರಿ ಕಟ್ಟುವಂಥ ಮತ್ತಷ್ಟು ಕಠಿಣ ಕಾನೂನು ಜಾರಿಯಾದಲ್ಲಿ ಭ್ರಷ್ಟಾಚಾರಕ್ಕೆ ಕಡಿವಾಣ ಬೀಳಬಹುದು. ಇಲ್ಲದಿದ್ದರೆ, ‘ಕೊಟ್ಟವನು ಕೋಡಂಗಿ, ಇಸಿದುಕೊಂಡವನು ವೀರಭದ್ರ’ ಎಂಬ ಮಾತು ಮುಂದುವರಿಯುತ್ತದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಭೂಶಾಖದಿಂದ ವಿದ್ಯುತ್ ಸನ್ನಿಹಿತ



ಲಡಾಖ್‌ನ ಪುಗಾ ಕಣಿವೆಯಲ್ಲಿ ಭೂಶಾಖದಿಂದ ವಿದ್ಯುತ್ ಉತ್ಪಾದಿಸುವ ಸ್ಥಾವರದ ಕಾಮಗಾರಿ ನಡೆಯುತ್ತಿದೆ ಚಿತ್ರ: ಒಎನ್‌ಜಿಸಿ ಎಕ್ಸ್ ಖಾತೆ

ವಿದ್ಯುತ್ ಉತ್ಪಾದನೆ ಕ್ಷೇತ್ರದಲ್ಲಿ ಹೊಸ ಮೈಲಿಗಲ್ಲು ನೆಡಲು ಭಾರತ ಸಜ್ಜಾಗುತ್ತಿದೆ. ದೇಶದ ಮೊದಲ ವಾಣಿಜ್ಯ ಉದ್ದೇಶದ ಭೂಶಾಖ ವಿದ್ಯುತ್ ಸ್ಥಾವರದ ಆರಂಭ ಸನ್ನಿಹಿತವಾಗಿದೆ. ಬಿಸಿನೀರ ಬುಗ್ಗೆಗಳಿಗೆ ಹೆಸರುವಾಸಿಯಾಗಿರುವ ಲಡಾಖ್‌ನ ಪುಗಾ ಕಣಿವೆಯಲ್ಲಿ ಭೂಶಾಖ ವಿದ್ಯುತ್ ಸ್ಥಾವರಕ್ಕಾಗಿ ಕೊಳವೆ ಬಾವಿ ಕೊರೆಯುವ ಪ್ರಕ್ರಿಯೆ ಕೊನೆ ಹಂತ ತಲುಪಿದೆ. ಭೂಶಾಖವನ್ನು ಬಳಸಿಕೊಂಡು ವರ್ಷದ ಎಲ್ಲ ದಿನಗಳಲ್ಲೂ ಪರಿಸರಸ್ನೇಹಿಯಾದ ವಿದ್ಯುತ್ ಉತ್ಪಾದಿಸುವ ದಿನ ದೂರವಿಲ್ಲ ಎಂದು ಈ ಯೋಜನೆ ಅನುಷ್ಠಾನದ ಜವಾಬ್ದಾರಿ ಹೊತ್ತಿರುವ ಒಎನ್‌ಜಿಸಿ ಹೇಳಿದೆ

• ಸೂರ್ಯನಾರಾಯಣ ವಿ.

ಭೂಮಿಯ ಆಳದಲ್ಲಿರುವ ಶಾಖವನ್ನು (ಜಿಯೊಥರ್ಮಲ್) ಬಳಸಿ ವಿದ್ಯುತ್ ಉತ್ಪಾದನೆ ಮಾಡುವ ರಾಷ್ಟ್ರಗಳ ಸಾಲಿಗೆ ಭಾರತ ಶೀಘ್ರದಲ್ಲಿ ಸೇರ್ಪಡೆಯಾಗಲಿದೆ. ದೇಶದ ತುತ್ತತುದಿ, ಸಮುದ್ರಮಟ್ಟದಿಂದ 14 ಸಾವಿರ ಅಡಿ ಎತ್ತರದಲ್ಲಿರುವ ಲಡಾಖ್‌ನ ಪುಗಾ ಕಣಿವೆಯಲ್ಲಿ ದೇಶದ ಮೊದಲ ಭೂಶಾಖ ವಿದ್ಯುತ್ ಸ್ಥಾವರ ಆರಂಭಗೊಳ್ಳಲು ಇನ್ನು ಹೆಚ್ಚು ಸಮಯ ಬೇಡ. ಸರ್ಕಾರಿ ಸ್ವಾಮ್ಯದ ಒಎನ್‌ಜಿಸಿಯು (ತೈಲ ಮತ್ತು ನೈಸರ್ಗಿಕ ಅನಿಲ ನಿಗಮ) ಪುಗಾ ಕಣಿವೆಯಲ್ಲಿ ಭೂಮಿಯ ಅಡಿಯಲ್ಲಿರುವ ಬಿಸಿ ನೀರನ್ನು ಮೇಲಕ್ಕೆತ್ತುವುದಕ್ಕಾಗಿ ಕೊರೆಯುತ್ತಿರುವ ಕೊಳವೆ ಬಾವಿಯೊಂದರ ನಿರ್ಮಾಣ ಕಾಮಗಾರಿ ಅಂತಿಮ ಹಂತ ತಲುಪಿದೆ.

ಮೂಲಸೌಕರ್ಯಗಳಿಲ್ಲದ, ಸಂಪರ್ಕವೂ ದುಸ್ತರವಾಗಿರುವ ಕಡಿದಾದ ಹಿಮಾಲಯದ ಭೂಪ್ರದೇಶದಲ್ಲಿ ಸ್ವದೇಶಿ ತಾಂತ್ರಿಕತೆಯನ್ನು ಬಳಸಿಕೊಂಡು ವಿದ್ಯುತ್ ಸ್ಥಾವರವನ್ನು ನಿರ್ಮಿಸಲಾಗುತ್ತಿದ್ದು, ಇದು ದೇಶದ ಮೊದಲ ಭೂಶಾಖ ವಿದ್ಯುತ್ ಸ್ಥಾವರವಾಗಲಿದೆ ಎಂದು ಒಎನ್‌ಜಿಸಿ ಕೆಲವು ದಿನಗಳ ಹಿಂದೆ 'ಎಕ್ಸ್' ಮತ್ತು 'ಫೇಸ್‌ಬುಕ್'ನಲ್ಲಿ ಹೇಳಿದೆ. ಇಂಗಾಲ ಮುಕ್ತ ಗುರಿಯನ್ನು ಸಾಧಿಸುವ ಉದ್ದೇಶದಿಂದ ಪರಿಸರಸ್ನೇಹಿ ವಿದ್ಯುತ್ ಅನ್ನು ನಿರಂತರವಾಗಿ ಪೂರೈಸುವ ಸಾಮರ್ಥ್ಯ ಹೊಂದುವ ದಿಸೆಯಲ್ಲಿ ಭಾರತ ಹಾಕುತ್ತಿರುವ ಶ್ರಮವನ್ನು ಈ ಮೈಲಿಗಲ್ಲು ಪ್ರತಿಬಿಂಬಿಸುತ್ತದೆ ಎಂದು ಅದು ಹೇಳಿದೆ.

ಒಎನ್‌ಜಿಸಿಯ ಎನರ್ಜಿ ಸೆಂಟರ್ (ಒಇಸಿ), ಲಡಾಖ್‌ನ ಕೇಂದ್ರಾಡಳಿತ ಪ್ರದೇಶದ ಆಡಳಿತ ಮತ್ತು ಲೇಹ್‌ನ ಲಡಾಖ್ ಸ್ವಾಯತ್ತ ಪರ್ವತ ಅಭಿವೃದ್ಧಿ ಮಂಡಳಿಯ (ಎಲ್‌ಎಎಚ್‌ಡಿಸಿ) ಸಹಕಾರದೊಂದಿಗೆ ಈ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದು, ಭೂಶಾಖದಿಂದ ವಿದ್ಯುತ್ ಉತ್ಪಾದನೆಯಲ್ಲಿ ಪರಿಣತಿ ಹೊಂದಿರುವ ಐಸ್‌ಲ್ಯಾಂಡ್‌ನ ಜಿಯೊಸರ್ವೆ ಇಲಾಖೆಯು ಸ್ಥಾವರ ನಿರ್ಮಾಣಕ್ಕೆ ನೆರವಾಗುತ್ತಿದೆ.

2021ರ ಫೆಬ್ರುವರಿಯಲ್ಲಿ ಪುಗಾ ಕಣಿವೆಯಲ್ಲಿ ಸ್ಥಾವರ ನಿರ್ಮಾಣ ಸಂಬಂಧ ತಿಳಿವಳಿಕೆ ಪತ್ರಕ್ಕೆ (ಎಂಒಯು) ಸಹಿಹಾಕಲಾಗಿತ್ತು. ಯೋಜನೆ ಆರಂಭಗೊಂಡ ಒಂದು ವರ್ಷದಲ್ಲಿ ಕಾಮಗಾರಿ ಸ್ಥಗಿತಗೊಂಡಿತ್ತು. ಕೊಳವೆ ಬಾವಿ ಕೊರೆಯುವ ಯಂತ್ರೋಪಕರಣಗಳು ಹೆಚ್ಚು ಆಧುನಿಕವಾಗಿರದೇ ಇದ್ದುದು ಒಂದು ಕಾರಣವಾಗಿದ್ದರೆ, ಕೊಳವೆ ಬಾವಿ ಕೊರೆಯುತ್ತಿರುವ ಸಂದರ್ಭದಲ್ಲಿ ಭೂಮಿಯ ಆಳದಿಂದ ಬಂದ ವಿವಿಧ ಖನಿಜಯುಕ್ತ ಬಿಸಿ ದ್ರವ ಕಣಿವೆಯಲ್ಲಿ ಹರಿಯುತ್ತಿದ್ದ ನೀರನ್ನು ಸೇರಿತ್ತು. ಇದರಿಂದ ಜಲಮಾಲಿನ್ಯ ಉಂಟಾಗುವ ಆತಂಕವನ್ನು ಸ್ಥಳೀಯ ಪರಿಸರವಾದಿಗಳು ವ್ಯಕ್ತಪಡಿಸಿದ್ದರು. ಈ ಬಗ್ಗೆ ಜಿಲ್ಲಾಧಿಕಾರಿಗಳಿಗೂ ದೂರು ನೀಡಿದ್ದರು. ಎರಡು ವರ್ಷಗಳ ಬಳಿಕ, 2024ರಲ್ಲಿ ಒಎನ್‌ಜಿಸಿ ಮತ್ತೆ ಕೊಳವೆಬಾವಿ ಕೊರೆಯುವ ಕೆಲಸವನ್ನು ಆರಂಭಿಸಿತ್ತು.

ಪ್ರಯೋಜನ ಏನು?

ಭೂಶಾಖದಿಂದ ತಯಾರಿಸುವ ವಿದ್ಯುತ್ ಪರಿಸರ ಸ್ನೇಹಿ. ನವೀಕರಿಸಬಹುದಾದ್ದು. ಭೂಮಿಯ ಆಳದಲ್ಲಿರುವ ಬಿಸಿನೀರನ್ನು ಬಳಸಿ ವರ್ಷದ 365 ದಿನವೂ ವಿದ್ಯುತ್ ಉತ್ಪಾದಿಸಬಹುದು. ಸ್ಥಾವರವು ಹೆಚ್ಚು ಇಂಗಾಲವನ್ನು ಉಗುಳುವುದಿಲ್ಲ. ಹೀಗಾಗಿ ಪರಿಸರದ ಮೇಲಿನ ಹಾನಿ ಕಡಿಮೆ. ಭೂಮಿಯ ಆಳದಲ್ಲಿರುವ ಶಾಖವನ್ನು ಬಳಸುವುದರಿಂದ ಭೂಮಿಯಲ್ಲಿ ಮಳೆ, ಚಳಿ ಸೇರಿದಂತೆ ವಾತಾವರಣದ ತಾಪಮಾನ ಯಾವ ರೀತಿ ಇದ್ದರೂ ವಿದ್ಯುತ್ ಉತ್ಪಾದನೆಯ ಮೇಲೆ ಪರಿಣಾಮ ಬೀರುವುದಿಲ್ಲ. ಸ್ಥಾವರ ನಿರ್ಮಾಣಕ್ಕೆ ಕಡಿಮೆ ಜಾಗ ಸಾಕು. ವಿದ್ಯುತ್ ಉತ್ಪಾದನೆಯ ವೆಚ್ಚವೂ ಕಡಿಮೆ.

ದೇಶಕ್ಕಿದೆ ಸಾಮರ್ಥ್ಯ

ಭೂಶಾಖದಿಂದ ಭಾರಿ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆ ಮಾಡುವ ಸಾಮರ್ಥ್ಯ ಭಾರತಕ್ಕೆ ಇದೆ. ಈ ಬಗ್ಗೆ ಜಿಯಾಲಜಿಕಲ್ ಸರ್ವೆ ಇಂಡಿಯಾವು ದೇಶದಾದ್ಯಂತ ಇರುವ 381 ಸ್ಥಳಗಳ ಅಧ್ಯಯನ ನಡೆಸಿದ್ದು, 2022ರಲ್ಲಿ 'ಜಿಯೊಥರ್ಮಲ್ ಅಟ್ಲಾಸ್ ಆಫ್ ಇಂಡಿಯಾ' ಎಂಬ ವರದಿ ಪ್ರಕಟಿಸಿದೆ. ಅದರ ಪ್ರಕಾರ, ಭಾರತಕ್ಕೆ 10,600 ಮೆಗಾ ವಾಟ್‌ನಷ್ಟು ಭೂಶಾಖ ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯ ಇದೆ.

ಇದೇ ಮೊದಲಲ್ಲ

ಲಡಾಖ್‌ನಲ್ಲಿ ನಿರ್ಮಾಣವಾಗುತ್ತಿರುವುದು ದೇಶದ ಮೊದಲ ಭೂಶಾಖ ವಿದ್ಯುತ್ ಸ್ಥಾವರವೇನಲ್ಲ. ತೆಲಂಗಾಣದ ಭದ್ರಾದ್ರಿ ಕೋತ್ತಗುಡೆಂ ಜಿಲ್ಲೆಯ ಮಣುಗೂರು ಪ್ರದೇಶದಲ್ಲಿರುವ ಸರ್ಕಾರಿ ಸ್ವಾಮ್ಯದ ಸಿಂಗರೇಣಿ ಕಾಲರೀಸ್ ಕಲ್ಲಿದ್ದಲು ಕಂಪನಿಯು 20 ಕಿಲೊ ವಾಟ್ ಸಾಮರ್ಥ್ಯದ ಭೂಶಾಖ ವಿದ್ಯುತ್ ಸ್ಥಾವರವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದೆ

ಏನಿದು ಯೋಜನೆ?

ಭೂ ಮೇಲ್ಮೈನಿಂದ ಕೆಳಗಡೆ ಶಿಲಾಪದರದ ಅಡಿಯಲ್ಲಿ 200 ಡಿಗ್ರಿ ಸೆಲ್ಸಿಯಸ್‌ಗಿಂತಲೂ ಹೆಚ್ಚು ಬಿಸಿಯಾಗಿರುವ ನೀರಿನ (ದ್ರವ ಎಂದೂ ಕರೆಯಲಾಗುತ್ತದೆ) ದೊಡ್ಡ ಸಂಗ್ರಹವೇ ಇದೆ. ಆ ಕಾದ ನೀರು/ದ್ರವವನ್ನು ಮೇಲಕ್ಕೆತ್ತಿ ಅದರಿಂದ ವಿದ್ಯುತ್ ಉತ್ಪಾದಿಸುವುದು ಯೋಜನೆಯ ಉದ್ದೇಶ. ನೈಸರ್ಗಿಕವಾದ ಬಿಸಿನೀರ ಚಿಲುಮೆಗಳು ಕಂಡು ಬರುವ ಪುಗಾ ಕಣಿವೆಯಲ್ಲಿ ಮೊದಲ ಹಂತದಲ್ಲಿ 1,000 ಮೀಟರ್ ಆಳದ ಎರಡು ಕೊಳವೆ ಬಾವಿಗಳನ್ನು ಕೊರೆದು ಒಂದು ಮೆಗಾ ವಾಟ್‌ನಷ್ಟು ವಿದ್ಯುತ್ ಅನ್ನು ಪ್ರಾಯೋಗಿಕವಾಗಿ ಉತ್ಪಾದಿಸುವ ಯೋಜನೆ ಒಎನ್‌ಜಿಸಿಯದ್ದು. ಎರಡನೇ ಹಂತದಲ್ಲಿ ಕೊಳವೆ ಬಾವಿಯನ್ನು ಇನ್ನಷ್ಟು ಆಳದವರೆಗೆ ಕೊರೆಯಲಾಗುತ್ತದೆ. ಮೂರನೇ ಹಂತದಲ್ಲಿ ವಾಣಿಜ್ಯ ಉದ್ದೇಶದ ಸ್ಥಾವರವನ್ನು ನಿರ್ಮಿಸಿ, 240 ಮೆಗಾ ವಾಟ್‌ನಷ್ಟು ಪರಿಸರಸ್ನೇಹಿ ವಿದ್ಯುತ್ ಉತ್ಪಾದಿಸುವ ಗುರಿಯನ್ನು ಹೊಂದಲಾಗಿದೆ.

ಪರಿಸರವಾದಿಗಳ ಎಚ್ಚರಿಕೆ

ಭೂಮಿಯ ಆಳದಿಂದ ಬಿಸಿನೀರು ಅಥವಾ ಖನಿಜಯುಕ್ತ ದ್ರವವನ್ನು ಮೇಲಕ್ಕೆತ್ತಿ ವಿದ್ಯುತ್ ಉತ್ಪಾದನೆಯನ್ನು ಅತ್ಯಂತ ವೈಜ್ಞಾನಿಕವಾಗಿ ನಡೆಸದೇ ಇದ್ದರೆ ಪರಿಸರಕ್ಕೆ ಹಾನಿಯಾಗಲಿದೆ ಎಂದು ಎಚ್ಚರಿಸುತ್ತಾರೆ ಪರಿಸರವಾದಿಗಳು. ಲಡಾಖ್‌ನ ಪುಗಾ ಕಣಿವೆಯಲ್ಲಿ ಕಾಮಗಾರಿ ತಾತ್ಕಾಲಿಕವಾಗಿ ಸ್ಥಗಿತಗೊಳ್ಳಲು ಇದು ಕೂಡ ಒಂದು ಕಾರಣ. ಪುಗಾ ಕಣಿವೆಯು ಸೂಕ್ಷ್ಮ ಪರಿಸರವನ್ನು ಹೊಂದಿದ್ದು, ಸ್ಥಳೀಯ ಪಕ್ಷಿಗಳಲ್ಲದೆ, ವಲಸೆ ಬರುವ ಪಕ್ಷಿಗಳೂ ಇಲ್ಲಿ ಕಾಣಸಿಗುತ್ತವೆ. ಕೊಳವೆ ಬಾವಿ ಕೊರೆಯುವಾಗ ಭೂಮಿಯ ಆಳದ ಖನಿಜಯುಕ್ತ ದ್ರವವು ಕಣಿವೆಯ ನೀರಿನೊಂದಿಗೆ ಸೇರಿತ್ತು. ಇದು ಸ್ಥಳೀಯರ ಆಕ್ಷೇಪಕ್ಕೆ ಕಾರಣವಾಗಿತ್ತು.


ವಿದ್ಯುತ್ ಉತ್ಪಾದನೆ ಹೇಗೆ?


ಮೊದಲೇ ಹೇಳಿದಂತೆ, ಭೂಮಿಯ ಒಳಗಡೆ ಸಂಗ್ರಹವಾಗಿರುವ ಬಿಸಿ ನೀರು ಅಥವಾ ಬಿಸಿ ದ್ರವವನ್ನು ಬಳಸಿ ವಿದ್ಯುತ್ ತಯಾರಿಸಲಾಗುತ್ತದೆ. ಬಿಸಿ ನೀರು ಅಥವಾ ದ್ರವವನ್ನು ಕೊಳವೆ ಬಾವಿ ಮೂಲಕ ಮೇಲಕ್ಕೆ ಎತ್ತಿ, ಅದನ್ನು ತಂಪಾಗಿಸಿದಾಗ ಹಬೆ ಉಂಟಾಗುತ್ತದೆ. ಅದನ್ನು ಟರ್ಬೈನ್‌ಗೆ ಹಾಯಿಸಲಾಗುತ್ತದೆ. ಟರ್ಬೈನ್ ತಿರುಗುವಿಕೆಯಿಂದ ವಿದ್ಯುತ್ ಉತ್ಪಾದನೆಯಾಗುತ್ತದೆ. ಆ ಹಬೆಯನ್ನು ಮತ್ತೆ ತಂಪಾಗಿಸಿದಾಗ ಅದು ದ್ರವ ರೂಪಕ್ಕೆ ಪರಿವರ್ತನೆಯಾಗುತ್ತದೆ. ಅದನ್ನು ಮತ್ತೆ ಭೂಮಿಗೆ ಮರುಪೂರಣ ಮಾಡಲಾಗುತ್ತದೆ. ಭೂಶಾಖದಿಂದ ವಿದ್ಯುತ್ ಉತ್ಪಾದನೆ ಮಾಡುವ ಮೂರು ವಿಧಾನಗಳು ಚಾಲ್ತಿಯಲ್ಲಿವೆ.

1. ಶುಷ್ಕ ಹಬೆ (ಡ್ರೈ ಸ್ಟೀಮ್) ವಿದ್ಯುತ್ ಸ್ಥಾವರ: ಭೂಮಿಯ ಒಳಗಿರುವ ಕಾದ ದ್ರವವನ್ನು ಮೇಲಕ್ಕೆ ತರುವಾಗ ಅದು ಬಹುತೇಕ ಹಬೆಯಾಗಿ ಪರಿವರ್ತನೆಯಾಗುತ್ತದೆ. ಈ ವಿಧಾನದಲ್ಲಿ ಅದನ್ನೇ ನೇರವಾಗಿ ಟರ್ಬೈನ್‌ಗೆ ಹಾಯಿಸಲಾಗುತ್ತದೆ. ಜನರೇಟರ್ ಚಾಲೂ ಆಗಿ ವಿದ್ಯುತ್ ಉತ್ಪಾದನೆಯಾಗುತ್ತದೆ. ಇದು ಅತ್ಯಂತ ಹಳೆಯ ತಂತ್ರಜ್ಞಾನ. ಇಟಲಿಯಲ್ಲಿ ಮೊದಲ ಬಾರಿಗೆ ಇದನ್ನೇ ಅಳವಡಿಸಿಕೊಳ್ಳಲಾಗಿತ್ತು. ಈಗಲೂ ಇದು ಬಳಕೆಯಲ್ಲಿದ್ದು, ಕ್ಯಾಲಿಫೋರ್ನಿಯಾದ ನೈಸರ್ಗಿಕ ಬಿಸಿ ನೀರ ಚಿಲುಮೆಗಳಲ್ಲಿ ಇದೇ ವಿಧಾನದಿಂದ ವಿದ್ಯುತ್ ಉತ್ಪಾದಿಸಲಾಗುತ್ತದೆ

2. ಫ್ಲ್ಯಾಷ್ ಸ್ಟೀಮ್ ವಿದ್ಯುತ್ ಸ್ಥಾವರ: ಈಗಿನ ಭೂಶಾಖ ವಿದ್ಯುತ್ ಸ್ಥಾವರಗಳಲ್ಲಿ ಈ ತಂತ್ರಜ್ಞಾನವನ್ನು ಬಳಸಲಾಗುತ್ತಿದೆ. ಇದರಲ್ಲಿ 182 ಡಿಗ್ರಿ ಸೆಲ್ಸಿಯಸ್‌ಗಿಂತಲೂ ಹೆಚ್ಚು ಬಿಸಿಯಾಗಿರುವ ನೀರನ್ನು ಭೂಮಿಯ ಆಳದಿಂದ ಮೇಲಕ್ಕೆತ್ತಿ (ಅತ್ಯಂತ ಹೆಚ್ಚು ಒತ್ತಡದ ವಾತಾವರಣದಲ್ಲಿ ಇದು ಮೇಲಕ್ಕೆ ಬರುತ್ತದೆ), ಭೂಮಿಯ ಮೇಲ್ಮೈನಲ್ಲಿ ಸ್ಥಾಪಿಸಲಾಗಿರುವ ಕಡಿಮೆ ಒತ್ತಡ ಇರುವ ಟ್ಯಾಂಕ್‌ಗೆ ಹರಿಸಲಾಗುತ್ತದೆ. ಒತ್ತಡದಲ್ಲಾಗುವ ಬದಲಾವಣೆಯಿಂದಾಗಿ ದ್ರವವು ತಕ್ಷಣ ಆವಿಯಾಗಿ ಪರಿವರ್ತನೆಯಾಗುತ್ತದೆ. ಈ ಆವಿಯನ್ನು ಟರ್ಬೈನ್‌ಗೆ ಹಾಯಿಸಲಾಗುತ್ತದೆ. ಒಂದು ವೇಳೆ ಟ್ಯಾಂಕ್‌ನಲ್ಲಿ ಬಿಸಿ ನೀರು/ದ್ರವ ಉಳಿದರೆ ಮತ್ತೊಂದು ಟ್ಯಾಂಕ್‌ಗೆ ಅದನ್ನು ಹರಿಸಿ ಮತ್ತೆ ಅದು ಹಬೆಯಾಗಿ ಪರಿವರ್ತನೆಯಾಗುವಂತೆ ಮಾಡಲಾಗುತ್ತದೆ

3. ಬೈನರಿ ಸೈಕಲ್ ವಿದ್ಯುತ್ ಸ್ಥಾವರ: ಭೂಶಾಖ ಸಂಪನ್ಮೂಲಗಳ (ನೀರು/ದ್ರವ) ಉಷ್ಣತೆ ಕಡಿಮೆ ಇದ್ದ ಸಂದರ್ಭದಲ್ಲಿ ಈ ತಂತ್ರಜ್ಞಾನವನ್ನು ಬಳಸಲಾಗುತ್ತದೆ. ಈ ವಿಧಾನ ಅಳವಡಿಸಿಕೊಳ್ಳುವ ಸ್ಥಾವರವು ಮೊದಲೆರಡು ತಂತ್ರಜ್ಞಾನ ಹೊಂದಿರುವ ಸ್ಥಾವರಗಳಿಗಿಂತ ಭಿನ್ನವಾಗಿರುತ್ತದೆ. ಈ ವಿಧಾನದಲ್ಲಿ ಭೂಮಿಯ ಆಳದಿಂದ ಮೇಲಕ್ಕೆತ್ತಲಾದ ನೀರು ಅಥವಾ ದ್ರವ ನೇರವಾಗಿ ಟರ್ಬೈನ್‌ನ ಸಂಪರ್ಕಕ್ಕೆ ಬರುವುದಿಲ್ಲ. ಕಡಿಮೆ ಉಷ್ಣತೆ ಹೊಂದಿರುವ (180 ಡಿಗ್ರಿ ಸೆಲ್ಸಿಯಸ್‌ಗಿಂತ ಕಡಿಮೆ ಉಷ್ಣತೆಯ) ನೀರು/ದ್ರವವನ್ನು ಮೇಲಕ್ಕೆ ತಂದು, ನೀರಿಗಿಂತ ಕಡಿಮೆ ಕುದಿಯುವ ಬಿಂದು (boiling point) ಹೊಂದಿರುವ ಮತ್ತೊಂದು (ಎರಡನೇ) ದ್ರವದೊಂದಿಗೆ ಬೆರೆಯುವಂತೆ ಮಾಡಲಾಗುತ್ತದೆ. ಈ ಬೆರೆಯುವ ಪ್ರಕ್ರಿಯೆಯು ಹಬೆಯನ್ನು ಸೃಷ್ಟಿಸುತ್ತದೆ. ಆ ಹಬೆಯನ್ನು ಟರ್ಬೈನ್‌ಗೆ ಹಾಯಿಸಲಾಗುತ್ತದೆ





ಶತಮಾನದ ಇತಿಹಾಸ

ಭೂಶಾಖ ಬಳಸಿ ವಿದ್ಯುತ್ ಉತ್ಪಾದನೆ ಮಾಡುವ ತಂತ್ರಜ್ಞಾನ ಹೊಸದೇನಲ್ಲ. ಇದಕ್ಕೆ ಒಂದೂಕಾಲು ಶತಮಾನದ ಇತಿಹಾಸವಿದೆ. 1904ರಲ್ಲಿ ಇಟಲಿಯ ಲಾರ್ಡೆರೆಲ್ಲೊ ಎಂಬಲ್ಲಿ ಮೊದಲ ಬಾರಿಗೆ ಭೂಶಾಖ ವಿದ್ಯುತ್ ಸ್ಥಾವರ ಸ್ಥಾಪಿಸಲಾಗಿತ್ತು. ಪ್ರಸ್ತುತ ಜಗತ್ತಿನ 30 ರಾಷ್ಟ್ರಗಳಲ್ಲಿ ಭೂಶಾಖದಿಂದ ವಿದ್ಯುತ್ ಉತ್ಪಾದಿಸಲಾಗುತ್ತಿದೆ. ಥಿಂಕ್‌ಜಿಯೊಎನರ್ಜಿ.ಕಾಂ ವರದಿಯ ಪ್ರಕಾರ, 2024ರ ಡಿಸೆಂಬರ್ ಅಂತ್ಯಕ್ಕೆ ಭೂಶಾಖದಿಂದ 16,876 ಮೆಗಾ ವಾಟ್‌ನಷ್ಟು ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯವನ್ನು ಜಗತ್ತು ಹೊಂದಿತ್ತು. ಅಮೆರಿಕವು ಜಗತ್ತಿನಲ್ಲೇ ಭೂಶಾಖದಿಂದ ಅತಿ ಹೆಚ್ಚು ವಿದ್ಯುತ್ ಉತ್ಪಾದಿಸುವ ರಾಷ್ಟ್ರ. 2024ರ ಡಿಸೆಂಬರ್ ವೇಳೆಗೆ ಅದು ಭೂಶಾಖದಿಂದ 3,937 ಮೆಗಾವಾಟ್‌ನಷ್ಟು ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯ ಹೊಂದಿತ್ತು ಎಂದು ಥಿಂಕ್‌ಜಿಯೊಎನರ್ಜಿ.ಕಾಂ ತನ್ನ ವರದಿಯಲ್ಲಿ ತಿಳಿಸಿದೆ. ಅಮೆರಿಕದ ಇಂಧನ ಇಲಾಖೆ ಪ್ರಕಾರ, ದೇಶದಲ್ಲಿ ಭೂಶಾಖದಿಂದ ಸದ್ಯ ನಾಲ್ಕು ಗಿಗಾ ವಾಟ್‌ನಷ್ಟು ವಿದ್ಯುತ್ ಉತ್ಪಾದಿಸಲಾಗುತ್ತಿದೆ.

ಪುಗಾ ಕಣಿವೆ ಯೋಜನೆಯಲ್ಲಿ ಭಾರತಕ್ಕೆ ನೆರವಾಗುತ್ತಿರುವ ಐಸ್‌ಲ್ಯಾಂಡ್ ತನ್ನ ಅಗತ್ಯಕ್ಕೆ ಬೇಕಾದ ಒಟ್ಟು ವಿದ್ಯುತ್‌ನಲ್ಲಿ ಶೇ 25ರಷ್ಟನ್ನು ಭೂಶಾಖದಿಂದಲೇ ಉತ್ಪಾದಿಸುತ್ತಿದೆ.

ಆಧಾರ: ಲಡಾಖ್.ಐಐಎಸ್‌ಡಿಇಂಡಿಯಾ.ಇನ್, ಒಎನ್‌ಜಿಸಿ 'ಎಕ್ಸ್' ಪೋಸ್ಟ್, ಥಿಂಕ್‌ಜಿಯೊಎನರ್ಜಿ.ಕಾಂ, ಎನರ್ಜಿ.ಜಿಒವಿ, ಡೈಲಾಗ್.ಅರ್ಥ್, ಸಂಸತ್‌ನಲ್ಲಿ ಸಚಿವರ ಉತ್ತರ

ರಾಷ್ಟ್ರೀಯ

ಉ. ಪ್ರದೇಶ: ಭೀತಿ ಸೃಷ್ಟಿಸಿದ 'ಡ್ರೋನ್ ಚೋರ'ರ ವದಂತಿ

ಗ್ರಾಮಕ್ಕೆ ಗಸ್ತು ಸಿಬ್ಬಂದಿ ನೇಮಕ



ಲಖನೌ (ಪಿಟಿಐ): ಉತ್ತರ ಪ್ರದೇಶದಲ್ಲಿ ಡ್ರೋನ್ ಬಳಸಿ ಕಳ್ಳತನ ನಡೆಸಲಾಗುತ್ತಿದೆ ಎಂಬ ವರದಿ ಹರಡಿದೆ. ರಾಜ್ಯದ ಪಶ್ಚಿಮ ಭಾಗದ ಸುಮಾರು 12 ಜಿಲ್ಲೆಗಳ 300ಕ್ಕೂ ಅಧಿಕ ಗ್ರಾಮಗಳಲ್ಲಿ ಜನರು 'ಡ್ರೋನ್ ಚೋರ'ರ ಬಗ್ಗೆ ಆತಂಕಗೊಂಡಿದ್ದಾರೆ.

ರಾತ್ರಿ ಗ್ರಾಮಗಳಿಗೆ ಬಂದು ಡ್ರೋನ್ ಮೂಲಕ ದರೋಡೆ ನಡೆಸುತ್ತಾರೆ. ಕತ್ತಲಾದ ಬಳಿಕ ಗ್ರಾಮದ ಮೇಲೆ ಅನುಮಾನಾಸ್ಪದ ಡ್ರೋನ್‌ಗಳು ಹಾರಾಟ ನಡೆಸುತ್ತವೆ ಎಂದು ಗ್ರಾಮಸ್ಥರು ಭಯಗೊಂಡಿದ್ದಾರೆ.

'ಡ್ರೋನ್ ಬಳಸಿ ಯಾವುದೇ ಕಳ್ಳತನ ಈವರೆಗೆ ವರದಿಯಾಗಿಲ್ಲ. ಇದು ಕೇವಲ ವದಂತಿಯಾಗಿದೆ' ಎಂದು ಪೊಲೀಸ್ ಅಧಿಕಾರಿಗಳು ಸ್ಪಷ್ಟನೆ ನೀಡಿದ್ದಾರೆ.

'ಅಮ್ರೋಹಾದಲ್ಲಿ ಮೂವರು ಯೂಟ್ಯೂಬರ್‌ಗಳು ಅನುಮತಿ ಇಲ್ಲದೇ ಡ್ರೋನ್ ಹಾರಾಟ ನಡೆಸಿದ್ದರು. ಹೀಗಾಗಿ ಅವರನ್ನು ಬಂಧಿಸಿ, ವಿಚಾರಣೆ ನಡೆಸಿದ ಬಳಿಕ ಬಿಡುಗಡೆ ಮಾಡಲಾಯಿತು. ಈ ಘಟನೆ ಸ್ಥಳೀಯರಲ್ಲಿ ಅನುಮಾನಕ್ಕೆ ಕಾರಣವಾಯಿತು. ನಂತರ ವದಂತಿ ಹಬ್ಬಿದೆ' ಎಂದು ಡಿಐಜಿ ನೈಥಾನಿ ಅವರು ಮಾಹಿತಿ ನೀಡಿದರು.


ಕಾನೂನು ಮತ್ತು ಸುವ್ಯವಸ್ಥೆ ಕುರಿತು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಅಧ್ಯಕ್ಷತೆಯಲ್ಲಿ ಕಳೆದ ವಾರ ನಡೆದ ಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಲಾಯಿತು. 'ವದಂತಿಗಳನ್ನು ಹರಡುವವರ ಮತ್ತು ಅನುಮತಿ ಇಲ್ಲದೆ ಡ್ರೋನ್‌ಗಳನ್ನು ಹಾರಿಸುವವರ ವಿರುದ್ಧ 'ಗ್ಯಾಂಗ್‌ಸ್ಟರ್' ಕಾಯ್ದೆಯಡಿ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚಿಸಿದರು.

ದರೋಡೆಕೋರರ ಭಯದಿಂದಾಗಿ ಪಿಲಿಭಿತ್ ಜಿಲ್ಲೆಯ ಪುರಾನಪುರ ಗ್ರಾಮಸ್ಥರು ಗಸ್ತು ಕಾವಲುಗಾರರನ್ನು ನೇಮಿಸಿಕೊಂಡಿದ್ದಾರೆ. 45 ವರ್ಷದ ಭುರೆಯ್ ಸಿಂಗ್ ಅವರು ತಮ್ಮ ಸೈಕಲ್‌ಗೆ ಬ್ಯಾಟರಿ ಕಟ್ಟಿಕೊಂಡು, ಕೈಯಲ್ಲೊಂದು ದಪ್ಪ ಕೋಲು ಹಿಡಿದು ರಾತ್ರಿಯೆಲ್ಲ ಊರಿನ ಕಾವಲು ಕಾಯುತ್ತಿದ್ದಾರೆ.

'ಡ್ರೋನ್ ಬಳಸಿ ಕಳ್ಳತನ ಮಾಡುತ್ತಿರುವುದು ನಿಜವೇ ಅಥವಾ ಸುಳ್ಳೇ ಎಂಬುದು ಗೊತ್ತಿಲ್ಲ. ಆದರೆ ಹಗುರವಾಗಿ ತೆಗೆದುಕೊಳ್ಳಲಾಗುವುದಿಲ್ಲ' ಎಂದು ಭುರೆಯ್ ಹೇಳಿದರು.

ಪ್ರಕರಣ ಸಂಬಂಧ ಪೊಲೀಸರು ಜಾಗೃತಿ ಅಭಿಯಾನ ಹಮ್ಮಿಕೊಂಡಿದ್ದಾರೆ. ಸುಳ್ಳು ಸುದ್ದಿ ಹರಡಿದ ಹಾಗೂ ಭೀತಿಯನ್ನು ಸೃಷ್ಟಿಸಿದ ಆರೋಪದ ಮೇಲೆ 40 ಮಂದಿಯನ್ನು ಬಂಧಿಸಲಾಗಿದೆ.

ಪಾಕ್ ಯುದ್ಧದಲ್ಲಿ ಸೆಣಸಿದ್ದ ಐಎಎಫ್ ನಿವೃತ್ತ ಅಧಿಕಾರಿ ನಿಧನ



ನವದೆಹಲಿ (ಪಿಟಿಐ): 1971ರ ಯುದ್ಧ ಸಂದರ್ಭದಲ್ಲಿ ಪಾಕಿಸ್ತಾನದ ಸೆರೆಯಿಂದ ಧೈರ್ಯದಿಂದ ಪಾರಾಗಿ ಬಂದಿದ್ದ ಭಾರತೀಯ ವಾಯು ಪಡೆಯ ಅನುಭವಿ, ಸಾಹಸಿ ನಿವೃತ್ತ ಗ್ರೂಪ್ ಕ್ಯಾಪ್ಟನ್ ಡಿ.ಕೆ. ಪಾರುಲ್ಕರ್ ಅವರು ನಿಧನರಾಗಿದ್ದಾರೆ ಎಂದು ಐಎಎಫ್ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

'ಪಾರುಲ್ಕರ್ ಅವರು ಅತ್ಯಂತ ಚತುರ, ಸಾಹಸಿಯಾಗಿದ್ದರು. ಅವರ ನಿಧನಕ್ಕೆ ವಾಯುಪಡೆಯ ಎಲ್ಲ ಸಿಬ್ಬಂದಿಯೂ ಶ್ರದ್ಧಾಂಜಲಿ ಸಲ್ಲಿಸುತ್ತೇವೆ' ಎಂದು 'ಎಕ್ಸ್'ನಲ್ಲಿ ಐಎಎಫ್ ಸ್ಮರಿಸಿಕೊಂಡಿದೆ.

1963ರಲ್ಲಿ ವಾಯುಪಡೆ ಸೇವೆಗೆ ಸೇರಿದ್ದ ಪಾರುಲ್ಕರ್, 1965ರ ಭಾರತ–ಪಾಕಿಸ್ತಾನ ಯುದ್ಧದಲ್ಲಿ ಭಾಗಿಯಾಗಿದ್ದರು. ಅವರ ವಿಮಾನಕ್ಕೆ ಶತ್ರು ದಾಳಿ ನಡೆಸಿದಾಗ ಬಲಭುಜಕ್ಕೆ ಗಾಯವಾಗಿತ್ತು. ಆದರೂ ವಿಮಾನವನ್ನು ವಾಯುನೆಲೆಗೆ ವಾಪಾಸ್ ತಂದಿದ್ದರು.

1971ರ ಸಮರದ ವೇಳೆ ವಿಂಗ್ ಕಮಾಂಡರ್ ಆಗಿದ್ದ ಅವರು ಯುದ್ಧ ಕೈದಿ ಎಂದು ಘೋಷಿಸಲ್ಪಟ್ಟಿದ್ದರು. ಆನಂತರ ತನ್ನ ಇಬ್ಬರು ಸಹೋದ್ಯೋಗಿಗಳೊಂದಿಗೆ ಪಾಕಿಸ್ತಾನ ಯುದ್ಧ ಕೈದಿಗಳ ಶಿಬಿರದಿಂದ ಪಾರಾಗಿ ಬಂದಿದ್ದರು ಎಂದು ವಾಯುಪಡೆ ತಿಳಿಸಿದೆ.

ಶಕ್ತಿ ಇರುವುದು ಮತ್ತೊಬ್ಬರನ್ನು ತುಳಿಯುವುದಕ್ಕಲ್ಲ

ನುಡಿ ಬೆಳಗು



ದಾದಾಪೀರ್ ನವಿಲೇಹಾಳ್

ತಮ್ಮ ನಡುವಿನ ಸ್ಪರ್ಧೆಯಲ್ಲಿ ಆಮೆ ಗೆದ್ದು ಮೊಲ ಸೋತು ಹೋದ ಕಥೆಯ ಕೊನೆಯಲ್ಲಿ 'ಅತಿಯಾದ ಆತ್ಮವಿಶ್ವಾಸ ಒಳ್ಳೆಯದಲ್ಲ, ನಿಧಾನವೂ ಸ್ಥಿರವೂ ಆದ ಪ್ರಯತ್ನದಿಂದ ಗೆಲುವು ಸಾಧ್ಯವಾಗುತ್ತದೆ' ಎಂಬ ನೀತಿಯನ್ನು ಹೇಳಲಾಗುತ್ತದೆ. ವಾಸ್ತವದಲ್ಲಿ ಕಥೆಯ ಸಕಾಲಿಕ ಬೆಳವಣಿಗೆ ಬೇರೆಯದೇ ನೀತಿಯನ್ನು ಸಾದರಪಡಿಸುತ್ತದೆ. ಮೊಲ ತನ್ನ ಸೋಲಿಗೆ ಕಾರಣವೇನು ಎಂದು ಯೋಚಿಸುತ್ತಾ ಆಮೆಗೆ ಅದರ ಗೆಲುವಿಗಾಗಿ ಅಭಿನಂದನೆ ಹೇಳುತ್ತದೆ. ಮತ್ತು ಇನ್ನೊಮ್ಮೆ ಪ್ರಯತ್ನಿಸುವುದರಲ್ಲಿ ತಪ್ಪಿಲ್ಲ ಎಂದುಕೊಂಡು ಆಮೆಯನ್ನು ಸ್ಪರ್ಧೆಗೆ ಆಹ್ವಾನಿಸುತ್ತದೆ. ಗೆದ್ದ ಹುರುಪಿನಲ್ಲಿದ್ದ ಆಮೆ ತಕ್ಷಣ ಒಪ್ಪಿಕೊಳ್ಳುತ್ತದೆ. ಎರಡನೆಯ ಸಲದ ರೇಸ್‌ನಲ್ಲಿ ಯಾವ ತಪ್ಪೂ ಆಗದಂತೆ ಎಚ್ಚರವಹಿಸಿದ ಮೊಲ ಗೆಲ್ಲುತ್ತದೆ. ಆಮೆಗೆ ಮೊದಲ ಗೆಲುವು ಗೆಲುವಲ್ಲ ಅಂತ ಅನ್ನಿಸಿ ಗೆಲುವಿನ ಬೇರೆ ಬೇರೆ ದಾರಿಗಳ ಬಗ್ಗೆ ಯೋಚಿಸುತ್ತದೆ. ಸೀದಾ ಮೊಲದ ಬಳಿ ಹೋಗಿ ಅಭಿನಂದಿಸಿ 'ಇನ್ನೊಂದು ಸಲ ಓಡೋಣ, ಆದರೆ ಈ ದಾರಿ ಬೇಡ, ಎದುರುಗಡೆ ಇರುವ ದಾರಿಯಲ್ಲಿ ಸ್ವಲ್ಪ ದೂರ ಹೋದರೆ ಅಲ್ಲೊಂದು ಮರವಿದೆ, ಅದು ನಮ್ಮ ಗುರಿಯಾಗಿರಲಿ' ಎಂದು ಕರೆಯಿತು.

ಮೂರನೆಯ ಸಲ ಆಮೆ ಸೂಚಿಸಿದ ಬೇರೊಂದು ದಾರಿಯಲ್ಲಿ ಎರಡೂ ಓಡಲಾರಂಭಿಸಿದವು. ಗೆಲುವಿನ ಉತ್ಸಾಹದಲ್ಲಿದ್ದ ಮೊಲ ಚಂಗನೆ ಓಡಿ ಇನ್ನೇನು ಮರ ಹತ್ತಿರವಾಯಿತು ಅನ್ನುತ್ತಿದ್ದ ಹಾಗೆ ಎದುರಾಗಿ ಹರಿಯುತ್ತಿದ್ದ ಹಳ್ಳವನ್ನು ಕಂಡು ಗಕ್ಕನೆ ನಿಂತುಬಿಟ್ಟಿತು. ಹಿಂದಿನಿಂದ ನಿಧಾನವಾಗಿ ಬಂದ ಆಮೆ ಸಲೀಸಾಗಿ ಹಳ್ಳದ ನೀರಿನಲ್ಲಿ ಈಜುತ್ತಾ ಸಾಗಿ ಮರದ ಬುಡಕ್ಕೆ ಆತುಕೊಂಡಿತು. ಮೊಲ ಈಚೆ ದಡದಲ್ಲಿ ಕುಳಿತು ಆಚೆ ದಡದಲ್ಲಿದ್ದ ಆಮೆಯನ್ನು ಅಭಿನಂದಿಸಿ ವಿಶ್ವಾಸದಿಂದ ಕರೆಯಿತು. ಹತ್ತಿರ ಬಂದ ಆಮೆಯ ಮುಖಕ್ಕೆ ಮುಖ ತಾಗಿಸಿ ಹೇಳುತ್ತದೆ: 'ನಾವಿಬ್ಬರೂ ತಪ್ಪು ಮಾಡುತ್ತಿದ್ದೇವೆ. ನಿನ್ನ ಬಲ ನೀರಿನಲ್ಲಿದೆ, ನನ್ನ ಬಲ ನೆಲದ ಮೇಲಿದೆ. ನೀರಿನಲ್ಲಿ ನೀನು ನನ್ನನ್ನು, ನೆಲದಲ್ಲಿ ನಾನು ನಿನ್ನನ್ನು ಹೊತ್ತು ನಡೆಯೋಣ, ನಾವು ಒಟ್ಟಾಗಿ ಗುರಿ ಸೇರಿದರೆ ಇಬ್ಬರಿಗೂ ಗೆಲುವು'.

ಮನುಷ್ಯ ಸಮಾಜಕ್ಕೆ ಬೇಕಾಗಿರುವ ನಿಲುವು ಇದು. ಭಿನ್ನ ಮನೋಧರ್ಮ ಮತ್ತು ಸಾಮರ್ಥ್ಯಗಳ ನಡುವಿನ ಅವೈಜ್ಞಾನಿಕ ಸ್ಪರ್ಧೆ ಮತ್ತು ಅಹಂ ಮನುಷ್ಯರನ್ನು ಒಡೆಯುತ್ತಿದೆ. ಬದುಕಿನ ಬಗೆಗೆ ಅಪಾರ ನಿರೀಕ್ಷೆಗಳು ನಮ್ಮ ನಮ್ಮಲ್ಲಿನ ಪೈಪೋಟಿಗೆ ಕಾರಣವಾಗಿವೆ. ತಾನೇ ಗೆಲ್ಲಬೇಕು, ಎಲ್ಲವೂ ತನಗೇ ಬೇಕು ಎನ್ನುವ ಸ್ವಾರ್ಥದಲ್ಲಿ ದುರ್ಬಲರನ್ನು ಅವಮಾನಿಸುತ್ತಾ ಕೀಳಾಗಿ ಕಾಣುತ್ತಿದ್ದೇವೆ. ಇದು ಪರಾಜಿತರಲ್ಲಿ ನೈಚ್ಯಾನುಸಂಧಾನವಾಗಿ ಬೆಳೆದು ಅವರನ್ನು ಮತ್ತಷ್ಟು ಕುಗ್ಗಿಸುತ್ತದೆ. ಜೊತೆಯಲ್ಲಿ ಬೆಳೆದವರ ಯಶಸ್ಸನ್ನೂ ಆನಂದಿಸಲಾಗದಂತಹ ಕೀಳರಿಮೆಗೆ ತಳ್ಳುತ್ತದೆ. ಬದಲಾಗಿ ಗೆದ್ದವರ ಕೈಕುಲುಕಿ ತಾನೂ ಗೆಲ್ಲುವ ಉಪಾಯಗಳನ್ನು ಕಂಡುಕೊಳ್ಳುವುದು ಜಾಣತನ. ಅಹಂಕಾರ ಮತ್ತು ಕೀಳರಿಮೆಗಳನ್ನು ಬದಿಗಿಟ್ಟು ತಮ್ಮ ಕೌಶಲ ಹಾಗೂ ಸಾಮರ್ಥ್ಯದ ಆಳವನ್ನು ಅರಿತುಕೊಂಡು ಮುನ್ನಡೆದರೆ ಸಾಧನೆಯ ಹಾದಿ ತಾನಾಗಿ ತೆರೆದುಕೊಳ್ಳುತ್ತದೆ. ಬಲಶಾಲಿಗಳು ಮತ್ತು ದುರ್ಬಲರ ನಡುವಿನ ಸ್ಪರ್ಧೆ ಅವೈಜ್ಞಾನಿಕ ಮಾತ್ರವಲ್ಲ, ಪ್ರಜಾಸತ್ತಾತ್ಮಕವೂ ಅಲ್ಲ. ಯಾರೂ ಪ್ರತಿಭಾಶೂನ್ಯರಲ್ಲ. ಪ್ರತಿಭಾ ಕೌಶಲವನ್ನು ಹೆಚ್ಚು ಕಡಿಮೆ ಎಂದು ಅಳೆಯುವುದು ಅಸಹಜವಾದ ಅಹಂ ಮತ್ತು ಕೀಳರಿಮೆ ಬೆಳೆಯಲು ಕಾರಣವಾಗುತ್ತದೆ.

ಬೇರೆ ಬೇರೆ ಪ್ರತಿಭೆ ಮತ್ತು ಕೌಶಲಗಳು ಸಮೃದ್ಧ ಸಮಾಜಕ್ಕೆ ಅವಶ್ಯಕ. ಈ ಶಕ್ತಿ ಸಾಮರ್ಥ್ಯ ಇರುವುದು ಒಬ್ಬರು ಮತ್ತೊಬ್ಬರನ್ನು ಸೋಲಿಸುವುದಕ್ಕಲ್ಲ, ತುಳಿಯುವುದಕ್ಕಲ್ಲ. ಮೇಲೆತ್ತುವುದಕ್ಕೆ, ಜೊತೆಯಲ್ಲಿ ಒಂದಾಗಿ ಕರೆದೊಯ್ಯುವುದಕ್ಕೆ. ಹಲವರನ್ನು ಹಿಂದಕ್ಕೆ ಸರಿಸಿ ಕೆಲವರು ಮುಂದೆ ಬಂದರೆ ಸಮಾಜದ ಒಟ್ಟಾರೆ ಪ್ರಗತಿಗೆ ಅಡ್ಡಿ. ಅಸಮತೋಲನಕ್ಕೆ ದಾರಿ. ಒಬ್ಬರು ಕೆಳಕ್ಕೆ ಬಿದ್ದಾಗ ಕೈಹಿಡಿದು ಎತ್ತುವುದು, ಹಿಂದೆ ಉಳಿದಾಗ ಒಂದರೆಕ್ಷಣ ನಿಂತು ಹೆಗಲಿಗೆ ಕೈಹಾಕಿ ಜೊತೆಗೂಡಿ ಸಾಗುವುದು ಪ್ರತಿಭೆಯ ಲಕ್ಷಣ. ಎಲ್ಲರನ್ನೂ ಒಳಗೊಳ್ಳುತ್ತಾ ನ್ಯಾಯಪಥದಲ್ಲಿ ಮುನ್ನಡೆಸುವುದು ವಿವೇಕ. ಸಮಾಜಕ್ಕೆ ಬೇಕಾಗಿರುವುದು ಹೀಗೆ ಒಬ್ಬರಿಗೊಬ್ಬರು ಆಗುವ, ಆತುಕೊಳ್ಳುವ ಭಾವ. ಅದೇ ಪ್ರಜಾಸತ್ತೆಯ ಸೊಗಸನ್ನು ಹೆಚ್ಚಿಸುವ ಜೀವಕೋಶ. ❖

ಪದಬಂಧ 6131


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ದೂರದ ವಸ್ತುಗಳನ್ನು ನೋಡುವ ದುರ್ಬೀನು (5)
4.ಈತ ಚಿನ್ನದ ವ್ಯಾಪಾರಿ (3)
5.ಮಾತು ಕೇಳುತ್ತಿರುವ ಸೋದರ ಮಾವ (3)
6.ಗರ ಬಡಿದಂತಿರುವ ಗಾವಿಲ (3)
8.ನಿಬಿಡತೆಗೊಂದು ಪರ್ಯಾಯ ಪದ (3)
9.ಒಂದು ಗೊತ್ತಾದ ಉದ್ದೇಶಕ್ಕಾಗಿ ರಚಿತವಾದ ಸದ್ಯಸರ ಗುಂಪು (3)
12.ಆತಂಕ ಹುಟ್ಟಿಸಿದ ಕೊಲೆಗಾರ (3)
15.ಪೋಲಕ ಧರಿಸಿದವಳ ಕೆನ್ನೆ (3)
16.ಮಾವನಲ್ಲಿರುವ ಕೋಮಲತೆ ಗೊತ್ತಾಯಿತೇ? (3)
17.ವ್ಯಾಯಾಮ ಶಾಲೆಯಿದು (5)

ಮೇಲಿಂದ ಕೆಳಕ್ಕೆ

1.ರಾಯಭಾರಿ ವಾಸಸ್ಥಾನ (4)
2.ಈತ ಕಡುಬಡವ (5)
3.ಅರ್ಧ ಚಂದ್ರಾಕೃತಿಯ ರಚನೆಯಿದು (3)
4.ಆನೆಗಳ ನಾಯಕ (3)
7.ಮಾತಿನಲ್ಲೇ ಹನುಮಂತ ಕಾಣಿಸುತ್ತಿದ್ದಾನಲ್ಲಾ! (3)
8.ಸದ್ಯದ ಸಮಯ (3)
10.ಮಿಡಿಯಲ್ಲಿರುವ ಒಯ್ಯಾರಿ (5)
11.ನೆರೆಮನೆಯವ ಸೇರಿರುವ ಜೈಲು (4)
13.ಪೆದ್ದ ಇಲ್ಲಿದ್ದಾನೆ (3)
14.ರಾಜನ ಆಸ್ಥಾನದಲ್ಲಿ ಕೇಳಿಸುತ್ತಿರುವ ನಾದಸ್ವರ (3)



6130ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ನಿಯಾಮಕ 3.ಮಹಜರು 5.ನವೀನ 6.ಹೂಬಿಸಿಲು 8.ವಿಷಯ 10.ಸುಶ್ರಾವ್ಯ 12.ಪಾದರಸ 15.ಸತ್ಕುಲ 16.ಸ್ವಾಭಿಮಾನ 17.ಕನ್ನಡಕ

ಮೇಲಿಂದ ಕೆಳಕ್ಕೆ: 1.ನಿದಾಹೂ 2.ಕನಲು 3.ಮನವಿ 4.ರುಗ್ಣ 7.ಬಿಸಿಮುಟ್ಟಿಸು 9.ಯಮಕಿಂಕರ 11.ವ್ಯಸನ 12.ಪಾಲಕ 13.ಸರೀಕ 14.ಹ್ರಸ್ವಾ

ಸುಡೊಕು 6515

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

9		1			7		3	
	7		2	3		1		5
5		2		1				7
2		5					7	
				5	3	8		9
	9		8				5	
4		3			2			
	5			4		7		2
7		9	6		5		1	

6514 ಸುಡೊಕು

8	9	5	6	7	2	4	1	3
7	3	1	9	5	4	6	8	2
6	2	4	3	1	8	7	5	9
5	8	3	7	6	9	1	2	4
1	7	6	2	4	5	3	9	8
2	4	9	8	3	1	5	6	7
9	5	7	1	8	3	2	4	6
4	6	2	5	9	7	8	3	1
3	1	8	4	2	6	9	7	5

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

11 ಆಗಸ್ಟ್ 2025, ಸೋಮವಾರ, ಶ್ರೀ ವಿಶ್ವಾವಸು ನಾಮಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ದ್ವಿತೀಯ ಗಂ. 10-34 **ನಕ್ಷತ್ರ:** ಶತಭಿಷ ಗಂ. 13-01 **ಯೋಗ:** ಅತಿಗಂಡ ಗಂ. 21-34 **ಕರಣ:** ಗರ ಗಂ. 10-34 ಕರ್ಕಾಟಕ ಮಾಸದ 26 ನೇ ದಿನ. ಮಳೆ ನಕ್ಷತ್ರ : ಆಶ್ಲೇಷ 3ನೇ ಪಾದ. **ರಾಹುಕಾಲ:** ಬೆಳಿಗ್ಗೆ 07-30 09-00, **ಸೂರ್ಯೋದಯ :** 06-21 **ಸೂರ್ಯಾಸ್ತ :** 06-51, **ಮುಸ್ಲಿಂ ದಿನಾಂಕ :** 16 ಸಫರ್, **ಅದೃಷ್ಟ ಸಂಖ್ಯೆ :** 5, 11, **ದಿನ ವಿಶೇಷ:** ಗುರುರಾಘವೇಂದ್ರ ಸ್ವಾಮಿಗಳ ಆರಾಧನಾ ಮಹೋತ್ಸವ.

ಮೇಷ: ಜವಾಬ್ದಾರಿಯುತ ಸ್ಥಾನದಲ್ಲಿರುವ ನೀವು ಕೆಲಸವನ್ನು ನಿರ್ಲಕ್ಷಿಸುವುದು ಸರಿಯಲ್ಲ. ಕೆಲಸದ ಹೊರೆ ಕಡಿಮೆ ಮಾಡಿಕೊಳ್ಳಲು ಅನ್ಯರಿಗೆ ಜವಾಬ್ದಾರಿ ಹಂಚಬೇಡಿ. ಕರ್ತವ್ಯದಲ್ಲಿ ಲೋಪ ಬೇಡ.

ವೃಷಭ: ಯಾರದ್ದೋ ಮಾತು ಕೇಳಿ ಸಣ್ಣಪುಟ್ಟ ಅನಾರೋಗ್ಯವನ್ನು ನಿವಾರಿಸಿಕೊಳ್ಳಲು ಸ್ವ ಔಷಧಗಳನ್ನು ಮಾಡಿಕೊಳ್ಳಬೇಡಿ. ಸದ್ಗುರುವಿನ ಮಾತುಗಳನ್ನು ಪಾಲಿಸಿದ ದಿನಗಳನ್ನು ಮತ್ತೆ ನೆನೆಯುವಿರಿ.

ಮಿಥುನ: ಮನೆಯ ಪ್ರಶಾಂತತೆ ಕಾಪಾಡಿಕೊಂಡು ಉತ್ತಮ ಕಾರ್ಯಗಳಿಂದ ಅಭಿವೃದ್ಧಿಯ ಪಥದಲ್ಲಿ ಸಾಗಿ. ಇಷ್ಟದ ತಿಂಡಿ ತಿನಿಸುಗಳೊಂದಿಗೆ ದಿನ ಕಳೆಯುವಿರಿ.

ಕರ್ಕಾಟಕ: ಜನವಾಣಿಗೆ ಸ್ಪಂದಿಸುವ ರಾಜಕಾರಣಿಗಳಿಗೆ ಹಿಂಬಾಲಕರ ಬೆಂಬಲ ಹೆಚ್ಚಾಗಿ ಸಿಗಲಿದೆ. ಮೈದುನನ ಸಹಾಯದಿಂದ ತವರು ಮನೆಯ ಆರ್ಥಿಕ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ. ಬೆಂಕಿಯ ಬಗ್ಗೆ ಜಾಗ್ರತೆಯಿಂದಿರಿ.

ಸಿಂಹ: ವಿಶೇಷ ಸಂಗತಿಗಳನ್ನು ಬೇರೆಯವರಿಗೆ ತಿಳಿಸಿ ಆಶ್ಚರ್ಯ ಪಡುವುದರಲ್ಲಿ ಖುಷಿ ಪಡಿ. ಹೊಸ ವ್ಯವಹಾರವೊಂದರ ಪ್ರಾರಂಭಕ್ಕೆ ಬೇಕಾದ ಮಾಹಿತಿಗಳ ಸಂಗ್ರಹ ನಡೆಯುವುದು.

ಕನ್ಯಾ: ದಿನಸಿ ವರ್ತಕರಿಗೆ ವೃತ್ತಿರಂಗದಲ್ಲಿ ಅಭಿವೃದ್ಧಿಯ ಲಕ್ಷಣಗಳಿವೆ. ನಿವೇಶನ ಖರೀದಿಗೆ ಸ್ಥಳದ ಹುಡುಕಾಟ ನಡೆಸುವವರು ವಾಸ್ತುವಿನ ಬಗ್ಗೆ ಗಮನ ನೀಡಿ. ನಂಬಿಕೆ ದ್ರೋಹದಿಂದ ಲೇವಾದೇವಿ ವ್ಯವಹಾರಕ್ಕೆ ತಡೆ ಉಂಟಾಗಬಹುದು.

ತುಲಾ: ಒಂದೇ ಸಂಸ್ಥೆಯಲ್ಲಿ ಎರಡು ವರ್ಷಗಳ ಕಾಲ ಸೇವೆ ಸಲ್ಲಿಸಿದವರಿಗೆ ಬಡ್ತಿ ಸಿಗುವ ಅವಕಾಶವಿದೆ. ಮಕ್ಕಳ ವಿದ್ಯಾಭ್ಯಾಸ ಸಮಾಧಾನ ತರುವುದು. ನಿರಂತರ ಚಟುವಟಿಕೆಯಿಂದ ದೇಹಾಲಸ್ಯವನ್ನು ಹೋಗಲಾಡಿಸಿಕೊಳ್ಳಿ.

ವೃಶ್ಚಿಕ: ಹೊಸದಾಗಿ ಆರಂಭಿಸಿದ ಭೂ ವ್ಯವಹಾರದಲ್ಲಿ ಲಾಭ ದೊರೆತು ಸಂತೋಷ ತರಲಿದೆ. ರೈತಾಪಿ ವರ್ಗದವರು ವೃತ್ತಿ ಬದುಕಿನಲ್ಲಿ ನೆರೆಯವರಿಂದ ಸಹಕಾರ ಕೇಳುವುದು ಅನಿವಾರ್ಯ. ಕ್ರೀಡಾಪಟುಗಳಿಗೆ ಜಯ ಸಿಗುವುದು.

ಧನು: ಇಚ್ಛೆಯಂತೆ ಇರಲು ಬಯಸುವವರು ನಿಯಮವನ್ನು ಅನುಸರಿಸಿ. ಸರ್ಕಾರಿ ಅಧಿಕಾರಿ ವರ್ಗದವರಿಗೆ ಸ್ಥಳ ಬದಲಾವಣೆ ಸಂಭವ ಇರುವುದು. ವರ್ತಕರಿಗೆ ಶ್ರಮಕ್ಕೆ ತಕ್ಕ ಫಲ ದೊರಕಲಿದೆ.

ಮಕರ: ಪ್ರೇಮಿಗಳಿಗೆ ಹಿರಿಯರಿಂದ ಒಪ್ಪಿಗೆ ದೊರೆತು ನಿಟ್ಟುಸಿರು ಬಿಟ್ಟಂತೆ ಆಗುವುದು. ನಿರುದ್ಯೋಗಿಗಳಿಗೆ ಕೆಲಸ ಸಿಗುವ ಲಕ್ಷಣವಿದೆ. ಚಿನ್ನ ಮತ್ತು ಬೆಳ್ಳಿ ವ್ಯಾಪಾರಿಗಳು ರಕ್ಷಣೆಯ ಬಗ್ಗೆ ಗಮನವಹಿಸಬೇಕಾಗುವುದು.

ಕುಂಭ: ಆರೋಗ್ಯದಲ್ಲಿನ ವ್ಯತ್ಯಾಸಕ್ಕೆ ನಿದ್ರಾಭಂಗವೇ ಮೂಲ ಕಾರಣವಾಗುವುದು. ಮೃದು ಹಾಗೂ ಸ್ನಿಗ್ಧವಾದ ಮನಸ್ಸನ್ನು ಹೊಂದಿರುವಂಥವರಿಗೆ ನುಡಿಯುವ ಎಲ್ಲಾ ಮಾತುಗಳು ಚುಚ್ಚಿದಂತಾಗುತ್ತದೆ.

ಮೀನ: ಉತ್ತಮ ನೆನಪಿನ ಶಕ್ತಿಯು ಕೆಲಸಗಳಲ್ಲಿ ಅತ್ಯಂತ ಸಹಾಯಕಾರಿ. ಸಂದಿಗ್ಧ ಪರಿಸ್ಥಿತಿಯಲ್ಲಿರುವ ನೀವು ಪರಿಸ್ಥಿತಿಯನ್ನು ಅವಲೋಕಿಸಿ ಇಷ್ಟ ದೇವರನ್ನು ಪ್ರಾರ್ಥಿಸಿ ತೀರ್ಮಾನ ಕೈಗೊಳ್ಳಿ.

ಗುಂಡಣ್ಣ



ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು 100 ಕ್ಕೆ ₹505, 12 ಕ್ಕೆ ₹68
ಮೈಸೂರು: 100 ಕ್ಕೆ ₹515

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹333-600
ದ್ವಿತಳಿ (ಬಿ.ವಿ) ₹205-778

ರಷ್ಯಾದಿಂದ ಖರೀದಿ ನಿಲ್ಲಿಸಿದರೆ ಕಷ್ಟ

ಬೇರೆ ಕಡೆ ತೈಲ ಖರೀದಿಸಿದರೆ ₹43 ಸಾವಿರ ಕೋಟಿ ನಷ್ಟ

ನವದೆಹಲಿ (ಪಿಟಿಐ): ರಷ್ಯಾದ ಕಚ್ಚಾ ತೈಲದ ಅತಿದೊಡ್ಡ ಬಳಕೆದಾರರಾಗಿರುವ ಭಾರತದ ತೈಲ ಸಂಸ್ಕರಣಾ ಕಂಪನಿಗಳು, ಅಲ್ಲಿಂದ ಕಚ್ಚಾ ತೈಲ ಖರೀದಿಸದೆಯೂ ತಮ್ಮ ವಹಿವಾಟು ಮುಂದುವರಿಸುವುದು ತಾಂತ್ರಿಕವಾಗಿ ಸಾಧ್ಯವಿದೆ ಎಂದು ತಜ್ಞರು ಹೇಳಿದ್ದಾರೆ. ಆದರೆ ಹೀಗೆ ಮಾಡುವ ಮೊದಲು ಅವು ಅಧಿಕವಾಗಿ ಬಹಳಷ್ಟು ಹೊಂದಾಣಿಕೆಗೆ ಸಿದ್ಧವಾಗಬೇಕಿದೆ.

ರಷ್ಯಾದ ಕಚ್ಚಾ ತೈಲವನ್ನು ಸಂಸ್ಕರಿಸಿದಾಗ ಹೆಚ್ಚಿನ ಪ್ರಮಾಣದಲ್ಲಿ ಪೆಟ್ರೋಲ್, ಡೀಸೆಲ್‌ನಂತಹ ಇಂಧನ ಲಭ್ಯವಾಗುತ್ತದೆ. ಭಾರತದ ಸಂಸ್ಕರಣಾ ಕಂಪನಿಗಳು ಖರೀದಿಸುತ್ತಿರುವ ಒಟ್ಟು ಕಚ್ಚಾ ತೈಲದಲ್ಲಿ ರಷ್ಯಾದ ಕಚ್ಚಾ ತೈಲದ ಪಾಲು ಶೇ 38ರಷ್ಟು ಇದೆ. ಇದರ ಬದಲು ಬೇರೆಡೆಯಿಂದ ಕಚ್ಚಾ ತೈಲ ಖರೀದಿಸಿದರೆ ಸಂಸ್ಕರಣೆಯ ನಂತರ ಸಿಗುವ ಇಂಧನದ ಪ್ರಮಾಣ ಕಡಿಮೆ ಆಗುತ್ತದೆ ಎಂದು ಕೆಪ್ಲರ್ ಸಂಸ್ಥೆ ಹೇಳಿದೆ.

ಜುಲೈ ತಿಂಗಳಲ್ಲಿ ಭಾರತವು ರಷ್ಯಾದಿಂದ ಪ್ರತಿದಿನ 16 ಲಕ್ಷ ಬ್ಯಾರೆಲ್ ಕಚ್ಚಾ ತೈಲವನ್ನು ಖರೀದಿಸಿದೆ. ದೊಡ್ಡ ಮಟ್ಟದ ರಿಯಾಯಿತಿ ಹಾಗೂ ಭಾರತದ ಸಂಸ್ಕರಣಾ ವ್ಯವಸ್ಥೆಗೆ ಸರಿಹೊಂದುವ ಕಾರಣದಿಂದಾಗಿ ರಷ್ಯಾದಿಂದ ಕಚ್ಚಾ ತೈಲವನ್ನು ಖರೀದಿಸುವುದು ಹೆಚ್ಚಳ ಕಂಡಿದೆ ಎಂದು ಕೆಪ್ಲರ್ ವರದಿಯು ತಿಳಿಸಿದೆ.

'ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ನೀಡಿರುವ ದತ್ತಾಂಶದ ಪ್ರಕಾರ, ಬೇರೆಡೆಗಳಿಂದ ಖರೀದಿಸುವ ಕಚ್ಚಾ ತೈಲದ ಬೆಲೆಯು ರಷ್ಯಾದಿಂದ ಖರೀದಿಸಿರುವ ಕಚ್ಚಾ ತೈಲದ ಬೆಲೆಗಿಂತ ಬ್ಯಾರೆಲ್‌ಗೆ 5 ಡಾಲರ್‌ನಷ್ಟು ಹೆಚ್ಚು. ರಷ್ಯಾದ ಬದಲು ಪ್ರತಿದಿನ 18 ಬ್ಯಾರೆಲ್‌ನಷ್ಟು ಕಚ್ಚಾ ತೈಲವನ್ನು ಬೇರೆ ಮೂಲಗಳಿಂದ ಖರೀದಿಸಿದರೆ ವಾರ್ಷಿಕ ಗರಿಷ್ಠ 5 ಬಿಲಿಯನ್ ಡಾಲರ್ (ಅಂದಾಜು ₹43 ಸಾವಿರ ಕೋಟಿ) ಹೆಚ್ಚುವರಿ ಪಾವತಿ ಮಾಡಬೇಕಾಗುತ್ತದೆ' ಎಂದು ಹೇಳಿದೆ.

ಪೆಟ್ರೋಲ್ ಪಂಪ್ ಪರವಾನಗಿ ನಿಯಮ ಸಡಿಲಿಕೆ?



ದೇಶದಲ್ಲಿ ಪೆಟ್ರೋಲ್ ಪಂಪ್‌ಗಳನ್ನು ಆರಂಭಿಸುವುದಕ್ಕೆ ಸಂಬಂಧಿಸಿದ ನಿಯಮಗಳನ್ನು ಇನ್ನಷ್ಟು ಸಡಿಲಿಸುವ ಬಗ್ಗೆ ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ.

ಕೇಂದ್ರವು ಈ ನಿಯಮಗಳನ್ನು 2019ರಲ್ಲಿ ಸಡಿಲಿಸಿತ್ತು. ತೈಲ ಮಾರಾಟ ಕ್ಷೇತ್ರ ಪ್ರವೇಶಿಸಲು ತೈಲೋತ್ಪನ್ನಗಳ ಕಂಪನಿಗಳು ಮಾತ್ರವಲ್ಲದೆ ಇತರ ಕಂಪನಿಗಳಿಗೂ ಅವಕಾಶ ಕಲ್ಪಿಸಿತ್ತು.

ಆ ಸಂದರ್ಭದಲ್ಲಿ, ತೈಲೋತ್ಪನ್ನಗಳ ರಿಟೇಲ್ ಮಾರಾಟಕ್ಕೆ ಅನುಮತಿ ಬಯಸುವ ಕಂಪನಿಗಳು ಕನಿಷ್ಠ ₹250 ಕೋಟಿ ಮೌಲ್ಯ ಹೊಂದಿರಬೇಕು ಎಂದು ನಿಯಮದಲ್ಲಿ ಹೇಳಲಾಗಿತ್ತು. ಆದರೆ ಹೀಗೆ ರಿಟೇಲ್ ಮಾರಾಟ ಕ್ಷೇತ್ರ ಪ್ರವೇಶಿಸುವ ಕಂಪನಿಗಳು, ಮೂರು ವರ್ಷದೊಳಗೆ ಹೊಸ ಕಾಲದ ಪರ್ಯಾಯ ಇಂಧನ (ಸಿಎನ್‌ಜಿ, ಎಲ್‌ಎನ್‌ಜಿ, ಜೈವಿಕ ಇಂಧನ, ಇ.ವಿ. ಚಾರ್ಜಿಂಗ್) ಮಾರಾಟವನ್ನೂ ಶುರುಮಾಡುವ ಮಾತು ಕೊಡಬೇಕಿತ್ತು.

ರಿಟೇಲ್ ಮಾತ್ರವಲ್ಲದೆ, ಪೆಟ್ರೋಲ್ ಹಾಗೂ ಡೀಸೆಲ್‌ನ ಸಗಟು ಮಾರಾಟದಲ್ಲೂ ತೊಡಗಲು ಬಯಸುವ ಕಂಪನಿಗಳು ಕನಿಷ್ಠ ₹500 ಕೋಟಿ ಮೌಲ್ಯ ಹೊಂದಿರಬೇಕಿತ್ತು. 2019ರ ಈ ನಿಯಮಗಳನ್ನು ಪುನರ್ ಪರಿಶೀಲಿಸಲು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ತಜ್ಞರ ಸಮಿತಿಯೊಂದನ್ನು ರಚಿಸಿದೆ.

ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್‌ನ ಮಾರುಕಟ್ಟೆ ವಿಭಾಗದ ಮಾಜಿ ನಿರ್ದೇಶಕ ಸುಖಮಲ್ ಜೈನ್ ಅವರು ಈ ಸಮಿತಿಯ ನೇತೃತ್ವ ವಹಿಸಿದ್ದಾರೆ.

ಭಾರತದ ವಿಮಾನ ಹಾರಾಟಕ್ಕೆ ನಿರ್ಬಂಧ: ಪಾಕ್‌ಗೆ ಹಾನಿ

ಇಸ್ಲಾಮಾಬಾದ್ (ಪಿಟಿಐ): 'ತನ್ನ ವಾಯು ಪ್ರದೇಶದಲ್ಲಿ ಭಾರತೀಯ ವಿಮಾನಯಾನ ಸಂಸ್ಥೆಗಳ ವಿಮಾನಗಳ ಹಾರಾಟಕ್ಕೆ ನಿರ್ಬಂಧ ಹೇರಿದ್ದರಿಂದ 'ಪಾಕಿಸ್ತಾನ ವಿಮಾನಯಾನ ಪ್ರಾಧಿಕಾರ'ಕ್ಕೆ ಪಾಕಿಸ್ತಾನ ರೂಪಾಯಿಯಲ್ಲಿ 4.1 ಶತಕೋಟಿಯಷ್ಟು ನಷ್ಟವಾಗಿದೆ' ಎಂದು ಸರ್ಕಾರ ಹೇಳಿದೆ.

ಕಾಶ್ಮೀರದ ಪಹಲ್ಗಾಮ್ ದಾಳಿಯ ಬಳಿಕ ಎರಡೂ ದೇಶಗಳು ತಮ್ಮ ವಾಯು ಪ್ರದೇಶದಲ್ಲಿ ವಿಮಾನ ಹಾರಾಟಕ್ಕೆ ನಿರ್ಬಂಧ ಹೇರಿಕೊಂಡಿದ್ದವು. ಆಪರೇಷನ್ ಸಿಂಧೂರದ ಬಳಿಕ ಈ ನಿರ್ಬಂಧ ವಿಸ್ತರಿಸಲಾಗಿತ್ತು. ಈ ಮಾಹಿತಿಯನ್ನು ಪಾಕಿಸ್ತಾನದ ರಕ್ಷಣಾ ಸಚಿವಾಲಯವು ಸಂಸತ್ತಿಗೆ ತಿಳಿಸಿದೆ.

ಸದ್ಯಕ್ಕಂತೂ ತಗ್ಗದು ಚಿನ್ನದ ಧಾರಣೆ



ಚಿನ್ನದ ಬೆಲೆಯು ಏರುತ್ತಲೇ ಇದೆ. ಇದಕ್ಕೆ ಕಾರಣಗಳು ಹಲವು ಎನ್ನುತ್ತಿದ್ದಾರೆ ಮಾರುಕಟ್ಟೆ ತಜ್ಞರು. ಜಾಗತಿಕ ಮಟ್ಟದ ಅನಿಶ್ಚಿತತೆಗಳು, ವ್ಯಾಪಾರ ವಹಿವಾಟಿಗೆ ಸಂಬಂಧಿಸಿದ ಬಿಕ್ಕಟ್ಟುಗಳು, ಕರೆನ್ಸಿ ಮೌಲ್ಯದಲ್ಲಿನ ಏರಿಳಿತಗಳು ಹಾಗೂ ಕೇಂದ್ರೀಯ ಬ್ಯಾಂಕ್‌ಗಳು ಚಿನ್ನವನ್ನು ಖರೀದಿಸುತ್ತಿರುವುದು ಚಿನ್ನದ ಬೆಲೆಯನ್ನು ಏರುಮುಖವಾಗಿ ಇರಿಸಿವೆ. ಮಧ್ಯಮಾವಧಿಯಲ್ಲಿಯೂ ಪರಿಸ್ಥಿತಿ ಹೀಗೇ ಇರಲಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಆಧಾರ: ಪಿಟಿಐ

ಜುಲೈ 28ರಂದು 10 ಗ್ರಾಂ ಚಿನ್ನದ ದರವು ₹98,079 ಇತ್ತು. ಅದು ಈಗ ₹1,02,250ಕ್ಕೆ ಏರಿಕೆಯಾಗಿದೆ. ಹಳದಿ ಲೋಹದ ಬೆಲೆಯಲ್ಲಿನ ನಿರಂತರ ಏರಿಕೆಯು ಹೂಡಿಕೆದಾರರ ಸಂಪತ್ತನ್ನು ಹೆಚ್ಚಿಸುತ್ತಲೇ ಇದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಜುಲೈ 30ರಂದು ಒಂದು ಔನ್ಸ್ (28.34 ಗ್ರಾಂ) ಚಿನ್ನದ ದರವು 3,268 ಡಾಲರ್ (₹2,86,205) ಇತ್ತು, ಆಗಸ್ಟ್ 8ರ ವೇಳೆಗೆ ಇದು 3,534 ಡಾಲರ್‌ಗೆ (₹3,09,510) ಏರಿಕೆಯಾಗಿದೆ.

ಜಾಗತಿಕವಾಗಿ ಗೋಜಲುಗಳನ್ನು ಸೃಷ್ಟಿಸಿರುವ ಸುಂಕಗಳು ಈ ಏರಿಕೆಗೆ ಕಾರಣ. ಇದು ಇನ್ನಷ್ಟು ಹೆಚ್ಚಳ ಕಂಡರೆ ಚಿನ್ನದ ಬೆಲೆಯು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪ್ರತೀ ಔನ್ಸ್‌ಗೆ 3,800 ಡಾಲರ್ (₹3,32,797) ಆಗಬಹುದು. ಆರ್ಥಿಕ ಅನಿಶ್ಚಿತತೆಗಳು ಜಾಗತಿಕ ಮಟ್ಟದಲ್ಲಿ ಹೂಡಿಕೆದಾರರು ಚಿನ್ನದ ಮೇಲೆ ಹೆಚ್ಚಿನ ಮೊತ್ತ ತೊಡಗಿಸುವಂತೆ ಮಾಡಿವೆ.

ಪ್ರಥಮೇಶ್ ಮಲ್ಯ, ಡೆಪ್ಯುಟಿ ಉಪಾಧ್ಯಕ್ಷ, ಕೃಷಿಯೇತರ ಸರಕುಗಳು ಮತ್ತು ಕರೆನ್ಸಿಗಳ ಸಂಶೋಧನಾ ವಿಭಾಗ, ಏಂಜಲ್ ಒನ್

ವಿವಿಧ ಕೇಂದ್ರೀಯ ಬ್ಯಾಂಕ್‌ಗಳು ಚಿನ್ನದ ಸಂಗ್ರಹವನ್ನು ತಮ್ಮ ಮೀಸಲಿನಲ್ಲಿ ಹೆಚ್ಚಿಸಿಕೊಳ್ಳುವುದನ್ನು ಮುಂದುವರಿಸಲಿವೆ ಎಂದು ಹೂಡಿಕೆದಾರರು ಭಾವಿಸಿದ್ದಾರೆ. ಈಗಿನ ಅನಿಶ್ಚಿತ ಆರ್ಥಿಕ ಪರಿಸ್ಥಿತಿ ಹಾಗೂ ಅಮೆರಿಕದ ಡಾಲರ್‌ನ ಅಪಮೌಲ್ಯ ಮುಂದುವರಿದರೆ ಈ ಕೊಳ್ಳುವಿಕೆಯಲ್ಲಿ ಈ ಸಂದರ್ಭ ಹೀಗೇ ಇರಲಿದೆ. ಅಮೆರಿಕದ ಬೆಳವಣಿಗೆ ದರ ಹಾಗೂ ಅಲ್ಲಿನ ಹಣದುಬ್ಬರ ಪ್ರಮಾಣವು 'ಇನ್ನಷ್ಟು ಬಿಗಡಾಯಿಸಿರುವ ಕಾರಣಕ್ಕೆ ಚಿನ್ನದ ದರವು ದಾಖಲೆ ಮಟ್ಟದಲ್ಲಿ ಮುಂದುವರಿದಿದೆ... ಅಮೆರಿಕವು 1ಕೆ.ಜಿ ಹಾಗೂ 100 ಔನ್ಸ್ ಚಿನ್ನದ ಗಟ್ಟಿಗಳ ಮೇಲೆ ವಿಧಿಸಿರುವ ಪ್ರತಿಸುಂಕ, ಫೆಡರಲ್ ರಿಸರ್ವ್‌ನ ಸ್ವಾತಂತ್ರ್ಯದ ಬಗ್ಗೆ ಮೂಡಿರುವ ಕಳವಳವು ಹೂಡಿಕೆದಾರರು ಚಿನ್ನವನ್ನು ಹೆಚ್ಚೆಚ್ಚು ಬಯಸುವಂತೆ ಮಾಡಿವೆ.

ಎನ್. ಆರ್. ರಾಮಸ್ವಾಮಿ, ಮುಖ್ಯಸ್ಥರು, ಸರಕುಗಳು ಮತ್ತು ಸಿಆರ್‌ಎಂ, ವೆಂಚುರಾ ಸೆಕ್ಯುರಿಟೀಸ್

ಗೃಹ ಸಾಲ: ಎಲ್ಲಿಂದ ಪಡೆದರೆ ಲಾಭ?

ಬಂಡವಾಳ ಮಾರುಕಟ್ಟೆ



ಕಾವ್ಯ ಡಿ.
ಚಾರ್ಟರ್ಡ್ ಅಕೌಂಟೆಂಟ್

ಸ್ವಂತದ್ದೊಂದು ಮನೆಯಿರಬೇಕು ಎನ್ನುವುದು ಬಹುಜನರ ಕನಸು. ಮನೆ ಕಟ್ಟಿಸಲು ಅಥವಾ ಖರೀದಿಸಲು ದೊಡ್ಡ ಮೊತ್ತ ಅತ್ಯಗತ್ಯ. ಪೂರ್ತಿ ಹಣ ಕೈಯಿಂದಲೇ ವ್ಯಯಿಸಿ ಮನೆ ಖರೀದಿಸಲು ಕೆಲವರಿಗಷ್ಟೇ ಸಾಧ್ಯ. ಹೆಚ್ಚಿನವರಿಗೆ ಸ್ವಂತ ಸೂರು ನಿರ್ಮಿಸುವಾಗ ಸಾಲ ಬೇಕೇಬೇಕು. ಆದರೆ 'ಎರಡು ನಿಮಿಷದಲ್ಲಿ ಗೃಹ ಸಾಲ ಕೊಡುತ್ತೇವೆ', 'ನಿಮ್ಮ ಮನೆಗೇ ಬಂದು ಸಾಲ ಮಂಜೂರು ಮಾಡುತ್ತೇವೆ' ಎನ್ನುವ ಜಾಹಿರಾತುಗಳ ಈ ಕಾಲದಲ್ಲಿ ಎಲ್ಲಿ ಸಾಲ ಪಡೆಯಬೇಕು ಎಂಬ ಗೊಂದಲ ಗ್ರಾಹಕನದ್ದು.

ಗೃಹಸಾಲ ಎನ್ನುವುದು ಹತ್ತಿಪ್ಪತ್ತು ವರ್ಷಗಳ ಜವಾಬ್ದಾರಿ. ಈ ಸಾಲವನ್ನು ಜಾಣ್ಮೆಯಿಂದ ಪಡೆದರೆ ಲಕ್ಷಗಟ್ಟಲೆ ಹಣ ಉಳಿಯುತ್ತದೆ. ಸಾಲ ಪಡೆಯುವಾಗ ಎಚ್ಚರ ತಪ್ಪಿದರೆ ಅದೇ ಹಣ ಪೋಲಾಗುತ್ತದೆ.

ಎಲ್ಲಿ ಗೃಹಸಾಲ ಪಡೆದರೆ ಲಾಭ?: ಗೃಹಸಾಲವನ್ನು ಎರಡು ಮೂಲಗಳಿಂದ ಪಡೆಯಬಹುದು. ಒಂದನೆಯದ್ದು ಬ್ಯಾಂಕ್‌ಗಳು. ಎರಡನೆಯದ್ದು ಎನ್‌ಬಿಎಫ್‌ಸಿ (ಬ್ಯಾಂಕೇತರ ಹಣಕಾಸು ಕಂಪನಿಗಳು). ಸರ್ಕಾರಿ ಮತ್ತು ಖಾಸಗಿ ಬ್ಯಾಂಕ್‌ಗಳಲ್ಲಿ ಗೃಹಸಾಲದ ಬಡ್ಡಿ ದರ ಎನ್‌ಬಿಎಫ್‌ಸಿ ಬಡ್ಡಿ ದರಕ್ಕಿಂತ ಕಡಿಮೆ ಇರುತ್ತದೆ. ಆದರೆ ಈ ಬ್ಯಾಂಕ್‌ಗಳು ಹೆಚ್ಚಿನ ಪ್ರಮಾಣದ ನಿಯಂತ್ರಣಕ್ಕೆ ಒಳಪಟ್ಟಿರುತ್ತವೆ. ಸಾಲ ಪಡೆಯುವ ವ್ಯಕ್ತಿಯ ಆರ್ಥಿಕ ಸ್ಥಿತಿಗತಿ ಅವಲೋಕಿಸಿ ಇಲ್ಲಿ ಸಾಲ ನೀಡಲಾಗುತ್ತದೆ. ಎನ್‌ಬಿಎಫ್‌ಸಿಗಳಲ್ಲಿ ಗೃಹಸಾಲವನ್ನು ತ್ವರಿತವಾಗಿ ಪಡೆಯಬಹುದು. ಇಲ್ಲಿ ನಾನಾ ಹಂತಗಳ ಆದಾಯ ವರ್ಗದವರಿಗೂ ಸಾಲ ಸಿಗುತ್ತದೆ. ಆದರೆ ಎನ್‌ಬಿಎಫ್‌ಸಿಗಳಲ್ಲಿ ಸಾಲದ ಮೇಲಿನ ಬಡ್ಡಿ ಜಾಸ್ತಿ. (ಪಟ್ಟಿ ಗಮನಿಸಿ)

ಗೃಹಸಾಲ ನೀಡುವಾಗ ಬ್ಯಾಂಕ್ ಮತ್ತು ಎನ್‌ಬಿಎಫ್‌ಸಿಗಳ ನಡುವಿನ ವ್ಯತ್ಯಾಸ

ಮಾನದಂಡ	ಸರ್ಕಾರಿ ಮತ್ತು ಖಾಸಗಿ ಸ್ವಾಮ್ಯದ ಬ್ಯಾಂಕ್‌ಗಳು	ಎನ್‌ಬಿಎಫ್‌ಸಿ
ಬಡ್ಡಿ ದರ	ಕಡಿಮೆ ಬಡ್ಡಿ ದರ ಇರುತ್ತದೆ. ಆರ್‌ಬಿಐನ ರೆಪೊ ದರ ಅಥವಾ ಎಂಸಿಎಲ್‌ಆರ್ ದರಕ್ಕೆ ಅನುಗುಣವಾಗಿ ಬ್ಯಾಂಕ್‌ಗಳಲ್ಲಿ ಬಡ್ಡಿ ದರ ನಿಗದಿಪಡಿಸಲಾಗುತ್ತದೆ	ಬಡ್ಡಿ ದರ ಜಾಸ್ತಿ ಇರುತ್ತದೆ. ಆರ್‌ಬಿಐನ ರೆಪೊ ದರಕ್ಕೆ ಅನುಗುಣವಾಗಿ ಬಡ್ಡಿ ದರಗಳನ್ನು ನಿಗದಿಪಡಿಸುವುದಿಲ್ಲ
ಸಾಲ ನೀಡುವ ಪ್ರಕ್ರಿಯೆ ವೇಗ	ಸಾಲ ನೀಡುವ ಮುನ್ನ ಸಾಕಷ್ಟು ಸಮಯ ತೆಗೆದುಕೊಳ್ಳಲಾಗುತ್ತದೆ. ಸರಿಯಾಗಿ ದಾಖಲೆಗಳ ಪರಿಶೀಲನೆ ಮಾಡದೆ ಸಾಲ ನೀಡುವುದಿಲ್ಲ. ದಾಖಲೆ ಪೂರಕವಲ್ಲದಿದ್ದರೆ ಸಾಲ ಮಂಜೂರಾಗುವುದಿಲ್ಲ	ಇಲ್ಲಿ ಸಾಲ ನೀಡುವ ಪ್ರಕ್ರಿಯೆ ವೇಗವಾಗಿ ಪೂರ್ಣಗೊಳ್ಳುತ್ತದೆ. ಸರ್ಕಾರಿ, ಖಾಸಗಿ ಬ್ಯಾಂಕ್‌ಗಳಲ್ಲಿ ಕೇಳುವಷ್ಟು ದಾಖಲೆಗಳನ್ನು ಇಲ್ಲಿ ಕೇಳುವುದಿಲ್ಲ
ಸಾಲದ ಮೊತ್ತ	ದೊಡ್ಡ ಮೊತ್ತದ ಸಾಲ ದೀರ್ಘಾವಧಿಗೆ ಸಿಗುತ್ತದೆ	ಎನ್‌ಬಿಎಫ್‌ಸಿಗಳು ಕೆಲವೊಮ್ಮೆ ಸಾಲದ ಮೊತ್ತಕ್ಕೆ ಮಿತಿ ಹೇರುತ್ತವೆ

ಎನ್‌ಬಿಎಫ್‌ಸಿಯಲ್ಲಿ ಹೆಚ್ಚು ಬಡ್ಡಿ ಏಕೆ?: ಎನ್‌ಬಿಎಫ್‌ಸಿಗಳು ಉಳಿತಾಯ ಖಾತೆ, ಚಾಲ್ತಿ ಖಾತೆ ಮೂಲಕ ಗ್ರಾಹಕರಿಂದ ಬಂಡವಾಳ ಸಂಗ್ರಹಿಸಲು ಸಾಧ್ಯವಿಲ್ಲದ ಕಾರಣದಿಂದ ಮಾರುಕಟ್ಟೆಯಿಂದ ಹೆಚ್ಚಿನ ಬಡ್ಡಿಗೆ ಸಾಲ ಪಡೆಯುತ್ತವೆ. ಕೆಲವೊಮ್ಮೆ ಬ್ಯಾಂಕ್‌ಗಳು ಸಾಲ ನಿರಾಕರಿಸಿದವರಿಗೆ ಎನ್‌ಬಿಎಫ್‌ಸಿಗಳು ಸಾಲ ಕೊಡುವುದೂ ಇದೆ. ಕಡಿಮೆ ಕ್ರೆಡಿಟ್ ಸ್ಕೋರ್ ಇರುವವರಿಗೆ, ಸ್ಥಿರ ಆದಾಯ ಇಲ್ಲದವರಿಗೆ, ನಾನಾ ಬಗೆಯ ವಾಣಿಜ್ಯ ವಹಿವಾಟುಗಳ ಹಿನ್ನೆಲೆಯವರಿಗೆ ಸಾಲ ನೀಡಲಾಗುತ್ತದೆ. ಎನ್‌ಬಿಎಫ್‌ಸಿಗಳು ಸಾಲದ ಮೇಲಿನ ಬಡ್ಡಿ ದರಗಳನ್ನು ಆರ್‌ಬಿಐನ ರೆಪೊ ಅಥವಾ ಎಂಸಿಎಲ್‌ಆರ್ ದರಕ್ಕೆ ಅನುಗುಣವಾಗಿ ನಿಗದಿಪಡಿಸಬೇಕಿಲ್ಲ. ಹೀಗೆ ಅನೇಕ ರಿಸ್ಕ್ ತೆಗೆದುಕೊಂಡು ಸಾಲ ಕೊಡುವುದರಿಂದ ಎನ್‌ಬಿಎಫ್‌ಸಿಗಳು ಗ್ರಾಹಕರಿಂದ ಹೆಚ್ಚಿನ ಬಡ್ಡಿ ಪಡೆಯುತ್ತವೆ. (ಪಟ್ಟಿ ಗಮನಿಸಿ)

ಸರ್ಕಾರಿ ಬ್ಯಾಂಕ್, ಖಾಸಗಿ ಬ್ಯಾಂಕ್ ಮತ್ತು ಎನ್‌ಬಿಎಫ್‌ಸಿಗಳಲ್ಲಿ ಗೃಹ ಸಾಲದ ಬಡ್ಡಿ ದರ (ಆಗಸ್ಟ್ 2025)

ಸಾಲ ನೀಡುವ ಸಂಸ್ಥೆ	ವಾರ್ಷಿಕ ಬಡ್ಡಿ ದರ
ಸರ್ಕಾರಿ ಸ್ವಾಮ್ಯದ ಬ್ಯಾಂಕ್	ಶೇ 7.35ರಿಂದ ಶೇ 8.95
ಖಾಸಗಿ ಬ್ಯಾಂಕ್	ಶೇ 7.70ರಿಂದ ಶೇ 9.55
ಎನ್‌ಬಿಎಫ್‌ಸಿಗಳು	ಶೇ 8.75ರಿಂದ ಶೇ 12ಕ್ಕಿಂತ ಹೆಚ್ಚು
(ಗಮನಿಸಿ – ಇದು ಅಂದಾಜು ಪಟ್ಟಿ ಮಾತ್ರ. ಸಾಲದ ಮೊತ್ತ, ನಿಮ್ಮ ಆದಾಯ, ಉದ್ಯೋಗ, ಕ್ರೆಡಿಟ್ ಅಂಕ ಆಧರಿಸಿ ಬಡ್ಡಿ ದರ ನಿಗದಿಯಾಗುತ್ತದೆ)	

ಯಾವಾಗ ಬ್ಯಾಂಕ್‌ನಿಂದ ಗೃಹಸಾಲ ಪಡೆಯಬೇಕು?: ನಿಮ್ಮ ಕ್ರೆಡಿಟ್ ಅಂಕ ಉತ್ತಮವಾಗಿದ್ದು ಸ್ಥಿರ ಆದಾಯವಿದ್ದರೆ ಬ್ಯಾಂಕ್‌ನಿಂದ ಗೃಹಸಾಲ ಪಡೆಯಿರಿ. ನೀವು ಖರೀದಿಸುತ್ತಿರುವ ಆಸ್ತಿಯ ದಾಖಲೆಗಳು ಸರಿಯಾಗಿ ಇದ್ದರೆ ಮಾತ್ರ ಪ್ರಮುಖ ಬ್ಯಾಂಕ್‌ಗಳು ಸಾಲ ಕೊಡುತ್ತವೆ ಎನ್ನುವುದು ನೆನಪಿನಲ್ಲಿರಲಿ. ಸರ್ಕಾರಿ, ಖಾಸಗಿ ಬ್ಯಾಂಕ್‌ಗಳಿಂದ ದೀರ್ಘಾವಧಿಗೆ ಸಾಲ ಪಡೆಯಲು ಸಾಧ್ಯವಾಗುವ ಜೊತೆಗೆ ಬಡ್ಡಿ ಕಡಿಮೆ ಇರುವುದರಿಂದ ಇಎಂಐ ಹೊರೆಯೂ ತಗ್ಗುತ್ತದೆ. ಮುಖ್ಯವಾಹಿನಿಯ ಬ್ಯಾಂಕ್‌ಗಳು ಹೆಚ್ಚು ಪಾರದರ್ಶಕವಾಗಿದ್ದು ಸಾಕಷ್ಟು ಅಳೆದು-ತೂಗಿ ಸಾಲ ಕೊಡುವುದರಿಂದ ನೀವು ಕೊಂಡಿರುವ ಆಸ್ತಿಯ ನೈಜತೆಯ ಬಗ್ಗೆ ಒಂದಿಷ್ಟು ಖಾತರಿ ಸಿಗುತ್ತದೆ.

ಯಾವಾಗ ಎನ್‌ಬಿಎಫ್‌ಸಿಯಿಂದ ಸಾಲ ಪಡೆಯಬೇಕು: ಮುಖ್ಯವಾಹಿನಿಯ ಸರ್ಕಾರಿ ಮತ್ತು ಖಾಸಗಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿ ಗೃಹಸಾಲ ಸಿಗದಿದ್ದಾಗ ಎನ್‌ಬಿಎಫ್‌ಸಿಗಳು ನಿಮ್ಮ ಆಯ್ಕೆಯಾಗಬೇಕು. ಏಕೆಂದರೆ ಇಲ್ಲಿ ಬಡ್ಡಿ ದರ ಜಾಸ್ತಿ ಇರುತ್ತದೆ. ನಿಮ್ಮ ಕ್ರೆಡಿಟ್ ಅಂಕ ಚೆನ್ನಾಗಿಲ್ಲದಿದ್ದರೆ, ನಿಮ್ಮ ಆದಾಯ ಸ್ಥಿರವಲ್ಲದಿದ್ದರೆ, ನಿಮ್ಮ ಆಸ್ತಿ ರೆವಿನ್ಯೂ ವ್ಯಾಪ್ತಿಯಲ್ಲಿ ಬರುತ್ತಿದ್ದರೆ ಎನ್‌ಬಿಎಫ್‌ಸಿಗಳಿಂದ ಸಾಲ ಪಡೆಯುವುದು ಅನಿವಾರ್ಯವಾಗುತ್ತದೆ.

ಉತ್ತಮ ಬಡ್ಡಿ ದರಕ್ಕೆ ಗೃಹ ಸಾಲ ಪಡೆಯುವುದು ಹೇಗೆ?: ಉತ್ತಮ ಬಡ್ಡಿ ದರಕ್ಕೆ ಗೃಹ ಸಾಲ ಸಿಗಬೇಕಾದರೆ ನಿಮ್ಮ ಕ್ರೆಡಿಟ್ ಅಂಕವು 750ಕ್ಕಿಂತ ಹೆಚ್ಚಿಗೆ ಇರಬೇಕು. ನಿಮಗೆ ಸ್ಥಿರವಾದ ಉದ್ಯೋಗ ಅಥವಾ ಬ್ಯುಸಿನೆಸ್ ಇದ್ದು ಮಾಸಿಕವಾಗಿ ನಿರ್ದಿಷ್ಟ ಆದಾಯವಿರಬೇಕು. ನೀವು ಕೊಳ್ಳುತ್ತಿರುವ ಆಸ್ತಿಯ ದಾಖಲೆಗಳು ಪಕ್ಕಾ ಇರಬೇಕು. ಭಾರತೀಯ ರಿಸರ್ವ್ ಬ್ಯಾಂಕ್‌ನ ಬಡ್ಡಿ ದರ ಏರಿಳಿತದ ಲಾಭ ಪಡೆಯಲು ರೆಪೊ ದರದ ಆಧಾರದಲ್ಲಿ ಗೃಹ ಸಾಲ ಪಡೆದುಕೊಳ್ಳಬೇಕು.

ಕಿವಿಮಾತು: ಗೃಹಸಾಲ ಪಡೆಯುವಾಗ ಮುಖ್ಯವಾಹಿನಿಯ ಸರ್ಕಾರಿ ಮತ್ತು ಖಾಸಗಿ ಬ್ಯಾಂಕ್‌ಗಳು ನಿಮ್ಮ ಆದ್ಯತೆಯಾಗಲಿ. ಅಲ್ಲಿ ಸಾಲ ಸಿಗದಿದ್ದರೆ ಮಾತ್ರ ಎನ್‌ಬಿಎಫ್‌ಸಿಗಳ ಮೊರೆ ಹೋಗಿ. ಪ್ರಮುಖ ಬ್ಯಾಂಕ್‌ಗಳಲ್ಲಿ ಸಾಲ ಸಿಗುವ ಅರ್ಹತೆ ಇದ್ದರೂ ನೀವು ಎನ್‌ಬಿಎಫ್‌ಸಿಗಳ ಬಳಿ ಸಾಲಕ್ಕಾಗಿ ಮೊರೆ ಹೋದರೆ ಹೆಚ್ಚಿನ ಬಡ್ಡಿ ಕಟ್ಟಬೇಕಾಗಬಹುದು.

'ಇ.ವಿ ಬಳಕೆ ಹೆಚ್ಚಲು ಚಾರ್ಜಿಂಗ್ ಕೇಂದ್ರ ಅಗತ್ಯ'



ನವದೆಹಲಿ (ಪಿಟಿಐ): ವಿದ್ಯುತ್ ಚಾಲಿತ ವಾಹನಗಳ ಬಳಕೆ ತ್ವರಿತವಾಗಿ ಹೆಚ್ಚಳ ಕಾಣುವಲ್ಲಿ ಸಾರ್ವಜನಿಕ ಚಾರ್ಜಿಂಗ್ ಕೇಂದ್ರಗಳ ಸ್ಥಾಪನೆಯು ಪ್ರಮುಖ ಪಾತ್ರ ವಹಿಸಲಿದೆ, ಇವುಗಳ ಸಂಖ್ಯೆ ಹೆಚ್ಚಬೇಕಿದೆ ಎಂದು ಮಾರುತಿ ಸುಜುಕಿ ಇಂಡಿಯಾದ ಹಿರಿಯ ಕಾರ್ಯನಿರ್ವಾಹಕ ಅಧಿಕಾರಿ (ಮಾರುಕಟ್ಟೆ ಮತ್ತು ಮಾರಾಟ) ಪಾರ್ಥೊ ಬ್ಯಾನರ್ಜಿ ಹೇಳಿದ್ದಾರೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕಂಪನಿಯು ತನ್ನ ಮೊದಲ ವಿದ್ಯುತ್ ಚಾಲಿತ ವಾಹನ ಇ-ವಿಟಾರಾ ಬಿಡುಗಡೆ ಮಾಡಲಿದೆ. ಗ್ರಾಹಕರು ವಿದ್ಯುತ್ ಚಾಲಿತ ವಾಹನಗಳನ್ನು (ಇ.ವಿ) ಕುಟುಂಬದ ಪ್ರಾಥಮಿಕ ಕಾರು ಎಂದು ಪರಿಗಣಿಸದ ಕಾರಣಕ್ಕೆ ಈ ವಿಭಾಗವು ಸಾಕಷ್ಟು ಬೆಳವಣಿಗೆ ಕಾಣುತ್ತಿಲ್ಲ. ಒಂದು ಕಾರನ್ನು ಹೊಂದಲು ಬಯಸುವ ವ್ಯಕ್ತಿ ತನ್ನ ಮೊದಲ ಕಾರು ವಿದ್ಯುತ್‌ಚಾಲಿತ ವಾಹನವಾಗಲು ಬಯಸುವುದಿಲ್ಲ ಎಂದು ಹೇಳಿದ್ದಾರೆ.

ಹೀಗಾಗಿ, ವಾಹನ ತಯಾರಿಕಾ ಕಂಪನಿಗಳು 500 ಕಿ.ಮೀ ರೇಂಜ್ ನೀಡುವ ಕಾರುಗಳನ್ನು ತಯಾರಿಸಬೇಕಿದೆ. ಜೊತೆಗೆ ಸಾರ್ವಜನಿಕ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಬೇಕಿದೆ. ಮಾರುತಿ ಸುಜುಕಿಯು 100 ನಗರಗಳಲ್ಲಿ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪನೆ ಮಾಡುತ್ತಿದೆ. ಆದರೆ, ಹೆದ್ದಾರಿಗಳಲ್ಲಿ ಜಾರ್ಜಿಂಗ್ ಕೇಂದ್ರಗಳ ಕೊರತೆಯಿದೆ ಎಂದು ಹೇಳಿದ್ದಾರೆ.

'₹2,999ಕ್ಕೆ ಆಲ್ಟೊ ಕಾರು'

ಹೊಸ ನಿಯಮಗಳಿಂದ ಕಾರುಗಳ ವೆಚ್ಚ ಹೆಚ್ಚುತ್ತಿದೆ, ಇದು ಮಾರಾಟದ ಇಳಿಕೆಗೆ ಕಾರಣವಾಗಿದೆ. ಹೀಗಾಗಿ, ಕಂಪನಿಯು ಹಣಕಾಸಿನ ನೆರವು ನೀಡಲಿದೆ. ಶೀಘ್ರದಲ್ಲೇ ₹2,999 ನೀಡಿ ಆಲ್ಟೊ ಕಾರನ್ನು ಖರೀದಿಸುವ ಪ್ಯಾಕೇಜ್ ಪರಿಚಯಿಸಲಾಗುವುದು ಎಂದು ಬ್ಯಾನರ್ಜಿ ಹೇಳಿದ್ದಾರೆ.

ಭೂಸುಧಾರಣೆಗೆ ಸಿಐಐ ಒತ್ತಾಯ

ನವದೆಹಲಿ (ಪಿಟಿಐ): ಭಾರತವು ಜಾಗತಿಕ ಮಟ್ಟದಲ್ಲಿ ತಯಾರಿಕಾ ಕೇಂದ್ರವಾಗಿ ಬೆಳೆಯಬೇಕು ಎಂದಾದರೆ ಸಮಗ್ರ ಸ್ವರೂಪದ ಭೂಸುಧಾರಣೆಯ ಅಗತ್ಯ ಇದೆ ಎಂದು ಭಾರತೀಯ ಕೈಗಾರಿಕಾ ಮಹಾಸಂಘ (ಸಿಐಐ) ಹೇಳಿದೆ.

ಸಮನ್ವಯದ ಆಧಾರದಲ್ಲಿ, ಸಹಮತದ ಆಧಾರದಲ್ಲಿ ಸುಧಾರಣೆಗಳನ್ನು ಜಾರಿಗೆ ತರಲು ಜಿಎಸ್‌ಟಿ ಮಂಡಳಿಯ ಮಾದರಿಯಲ್ಲಿ ಇದಕ್ಕೂ ಒಂದು ಮಂಡಳಿಯನ್ನು ರಚಿಸಬೇಕು. ಮುದ್ರಾಂಕ ಶುಲ್ಕವು ಭಾರತದಾದ್ಯಂತ ಒಂದೇ ಆಗಿರಬೇಕು, ಅದು ಶೇ 3–5ರ ಪ್ರಮಾಣದಲ್ಲಿ ಇರಬೇಕು ಎಂದು ಸಿಐಐ ಹೇಳಿದೆ.

ವಿವಿಧ ದೇಶಗಳು ಜಾರಿಗೆ ತರುತ್ತಿರುವ ಮಾರುಕಟ್ಟೆ ರಕ್ಷಣೆಯ ಕ್ರಮಗಳು ಹಾಗೂ ವಾಣಿಜ್ಯ ಸಮರವು ಸವಾಲನ್ನು ಸೃಷ್ಟಿಸುತ್ತದೆಯಾದರೂ, ಭಾರತವು ಸ್ಥಿರವಾದ ನೀತಿಗಳನ್ನು ಹೊಂದಿರುವ ಕಾರಣಕ್ಕೆ ದೇಶವು ಮುಂದೆಯೂ ಹೂಡಿಕೆಯನ್ನು ಆಕರ್ಷಿಸಲಿದೆ ಎಂದು ಅದು ಅಭಿಪ್ರಾಯ ವ್ಯಕ್ತಪಡಿಸಿದೆ.

ಭೂಸುಧಾರಣಾ ಕಾರ್ಯತಂತ್ರವು ದೇಶ ತಯಾರಿಕಾ ಸಾಮರ್ಥ್ಯವನ್ನು ಹೆಚ್ಚು ಮಾಡುವುದಷ್ಟೇ ಅಲ್ಲದೆ, ದೇಶದ ಬಗ್ಗೆ ಹೂಡಿಕೆದಾರರಿಗೆ ಇರುವ ವಿಶ್ವಾಸವನ್ನು ಕೂಡ ಹೆಚ್ಚಿಸುತ್ತದೆ, ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ಸಾಧ್ಯತೆಯನ್ನು ಹೆಚ್ಚಿಸುತ್ತದೆ, ಎಲ್ಲರನ್ನೂ ಒಳಗೊಳ್ಳುವ ಬೆಳವಣಿಗೆಗೆ ನೆರವಾಗುತ್ತದೆ ಎಂದು ಸಿಐಐ ಹೇಳಿದೆ.

ಇಸ್ರೇಲ್‌ನಿಂದ ಗುಂಡಿನ ದಾಳಿ: ಆರೋಪ

ಗಾಜಾ: ನೆರವಿನ ನಿರೀಕ್ಷೆಯಲ್ಲಿದ್ದ 26 ಜನ ಸಾವು



ದಕ್ಷಿಣ ಗಾಜಾದಲ್ಲಿ ನಿರಾಶ್ರಿತರಿಗೆ ಅಗತ್ಯ ಸಾಮಗ್ರಿಗಳನ್ನು ನೀಡಲಾಯಿತು – ಎಎಫ್‌ಪಿ ಚಿತ್ರ

ದೀರ್ ಅಲ್-ಬಲಾಹ್ (ಗಾಜಾ ಪಟ್ಟಿ) (ಎಪಿ): ಮಾನವೀಯ ನೆರವು ಪಡೆಯಲು ಬಂದಿದ್ದ 26 ಪ್ಯಾಲೆಸ್ಟೀನಿಯರು ಗಾಜಾ ಪಟ್ಟಿಯಲ್ಲಿ ಮೃತಪಟ್ಟಿದ್ದಾರೆ.

ಮೋರಗ್ ಕಾರಿಡಾರ್‌ನಲ್ಲಿ 10 ಮಂದಿ ಮತ್ತು ಜಿಕಿಮ್ ಕ್ರಾಸಿಂಗ್‌ನಲ್ಲಿ 6 ಮಂದಿ ಸಾವಿಗೀಡಾಗಿದ್ದಾರೆ ಎಂದು ಗಾಜಾದ ಆರೋಗ್ಯ ಸಚಿವಾಲಯ ಮತ್ತು ಶಿಫಾ ಆಸ್ಪತ್ರೆ ತಿಳಿಸಿವೆ.

ಕೇಂದ್ರ ಗಾಜಾದಲ್ಲಿ ನೆರವಿಗಾಗಿ ಕಾಯುತ್ತಿದ್ದ ಗುಂಪಿನ ಮೇಲೆ ಗುಂಡಿನ ದಾಳಿ ನಡೆದಿದೆ ಎಂದು ಪ್ರತ್ಯಕ್ಷದರ್ಶಿಯೊಬ್ಬರು ತಿಳಿಸಿದ್ದಾರೆ. ಇಸ್ರೇಲ್ ನಡೆಸಿದ ಗುಂಡಿನ ದಾಳಿಯಿಂದಾಗಿ ನಾಲ್ವರು ಮೃತಪಟ್ಟಿದ್ದಾರೆ ಎಂದು ನುಸೇರತ್ ನಿರಾಶ್ರಿತರ ಶಿಬಿರದ ಬಳಿಯ ಅವಾಡ ಆಸ್ಪತ್ರೆ ಹೇಳಿದೆ.

'ನೆರವು ನೀಡುತ್ತಿದ್ದ ಸ್ಥಳಗಳಲ್ಲಿ ಯಾವುದೇ ದುರ್ಘಟನೆಗಳು ನಡೆದಿಲ್ಲ' ಎಂದು ಗಾಜಾದಲ್ಲಿ ಮಾನವೀಯ ನೆರವು ನೀಡುತ್ತಿರುವ ಸಂಸ್ಥೆ ಸ್ಪಷ್ಟಪಡಿಸಿದೆ.

'ಮಧ್ಯ ಗಾಜಾದಲ್ಲಿ ನೆರವು ನೀಡುತ್ತಿದ್ದ ಸ್ಥಳಗಳಲ್ಲಿ ಯಾವುದೇ ದಾಳಿಯನ್ನು ನಡೆಸಿಲ್ಲ' ಎಂದು ಇಸ್ರೇಲ್ ಸೇನೆ ಹೇಳಿದೆ.

ಅಪೌಷ್ಟಿಕತೆಯಿಂದ ಸಾವು: ಪ್ಯಾಲೆಸ್ಟೀನ್‌ನಲ್ಲಿ ಅಪೌಷ್ಟಿಕತೆಯಿಂದಾಗಿ ಶನಿವಾರ ಇಬ್ಬರು ಮಕ್ಕಳು ಮೃತಪಟ್ಟಿದ್ದು, ಯುದ್ಧ ಆರಂಭಗೊಂಡ ಬಳಿಕ ಮೃತಪಟ್ಟ ಮಕ್ಕಳ ಸಂಖ್ಯೆ 100ಕ್ಕೆ ಏರಿಕೆಯಾಗಿದೆ.

ಬ್ರಿಟನ್; ಪ್ಯಾಲೆಸ್ಟೀನ್ ಪರ ಸಂಘಟನೆಗೆ ಬೆಂಬಲ: 474 ಮಂದಿ ಬಂಧನ



'ಪ್ಯಾಲೆಸ್ಟೀನ್ ಆ್ಯಕ್ಷನ್'ಗೆ ಬೆಂಬಲ ನೀಡಿ ಬ್ರಿಟನ್‌ನ ಸಂಸತ್ತಿನ ಆವರಣದಲ್ಲಿ ನಡೆದ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ 89 ವರ್ಷದ ವೃದ್ಧೆಯನ್ನು ಪೊಲೀಸರು ಬಂಧಿಸಿದರು –ಎಎಫ್‌ಪಿ ಚಿತ್ರ

ಲಂಡನ್ (ಪಿಟಿಐ): ಪ್ಯಾಲೆಸ್ಟೀನ್ ಪರ ಪ್ರತಿಭಟನೆ ನಡೆಸುತ್ತಿದ್ದ ನಿಷೇಧಿತ ಸಂಘಟನೆ 'ಪ್ಯಾಲೆಸ್ಟೀನ್ ಆ್ಯಕ್ಷನ್'ಗೆ ಬೆಂಬಲ ನೀಡಿ, ಬ್ರಿಟನ್‌ನ ಸಂಸತ್ತಿನ ಆವರಣದಲ್ಲಿ ನಡೆಸಲಾದ ಪ್ರತಿಭಟನೆಯಲ್ಲಿ ಭಾಗಿಯಾದ ಒಟ್ಟು 474 ಜನರನ್ನು ಶನಿವಾರ ಬಂಧಿಸಲಾಗಿದೆ ಎಂದು ಲಂಡನ್ ಪೊಲೀಸರು ಮಾಹಿತಿ ನೀಡಿದ್ದಾರೆ.

ದೇಶದಲ್ಲಿ ಕಳೆದ ಒಂದು ದಶಕದಲ್ಲಿ ಒಂದೇ ಕಾರ್ಯಾಚರಣೆಯಲ್ಲಿ ಇಷ್ಟು ಜನರನ್ನು ಬಂಧಿಸಿರುವುದು ಇದೇ ಮೊದಲು.

'ಪ್ಯಾಲೆಸ್ಟೀನ್ ಆ್ಯಕ್ಷನ್' ಸಂಘಟನೆಯನ್ನು ನಿಷೇಧಿಸಿ ಬ್ರಿಟನ್ ಸರ್ಕಾರ ಜುಲೈ 5ರಂದು ಆದೇಶ ಹೊರಡಿಸಿತು. ಈ ಸಂಘಟನೆಗೆ ಬೆಂಬಲ ನೀಡುವುದು ಕ್ರಿಮಿನಲ್ ಅಪರಾಧವೆಂದು, ಬೆಂಬಲ ನೀಡಿದರೆ 14 ವರ್ಷ ಜೈಲು ಶಿಕ್ಷೆ ವಿಧಿಸಲಾಗುವುದು ಎಂದು ಘೋಷಿಸಿತು.

ನಿಷೇಧಿತ ಸಂಘಟನೆಗೆ ಬೆಂಬಲ ನೀಡಿದ್ದಕ್ಕಾಗಿ ಭಯೋತ್ಪಾದನೆ ನಿಗ್ರಹ ಕಾಯ್ದೆಯಡಿ 466 ಜನರನ್ನು ಬಂಧಿಸಲಾಗಿದೆ. ಇವರಲ್ಲಿ ಬಹುತೇಕರು, ಪ್ಯಾಲೆಸ್ಟೀನ್ ಪರ ಬರಹಗಳಿರುವ ಫಲಕಗಳನ್ನು ಹಿಡಿದಿದ್ದರು. ಪೊಲೀಸ್ ಅಧಿಕಾರಿಗಳನ್ನು ನಿಂದಿಸಿರುವುದು ಸೇರಿದಂತೆ ಇತರ ಆರೋಪಗಳ ಮೇಲೆ 8 ಮಂದಿಯನ್ನು ಬಂಧಿಸಲಾಗಿದೆ.

'ಪ್ಯಾಲೆಸ್ಟೀನ್ ಆ್ಯಕ್ಷನ್' ಸಂಘಟನೆಯು ಹಿಂಸೆಯಲ್ಲಿ ತೊಡಗಿದ್ದು, ಇದರಿಂದ ಹಲವರು ಗಾಯಗೊಂಡರು. ಸಂಘಟನೆಯಿಂದ ಹಾನಿಯಾಗುವುದನ್ನು ತಪ್ಪಿಸಲು ಮತ್ತು ಭದ್ರತೆಗಾಗಿ ಇದನ್ನು ನಿಷೇಧಿಸಲಾಯಿತು' ಎಂದು ಗೃಹ ಕಾರ್ಯದರ್ಶಿ ಯಿವೆಟ್ ಕೂಪರ್ ಹೇಳಿದರು. ಕಾರ್ಯಾಚರಣೆ ನಡೆಸಿ ಅನೇಕರನ್ನು ಬಂಧಿಸಿದ ಪೊಲೀಸರನ್ನು ಅವರು ಶ್ಲಾಘಿಸಿದರು.

'ಮತ ಕಳವು' ವಿರುದ್ಧ ಅಭಿಯಾನ

ಒಂದನೇ ಪುಟದಿಂದ...

ಪಕ್ಷವು ಆರಂಭಿಸಿರುವ votechori.in/ecdemand ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳುವ ಮೂಲಕ ಈ ಬೇಡಿಕೆಯನ್ನು ಬೆಂಬಲಿಸುವಂತೆ ಮನವಿ ಮಾಡಿದ್ದಾರೆ. 'ಇದು ಪ್ರಜಾಪ್ರಭುತ್ವವನ್ನು ರಕ್ಷಿಸುವ ಹೋರಾಟ' ಎಂದು ಅವರು ಹೇಳಿದರು.

ವೆಬ್ ಪೋರ್ಟಲ್ ಲಿಂಕ್ ಅನ್ನು ಕ್ಲಿಕ್ ಮಾಡಿ ಅಗತ್ಯ ಮಾಹಿತಿಗಳನ್ನು ಭರ್ತಿ ಮಾಡುವ ಮೂಲಕ ಈ ಅಭಿಯಾನಕ್ಕೆ ಬೆಂಬಲ ಸೂಚಿಸಬಹುದು. ಬಿಜೆಪಿ ಮತ್ತು ಚುನಾವಣಾ ಆಯೋಗವು ಜತೆಯಾಗಿ ಲೋಕಸಭೆ ಚುನಾವಣೆಯಲ್ಲಿ 'ಮತ ಕಳ್ಳತನ' ಮಾಡಿವೆ ಎಂದು ರಾಹುಲ್ ಅವರು ಆರೋಪಿಸಿರುವ ವಿಡಿಯೊವನ್ನು ಸಹ ವೆಬ್ ಪೋರ್ಟಲ್ ಹೊಂದಿದೆ.

ಒಬ್ಬ ವ್ಯಕ್ತಿಯು ಪೋರ್ಟಲ್‌ನಲ್ಲಿ ನೋಂದಾಯಿಸಿದರೆ ಅವರ ಹೆಸರಿನಲ್ಲಿ ಪ್ರಮಾಣಪತ್ರ ನೀಡಲಾಗುತ್ತದೆ. 'ವೋಟ್ ಚೋರಿ'ಯನ್ನು (ಮತ ಕಳ್ಳತನ) ವಿರೋಧಿಸುತ್ತೇನೆ' ಎಂದು ಆ ಪ್ರಮಾಣಪತ್ರದಲ್ಲಿ ಬರೆಯಲಾಗಿದೆ.

'ಚುನಾವಣಾ ಆಯೋಗವು ಡಿಜಿಟಲ್ ಮತದಾರರ ಪಟ್ಟಿಯನ್ನು ನೀಡುವಂತೆ ರಾಹುಲ್ ಗಾಂಧಿ ಅವರು ಮಾಡಿರುವ ಬೇಡಿಕೆಯನ್ನು ನಾನು ಬೆಂಬಲಿಸುತ್ತೇನೆ' ಎಂದು ಪ್ರಮಾಣ ಪತ್ರದಲ್ಲಿ ಹೇಳಲಾಗಿದೆ. ಪೋರ್ಟಲ್‌ನಲ್ಲಿ ನೀಡಿರುವ ಮೊಬೈಲ್ ಸಂಖ್ಯೆಗೆ ಕರೆ ಮಾಡಿ ಎಸ್‌ಎಂಎಸ್ ಮೂಲಕ ಲಿಂಕ್ ಪಡೆದು ಭರ್ತಿ ಮಾಡುವ ಆಯ್ಕೆಯನ್ನೂ ನೀಡಲಾಗಿದೆ.

ಪ್ರಮಾಣಪತ್ರವು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಮತ್ತು ಅಜಯ್ ಮಾಕನ್ ಅವರ ಸಹಿಗಳನ್ನು ಹೊಂದಿದೆ. ಕಾಂಗ್ರೆಸ್‌ನ ಹಲವು ನಾಯಕರು ಮತ್ತು ಬೆಂಬಲಿಗರು ಪೋರ್ಟಲ್‌ನಲ್ಲಿ ನೋಂದಾಯಿಸಿಕೊಂಡು ತಾವು ಪಡೆದ ಪ್ರಮಾಣಪತ್ರಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದಾರೆ.

16 ವರ್ಷದ ಬಳಿಕ ಸಂಗೀತ ವಿ.ವಿಗೆ ನೆಲೆ

ಒಂದನೇ ಪುಟದಿಂದ...

ಇಲ್ಲಿ ಗುರುಕುಲ ಪದ್ಧತಿಯಲ್ಲಿ ತರಗತಿಗಳನ್ನು ನಡೆಸಲಾಗುತ್ತಿದ್ದು, ಅದಕ್ಕೆ ತಕ್ಕಂತೆ ಕುಟೀರಗಳನ್ನು ನಿರ್ಮಿಸಲಾಗಿದೆ.

₹ 4.8 ಕೋಟಿ ವೆಚ್ಚ: ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಖರ್ಚು ಭರಿಸುತ್ತಿದ್ದು, ಈವರೆಗೆ ₹4.80 ಕೋಟಿ ವ್ಯಯಿಸಿದೆ. ಪ್ರಾಯೋಗಿಕ ತರಗತಿಗಳಿಗೆ 8 ಕುಟೀರಗಳು, ಥಿಯರಿ ತರಗತಿಗಾಗಿ 4 ಕೊಠಡಿ, (ಸೆಮಿನಾರ್ ಹಾಲ್), ಶೌಚಾಲಯ ನಿರ್ಮಿಸಲಾಗಿದೆ. ಈ ವಿಶ್ವವಿದ್ಯಾಲಯಕ್ಕೆ ಸ್ವಂತ ಕಟ್ಟಡ ನಿರ್ಮಾಣಕ್ಕೆಂದು ಹಲವು ಕಡೆಗಳಲ್ಲಿ ಜಾಗ ಗುರುತಿಸಲಾಗಿತ್ತು. ಆದರೆ, ನಾನಾ ಕಾರಣಗಳಿಂದ ಅವು ದಕ್ಕಿರಲಿಲ್ಲ ಈಗ, ನಾಡನಹಳ್ಳಿಯಲ್ಲಿ ಕ್ಯಾಂಪಸ್ ಸಿದ್ಧವಾಗುತ್ತಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಕುಲಪತಿ ಪ್ರೊ.ನಾಗೇಶ್ ಬೆಟ್ಟಕೋಟೆ, '2025–26ನೇ ಸಾಲಿನ ಪದವಿ, ಸ್ನಾತಕೋತ್ತರ ಪದವಿ ತರಗತಿಗಳನ್ನು ನಾಡನಹಳ್ಳಿ ಕ್ಯಾಂಪಸ್‌ನಲ್ಲೇ ನಡೆಸಲಾಗುವುದು' ಎಂದರು.

ಅ.31ಕ್ಕೆ ಬಾಹುಬಲಿ ದರ್ಶನ





ರಾಜಮೌಳಿ

ರಾಜಮೌಳಿ ನಿರ್ದೇಶನದಲ್ಲಿ ಪ್ರಭಾಸ್ ನಟಿಸಿದ್ದ 'ಬಾಹುಬಲಿ: ದಿ ಬಿಗಿನಿಂಗ್' ಚಿತ್ರ ಭಾರತೀಯ ಚಿತ್ರರಂಗದಲ್ಲಿಯೇ ಇತಿಹಾಸ ಸೃಷ್ಟಿಸಿತ್ತು. ಭಾರತೀಯ ಚಿತ್ರೋದ್ಯಮದ ದೃಶ್ಯ ವೈಭವಕ್ಕೆ ಮರು ವ್ಯಾಖ್ಯಾನ ನೀಡಿದ ಚಿತ್ರವಿದು. ವಿಎಫ್‌ಎಕ್ಸ್, ಗ್ರಾಫಿಕ್ಸ್ ಲೋಕದ ಸಾಮರ್ಥ್ಯವನ್ನು ತೆರೆದಿಟ್ಟಿತ್ತು. ಇದರ ಭರ್ಜರಿ ಯಶಸ್ಸಿನ ಬಳಿಕ 'ಬಾಹುಬಲಿ: ದಿ ಕನ್‌ಕ್ಲೂಷನ್' ಕೂಡ ತೆರೆ ಕಂಡಿತ್ತು.

'ಬಾಹುಬಲಿ' ಬಿಡುಗಡೆಗೊಂಡು ಹತ್ತು ವರ್ಷಗಳು ಕಳೆದಿವೆ. ಇದೇ ಖುಷಿಯಲ್ಲಿ ಎರಡೂ ಭಾಗಗಳನ್ನೂ ಸೇರಿಸಿ 'ಬಾಹುಬಲಿ: ದಿ ಎಪಿಕ್' ಚಿತ್ರ ಬಿಡುಗಡೆ ಮಾಡಲು ಚಿತ್ರತಂಡ ಅಣಿಯಾಗಿದೆ. ಈ ವರ್ಷ ಅ.31ರಂದು ಚಿತ್ರ ತೆರೆಗೆ ಬರಲಿದೆ. ಆಗಸ್ಟ್ 14ರಂದು ತೆರೆ ಕಾಣುತ್ತಿರುವ ಬಹುನಿರೀಕ್ಷಿತ 'ಕೂಲಿ' ಮತ್ತು 'ವಾರ್ 2' ಸಿನಿಮಾಗಳ ಜತೆಗೆ 'ಬಾಹುಬಲಿ: ದಿ ಎಪಿಕ್' ಟೀಸರ್ ಪ್ರದರ್ಶನಗೊಳ್ಳಲಿದೆ.

ಎರಡೂ ಸಿನಿಮಾಗಳನ್ನು ಯಥಾವತ್ತು ಜೋಡಿಸಿ ಬಿಡುಗಡೆ ಮಾಡುತ್ತಿಲ್ಲ. ಹಾಗೆ ಮಾಡಿದರೆ ಚಿತ್ರದ ಅವಧಿ 5 ಗಂಟೆ 27 ನಿಮಿಷಗಳಾಗಲಿವೆ. ಬದಲಿಗೆ ಎರಡೂ ಭಾಗಗಳಲ್ಲಿಯೂ ಒಂದಷ್ಟು ದೃಶ್ಯಗಳಿಗೆ ಕತ್ತರಿ ಹಾಕಿ ಒಟ್ಟಾರೆ ಚಿತ್ರದ ಅವಧಿಯನ್ನು 3 ಗಂಟೆ 45 ನಿಮಿಷಗಳಿಗೆ ಇಳಿಸಲಾಗಿದೆ. ಹೊಸ ಅನುಭವಕ್ಕಾಗಿ ಕೆಲವು ಹೊಸ ದೃಶ್ಯಗಳನ್ನು ಸೇರಿಸಿರುವುದಾಗಿ ಚಿತ್ರತಂಡ ಹೇಳಿದೆ.

'ಬಾಹುಬಲಿ' ಸಿನಿಮಾದಲ್ಲಿ ಪ್ರಭಾಸ್, ಅನುಷ್ಕಾ ಶೆಟ್ಟಿ, ರಾಣಾ ದಗ್ಗುಬಾಟಿ, ರಮ್ಯಾ ಕೃಷ್ಣನ್, ತಮನ್ನಾ ಭಾಟಿಯಾ, ಸತ್ಯರಾಜ್ ಮುಂತಾದವರು ನಟಿಸಿದ್ದಾರೆ. ಎಂಎಂ ಕೀರವಾಣಿ ಸಂಗೀತವಿದೆ.

ಆ.22ಕ್ಕೆ 'ಲವ್ ಮ್ಯಾಟ್ರು'

ಸೋನಲ್ ಮೊಂತೆರೊ, ವಿರಾಟ ಬಿಲ್ವ ಜತೆಯಾಗಿ ನಟಿಸಿರುವ 'ಲವ್ ಮ್ಯಾಟ್ರು' ಚಿತ್ರ ಆ.22ರಂದು ತೆರೆಗೆ ಬರಲಿದೆ. ಆ.1ರಂದು ಚಿತ್ರ ಬಿಡುಗಡೆ ಮಾಡುವುದಾಗಿ ಈ ಹಿಂದೆ ತಂಡ ಹೇಳಿತ್ತು. ಆದರೆ 'ಸು ಫ್ರಂ ಸೋ' ಚಿತ್ರದ ಅಬ್ಬರದಿಂದಾಗಿ ಆ ವಾರದ ಕೆಲ ಚಿತ್ರಗಳು ಮುಂದಕ್ಕೆ ಹೋಗಿದ್ದವು. ವಿರಾಟ ಬಿಲ್ವ ನಿರ್ದೇಶನದ ಚಿತ್ರವಿದು.

'ಕೆಲ ದಿನಗಳ ಹಿಂದೆ ಜನ ಚಿತ್ರಮಂದಿರಗಳಿಗೆ ಬರುತ್ತಿಲ್ಲ ಎಂಬ ಕೊರಗಿತ್ತು. ಆದರೆ 'ಸು ಫ್ರಂ ಸೋ' ಚಿತ್ರ ಅದನ್ನು ಹೋಗಲಾಡಿಸಿದೆ. ಒಳ್ಳೆ ಸಿನಿಮಾಗಳು ಬಂದರೆ ಜನ ಕೂಡ ಮೊಬೈಲ್ ಬಿಟ್ಟು ಚಿತ್ರಮಂದಿರಗಳಿಗೆ ಸಿನಿಮಾ ನೋಡಲು ಬರುತ್ತಾರೆ ಎಂಬುದು ಖಾತ್ರಿಯಾಗಿದೆ. ನಮ್ಮ ಚಿತ್ರ ಕೂಡ ಅಂಥದ್ದೆ ಗಟ್ಟಿಯಾದ ಕಂಟೆಂಟ್ ಹೊಂದಿರುವ ಚಿತ್ರ. ಒಂದು ವಿಭಿನ್ನ ಪ್ರೇಮ ಕಥೆಯನ್ನು ತೆರೆಯ ಮೇಲೆ ತೋರಿಸುವುದು ನಮ್ಮ ಉದ್ದೇಶ. ಪ್ರೇಕ್ಷಕರು ಸುಲಭವಾಗಿ ಊಹಿಸುವಂತೆ ಇರುವುದಿಲ್ಲ ಚಿತ್ರಕಥೆ' ಎಂದಿದ್ದಾರೆ ನಿರ್ದೇಶಕರು.

ವಂದನಾ ಪ್ರಿಯ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. 'ಲವ್ ಮ್ಯಾಟ್ರು' ಶೀರ್ಷಿಕೆಯೇ ಹೇಳುವಂತೆ ಪ್ರೇಮ ಕಥೆಯ ಚಿತ್ರ. ಕಥಾವಸ್ತು ಬಹಳ ಕುತೂಹಲಕಾರಿಯಾಗಿದೆ. ಎರಡು ಕಾಲಘಟ್ಟಗಳ ಪಯಣ ಇರುವ ಚಿತ್ರ. ನಾನು ಪ್ರೇಮಿಯಾಗಿ ಕಾಣಿಸಿಕೊಂಡಿದ್ದೇನೆ' ಎಂದಿದ್ದಾರೆ ಸೋನಲ್. ಅಚ್ಯುತ್ ಕುಮಾರ್, ಅನಿತಾ ಭಟ್, ಸುಮನ್ ರಂಗನಾಥ್ ಮುಂತಾದವರು ಚಿತ್ರದಲ್ಲಿದ್ದಾರೆ. ಸೋಲಮಾನ್ ಸಂಗೀತ, ಪರಮ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.



ಸೋನಲ್ ವಿರಾಟ್ ಬಿಲ್ವ



ಸಂಭ್ರಮಶ್ರೀ

'ಸೂರಿ ಅಣ್ಣ'ನ ಟೀಸರ್

'ಸಲಗ' ಚಿತ್ರದಿಂದ 'ಸೂರಿ ಅಣ್ಣ' ಎಂದೆ ಖ್ಯಾತರಾಗಿರುವ ದಿನೇಶ್, ಆ ಪಾತ್ರವನ್ನೇ ಶೀರ್ಷಿಕೆಯಾಗಿಸಿಕೊಂಡು ಚಿತ್ರ ಮಾಡಿದ್ದಾರೆ. ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಅವರೇ ಕಥೆ,ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ.

'ಈ ಹಿಂದೆ ರೌಡಿಸಂ ಕಥೆ ಆಧರಿಸಿದ 'ಓಂ' ಚಿತ್ರ ಭರ್ಜರಿ ಯಶಸ್ಸು ಕಂಡಿತ್ತು. 'ಸೂರಿ ಅಣ್ಣ' ಕೂಡ ರೌಡಿಸಂ ಕಥಾಹಂದರ ಹೊಂದಿರುವ ಚಿತ್ರವಾಗಿದೆ. ಯಾರೂ ರೌಡಿಸಂ ಮಾಡಬೇಡಿ. ಎಲ್ಲರಿಗೂ ಕುಟುಂಬ ಇರುತ್ತದೆ. ಎಲ್ಲದಕ್ಕಿಂತ ಕುಟುಂಬ ಮುಖ್ಯ ಎಂಬ ಸಂದೇಶವನ್ನು ಈ ಚಿತ್ರ ನೀಡುತ್ತದೆ. ನನ್ನ ಹೆಸರು ದಿನೇಶ್. 'ಸಲಗ' ಚಿತ್ರದ ನಂತರ 'ಸೂರಿ ಅಣ್ಣ' ಎಂದೇ ಎಲ್ಲರೂ ಗುರುತಿಸುತ್ತಾರೆ. ಹಾಗಾಗಿ ಅದನ್ನೇ ಶೀರ್ಷಿಕೆಯಾಗಿಸಿರುವೆ' ಎಂದರು ನಿರ್ದೇಶಕರು.

ಸಂಭ್ರಮಶ್ರೀ ನಾಯಕಿ. ರವಿ ಕಾಳೆ, ಹರೀಶ್ ರಾಯ್, ಕಾಕ್ರೋಜ್ ಸುಧೀ, ಪ್ರಕಾಶ್ ತೂಮಿನಾಡು, ಎಸ್.ಕೆ. ಉಮೇಶ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಚಿತ್ರದಲ್ಲಿ ಐದು ಹಾಡುಗಳಿದ್ದು, ಕೆ.ಎಂ. ಇಂದ್ರ ಸಂಗೀತ ನೀಡಿದ್ದಾರೆ. ಎಂ.ಬಿ.ಅಳಿಕಟ್ಟಿ ಛಾಯಾಚಿತ್ರಗ್ರಹಣ, ಎನ್.ಎಂ. ವಿಶ್ವ ಸಂಕಲನವಿದೆ. ಈಗಾಗಲೇ ಚಿತ್ರೀಕರಣ ಮುಕ್ತಾಯವಾಗಿದ್ದು, ಇನ್ನೆರಡು ತಿಂಗಳಲ್ಲಿ ಚಿತ್ರ ತೆರೆಗೆ ಬರಲಿದೆ ಎಂದಿದೆ ಚಿತ್ರತಂಡ.

'ಸೋಲ್ ಮೇಟ್ಸ್'ಗೆ ಹಂಸಲೇಖ ಸಾಥ್



ಯಶ್ವಿಕಾ ನಿಷ್ಕಲ

ಬಹುತೇಕ ಹೊಸಬರಿಂದಲೇ ಕೂಡಿರುವ 'ಸೋಲ್ ಮೇಟ್ಸ್' ಚಿತ್ರದ ಮೊದಲ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಪಿ.ವಿ. ಶಂಕರ್ ಚೊಚ್ಚಲ ನಿರ್ದೇಶನದ ಚಿತ್ರವಿದು. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷ ಎಂ. ನರಸಿಂಹಲು, ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್ ಹಾಡು ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

'ಕಿಲ ಕಿಲ' ಎಂಬ ಗೀತೆಗೆ ಹಂಸಲೇಖ ಸಾಹಿತ್ಯದೊಂದಿಗೆ, ಸಂಗೀತ ಸಂಯೋಜಿಸಿದ್ದಾರೆ. ಅನಿರುದ್ಧ್ ಶಾಸ್ತ್ರಿ, ಅಂಕಿತಾ ಕುಂಡು ಧ್ವನಿಯಾಗಿದ್ದಾರೆ. ಚಿತ್ರಕ್ಕೆ 'ಪರಿಸರ ಪ್ರೇಮಿ' ಎಂಬ ಅಡಿಬರಹವಿದೆ.

'ಸಿನಿಮಾ ಮಾಡಲು ಹೋಗಿ ಯಾರೂ ಹಣ ಕಳೆದುಕೊಳ್ಳುವ ಹಾಗಾಗಬಾರದು. ಸಿನಿಮಾ ಮಾಡುವ ಪ್ರತಿಯೊಬ್ಬರನ್ನು ನಾನು ಪ್ರೋತ್ಸಾಹಿಸುತ್ತೇನೆ. ನಮ್ಮ ಕನ್ನಡ ಚಿತ್ರರಂಗ ಬೆಳೆಯಬೇಕು. ಕನ್ನಡ ಉಳಿಯಬೇಕು. ಹಾಕಿದ ಬಂಡವಾಳ ಮರು ಗಳಿಕೆಯಾಗುವಂಥ ಉತ್ತಮ ಚಿತ್ರಗಳನ್ನು ಮಾಡಿ' ಎಂದರು ಎಂ. ನರಸಿಂಹಲು.

'ರಂಗ್ ಬಿ ರಂಗ್' ಖ್ಯಾತಿಯ ಶ್ರೀಜಿತ್ ಸೂರ್ಯ, 'ನಿಮ್ಮ ವಸ್ತುಗಳಿಗೆ ನೀವೇ ಜವಾಬ್ದಾರರು' ಚಿತ್ರದ ಇನಾಯತ್ ಖ್ಯಾತಿಯ ಪ್ರಸನ್ನ ಶೆಟ್ಟಿ ಚಿತ್ರದ ನಾಯಕರು. ಯಶ್ವಿಕಾ ನಿಷ್ಕಲ, ರಜನಿ ನಾಯಕಿಯರು. ಅಲ್ಮಾಸ್, ಯಶ್ ಶೆಟ್ಟಿ, ಶರತ್ ಲೋಹಿತಾಶ್ವ, ಅರವಿಂದ್ ರಾವ್, ಅರುಣಾ ಬಾಲರಾಜ್, ಅರಸು ಮಹಾರಾಜ್ ಮುಂತಾದವರು ಈ ಚಿತ್ರದಲ್ಲಿ ನಟಿಸಿದ್ದಾರೆ. ಶಂಕರ್ ಪಿ.ವಿ ಹಾಗೂ ಜಿ.ಆರ್.ಅರ್ಚನಾ ಬಂಡವಾಳ ಹೂಡಿದ್ದಾರೆ.

'ನನಗೆ ಸಣ್ಣ ವಯಸ್ಸಿನಿಂದಲೇ ಸಿನಿಮಾ ಹುಚ್ಚು. ನಾನು ಮೊದಲಿಗೆ ನೋಡಿದ ಸಿನಿಮಾ 'ಪುಟ್ಟಂಜು'. ಅಲ್ಲಿಂದ ನನ್ನ ಹಂಸಲೇಖರವರ ನಂಟು ಬೆಳೆಯಿತು. ಹೀಗಾಗಿ ನನ್ನ ಮೊದಲ ಸಿನಿಮಾಕ್ಕೆ ಅವರದ್ದೇ ಸಂಗೀತವಿದೆ. ಐದು ಹಾಡುಗಳಿವೆ. ಹುಡುಗ,ಹುಡುಗಿ ಪರಿಸರವನ್ನು ಕಾಪಾಡಿಕೊಳ್ಳುವ ಕುರಿತಾಗಿನ ಕಥೆ. ಸೆಪ್ಟೆಂಬರ್‌ನಲ್ಲಿ ಚಿತ್ರ ತೆರೆಗೆ ಬರಲಿದೆ' ಎಂದರು ನಿರ್ದೇಶಕರು.

ನೋಟಿಸ್ ನೀಡದೆ ಹೆಸರು ಕೈಬಿಡಲ್ಲ

ಬಿಹಾರ ಮತದಾರರ ಕರಡು ಪಟ್ಟಿ: 'ಸುಪ್ರೀಂ'ಗೆ ಆಯೋಗದ ಉತ್ತರ

ನವದೆಹಲಿ (ಪಿಟಿಐ): ಬಿಹಾರದಲ್ಲಿ ಕರಡು ಮತದಾರರ ಪಟ್ಟಿಯಿಂದ ಯಾವುದೇ ಮತದಾರನ ಹೆಸರನ್ನು ಮುಂಚಿತವಾಗಿ ನೋಟಿಸ್ ನೀಡದೆ ಕೈಬಿಡುವುದಿಲ್ಲ ಎಂದು ಚುನಾವಣಾ ಆಯೋಗವು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಕರಡು ಮತದಾರರ ಪಟ್ಟಿಯಲ್ಲಿ ಸೇರಿಸದ ಮತದಾರರ ಹೆಸರುಗಳನ್ನು ಒಳಗೊಂಡ ಪ್ರತ್ಯೇಕ ಪಟ್ಟಿಯನ್ನು ಸಿದ್ಧಪಡಿಸುವುದು ಅಥವಾ ಹಂಚಿಕೊಳ್ಳುವುದು ಕಡ್ಡಾಯವಲ್ಲ. ಅದೇ ರೀತಿ, ಒಬ್ಬನ ಹೆಸರನ್ನು ಕರಡು ಪಟ್ಟಿಯಲ್ಲಿ ಸೇರಿಸದಿರುವುದಕ್ಕೆ ಕಾರಣಗಳನ್ನು ಕೊಡುವ ಅಗತ್ಯವೂ ಇಲ್ಲ ಎಂದು ಆಯೋಗ ತನ್ನ ಪ್ರತ್ಯೇಕ ಉತ್ತರದಲ್ಲಿ ಹೇಳಿದೆ.

ಬಿಹಾರದಲ್ಲಿ ಕರಡು ಮತದಾರರ ಪಟ್ಟಿ ಬಿಡುಗಡೆಯಾದ ಕೆಲವು ದಿನಗಳ ನಂತರ, ಚುನಾವಣಾ ಆಯೋಗವು ಶನಿವಾರ ಸುಪ್ರೀಂ ಕೋರ್ಟ್‌ನಲ್ಲಿ ಹೆಚ್ಚುವರಿ ಪ್ರಮಾಣಪತ್ರ ಸಲ್ಲಿಸಿದೆ. ಮತದಾರರ ಪಟ್ಟಿಯ 'ವಿಶೇಷ ಸಮಗ್ರ ಪರಿಷ್ಕರಣೆ' (ಎಸ್‌ಐಆರ್) ನಂತರ, ಪಟ್ಟಿಯಿಂದ ಅಂದಾಜು 65 ಲಕ್ಷ ಮತದಾರರ ಹೆಸರು ತೆಗೆದು ಹಾಕಲಾಗಿದೆ. ಹೆಚ್ಚಿನವರು ಮೃತಪಟ್ಟಿದ್ದಾರೆ ಅಥವಾ ವಲಸೆ ಹೋಗಿದ್ದಾರೆ ಎಂದು ಆಯೋಗ ಹೇಳಿದೆ.

ಮತದಾರರ ಪಟ್ಟಿ ಪರಿಷ್ಕರಣೆಯ ಸಮಯದಲ್ಲಿ ಅರ್ಜಿ ನಮೂನೆಗಳನ್ನು ಸಲ್ಲಿಸದ ಸುಮಾರು 65 ಲಕ್ಷ ಮತದಾರರ ಹೆಸರು ಮತ್ತು ವಿವರಗಳು, ಅವರ ವಿಧಾನಸಭಾ ಕ್ಷೇತ್ರ ಮತ್ತು ಮತಗಟ್ಟೆವಾರು ಪಟ್ಟಿಯನ್ನು ಪ್ರಕಟಿಸಲು ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡುವಂತೆ ಕೋರಿ ಸಲ್ಲಿಸಿದ್ದ ಅರ್ಜಿಗೆ, ಆಯೋಗ ತನ್ನ ಉತ್ತರ ಸಲ್ಲಿಸಿದೆ.

'ಆಕ್ಷೇಪಣೆ ಸಲ್ಲಿಕೆಯಾಗಿಲ್ಲ'

ಬಿಹಾರದಲ್ಲಿ ಮತದಾರರ ಕರಡು ಪಟ್ಟಿ ಪ್ರಕಟವಾಗಿ 10 ದಿನಗಳು ಕಳೆದರೂ ಯಾವುದೇ ಪಕ್ಷಗಳು ಆಕ್ಷೇಪಣೆ ಸಲ್ಲಿಸಿಲ್ಲ ಎಂದು ಚುನಾವಣಾ ಆಯೋಗ ಭಾನುವಾರ ತಿಳಿಸಿದೆ. ಕರಡು ಮತದಾರರ ಪಟ್ಟಿಯನ್ನು ಆಗಸ್ಟ್ 1ರಂದು ಪ್ರಕಟಿಸಲಾಗಿತ್ತು.

ಆಗಸ್ಟ್ 1ರಿಂದ ಆಗಸ್ಟ್ 10ರ (ಭಾನುವಾರ) ಮಧ್ಯಾಹ್ನ 3ರವರೆಗೆ, ವಿವಿಧ ರಾಜಕೀಯ ಪಕ್ಷಗಳು ನೇಮಿಸಿರುವ ಬೂತ್ ಮಟ್ಟದ ಏಜೆಂಟರು ಆಕ್ಷೇಪಣೆಗಳಿಗೆ ಸಂಬಂಧಿಸಿದಂತೆ ಚುನಾವಣಾ ಅಧಿಕಾರಿಗಳನ್ನು ಸಂಪರ್ಕಿಸಿಲ್ಲ ಎಂದು ಹೇಳಿದೆ. ಕರಡು ಮತದಾರರ ಪಟ್ಟಿ ಬಗ್ಗೆ ಆಕ್ಷೇಪಣೆಗಳು ಸಲ್ಲಿಸಲು ಚುನಾವಣಾ ಆಯೋಗವು ಸೆಪ್ಟೆಂಬರ್ 1ರವರೆಗೆ ಕಾಲಾವಕಾಶ ನೀಡಿದೆ.

ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠವು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ ವಿರುದ್ಧದ ಅರ್ಜಿಗಳ ವಿಚಾರಣೆ ನಡೆಸುತ್ತಿದೆ. ಚುನಾವಣಾ ಆಯೋಗ ತನ್ನ ಹೆಚ್ಚುವರಿ ಪ್ರಮಾಣಪತ್ರದಲ್ಲಿ, ಎಸ್‌ಐಆರ್‌ನ ಮೊದಲ ಹಂತವನ್ನು ಪೂರ್ಣಗೊಳಿಸಲಾಗಿದ್ದು, ಕರಡು ಮತದಾರರ ಪಟ್ಟಿಯನ್ನು ಆಗಸ್ಟ್ 1ರಂದು ಪ್ರಕಟಿಸಲಾಗಿದೆ ಎಂದು ಹೇಳಿದೆ. 'ಕರಡು ಮತದಾರರ ಪಟ್ಟಿಯಿಂದ ಯಾವುದೇ ಮತದಾರನ ಹೆಸರು ಕೈಬಿಡುವಾಗ ಆತನಿಗೆ ಮುಂಚಿತವಾಗಿ ನೋಟಿಸ್ ನೀಡಲಾಗುವುದು. ತನ್ನ ವಾದ ಮಂಡಿಸಲು ಹಾಗೂ ಸಂಬಂಧಿತ ದಾಖಲೆಗಳನ್ನು ಒದಗಿಸಲು ಸೂಕ್ತ ಕಾಲಾವಕಾಶ ನೀಡಲಾಗುವುದು' ಎಂದಿದೆ.

ಎಸ್‌ಐಆರ್ ನಂತರ, ಪಟ್ಟಿಯಿಂದ ಕೈಬಿಡಲಾದ ಅಂದಾಜು 65 ಲಕ್ಷ ಮತದಾರರ ವಿವರವನ್ನು ಆ.9ರೊಳಗೆ ಸಲ್ಲಿಸುವಂತೆ ಆಯೋಗಕ್ಕೆ ಸುಪ್ರೀಂ ಕೋರ್ಟ್ ಸೂಚಿಸಿತ್ತು.

'ಕೋರ್ಟ್‌ಗೆ ಹೋಗಲಿ'

ಠಾಣೆ (ಪಿಟಿಐ): 'ರಾಹುಲ್ ಬಳಿ ಮತ ಕಳ್ಳತನದ ಸಾಕ್ಷ್ಯಗಳಿದ್ದರೆ ಕೋರ್ಟ್‌ಗೆ ಹೋಗಲಿ ಅಥವಾ ಚುನಾವಣಾ ಆಯೋಗವನ್ನು ಸಂಪರ್ಕಿಸಲಿ. 'ಮಹಾಯುತಿ' ಸರ್ಕಾರವನ್ನು ಆಯ್ಕೆ ಮಾಡಿರುವ ಮಹಾರಾಷ್ಟ್ರದ ಜನರನ್ನು ಆಧಾರ ರಹಿತ ಆರೋಪದ ಮೂಲಕ ಅವಮಾನಿಸಬೇಡಿ' ಎಂದು ಶಿವಸೇನಾ ಮುಖಂಡ ಏಕನಾಥ ಶಿಂದೆ ಹೇಳಿದ್ದಾರೆ.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಾರ್ವನಿಕವಾಗಿ ವಾಸ್ತವಕ್ಕೆ ವಿರುದ್ಧವಾದ ಹೇಳಿಕೆಗಳನ್ನು ನೀಡುವ ಬದಲು, ಅವರ ಬಳಿ ಸಾಕ್ಷ್ಯಗಳಿದ್ದರೆ ಕೋರ್ಟ್‌ಗೆ ಹೋಗಲಿ' ಎಂದರು.

ಚಿಟಿಕೆ ಸುದ್ದಿ

ಅಕ್ರಮ: ವಿವರ ಸಲ್ಲಿಸಲು ರಾಹುಲ್‌ಗೆ ಸೂಚನೆ

ಚಂಡೀಗಢ(ಪಿಟಿಐ): ಕಳೆದ ವರ್ಷ ವಿಧಾನಸಭೆ ಚುನಾವಣೆಯಲ್ಲಿ ವೇಳೆ ಮತದಾರರ ಪಟ್ಟಿ ಸಿದ್ಧಪಡಿಸುವ ವೇಳೆ ಕಂಡುಬಂದಿದ್ದವು ಎನ್ನಲಾದ ಅಕ್ರಮಗಳಿಗೆ ಸಂಬಂಧಿಸಿ 10 ದಿನಗಳ ಒಳಗಾಗಿ ದಾಖಲೆಗಳನ್ನು ಸಲ್ಲಿಸುವಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಹರಿಯಾಣದ ಮುಖ್ಯ ಚುನಾವಣಾ ಅಧಿಕಾರಿ (ಸಿಇಒ) ಸೂಚಿಸಿದ್ದಾರೆ.

'ವಿಧಾನಸಭೆ ಚುನಾವಣೆಯಲ್ಲಿ ಇಡೀ ರಾಜ್ಯದಲ್ಲಿ ಪಕ್ಷದ ಗೆಲುವು ಮತ್ತು ಸೋಲಿನ ನಡುವಿನ ಅಂತರ 22,779 ಮತಗಳಷ್ಟಿತ್ತು' ಎಂದು ರಾಹುಲ್ ಗಾಂಧಿ ಅವರು ಗುರುವಾರ ಹೇಳಿದ್ದರು.

ಪಟ್ನಾ: ಡಿಸಿಎಂ ಸಿನ್ಹಾಗೆ ನೋಟಿಸ್



ವಿಜಯ ಕುಮಾರ್ ಸಿನ್ಹಾ

ಪಟ್ನಾ(ಪಿಟಿಐ): ಎರಡು ಮತದಾರರ ಗುರುತಿನ ಚೀಟಿ(ಎಪಿಕ್) ಹೊಂದಿರುವುದು ಹಾಗೂ ಎರಡು ಸ್ಥಳಗಳಲ್ಲಿ ಮತದಾರ ಆಗಿ ನೋಂದಣಿ ಮಾಡಿಸಿಕೊಂಡಿದ್ದಾರೆ ಎಂಬ ಆರೋಪಗಳಿಗೆ ಸಂಬಂಧಿಸಿ ಬಿಹಾರ ಉಪಮುಖ್ಯಮಂತ್ರಿ ಹಾಗೂ ಬಿಜೆಪಿ ನಾಯಕ ವಿಜಯಕುಮಾರ್ ಸಿನ್ಹಾ ಅವರಿಗೆ ಚುನಾವಣಾ ಆಯೋಗ ಭಾನುವಾರ ನೋಟಿಸ್ ಜಾರಿ ಮಾಡಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಈ ಕುರಿತು ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಆರೋಪಿಸಿದ್ದರಲ್ಲದೇ, ಡಿಸಿಎಂ ಸಿನ್ಹಾ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ ಎಂದು ಪ್ರಶ್ನಿಸಿದ್ದರು.

'ಬಂಕಿಪುರ ವಿಧಾನಸಭೆ ಕ್ಷೇತ್ರದ ಮತದಾರರ ಪಟ್ಟಿಯಿಂದ ನನ್ನ ಮತ್ತು ನನ್ನ ಕುಟುಂಬದವರ ಹೆಸರು ತೆಗೆದು ಹಾಕಬೇಕು. ಲಖಿಸರಾಯ್ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರುಗಳನ್ನು ಸೇರ್ಪಡೆ ಮಾಡುವಂತೆ ಕೋರಿ ಅರ್ಜಿ ಸಲ್ಲಿಸಿದ್ದೆ. ಈ ಕುರಿತ ದಾಖಲೆಗಳು ನನ್ನಲ್ಲಿವೆ' ಎಂದು ಸಿನ್ಹಾ ಪ್ರತಿಕ್ರಿಯಿಸಿದ್ದರು.

ಅಪ್ಪನ ವಿರುದ್ಧ ವಾದಿಸಿ ಗೆದ್ದ ಮಗಳು

ಲಖನೌ: ಪೊಲೀಸ್ ಮತ್ತು ವಕೀಲ ವೃತ್ತಿಯಲ್ಲಿರುವ ಅಪ್ಪ–ಮಗಳು ಒಂದೇ ಪ್ರಕರಣದಲ್ಲಿ ಮುಖಾಮುಖಿಯಾಗಿ, ಕೌಟುಂಬಿಕ ಸಂಬಂಧ ಬದಿಗಿಟ್ಟು ಕರ್ತವ್ಯ ನಿಭಾಯಿಸಿದ ಘಟನೆ ಉತ್ತರ ಪ್ರದೇಶದಲ್ಲಿ ನಡೆದಿದೆ.

ಜಿಆರ್‌ಪಿ ಪೇದೆಯೊಬ್ಬರನ್ನು ವಜಾಗೊಳಿಸಲು ಐಪಿಎಸ್ ಅಧಿಕಾರಿ ರಾಕೇಶ್ ಸಿಂಗ್ ಅವರು ನೀಡಿದ್ದ ಆದೇಶವನ್ನು ಪ್ರಶ್ನಿಸಿ, ಅವರ ಪುತ್ರಿ ಅನುರಾ ಸಿಂಗ್ ಅಲಹಾಬಾದ್ ಹೈಕೋರ್ಟ್‌ನಲ್ಲಿ ವಾದ ಮಂಡಿಸಿ ಗೆಲುವು ಸಾಧಿಸಿದ್ದಾರೆ.

ನೌಕಾಪಡೆ: 'ಉದಯಗಿರಿ', 'ಹಿಮಗಿರಿ' ಸೇರ್ಪಡೆ 26ಕ್ಕೆ

ನವದೆಹಲಿ(ಪಿಟಿಐ): ರಹಸ್ಯ ಕಾರ್ಯಾಚರಣೆ ಉದ್ದೇಶದ 'ಉದಯಗಿರಿ' ಹಾಗೂ 'ಹಿಮಗಿರಿ' ಯುದ್ಧನೌಕೆಗಳನ್ನು ವಿಶಾಖಪಟ್ಟಣದಲ್ಲಿ ಆ.26ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಏಕಕಾಲಕ್ಕೆ ನೌಕಾಪಡೆಗೆ ಸೇರ್ಪಡೆ ಮಾಡಲಾಗುವುದು ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

'ಪ್ರಾಜೆಕ್ಟ್ 17ಎ' ಭಾಗವಾಗಿ ಈ ನೌಕೆಗಳನ್ನು ನಿರ್ಮಿಸಲಾಗಿದೆ. ಈ ಯೋಜನೆ ಭಾಗವಾಗಿ ನಿರ್ಮಿಸಿರುವ ಮೊದಲ ಯುದ್ಧನೌಕೆ 'ನೀಲಗಿರಿ'ಯನ್ನು ಜನವರಿಯಲ್ಲಿ ಮುಂಬೈನಲ್ಲಿ ನಡೆದ ಕಾರ್ಯಕ್ರಮದಲ್ಲಿ ನೌಕಾಪಡೆಗೆ ಸೇರ್ಪಡೆ ಮಾಡಲಾಗಿತ್ತು. ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಂಡಿದ್ದರು.

ಈ ಯುದ್ಧನೌಕೆಯನ್ನು ಮಜಗಾಂವ್ ಡಾಕ್ ಶಿಪ್ ಬಿಲ್ಡರ್ಸ್ ಲಿಮಿಟೆಡ್ (ಎಂಡಿಎಲ್) ನಿರ್ಮಿಸಿದೆ. ಇದೇ ಶ್ರೇಣಿಯ ಎರಡನೇ ಯುದ್ಧನೌಕೆ 'ಉದಯಗಿರಿ'ಯನ್ನು ಎಂಡಿಎಲ್ ನಿರ್ಮಿಸಿದ್ದು, ಜುಲೈ 1ರಂದು ನೌಕಾಪಡೆಗೆ ಹಸ್ತಾಂತರಿಸಲಾಗಿತ್ತು.

ಯುದ್ಧನೌಕೆ 'ಹಿಮಗಿರಿ'ಯನ್ನು ಕೋಲ್ಕತ್ತದ ಗಾರ್ಡನ್ ರೀಚ್ ಶಿಪ್ ಬಿಲ್ಡರ್ಸ್ ಆ್ಯಂಡ್ ಎಂಜಿನಿಯರ್ಸ್ ಕಂಪನಿ ನಿರ್ಮಿಸಿದೆ.



ಯುದ್ಧನೌಕೆ 'ಉದಯಗಿರಿ

ಮುಖ್ಯಾಂಶಗಳು

- 'ವಾರ್‌ಶಿಪ್ ಡಿಸೈನ್ ಬ್ಯುರೊ' ವಿನ್ಯಾಸ ಮಾಡಿದ 100ನೇ ನೌಕೆ
- ಈ ಮೊದಲಿನ ಯುದ್ಧ ನೌಕೆಗಳಿಗಿಂತ ಶೇ 5ರಷ್ಟು ದೊಡ್ಡದು

'ತ್ರಿಶ್ಶೂರ್: 30 ಸಾವಿರ ನಕಲಿ ಮತದಾರರು'

ತಿರುವನಂತಪುರ (ಪಿಟಿಐ): ಕಳೆದ ಲೋಕಸಭಾ ಚುನಾವಣೆಗೆ ಮುನ್ನ ಕೇರಳದ ತ್ರಿಶ್ಶೂರ್ ಕ್ಷೇತ್ರದಲ್ಲಿ ಬಿಜೆಪಿಯವರು ಸುಮಾರು 30,000 'ನಕಲಿ ಮತದಾರರನ್ನು' ಮತದಾರರ ಪಟ್ಟಿಗೆ ಸೇರಿಸಿರುವ ಮಾಹಿತಿ ಲಭಿಸಿದೆ ಎಂದು ಸಿಪಿಎಂ ಪ್ರಧಾನ ಕಾರ್ಯದರ್ಶಿ ಎಂ.ಎ ಬೇಬಿ ಭಾನುವಾರ ಆರೋಪಿಸಿದ್ದಾರೆ.

ತ್ರಿಶ್ಶೂರ್ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಸಮೀಪದ ಸ್ಥಳಗಳ ಹಲವು ವ್ಯಕ್ತಿಗಳನ್ನು ಸೇರಿಸಲಾಗಿದೆ ಎಂದು ಹೇಳಲಾಗಿದ್ದು, ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಆಗ್ರಹಿಸಿದ್ದಾರೆ.

ಭಾನುವಾರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಬಿಜೆಪಿ ಸರ್ಕಾರವು ಸುಪ್ರೀಂ ಕೋರ್ಟ್ ನೀಡಿರುವ ಸಲಹೆಗಳನ್ನು ಪರಿಗಣಿಸದೆ, ತನಗೆ ಬೇಕಾದವರನ್ನು ಚುನಾವಣಾ ಆಯೋಗದ ವಿವಿಧ ಹುದ್ದೆಗಳಿಗೆ ನೇಮಿಸಿದೆ. ಇದೀಗ ಅವರು ಮೋಸದಲ್ಲಿ ತೊಡಗಿದ್ದಾರೆ. ಎಸ್‌ಐಆರ್ ನೆಪದಲ್ಲಿ ಅರ್ಹ ಮತದಾರರ ಹೆಸರನ್ನು ಅಳಿಸುತ್ತಿದ್ದಾರೆ ಎಂದು ಅವರು ಆರೋಪಿಸಿದ್ದಾರೆ

'ಬಿಜೆಪಿಯಿಂದ 'ಚುನಾವಣಾ ಭ್ರಷ್ಟಾಚಾರ'

ಲಖನೌ: ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಭಾನುವಾರ ಬಿಜೆಪಿ ಮೇಲೆ ವಾಗ್ದಾಳಿ ನಡೆಸಿದ್ದು, ಆ ಪಕ್ಷವು ಚುನಾವಣಾ ಭ್ರಷ್ಟಾಚಾರದ ವಿಶ್ವವಿಶ್ವವಿದ್ಯಾಲಯ ಎಂದು ಆರೋಪಿಸಿದ್ದಾರೆ.

ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಂತ್ಯಗಾಣಿಸಲು ಬಿಜೆಪಿಯು ಹಕ್ಕುಗಳ ನಿರಾಕರಣೆ ಮತ್ತು ಮತದಾರರ ಪಟ್ಟಿಯಲ್ಲಿ ವಂಚನೆ ಎಸಗುವುದರಲ್ಲಿ ತನ್ನನ್ನು ತೊಡಗಿಸಿಕೊಂಡಿದೆ ಎಂದು 'ಎಕ್ಸ್'ನಲ್ಲಿ ಟೀಕಿಸಿದ್ದಾರೆ.

'ಪ್ರಜಾಪ್ರಭುತ್ವವನ್ನು ನಾಶಮಾಡಲು ಬಿಜೆಪಿ ರೂಪಿಸುತ್ತಿರುವ ಪಿತೂರಿ ಯಶಸ್ವಿಯಾಗಲು ನಾವು ಬಿಡುವುದಿಲ್ಲ' ಎಂದು ಹೇಳಿದ್ದಾರೆ.

ಮತ ಕಳ್ಳತನ: 'ಇಂಡಿಯಾ'ದಿಂದ ಪ್ರತಿಭಟನಾ ಮೆರವಣಿಗೆ ಇಂದು

ನವದೆಹಲಿ (ಪಿಟಿಐ): 'ಮತ ಕಳ್ಳತನ' ಆರೋಪಕ್ಕೆ ಸಂಬಂಧಿಸಿದಂತೆ ವಿರೋಧ ಪಕ್ಷದ ನಾಯಕರು ಮತ್ತು ಸಂಸದರು ಸಂಸತ್ತಿನಿಂದ ಚುನಾವಣಾ ಆಯೋಗದ ಕಚೇರಿವರೆಗೆ ಸೋಮವಾರ ಪ್ರತಿಭಟನಾ ಮೆರವಣಿಗೆ ನಡೆಸಲಿದ್ದಾರೆ. ಮೆರವಣಿಗೆಯು ಬೆಳಿಗ್ಗೆ 11.30ಕ್ಕೆ ಆರಂಭಗೊಳ್ಳಲಿದೆ.

'ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ 'ಇಂಡಿಯಾ' ಮೈತ್ರಿಕೂಟದ ಎಲ್ಲ ಸಂಸದರು, ಕೂಟದ ಎಲ್ಲ ಪಕ್ಷಗಳ ಸದನ ನಾಯಕರು ಪ್ರತಿಭಟನಾ ಮೆರವಣಿಗೆಯಲ್ಲಿ ಭಾಗವಹಿಸಲಿದ್ದಾರೆ. ಮುಖ್ಯ ಚುನಾವಣಾ ಆಯುಕ್ತ ಮತ್ತು ಇಬ್ಬರು ಆಯುಕ್ತರ ಭೇಟಿಗಾಗಿ ವಿರೋಧ ಪಕ್ಷದ ನಾಯಕರು ಸಮಯ ಕೇಳಿದ್ದಾರೆ' ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

'ಮತಕಳ್ಳತನ'ದ ವಿಚಾರಗಳು ಚರ್ಚೆಯಾಗುತ್ತಿರುವ ಈ ಹೊತ್ತಿನಲ್ಲೇ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು 'ಇಂಡಿಯಾ' ಮೈತ್ರಿಕೂಟದ ಎಲ್ಲ ನಾಯಕರಿಗೆ ಸೋಮವಾರ ರಾತ್ರಿ ಔತಣಕೂಟ ಏರ್ಪಡಿಸಿದ್ದಾರೆ.

ಟರ್ಕಿ: 6.1ರಷ್ಟು ತೀವ್ರತೆಯ ಭೂಕಂಪನ

ಇಸ್ತಾಂಬುಲ್(ಎಪಿ): ಟರ್ಕಿಯ ವಾಯವ್ಯ ಪ್ರಾಂತ್ಯ ಬಲಿಕೆಸಿರ್‌ನಲ್ಲಿ ಭಾನುವಾರ 6.1 ತೀವ್ರತೆಯ ಭೂಕಂಪನವಾಗಿದೆ. 10ಕ್ಕೂ ಹೆಚ್ಚು ಕಟ್ಟಡಗಳು ಕುಸಿದಿವೆ. ಅವಶೇಷಗಳಡಿ ಕನಿಷ್ಠ ಇಬ್ಬರು ಸಿಲುಕಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಸಿಂದಿರ್ಗಿ ಪಟ್ಟಣದಲ್ಲಿ ಕಂಪನ ಕೇಂದ್ರ ಕಂಡುಬಂದಿದ್ದು, 200 ಕಿ.ಮೀ. ದೂರದ ಇಸ್ತಾಂಬುಲ್‌ನಲ್ಲಿ ಕಂಪನದ ಅನುಭವವಾಗಿದೆ. ಹಲವೆಡೆ ಕೂಡ ಭೂಮಿ ಕಂಪಿಸಿದ್ದು, ಒಂದು ಕಡೆ 4.6ರಷ್ಟು ತೀವ್ರತೆ ದಾಖಲಾಗಿದೆ.

ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅಭಿಮತ

'ಮನೆ ಬಾಗಿಲಲ್ಲೇ ನ್ಯಾಯ ಲಭಿಸಬೇಕು'

ಇಟಾನಗರ (ಪಿಟಿಐ): 'ನ್ಯಾಯಾಂಗ, ಶಾಸಕಾಂಗ ಮತ್ತು ಕಾರ್ಯಾಂಗವು ಜನ ಸೇವೆಗಾಗಿ ಅಸ್ತಿತ್ವದಲ್ಲಿರಬೇಕು. ಜನರಿಗೆ ಕಡಿಮೆ ಖರ್ಚಿನಲ್ಲಿ, ಕ್ಷಿಪ್ರಗತಿಯಲ್ಲಿ ಮನೆ ಬಾಗಿಲಲ್ಲೇ ನ್ಯಾಯ ಲಭಿಸಬೇಕು' ಎಂದು ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅಭಿಪ್ರಾಯಪಟ್ಟರು.

ಭಾನುವಾರ ಇಲ್ಲಿ ಗುವಾಹತಿ ಹೈಕೋರ್ಟ್‌ನ ಇಟಾನಗರ ಕಾಯಂ ಪೀಠದ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, 'ನಾನು ಯಾವತ್ತೂ ವಿಕೇಂದ್ರೀಕರಣದ ಕಟ್ಟಾ ಬೆಂಬಲಿಗ. ನ್ಯಾಯವು ಅಧಿಕಾರಸ್ಥರ ಕೊಠಡಿಯಲ್ಲಿ ಉಳಿಯಬಾರದು. ಅದು ಜನರಿಗೆ ಅವರ ಮನೆ ಬಾಗಿಲಲ್ಲೇ ಸುಲಭವಾಗಿ ದೊರೆಯುವಂತಾಗಬೇಕು' ಎಂದರು.

'ನ್ಯಾಯಾಂಗ, ಶಾಸಕಾಂಗ ಮತ್ತು ಕಾರ್ಯಾಂಗ ಇರುವುದು ಜನರಿಗೆ ನ್ಯಾಯ ಒದಗಿಸಲಿಕ್ಕಾಗಿಯೇ' ಎಂದು ಅವರು ಪ್ರತಿಪಾದಿಸಿದರು.

ಅರುಣಾಚಲ ಪ್ರದೇಶವು 26 ಪ್ರಮುಖ ಬುಡಕಟ್ಟು ಪಂಗಡ ಹಾಗೂ 100ಕ್ಕೂ ಹೆಚ್ಚು ಉಪ ಪಂಗಡಗಳನ್ನು ಹೊಂದಿದೆ. ಇಲ್ಲಿನ ಪ್ರತಿ ಬುಡಕಟ್ಟಿನ ಸಂಪ್ರದಾಯ, ಸಂಸ್ಕೃತಿ ಸಂರಕ್ಷಣೆಗೆ ಸರ್ಕಾರ ಶ್ರಮಿಸಬೇಕು ಎಂದರು.

'ದೇಶದ ಅಭಿವೃದ್ಧಿ ಆಗಬೇಕು. ಜತೆಗೆ ಪರಂಪರೆ, ಸಂಸ್ಕೃತಿಯೂ ಉಳಿಯಬೇಕು. ಪರಂಪರೆ, ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದು ಸಂವಿಧಾನದಡಿ ನಮ್ಮ ಮೂಲ ಕರ್ತವ್ಯವೂ ಆಗಿದೆ' ಎಂದು ಮುಖ್ಯ ನ್ಯಾಯಮೂರ್ತಿ ನೆನಪಿಸಿದರು.

'ಕಳೆದ ಎರಡು ವರ್ಷಗಳಲ್ಲಿ ಈಶಾನ್ಯ ಭಾರತದ ಹಲವು ರಾಜ್ಯಗಳಿಗೆ ಭೇಟಿ ನೀಡಿದ್ದು, ಅಲ್ಲಿನ ಅದ್ಭುತವಾದ ಬುಡಕಟ್ಟು ಸಂಸ್ಕೃತಿ ಕಂಡು ಮೂಕ ವಿಸ್ಮಿತನಾಗಿದ್ದೇನೆ. ಇತ್ತೀಚೆಗೆ ಮಣಿಪುರಕ್ಕೆ ಭೇಟಿ ನೀಡಿದಾಗ ಅಲ್ಲಿನ ಮಹಿಳೆಯೊಬ್ಬರು 'ನಿಮ್ಮ ಮನೆಗೆ ನಿಮಗೆ ಸ್ವಾಗತ' ಎಂದು ಆಹ್ವಾನ ನೀಡಿದ್ದು ನನ್ನ ಹೃದಯವನ್ನು ಸ್ಪರ್ಶಿಸಿತು' ಎಂದು ಅವರು ಸ್ಮರಿಸಿಕೊಂಡರು.



ಶಾಂತಿ ಮತ್ತು ಯುದ್ಧದ ಸಂದರ್ಭದಲ್ಲಿ ಭಾರತವನ್ನು ಒಗ್ಗೂಡಿಸಿರುವುದು ಮತ್ತು ಬಲಗೊಳಿಸಿರುವುದು ನಮ್ಮ ಸಂವಿಧಾನ. 75 ವರ್ಷಗಳ ನಂತರವೂ ನಾವು ಅದಕ್ಕೆ ಸಾಕ್ಷಿಯಾಗಿದ್ದೇವೆ

ಬಿ.ಆರ್.ಗವಾಯಿ
ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ

'ಸಂವಿಧಾನವೇ ಪರಮಗ್ರಂಥ'

ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸದ ಹೊರತು ರಾಜಕೀಯ ಸಮಾನತೆಗೆ ಬೆಲೆ ಇರುವುದಿಲ್ಲ ಎಂಬ ಅಂಬೇಡ್ಕರ್ ಹೇಳಿಕೆಯನ್ನು ಸ್ಮರಿಸಿದ ಸಿಜೆಐ, ಪ್ರತಿಯೊಂದು ಧರ್ಮಕ್ಕೂ ಪ್ರತ್ಯೇಕ ಧರ್ಮ ಗ್ರಂಥಗಳಿವೆ. ಆದರೆ, ಭಾರತೀಯರಾದ ನಮಗೆ ಸಂವಿಧಾನವೇ ಪರಮ ಗ್ರಂಥ. ಸಂವಿಧಾನಕ್ಕೇ ನಮ್ಮ ನಿಷ್ಠೆ. ಪ್ರತಿಯೊಬ್ಬರೂ ಸಂವಿಧಾನವನ್ನು ಓದಬೇಕು' ಎಂದು ಸಲಹೆ ನೀಡಿದರು.

ನಾಸಾ ಅಭಿವೃದ್ಧಿಪಡಿಸಿದ ಸಂವಹನ ಉಪಗ್ರಹ

'ಅಮೆರಿಕದ ಉಪಗ್ರಹ ಇಸ್ರೊ ಉಡಾವಣೆ'

ಚೆನ್ನೈ (ಪಿಟಿಐ): ಭಾರತೀಯ ಬಾಹ್ಯಾಕಾಶ ಸಂಸ್ಥೆಯು (ಇಸ್ರೊ), ಅಂದು ಅಮೆರಿಕ ನೀಡಿದ್ದ ಪುಟ್ಟ ರಾಕೆಟ್‌ನೊಂದಿಗೆ ಬಾಹ್ಯಾಕಾಶದಲ್ಲಿ ಯಶಸ್ವಿ ಆರಂಭದ ಹೆಜ್ಜೆ ಇಟ್ಟಿತ್ತು. ಇದೀಗ ಅಮೆರಿಕ ನಿರ್ಮಿಸಿರುವ 6,500 ಕೆ.ಜಿ. ತೂಕದ ಉಪಗ್ರಹವನ್ನು ಅದು ತನ್ನದೇ ಲಾಂಚರ್‌ನಲ್ಲಿ ಉಡಾವಣೆ ಮಾಡಲಿದೆ ಎಂದು ಇಸ್ರೊ ಅಧ್ಯಕ್ಷ ವಿ. ನಾರಾಯಣನ್ ಭಾನುವಾರ ಹೇಳಿದರು.

ಇಲ್ಲಿಗೆ ಸಮೀಪದ ಕಟ್ಟಂಕುಳತ್ತೂರ್‌ನಲ್ಲಿರುವ ಎಸ್‌ಆರ್‌ಎಂ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯ 21ನೇ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಇಸ್ರೊ ಹಾಗೂ ಅಮೆರಿಕದ ನಾಸಾದ 'ಸಿಂಥೆಟಿಕ್ ಅಪಾರ್ಚರ್ ರೇಡಾರ್' (ಎನ್‌ಐಎಸ್‌ಎಆರ್) ಎಂಬ ಜಂಟಿ ಕಾರ್ಯಕ್ರಮದಡಿ ಜುಲೈ 30ರಂದು ಜಿಎಸ್‌ಎಲ್‌ವಿ–ಎಫ್16 ರಾಕೆಟ್ ಅನ್ನು ಉಡಾವಣೆ ಮಾಡಲಾಯಿತು. ಇನ್ನು ಕೆಲವೇ ತಿಂಗಳಲ್ಲಿ ಅಮೆರಿಕದ ಮತ್ತೊಂದು ರಾಕೆಟ್ ಅನ್ನು ಇಸ್ರೊ ಉಡಾವಣೆ ಮಾಡಲಿದೆ' ಎಂದರು.

ಈ ವೇಳೆ ಇಸ್ರೊ ನಡೆದು ಬಂದ ಹಾದಿಯನ್ನು ಅವರು ಮೆಲುಕು ಹಾಕಿದರು. '1963ರಲ್ಲಿ ಇಸ್ರೊವನ್ನು ಸ್ಥಾಪಿಸಲಾಯಿತು. ಆಗ ಮುಂದುವರಿದ ರಾಷ್ಟ್ರಗಳಿಗಿಂತ ಭಾರತವು 6ರಿಂದ 7ವರ್ಷ ಹಿಂದೆ ಇತ್ತು. ಅದೇ ವರ್ಷ ಅಮೆರಿಕವು ಸಣ್ಣದೊಂದು ರಾಕೆಟ್ ಅನ್ನು ಭಾರತಕ್ಕೆ ನೀಡಿತು. ಇದರಿಂದ ನ.21 1963ರಲ್ಲಿ ಬಾಹ್ಯಾಕಾಶ ಕಾರ್ಯಕ್ರಮವನ್ನು ಆರಂಭಿಸಿದೆವು' ಎಂದು ವಿವರಿಸಿದರು.

'ಇಂದು ಇಸ್ರೊ ಮತ್ತು ನಾಸಾ ಜಂಟಿಯಾಗಿ ಅಭಿವೃದ್ಧಿಪಡಿಸಿದ 'ನಿಸಾರ್' ಉಪಗ್ರಹವನ್ನು ಉಡಾವಣೆ ಮಾಡಿದೆವು. ಇದು ವಿಶ್ವದಲ್ಲೇ ಈವರೆಗೆ ನಿರ್ಮಿಸಲಾದ ಅತ್ಯಂತ ದುಬಾರಿ ಉಪಗ್ರಹ. ಇದರಲ್ಲಿ ಅಳವಡಿಸಲಾದ ರೇಡಾರ್‌ಗಳಾದ ಎಲ್–ಬ್ಯಾಂಡ್ ಅನ್ನು ಅಮೆರಿಕ ಹಾಗೂ ಎಸ್–ಬ್ಯಾಂಡ್ ಅನ್ನು ಭಾರತ ವಿನ್ಯಾಸಗೊಳಿಸಿವೆ. ಜಿಎಸ್‌ಎಲ್‌ವಿ ಮೂಲಕ ಉಪಗ್ರಹವನ್ನು ಕಕ್ಷೆಗೆ ಸೇರಿಸಲಾಯಿತು. ನಾಸಾ ತಂಡವು ಇಸ್ರೊವನ್ನು ಶ್ಲಾಘಿಸಿತು. ಈಗ ನಾವು ಬಾಹ್ಯಾಕಾಶ ವಿಜ್ಞಾನ ಕ್ಷೇತ್ರದಲ್ಲಿ ಮುಂದುವರಿದ ರಾಷ್ಟ್ರಗಳಿಗೆ ಸರಿಸಮನಾಗಿ ಕೆಲಸ ಮಾಡುತ್ತಿದ್ದೇವೆ ಎಂದು ಅವರು ಹೇಳಿದರು.

ಮುಖ್ಯಾಂಶಗಳು

- ಅಂದು ಅಮೆರಿಕ ಭಾರತಕ್ಕೆ ಚಿಕ್ಕ ರಾಕೆಟ್ ನೀಡಿತ್ತು
- ಇಂದು ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತ ಸಾಧನೆ
- ಇಸ್ರೊ ಅಧ್ಯಕ್ಷ ವಿ. ನಾರಾಯಣನ್ ಹೇಳಿಕೆ

ಮುರುಡಿ ತಾಂಡಾದ ಸರ್ಫಿಂಗ್ ಸಾಹಸಿ

ಏಷ್ಯನ್ ಸರ್ಫಿಂಗ್: ಮುಂಡರಗಿಯ ರಮೇಶ ಬೂದಿಹಾಳಗೆ ಚಾರಿತ್ರಿಕ ಕಂಚು

• ಕಾಶೀನಾಥ ಬಿಳಿಮಗ್ಗದ

ಮುಂಡರಗಿ (ಗದಗ): ಉದ್ಯೋಗ ಅರಸಿ ಕೇರಳಕ್ಕೆ ತೆರಳಿದ್ದ ಮುಂಡರಗಿ ತಾಲ್ಲೂಕಿನ ಮುರುಡಿ ತಾಂಡಾದ ಯುವಕ ರಮೇಶ ಬೂದಿಹಾಳ ಅವರು ಭಾನುವಾರ ಚೆನ್ನೈನಲ್ಲಿ ನಡೆದ ಏಷ್ಯನ್ ಸರ್ಫಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗಳಿಸಿ ಚಾರಿತ್ರಿಕ ಸಾಧನೆ ಮೆರೆದಿದ್ದಾರೆ.

ಕುಗ್ರಾಮವಾದ ಮುರುಡಿ ತಾಂಡಾದ 25 ವರ್ಷದ ರಮೇಶ ಅವರು ದಶಕದ ಹಿಂದೆ ಕುಟುಂಬದ ಸದಸ್ಯರೊಂದಿಗೆ ಕೆಲಸ ಅರಸಿ ಕೇರಳಕ್ಕೆ ತೆರಳಿದ್ದರು. ಮೊದಲಿನಿಂದಲೂ ಜಲ ಕ್ರೀಡೆಗಳಲ್ಲಿ ಆಸಕ್ತಿ ಹೊಂದಿದ್ದ ರಮೇಶ ಅವರು ಅದರಲ್ಲಿಯೇ ಏನನ್ನಾದರೂ ಸಾಧಿಸುವ ಸಂಕಲ್ಪ ಹೊಂದಿದ್ದರು.

ಕೇರಳದ ತಿರುವನಂತಪುರ ಹತ್ತಿರದ ಕೋವಳಂ ಬೀಚ್ ಬಳಿಯ ತಿರುವನಂತಪುರಂ ಬೀಚ್ ಕ್ಲಬ್ ಸೇರಿಕೊಂಡು, ಅಲ್ಲಿಂದ ತಮ್ಮ ಸರ್ಫಿಂಗ್ ಪಯಣ ಆರಂಭಿಸಿದರು. ಅಲ್ಲಿ ಸಾಕಷ್ಟು ತರಬೇತಿ ಪಡೆದುಕೊಂಡು ಕೇರಳ ರಾಜ್ಯದ ಪೆರಂಬೂರಿನಲ್ಲಿ ನಡೆದ ರಾಷ್ಟ್ರೀಯ ಸರ್ಫಿಂಗ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದರು. ನಂತರ ವರ್ಕಾಲಾದಲ್ಲಿ ನಡೆದ ರಾಷ್ಟ್ರೀಯ ಸರ್ಫಿಂಗ್ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದು ದೇಶದ ಗಮನ ಸೆಳೆದಿದ್ದರು.

ಶನಿವಾರ ನಡೆದ ಏಷ್ಯನ್ ಸರ್ಫಿಂಗ್ ಚಾಂಪಿಯನ್‌ಷಿಪ್ ಪುರುಷರ ವಿಭಾಗದಲ್ಲಿ ರಮೇಶ 14.84 ಅಂಕಗಳನ್ನು ಗಳಿಸಿ ಫೈನಲ್ ಪ್ರವೇಶಿಸಿದ್ದರು. ಪದಕ ಸುತ್ತು ಪ್ರವೇಶಿಸಿದ ಭಾರತದ ಮೊದಲ ಸರ್ಫರ್ ಎಂಬ ಹೆಗ್ಗಳಿಕೆಗೂ ಅವರು ಪಾತ್ರರಾಗಿದ್ದರು.

> ಹೊಟ್ಟೆಪಾಡಿಗೆ ಕೆಲಸ ಮಾಡುತ್ತಲೇ ನನ್ನ ತಮ್ಮ ರಮೇಶ ಸರ್ಫಿಂಗ್‌ನಲ್ಲಿ ದೇಶದ ಗಮನ ಸೆಳೆದಿರುವುದು ಹೆಮ್ಮೆ ಮೂಡಿಸಿದೆ. ಮುಂಬರುವ ಅಂತರರಾಷ್ಟ್ರೀಯ ಸರ್ಫಿಂಗ್ ಕ್ರೀಡೆಗಳಲ್ಲಿ ಖಂಡಿತ ಚಿನ್ನ ಗೆಲ್ಲುತ್ತಾನೆ.
> **ಗಣೇಶ ಬೂದಿಹಾಳ**
> ರಮೇಶ ಅವರ ಸಹೋದರ

ಈ ಭಾಗದಲ್ಲಿ ಸರ್ಫಿಂಗ್ ಕ್ರೀಡೆಯು ಅಷ್ಟೇನೂ ಪರಿಚಿತವಲ್ಲ. ಆದರೆ ರಮೇಶ ಅವರು ಇದರಲ್ಲಿ ಪರಿಣತಿ ಸಾಧಿಸಿರುವುದು ಅಚ್ಚರಿಯ ಸಂಗತಿ. ಅವರಲ್ಲಿ ಮೊದಲಿನಿಂದಲೂ ಇದ್ದ ಕ್ರೀಡಾಸಕ್ತಿ ಹಾಗೂ ಮನೋದೈಹಿಕ ಗಟ್ಟಿತನದಿಂದಾಗಿ ಈ ಸಾಧನೆ ಸಾಧ್ಯವಾಗಿದೆ. ಇದರಿಂದಾಗಿ ಅವರು ಅಂತರರಾಷ್ಟ್ರೀಯ ಪದಕ ಸಾಧನೆ ಮಾಡಿದ್ದಾರೆ.

ಬಡ ಕೃಷಿಕೂಲಿ ಕಾರ್ಮಿಕರ ಕುಟುಂಬದಲ್ಲಿ ಜನಿಸಿರುವ ಮಹೇಶ, ತನ್ನ ತಂದೆ, ತಾಯಿ ಹಾಗೂ ಸಹೋದರನೊಂದಿಗೆ ನಿತ್ಯ ಅನ್ಯರ ಜಮೀನಿನಲ್ಲಿ ಕೂಲಿ ಮಾಡಿ ಜೀವನ ನಿರ್ವಹಿಸುತ್ತಿದ್ದರು. ಈಚೆಗೆ ಮಹೇಶ ಅವರ ತಂದೆ ನಿಧನರಾಗಿದ್ದಾರೆ. ಕೇವಲ ಏಳನೇ ತರಗತಿಯವರೆಗೆ ಓದಿರುವ ಅವರು ಬಡತನದ ಕಾರಣದಿಂದ ಶಿಕ್ಷಣ ಮೊಟಕುಗೊಳಿಸಿದ್ದರು.

ಇತ್ತೀಚಿನ ವರ್ಷಗಳಲ್ಲಿ ಕುಟುಂಬದ ಸದಸ್ಯರೆಲ್ಲ ಕೆಲಸದ ನಿಮಿತ್ತ ಕೇರಳಕ್ಕೆ ತೆರಳಿದ್ದು, ಅಲ್ಲಿಯೇ ಎಲ್ಲರೂ ಕೂಲಿ ಕೆಲಸ ನಿರ್ವಹಿಸುತ್ತಿದ್ದಾರೆ. ತಾಂಡಾದಲ್ಲಿ ಒಂದು ಸಣ್ಣ ಹೆಂಚಿನ ಮನೆ ಹಾಗೂ ಎರಡೂವರೆ ಎಕರೆ ಜಮೀನು ಹೊಂದಿದ್ದು, ಮಳೆಗಾಲದಲ್ಲಿ ಜಮೀನಿನಲ್ಲಿ ಬಿತ್ತನೆ ಮಾಡಿ ಪುನಃ ಕೂಲಿ ಕೆಲಸಕ್ಕೆ ತೆರಳುತ್ತಾರೆ. ಕೊಯ್ಲಿನ ಸಮಯದಲ್ಲಿ ಗ್ರಾಮಕ್ಕಾಗಮಿಸಿ ಕೊಯ್ಲು ಮುಗಿದ ನಂತರ ಕೂಲಿಯನ್ನರಸಿ ಮತ್ತೆ ಕೇರಳದತ್ತ ಮುಖ ಮಾಡುತ್ತಾರೆ.



ಚೆನ್ನೈನ ಸಮುದ್ರ ತೀರದಲ್ಲಿ ಸರ್ಫರ್ ರಮೇಶ ಬೂದಿಹಾಳ (ಸಂಗ್ರಹ ಚಿತ್ರ)

ಪದಕ ಗೆದ್ದ ಭಾರತದ ಮೊದಲ ಸರ್ಫರ್

ಚೆನ್ನೈ (ಪಿಟಿಐ): ಕರ್ನಾಟಕದ ರಮೇಶ ಬೂದಿಹಾಳ ಅವರು ಏಷ್ಯನ್ ಸರ್ಫಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಪದಕ ಗೆದ್ದ ಭಾರತದ ಮೊದಲ ಸರ್ಫರ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ರಮೇಶ ಭಾನುವಾರ ನಡೆದ ಪುರುಷರ ವಿಭಾಗದ ಫೈನಲ್‌ನಲ್ಲಿ 12.60 ಅಂಕಗಳೊಂದಿಗೆ ಕಂಚಿನ ಪದಕ ಗೆದ್ದರು. ದಕ್ಷಿಣ ಕೊರಿಯಾದ ಕನೋವಾ ಹೀಜೆ (15.17 ಅಂಕ) ಚಿನ್ನ ಗೆದ್ದರೆ, ಇಂಡೊನೇಷ್ಯಾದ ಪಜರ್ ಅರಿಯಾನಾ (14.57 ಅಂಕ) ಬೆಳ್ಳಿ ತಮ್ಮದಾಗಿಸಿಕೊಂಡರು.

ಓಪನ್ ಮಹಿಳಾ ವಿಭಾಗದಲ್ಲಿ ಜಪಾನ್‌ನ ಅನ್ರಿ ಮಾಟ್ಸುನೊ (14.90 ಅಂಕ) ಅವರು ಸ್ವದೇಶದ ಸುಮೊಮೊ ಸಾಟೊ (13.70 ಅಂಕ) ಅವರ ತೀವ್ರ ಸವಾಲನ್ನು ಹಿಂದಿಕ್ಕಿ ಚಿನ್ನ ಗೆದ್ದರು. ಥಾಯ್ಲೆಂಡ್‌ನ ಇಸಾಬೆಲ್ ಹಿಗ್ಸ್ (11.76 ಅಂಕ) ಕಂಚು ಜಯಿಸಿದರು.

ಪುರುಷರ ವಿಭಾಗದಲ್ಲಿ ಪ್ರಶಸ್ತಿ ಗೆದ್ದ ಕನೋವಾ 18 ವರ್ಷದೊಳಗಿನ ಬಾಲಕರ ವಿಭಾಗದಲ್ಲೂ (14.33 ಅಂಕ) ಪಾರಮ್ಯ ಮೆರೆದು, ಡಬಲ್ ಚಿನ್ನದ ಸಾಧನೆ ಮಾಡಿದರು. ಚೀನಾದ ಶಿಡಾಂಗ್ ವು (13.10 ಅಂಕ) ಶುಲೌ ಜಿಯಾಂಗ್ (8 ಅಂಕ) ಕ್ರಮವಾಗಿ ಬೆಳ್ಳಿ ಮತ್ತು ಕಂಚು ತಮ್ಮದಾಗಿಸಿಕೊಂಡರು.

18 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಚೀನಾದ ಸಿಕಿ ಯಾಂಗ್ (14.50 ಅಂಕ) ಚಾಂಪಿಯನ್ ಆದರು. ಚೀನಾದ ಮತ್ತೊಬ್ಬ ಸ್ಪರ್ಧಿ ಶುಹಾನ್ ಜಿನ್ (10.33), ಥಾಯ್ಲೆಂಡ್‌ನ ಇಸಾಬೆಲ್ (8.10) ಕ್ರಮವಾಗಿ ನಂತರದ ಸ್ಥಾನಗಳನ್ನು ಪಡೆದರು.

20 ವರ್ಷದೊಳಗಿನವರ ಏಷ್ಯನ್ ಕಪ್ ಫುಟ್‌ಬಾಲ್

ಭಾರತ ಮಹಿಳಾ ತಂಡ ಅರ್ಹತೆ

ಯಾಂಗೂನ್ (ಮ್ಯಾನ್ಮಾರ್) (ಪಿಟಿಐ): ಭಾರತದ ಮಹಿಳಾ ತಂಡವು ಕ್ವಾಲಿಫೈಯರ್ 'ಡಿ' ಗುಂಪಿನ ಕೊನೆಯ ಪಂದ್ಯದಲ್ಲಿ 1–0 ಗೋಲಿನಿಂದ ಮ್ಯಾನ್ಮಾರ್ ತಂಡವನ್ನು ಮಣಿಸಿತು. ಇದರೊಂದಿಗೆ ಎರಡು ದಶಕಗಳ ನಂತರ ಮೊದಲ ಬಾರಿ ಎಎಫ್‌ಸಿ 20 ವರ್ಷದೊಳಗಿನವರ ಏಷ್ಯನ್ ಕಪ್ ಫುಟ್‌ಬಾಲ್ ಟೂರ್ನಿಗೆ ಅರ್ಹತೆ ಪಡೆಯಿತು.

ತುವುನ್ನಾ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಪೂಜಾ ಅವರು 27ನೇ ನಿಮಿಷದಲ್ಲಿ ಭಾರತದ ಗೆಲುವಿನ ಗೋಲು ದಾಖಲಿಸಿದರು. ಇದರಿಂದಾಗಿ ಏಳು ಅಂಕ ಪಡೆದ ಭಾರತ ಗುಂಪಿನಲ್ಲಿ ಅಗ್ರಸ್ಥಾನ ಪಡೆದು 2026ರಲ್ಲಿ ಥಾಯ್ಲೆಂಡ್‌ನಲ್ಲಿ ನಡೆಯುವ ಟೂರ್ನಿಗೆ ಟಿಕೆಟ್ ಪಡೆಯಿತು. 2006ರಲ್ಲಿ ಕೊನೆಯ ಬಾರಿ ಅರ್ಹತೆ ಪಡೆದಿತ್ತು.

ಭಾರತದ ವನಿತೆಯರು ಆರಂಭಿಕ ಪಂದ್ಯದಲ್ಲಿ ಇಂಡೋನೇಷ್ಯಾದೊಂದಿಗೆ ಗೋಲುರಹಿತವಾಗಿ ಡ್ರಾ ಸಾಧಿಸಿದ್ದರೆ, ಎರಡನೇ ಪಂದ್ಯದಲ್ಲಿ 7–0 ಗೋಲುಗಳಿಂದ ತುರ್ಕಮೆನಿಸ್ತಾನ ತಂಡವನ್ನು ಸದೆಬಡಿದಿದ್ದರು. ಮ್ಯಾನ್ಮಾರ್ ತಂಡ 4 ಅಂಕದೊಂದಿಗೆ (1 ಗೆಲುವು, 1 ಡ್ರಾ, 1 ಸೋಲು) ಅಭಿಯಾನ ಮುಗಿಸಿತು.

ಎರಡೂ ತಂಡಗಳಿಗೂ ನಿರ್ಣಾಯಕವಾಗಿದ್ದ ಈ ಪಂದ್ಯದ ಮೊದಲಾರ್ಧದಲ್ಲಿ ಭಾರತ ಪ್ರಾಬಲ್ಯ ಸಾಧಿಸಿ ಮುನ್ನಡೆ ಪಡೆಯಿತು. ಉತ್ತರಾರ್ಧದಲ್ಲಿ ಅದೇ ಮುನ್ನಡೆಯನ್ನು ಉಳಿಸಿಕೊಂಡು ಸಂಭ್ರಮಿಸಿತು.

ಎ ಗುಂಪಿನಲ್ಲಿ ಉತ್ತರ ಕೊರಿಯಾ, ಬಿ ಗುಂಪಿನಲ್ಲಿ ವಿಯೆಟ್ನಾಂ, ಇ ಗುಂಪಿನಲ್ಲಿ ಚೀನಾ, ಎಫ್ ಗುಂಪಿನಲ್ಲಿ ಜಪಾನ್, ಎಚ್ ಗುಂಪಿನಲ್ಲಿ ಬಾಂಗ್ಲಾದೇಶ ಮತ್ತು ದಕ್ಷಿಣ ಕೊರಿಯಾ ತಂಡಗಳೂ ಟೂರ್ನಿಗೆ ಅರ್ಹತೆ ಪಡೆದವು.



ಮ್ಯಾನ್ಮಾರ್ ವಿರುದ್ಧ ಗೆಲುವಿನ ಸಂಭ್ರಮದಲ್ಲಿ ಭಾರತದ ತಂಡದ ವನಿತೆಯರು ಎಕ್ಸ್ ಚಿತ್ರ

ಬಹುಮಾನ ಘೋಷಣೆ

ಏಷ್ಯನ್ ಕಪ್ ಫುಟ್‌ಬಾಲ್ ಟೂರ್ನಿಗೆ ಅರ್ಹತೆ ಪಡೆದ ಭಾರತದ ಮಹಿಳಾ ತಂಡಕ್ಕೆ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ₹21.89 ಲಕ್ಷ ಬಹುಮಾನ ಘೋಷಿಸಿದೆ.

'ಭಾರತ ಕ್ರೀಡಾ ಪ್ರಾಧಿಕಾರದ ಸಹಯೋಗದೊಂದಿಗೆ ಕಳೆದ ಕೆಲವು ವರ್ಷಗಳಿಂದ ನಿರಂತರ ಯೋಜನೆ ಮತ್ತು ಅಭಿವೃದ್ಧಿ ಪ್ರಯತ್ನಗಳ ಫಲವೇ ಇಂದಿನ ಈ ಸಾಧನೆಗೆ ಕಾರಣ' ಎಂದು ಎಐಎಫ್‌ಎಫ್ ಪ್ರಕಟಣೆ ತಿಳಿಸಿದೆ.



ಬೆಂಗಳೂರಿನ ಆಲೂರು ಕ್ರೀಡಾಂಗಣದಲ್ಲಿ ಭಾನುವಾರ ಮಹಾರಾಣಿ ಟ್ರೋಫಿ ಜಯಿಸಿದ ಹುಬ್ಬಳ್ಳಿ ಟೈಗರ್ಸ್ ಮಹಿಳಾ ತಂಡ

ಹುಬ್ಬಳ್ಳಿಗೆ ಮಹಾರಾಣಿ ಟ್ರೋಫಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೋನಿಕಾ ಸಿ. ಪಟೇಲ್ ಅವರ ಆಲ್‌ರೌಂಡ್ ಆಟ ಹಾಗೂ ಪ್ರಿಯಾ ಚವಾಣ್ ಅಮೋಘ ಬೌಲಿಂಗ್ ಬಲದಿಂದ ಹುಬ್ಬಳ್ಳಿ ಟೈಗರ್ಸ್ ತಂಡವು ಇದೇ ಮೊದಲ ಬಾರಿ ಮಹಿಳೆಯರಿಗಾಗಿ ಆಯೋಜಿಸಿದ್ದ ಟಿ20 ಕ್ರಿಕೆಟ್ ಟೂರ್ನಿಯಲ್ಲಿ 'ಮಹಾರಾಣಿ ಟ್ರೋಫಿ' ಗೆದ್ದುಕೊಂಡಿತು.

ಭಾನುವಾರ ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಟೈಗರ್ಸ್ 11 ರನ್‌ಗಳಿಂದ ಮೈಸೂರು ವಾರಿಯರ್ಸ್ ವಿರುದ್ಧ ಗೆದ್ದಿತು.

ಮೊದಲು ಬ್ಯಾಟಿಂಗ್ ಮಾಡಿದ ಹುಬ್ಬಳ್ಳಿ ತಂಡವು ಮೈಸೂರು ಬಳಗದ ಪೂಜಾಕುಮಾರಿ (27ಕ್ಕೆ4) ಮತ್ತು ವಂದಿತಾ ಕೃಷ್ಣರಾವ್ (8ಕ್ಕೆ3) ಅವರ ಉತ್ತಮ ಬೌಲಿಂಗ್ ಎದುರು 107 ರನ್‌ಗಳ ಸಾಧಾರಣ ಮೊತ್ತ ಗಳಿಸಿತು. ಹುಬ್ಬಳ್ಳಿ ತಂಡದ ಮೋನಿಕಾ 23 ರನ್ ಗಳಿಸಿದರು.

ಗುರಿ ಬೆನ್ನಟ್ಟಿದ ಮೈಸೂರು ತಂಡವನ್ನೂ ಮೋನಿಕಾ ಕಾಡಿದರು. ಅವರು 2 ವಿಕೆಟ್ ಗಳಿಸಿದರು. ಅವರೊಂದಿಗೆ ಉತ್ತಮ ಜೊತೆ ನೀಡಿದ ಪ್ರಿಯಾ ಚವಾಣ್ (10ಕ್ಕೆ3) ಕೂಡ ಮೈಸೂರು ಬ್ಯಾಟರ್‌ಗಳಿಗೆ ಒತ್ತಡ ಹಾಕಿದರು. ಇದರಿಂದಾಗಿ ಮೈಸೂರು ತಂಡಕ್ಕೆ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 96 ರನ್ ಗಳಿಸಲಷ್ಟೇ ಸಾಧ್ಯವಾಯಿತು.

ಸಂಕ್ಷಿಪ್ತ ಸ್ಕೋರು: ಹುಬ್ಬಳ್ಳಿ ಟೈಗರ್ಸ್: 19.5 ಓವರ್‌ಗಳಲ್ಲಿ 107 (ಮೋನಿಕಾ ಸಿ ಪಟೇಲ್ 23, ಬಿ.ಜಿ. ತೇಜಸ್ವಿನಿ 22, ಸಹನಾ ಎಸ್ ಪವಾರ್ 27ಕ್ಕೆ2, ವಂದಿತಾ ಕೃಷ್ಣ ರಾವ್ 8ಕ್ಕೆ3, ಪೂಜಾ ಕುಮಾರಿ 27ಕ್ಕೆ4) ಮೈಸೂರು ವಾರಿಯರ್ಸ್: 20 ಓವರ್‌ಗಳಲ್ಲಿ 7ಕ್ಕೆ96 (ಯಾಶಿಕಾ ಗೌಡ 33, ಶಿಶಿರಾ ಎ ಗೌಡ 41, ಮೋನಿಕಾ ಸಿ ಪಟೇಲ್ 21ಕ್ಕೆ2, ಪ್ರಿಯಾ ಚವಾಣ್ 10ಕ್ಕೆ3) ಫಲಿತಾಂಶ: ಹುಬ್ಬಳ್ಳಿ ಟೈಗರ್ಸ್‌ಗೆ 11 ರನ್ ಜಯ. ಪಂದ್ಯದ ಆಟಗಾರ್ತಿ: ಪ್ರಿಯಾ ಚವಾಣ್

ಅರ್ಜುನ್‌ಗೆ ನಿಹಾಲ್ ಆಘಾತ

ಚೆನ್ನೈ (ಪಿಟಿಐ): ಭಾರತದ ನಿಹಾಲ್ ಸರಿನ್, ಚೆನ್ನೈ ಗ್ರ್ಯಾಂಡ್‌ಮಾಸ್ಟರ್ಸ್ ಚೆಸ್ ಟೂರ್ನಿಯ ನಾಲ್ಕನೇ ಸುತ್ತಿನಲ್ಲಿ ವಿಶ್ವದ ಐದನೇ ಕ್ರಮಾಂಕದ ಆಟಗಾರ ಹಾಗೂ ಇಲ್ಲಿ ಅಗ್ರಶ್ರೇಯಾಂಕ ಪಡೆದಿರುವ ಅರ್ಜುನ್ ಇರಿಗೇಶಿ ಅವರಿಗೆ ಆಘಾತ ನೀಡಿದರು.



ನಿಹಾಲ್ ಸರಿನ್

ಇದು ನಿಹಾಲ್‌ಗೆ ಟೂರ್ನಿಯ ಮೊದಲ ಜಯ ಹಾಗೂ ಅರ್ಜುನ್‌ಗೆ ಮೊದಲ ಸೋಲು. ಜರ್ಮನಿಯ ವಿನ್ಸೆಂಟ್ ಕೀಮರ್ ಭಾನುವಾರದ ಕೊನೆಗೆ 3.5 ಅಂಕ ಕಲೆಹಾಕಿ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ. ಈ ಸೋಲಿನ ಹೊರತಾಗಿಯೂ ಇರಿಗೇಶಿ 2.5 ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ. ಒಟ್ಟು ಒಂಬತ್ತು ಸುತ್ತುಗಳ ರೌಂಡ್ ರಾಬಿನ್ ಮಾದರಿಯ (ಕ್ಲಾಸಿಕಲ್ ಶೈಲಿಯ) ಸ್ಪರ್ಧೆ ನಡೆಯಲಿದೆ.

ನಿಹಾಲ್ (1.5) ಮತ್ತು ಇರಿಗೇಶಿ ಮಧ್ಯೆ ತೀವ್ರ ಪೈಪೋಟಿ ಏರ್ಪಟ್ಟಿತ್ತು. 70ನೇ ನಡೆಯಲ್ಲಿ ನಿಹಾಲ್ ಗೆಲುವಿನ ನಗೆ ಬೀರಿದರು. ಕೀಮರ್ ಅವರು ಡಚ್ ತಾರೆ ಅನೀಶ್ ಗಿರಿ (2) ಅವರೊಂದಿಗೆ ಡ್ರಾ ಮಾಡಿಕೊಂಡರು.

ಉಳಿದಂತೆ, ಮುರಳಿ ಕಾರ್ತಿಕೇಯನ್ (2) ಅವರು ನೆದರ್ಲೆಂಡ್ಸ್‌ನ ಜೋರ್ಡನ್ ವಾನ್ ಫೊರೀಸ್ಟ್ (1) ಅವರನ್ನು ಮಣಿಸಿದರು. ಭಾರತದ ಆಟಗಾರರ ವ್ಯವಹಾರವಾಗಿದ್ದ ಪಂದ್ಯದಲ್ಲಿ ವಿದಿತ್ ಗುಜರಾತಿ (2) ಮತ್ತು ಪ್ರಣವ್ ವಿ. (1.5) ಅವರು ಅಂಕಗಳನ್ನು ಹಂಚಿಕೊಂಡರು. ಅಮೆರಿಕದ ಗ್ರ್ಯಾಂಡ್‌ಮಾಸ್ಟರ್‌ಗಳಾದ ಅವಾಂಡರ್ ಲಿಯಾಂಗ್ (2) ಮತ್ತು ರೇ ರಾಬ್ಸನ್ (2) ಅವರೂ ಡ್ರಾ ಮಾಡಿಕೊಂಡರು.

ಚಾಲೆಂಜರ್ಸ್ ವಿಭಾಗದಲ್ಲಿ ಅಭಿಮನ್ಯು ಪುರಾಣಿಕ್ (3.5) ಸ್ವದೇಶದ ವೈಶಾಲಿ ರಮೇಶ್‌ಬಾಬು (1) ಅವರನ್ನು ಸೋಲಿಸಿ ಉತ್ತಮ ಪ್ರದರ್ಶನ ಮುಂದುವರಿಸಿದರು.

ಪ್ರಾಣೇಶ್ (3) ಅವರು ಸ್ವದೇಶದ ಬಿ.ಅಧಿಬನ್ (2) ಅವರೊಂದಿಗೆ ಡ್ರಾ ಮಾಡಿಕೊಂಡರು. ದೀಪ್ತಾಯನ್ ಘೋಷ್ (3) ಅವರು ಹರ್ಷವರ್ಧನ್ ಜಿ.ಬಿ. (0.5) ಅವರನ್ನು ಮಣಿಸಿದರು. ಲಿಯಾನ್ ಮೆಂಡೋನ್ಸಾ (3) ಅವರು ಡಿ. ಹಾರಿಕಾ (0.5) ಅವರನ್ನು ಮಣಿಸಿದರು. ಇನಿಯನ್ (2.5) ಅವರು ಆರ್ಯನ್ ಚೋಪ್ರಾ (1) ಅವರನ್ನು ಸೋಲಿಸಿದರು.

ಭಾರತ ಎ ಮಹಿಳಾ ತಂಡಕ್ಕೆ ಸೋಲು

ಮೆಕೆ, ಆಸ್ಟ್ರೇಲಿಯಾ (ಪಿಟಿಐ): ಸಿಯಾನಾ ಜಿಂಜರ್ (16ಕ್ಕೆ 4) ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ನೆರವಿನಿಂದ ಆಸ್ಟ್ರೇಲಿಯಾ ಎ ಮಹಿಳೆಯರ ಕ್ರಿಕೆಟ್ ತಂಡವು ಭಾರತ ಎ ವಿರುದ್ಧ 4 ರನ್‌ಗಳ ರೋಚಕ ಜಯ ಸಾಧಿಸಿತು. ಇದರೊಂದಿಗೆ ಮೂರು ಟಿ20 ಪಂದ್ಯಗಳ ಸರಣಿಯನ್ನು 3–0ಯಿಂದ ಕ್ಲೀನ್‌ಸ್ವೀಪ್ ಮಾಡಿಕೊಂಡಿತು.

ಮೊದಲು ಬ್ಯಾಟಿಂಗ್ ಮಾಡಿದ ಆತಿಥೇಯ ತಂಡವು 8 ವಿಕೆಟ್‌ಗೆ 144 ರನ್ ಗಳಿಸಿತು. ಭಾರತದ ಪರ ರಾಧಾ ಯಾದವ್ ಮತ್ತು ಪ್ರೇಮಾ ರಾವತ್ ತಲಾ ಮೂರು ವಿಕೆಟ್ ಪಡೆದು ಮಿಂಚಿದರು. ಈ ಗುರಿಯನ್ನು ಬೆನ್ನಟ್ಟಿದ ಭಾರತ ತಂಡವು 8 ವಿಕೆಟ್‌ಗೆ 140 ರನ್ ಗಳಿಸಿ ಹೋರಾಟವನ್ನು ಮುಗಿಸಿತು.

ಸಂಕ್ಷಿಪ್ತ ಸ್ಕೋರ್: ಆಸ್ಟ್ರೇಲಿಯಾ ಎ: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 144 (ಎಲಿಸಾ ಹೇಲಿ 27, ಮ್ಯಾಡೆಲಿನ್ ಪೆನ್ನಾ 39; ರಾಧಾ ಯಾದವ್ 31ಕ್ಕೆ 3, ಪ್ರೇಮಾ ರಾವತ್ 24ಕ್ಕೆ 3). ಭಾರತ ಎ: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 140 (ಶಫಾಲಿ ವರ್ಮಾ 41, ಮಿನ್ನು ಮಣಿ 30; ಸಿಯಾನಾ ಜಿಂಜರ್ 16ಕ್ಕೆ 4). ಫಲಿತಾಂಶ: ಆಸ್ಟ್ರೇಲಿಯಾ ಎ ತಂಡಕ್ಕೆ 4 ರನ್ ಜಯ

ಏಷ್ಯನ್ ಬಾಕ್ಸಿಂಗ್: ನಿಶಾ, ಮುಸ್ಕಾನ್, ರಾಹುಲ್‌ಗೆ ಚಿನ್ನ

ಬ್ಯಾಂಕಾಕ್ (ಪಿಟಿಐ): ಉದಯೋನ್ಮುಖ ಮಹಿಳಾ ಬಾಕ್ಸರ್‌ಗಳಾದ ನಿಶಾ ಮತ್ತು ಮುಸ್ಕಾನ್ ಅವರು ಇಲ್ಲಿ ನಡೆಯುತ್ತಿರುವ ಏಷ್ಯನ್ ಬಾಕ್ಸಿಂಗ್ 19 ವರ್ಷದೊಳಗಿನವರ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದರು. ಪುರುಷರ ವಿಭಾಗದಲ್ಲಿ ರಾಹುಲ್ ಕುಂದು ಚಿನ್ನಕ್ಕೆ ಕೊರಳೊಡ್ಡಿದರು.

ಈ ವಯೋಮಿತಿಯ ಸ್ಪರ್ಧೆಯಲ್ಲಿ ಭಾರತದ ಬಾಕ್ಸರ್‌ಗಳು ಮೂರು ಚಿನ್ನ, ಏಳು ಬೆಳ್ಳಿ ಮತ್ತು ನಾಲ್ಕು ಕಂಚಿನೊಂದಿಗೆ 14 ಪದಕಗಳನ್ನು ತಮ್ಮದಾಗಿಸಿಕೊಂಡರು. ಭಾರತದ 10 ಮಹಿಳಾ ಬಾಕ್ಸರ್‌ಗಳ ಪೈಕಿ 9 ಮಂದಿ ಪದಕ ಗೆದ್ದುಕೊಂಡರು. ಅದರಲ್ಲಿ ಎರಡು ಚಿನ್ನ, ಐದು ಬೆಳ್ಳಿ ಮತ್ತು ಎರಡು ಕಂಚು ಸೇರಿವೆ.

54 ಕೆ.ಜಿ ವಿಭಾಗದ ಫೈನಲ್‌ನಲ್ಲಿ ನಿಶಾ 4–1ರಿಂದ ಚೀನಾದ ಸಿರುಯಿ ಯಾಂಗ್ ಅವರನ್ನು ಮಣಿಸಿದರು. 57 ಕೆ.ಜಿ ವಿಭಾಗದ ಪ್ರಶಸ್ತಿ ಸುತ್ತಿನಲ್ಲಿ ಮುಸ್ಕಾನ್ 3–2ರ ಕಜಕಿಸ್ತಾನದ ಅಯಾರುಝಾನ್ ಎರ್ಮೆಕ್ ಅವರ ಸವಾಲನ್ನು ಮೆಟ್ಟಿ ನಿಂತರು.

ಆರತಿ ಕುಮಾರಿ, ಕೃತಿಕಾ ವಾಸನ್, ಪ್ರಾಚಿ ಟೋಕಸ್, ವಿನಿ, ನಿಶಾ ಬೆಳ್ಳಿ ಪದಕ ಗೆದ್ದರು. ಯಶಿಕಾ ಮತ್ತು ಆಕಾಂಕ್ಷಾ ಫಲಸ್ವಾಲ್ (70 ಕೆ.ಜಿ) ಕಂಚು ಜಯಿಸಿದರು.

ಪುರುಷರ 75 ಕೆಜಿ ವಿಭಾಗದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ರಾಹುಲ್ 4–1ರಿಂದ ಉಜ್ಬೇಕಿಸ್ತಾನದ ಮೊಹಮ್ಮದ್ಜೋನ್ ಯಾಕುಪ್ಬೊವೆಕ್ ಅವರನ್ನು ಮಣಿಸಿದರು.

ಮೌಸಮ್ ಸುಹಾಗ್, ಹೇಮಂತ್ ಸಂಗ್ವಾನ್ ಬೆಳ್ಳಿ ಗೆದ್ದರೆ, ಶಿವಂ ಮತ್ತು ಗೌರವ್ ಕಂಚಿನ ಪದಕ ಜಯಿಸಿದರು.

22 ವರ್ಷದೊಳಗಿನ ವಿಭಾಗದಲ್ಲಿ ಭಾರತಕ್ಕೆ 13 ಪದಕಗಳು ಖಚಿತವಾಗಿವೆ.

ಮೈಸೂರಿನಲ್ಲಿ ಮಹಾರಾಜ ಟ್ರೋಫಿ ಟೂರ್ನಿ ಇಂದಿನಿಂದ

ಚುಟುಕು ಕ್ರಿಕೆಟ್ ಹಬ್ಬಕ್ಕೆ ಸಜ್ಜು

• ಆರ್. ಜಿತೇಂದ್ರ

ಮೈಸೂರು: 'ಮಹಾರಾಜ ಟ್ರೋಫಿ ಟ್ವೆಂಟಿ–20 ಕ್ರಿಕೆಟ್ ಟೂರ್ನಿ'ಯ ನಾಲ್ಕನೇ ಆವೃತ್ತಿಯ ಆತಿಥ್ಯಕ್ಕೆ ಇಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣ ಸಜ್ಜಾಗಿದೆ. ಇದೇ ಮೊದಲ ಬಾರಿಗೆ ಪ್ರೇಕ್ಷಕರನ್ನು ನಿರ್ಬಂಧಿಸಿ ಪಂದ್ಯಗಳು ನಡೆಯಲಿವೆ.

ಸೋಮವಾರದಿಂದ (ಆ. 11) ಆರಂಭಗೊಂಡು ಆ. 28ರವರೆಗೆ ನಡೆಯಲಿರುವ ಕ್ರಿಕೆಟ್‌ನ ಚುಟುಕು ಆವೃತ್ತಿಯ ಹಣಾಹಣಿಯಲ್ಲಿ ಆರು ತಂಡಗಳು ಪ್ರಶಸ್ತಿಗಾಗಿ ಸೆಣೆಸಲಿವೆ. ಕೆಪಿಎಲ್‌ಗೆ ಬದಲಾಗಿ 2022ರಿಂದ 'ಮಹಾರಾಜ ಟ್ರೋಫಿ' ಹೆಸರಿನಲ್ಲಿ ಟೂರ್ನಿ ನಡೆದಿದ್ದು, ಗುಲ್ಬರ್ಗ ಮಿಸ್ಟಿಕ್ಸ್, ಹುಬ್ಬಳ್ಳಿ ಟೈಗರ್ಸ್ ಹಾಗೂ ಮೈಸೂರು ವಾರಿಯರ್ಸ್ ತಂಡಗಳು ತಲಾ ಒಂದೊಂದು ಬಾರಿ ಪ್ರಶಸ್ತಿ ಎತ್ತಿ ಹಿಡಿದಿವೆ.

ಕಾಲ್ತುಳಿತ ಪ್ರಕರಣದ ತನಿಖೆಯ ಕಾರಣಕ್ಕೆ ಟೂರ್ನಿ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಿಂದ ಮೈಸೂರಿಗೆ ಸ್ಥಳಾಂತರಗೊಂಡಿದೆ. ಪ್ರೇಕ್ಷಕರ ಪ್ರವೇಶಕ್ಕೆ ಕಟ್ಟುನಿಟ್ಟಿನ ನಿರ್ಬಂಧ ವಿಧಿಸಲಾಗುತ್ತಿದ್ದು, ಸಾಂಸ್ಕೃತಿಕ ನಗರಿಯ ಪ್ರೇಕ್ಷಕರಿಗೆ ಕ್ರಿಕೆಟ್ ರಸದೌತಣ ಸವಿಯುವ ಅವಕಾಶ ಇಲ್ಲವಾಗಿದೆ. ಆದಾಗ್ಯೂ ಪಂದ್ಯ ಟಿ.ವಿ. ಚಾನಲ್ ಮೂಲಕ ನೇರ ಪ್ರಸಾರವಾಗಲಿದೆ.

ಹೇಗಿದೆ ಪಿಚ್: 'ಗಂಗೋತ್ರಿ ಗ್ಲೇಡ್ಸ್' ಎಂದೂ ಹೆಸರಾದ ಈ ಕ್ರೀಡಾಂಗಣ ಸುತ್ತ ಹಸಿರು ಹೊದ್ದು ನಿಂತಿದ್ದು, ಕ್ರಿಕೆಟ್‌ಗೆ ಹೇಳಿ ಮಾಡಿಸಿದಂತಿದೆ. ಬ್ಯಾಟಿಂಗ್ ಸ್ನೇಹಿಯಾದ ನಾಲ್ಕು ಪಿಚ್‌ಗಳನ್ನು ಸಿದ್ಧಪಡಿಸಲಾಗಿದೆ. ಆದರೆ, ಭಾನುವಾರವೂ ಮೈಸೂರಿನಲ್ಲಿ ಜೋರು ಮಳೆಯಾಗಿದ್ದು, ಕ್ರಿಕೆಟ್ ಪ್ರಿಯರ ಆತಂಕಕ್ಕೆ ಕಾರಣವಾಗಿದೆ. ಮೈದಾನದ ಶೇ 90ರಷ್ಟು ಭಾಗವನ್ನು ಹೊದಿಕೆಯಿಂದ ಮುಚ್ಚಲಾಗಿದ್ದು, ಹೆಚ್ಚು ಹಾನಿಯಾಗದಂತೆ ನೋಡಿಕೊಳ್ಳಲಾಗಿದೆ. ಸೋಮವಾರವೂ ಮಳೆ ಮುಂದುವರಿದಲ್ಲಿ ಪಂದ್ಯಕ್ಕೆ ಅಡ್ಡಿಯಾಗುವ ಸಾಧ್ಯತೆ ಇದೆ. ಪ್ರತಿದಿನ ಮಧ್ಯಾಹ್ನ 3.15 ಹಾಗೂ ರಾತ್ರಿ 7.15ಕ್ಕೆ ಪಂದ್ಯಗಳು ಆರಂಭ ಆಗಲಿವೆ. ಪ್ರತಿ ತಂಡವು ತಲಾ 5 ಹಗಲು ಹಾಗೂ 5 ರಾತ್ರಿ ಪಂದ್ಯಗಳನ್ನು ಆಡಲಿದೆ.

ಮೊದಲ ಹಣಾಹಣಿ: ಟೂರ್ನಿಯ ಮೊದಲ ಪಂದ್ಯದಲ್ಲಿ ಗುಲ್ಬರ್ಗ ಮಿಸ್ಟಿಕ್ಸ್ ಹಾಗೂ ಮಂಗಳೂರು ಡ್ರ್ಯಾಗನ್ಸ್ ಮುಖಾಮುಖಿ ಆಗುತ್ತಿವೆ. ಕರ್ನಾಟಕ ರಣಜಿ ತಂಡದ ಆಟಗಾರ ವೈಶಾಖ ವಿಜಯ್ ಕುಮಾರ್ ಜೊತೆಗೆ ಕಳೆದ ಟೂರ್ನಿಯಲ್ಲಿ ಅತಿ ಹೆಚ್ಚು ವಿಕೆಟ್ ಪಡೆದಿದ್ದ ಲವಿಶ್ ಕೌಶಲ್, ವೇಗಿ ಮೊನಿಷ್ ರೆಡ್ಡಿ ಗುಲ್ಬರ್ಗಾ ತಂಡದ ಬೌಲಿಂಗ್ ಅಸ್ತ್ರವಾಗಿದ್ದಾರೆ. ಅನುಭವಿ ಶ್ರೇಯಸ್ ಗೋಪಾಲ್ ಮಂಗಳೂರು ಡ್ರ್ಯಾಗನ್ಸ್‌ನ ಶಕ್ತಿಯಾಗಿದ್ದು, ಉಭಯ ತಂಡಗಳೂ ಯುವ ಆಟಗಾರರನ್ನು ಹೊಂದಿವೆ.

ಹೊನಲು ಬೆಳಕಿನಲ್ಲಿ ನಡೆಯಲಿರುವ ದಿನದ 2ನೇ ಪಂದ್ಯದಲ್ಲಿ ಮೈಸೂರು ವಾರಿಯರ್ಸ್ ಹಾಗೂ ಬೆಂಗಳೂರು ಬ್ಲಾಸ್ಟರ್ಸ್ ಸೆಣೆಸಲಿವೆ. ಕಳೆದ ಬಾರಿಯ ಚಾಂಪಿಯನ್ ಮೈಸೂರು ತಂಡವನ್ನು ಗಾಯಾಳು ಕರುಣ್ ನಾಯರ್ ಅನುಪಸ್ಥಿತಿಯಲ್ಲಿ ಸ್ಫೋಟಕ ಬ್ಯಾಟರ್ ಮನೀಷ್ ಪಾಂಡೆ ಮುನ್ನಡೆಸುತ್ತಿದ್ದು, ಕೆ. ಗೌತಮ್, ಯಶೋವರ್ಧನ್ ಪರಂತಾಪ್ ಅವರಂತಹ ಆಲ್‌ರೌಂಡರ್‌ಗಳನ್ನು ಒಳಗೊಂಡಿದೆ. ವೇಗದ ಬೌಲಿಂಗ್‌ನಲ್ಲಿ ಪ್ರಸಿದ್ಧ ಕೃಷ್ಣ ಬಲ ತುಂಬಲಿದ್ದಾರೆ.

ಬೆಂಗಳೂರು ಬ್ಲಾಸ್ಟರ್ಸ್ ಪರ ನಾಯಕ ಮಯಂಕ್ ಅಗರವಾಲ್ ಬ್ಯಾಟಿಂಗ್ ಬೆನ್ನೆಲುಬಾಗಿದ್ದರೆ, ಬೌಲಿಂಗ್‌ನಲ್ಲಿ ವೇಗಿ ವಿದ್ಯಾಧರ ಪಾಟೀಲ, ಸ್ಪಿನ್ನರ್ ಶುಭಾಂಗ್ ಹೆಗ್ಡೆ ಅವರ ಬಲವಿದೆ. ಉಭಯ ತಂಡಗಳ ನಡುವೆ ತೀವ್ರ ಹಣಾಹಣಿ ಏರ್ಪಡಲಿದೆ.



ಮೈಸೂರಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಭಾನುವಾರ ಮಂಗಳೂರು ಡ್ರ್ಯಾಗನ್ಸ್ ತಂಡದ ಆಟಗಾರರು ಅಭ್ಯಾಸ ನಡೆಸಿದರು ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.


ಇಂದಿನ ಪಂದ್ಯಗಳು

ಗುಲ್ಬರ್ಗಾ ಮಿಸ್ಟಿಕ್ಸ್ V/S ಮಂಗಳೂರು ಡ್ರ್ಯಾಗನ್ಸ್
ಸಮಯ: ಮಧ್ಯಾಹ್ನ 3.15

ಮೈಸೂರು ವಾರಿಯರ್ಸ್ V/S ಬೆಂಗಳೂರು ಬ್ಲಾಸ್ಟರ್ಸ್
ಸಮಯ: ರಾತ್ರಿ 7.15

ಸಿಲೆಸಿಯಾ ಡೈಮಂಡ್ ಲೀಗ್: ನೀರಜ್ ಹೆಸರಿಲ್ಲ!

ನವದೆಹಲಿ (ಪಿಟಿಐ): ಪೋಲೆಂಡ್‌ನ ಸಿಲೆಸಿಯಾದಲ್ಲಿ ನಡೆಯಲಿರುವ ಡೈಮಂಡ್ ಲೀಗ್ ಸ್ಪರ್ಧೆಗಳ ಪ್ರವೇಶ ಪಟ್ಟಿಯಿಂದ ಭಾರತದ ಜಾವೆಲಿನ್ ಥ್ರೋ ತಾರೆ ನೀರಜ್ ಚೋಪ್ರಾ ಮತ್ತು ಪಾಕಿಸ್ತಾನದ ಅರ್ಷದ್ ನದೀಂ ಅವರ ಹೆಸರುಗಳು ಕಣ್ಮರೆಯಾಗಿವೆ!



ನೀರಜ್

ಭಾರತ ಮತ್ತು ಪಾಕಿಸ್ತಾನದ ಇಬ್ಬರು ತಾರೆಗಳು ದೀರ್ಘ ಕಾಲದ ನಂತರ ಮುಖಾಮುಖಿಯಾಗುವ ಸ್ಪರ್ಧೆ ಇದಾಗಿದೆ. ಆಗಸ್ಟ್ 16ರಂದು ಲೀಗ್ ನಡೆಯಲಿದೆ. ಸಿಲೆಸಿಯಾ ಡೈಮಂಡ್ ಲೀಗ್ ಆಯೋಜಕರು ಜುಲೈ 9ರಂದು ನೀಡಿದ್ದ ಪ್ರಕಟಣೆಯಲ್ಲಿ ಎರಡು ಬಾರಿ ಒಲಿಂಪಿಕ್ ಪದಕ ವಿಜೇತ ನೀರಜ್ ಚೋಪ್ರಾ ಮತ್ತು ಪ್ಯಾರಿಸ್ ಒಲಿಂಪಿಕ್ಸ್ ಚಾಂಪಿಯನ್ ಅರ್ಷದ್ ಸ್ಪರ್ಧಿಸುವುದನ್ನು ಖಚಿತಗೊಳಿಸಿದ್ದರು. ಹೋದ ತಿಂಗಳಷ್ಟೇ ನದೀಮ್ ಅವರು ತಮ್ಮ ಮೀನಖಂಡದ ಗಾಯಕ್ಕೆ ಇಂಗ್ಲೆಂಡ್‌ನಲ್ಲಿ ಶಸ್ತ್ರಚಿಕಿತ್ಸೆಗೊಳಗಾಗಿದ್ದರು. ಆದ್ದರಿಂದ ಅವರು ಈ ಲೀಗ್‌ನಲ್ಲಿ ಕಣಕ್ಕಿಳಿಯುವುದು ಅನುಮಾನವಾಗಿತ್ತು.

ಖ್ಯಾತನಾಮ ಅಥ್ಲೀಟ್‌ಗಳಾದ ಜರ್ಮನಿಯ ಜೂಲಿಯನ್ ವೆಬರ್, ಗ್ರೆನಡಾದ ಆ್ಯಂಡರ್ಸನ್ ಪೀಟರ್ಸ್, ಕೆನ್ಯಾದ ಜೂಲಿಯಸ್ ಯೆಗೊ, ಟ್ರಿನಿಡಾಡ್–ಟೊಬ್ಯಾಗೊದ ಕೆಶೋರ್ನ್ ವಾಲ್‌ಕಾಟ್, ಜಪಾನಿನ ಡೀನ್ ಡಾಡೆರಿಕ್ ಜೆಂಕಿ ಕಣದಲ್ಲಿದ್ದಾರೆ.

ಕಳೆದ ಎರಡು ಡೈಮಂಡ್ ಲೀಗ್ ಆವೃತ್ತಿಗಳಲ್ಲಿ ಸ್ಪರ್ಧಿಸಿದ್ದ ಚೋಪ್ರಾ ಒಟ್ಟು 15 ಅಂಕ ಗಳಿಸಿದ್ದಾರೆ. ವೆಬರ್ ಅವರೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ. ಆ. 22ರಂದು ಬ್ರಸೆಲ್ಸ್‌ನಲ್ಲಿ ಆವೃತ್ತಿ ಮತ್ತು 28ರಂದು ಜ್ಯೂರಿಚ್‌ನಲ್ಲಿ ಫೈನಲ್ಸ್ ನಡೆಯಲಿದೆ.

ಈಜುಕೊಳದಲ್ಲಿ ಮುಳುಗಿ ಈಜುಪಟು ಸಾವು

ಒಂದನೇ ಪುಟದಿಂದ...

ಜೀವರಕ್ಷಕರಾಗಿ, ಕೆಲವರಿಗೆ ಈಜು ತರಬೇತುದಾರರಾಗಿಯೂ ಕಾರ್ಯನಿರ್ವಹಿಸುತ್ತಿದ್ದರು.

'ಭಾನುವಾರ ಈಜುಕೊಳಕ್ಕೆ ಸಾರ್ವಜನಿಕರಿಗೆ ಪ್ರವೇಶವಿಲ್ಲ. ನಿರ್ವಹಣೆಗೆ ಬಂದಿದ್ದ ಚಂದ್ರಶೇಖರ ರೈ ಕೊಳದ ನಿರ್ವಹಣೆಗೆ ತೆರಳಿದ್ದರು' ಎಂದು ಪ್ರಭಾರ ವ್ಯವಸ್ಥಾಪಕ ರಮೇಶ್ ಬಿಜೈ 'ಪ್ರಜಾವಾಣಿ'ಗೆ ತಿಳಿಸಿದರು.

'ಸ್ವಲ್ಪ ಹೊತ್ತು ಅಭ್ಯಾಸ ಮಾಡುವುದಾಗಿ ಕಾವಲುಗಾರನಿಗೆ ತಿಳಿಸಿ ಮೊಬೈಲ್ ಫೋನ್ ಕೈಗಿತ್ತು ಡೈವ್ ಮಾಡಿದ್ದಾರೆ. ಮಧ್ಯಕ್ಕೆ ತಲುಪುತ್ತಿದ್ದಂತೆ ಉಸಿರುಕಟ್ಟಿ ಸಾವಿಗೀಡಾಗಿರುವುದಾಗಿ ಕಾವಲುಗಾರ ಹೇಳಿದ್ದಾರೆ. ಅಭ್ಯಾಸ ಮಾಡುವಾಗ ಆಘಾತವಾಗಿರುವ ಸಾಧ್ಯತೆ ಇದೆ' ಎಂದು ರಮೇಶ್ ತಿಳಿಸಿದರು.

ವೆನ್ಲಾಕ್ ಸರ್ಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ಬಳಿಕ ಸ್ವಗ್ರಾಮದಲ್ಲಿ ಅಂತ್ಯಸಂಸ್ಕಾರ ನಡೆಯಿತು ಎಂದು ಚಂದ್ರಶೇಖರ್ ಅವರ ಸಹೋದರ ರಾಧಾಕೃಷ್ಣ ರೈ ತಿಳಿಸಿದರು.

ಒಂದೇ ಉಸಿರಿನಲ್ಲಿ 28 ಬಾರಿ ಮುಂಭಾಗಕ್ಕೆ ತಿರುಗಿ (ಫ್ರಂಟ್ ಫ್ಲಿಪ್ ಸೋಮರ್‌ಸಾಲ್ಟ್) ಕೆ. ಚಂದ್ರಶೇಖರ ರೈ 'ವರ್ಲ್ಡ್ ವೈಡ್ ಬುಕ್ ಆಫ್ ರೆಕಾರ್ಡ್ಸ್'ನಲ್ಲಿ 2023ರಲ್ಲಿ ಸ್ಥಾನ ಗಳಿಸಿದ್ದರು. ಅದಕ್ಕೂ ಮೊದಲು ಎರಡು ಬಾರಿ 'ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್'ನಲ್ಲಿ ಸ್ಥಾನ ಗಳಿಸಿದ್ದರು.

ಅಸಹಜ ಸಾವು ಎಂದು ಬರ್ಕೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಶ್ವ ಅಥ್ಲೆಟಿಕ್ಸ್ ಕಾಂಟಿನೆಂಟಲ್ ಟೂರ್: ಕರ್ನಾಟಕದ ನಾಲ್ವರಿಗೆ ಪದಕ

ಕುಜೂರ್, ಅನ್ನುರಾಣಿ, ಮುರಳಿಗೆ ಪ್ರಶಸ್ತಿ

ಭುವನೇಶ್ವರ (ಪಿಟಿಐ): ಉದಯೋನ್ಮುಖ ಸ್ಪ್ರಿಂಟರ್ ಅನಿಮೇಶ್ ಕುಜೂರ್, ಅನುಭವಿ ಜಾವೆಲಿನ್ ಥ್ರೋತಾರೆ ಅನ್ನುರಾಣಿ ಮತ್ತು ಲಾಂಗ್‌ಜಂಪ್ ಪಟು ಮುರಳಿ ಶ್ರೀಶಂಕರ್ ಅವರು ನಿರೀಕ್ಷೆಯಂತೆ ಇಲ್ಲಿನ ಕಳಿಂಗ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ವಿಶ್ವ ಅಥ್ಲೆಟಿಕ್ಸ್ ಕಾಂಟಿನೆಂಟಲ್ ಟೂರ್ ಸ್ಪರ್ಧೆಯಲ್ಲಿ ಚಿನ್ನದ ಸಾಧನೆ ಮೆರೆದರು.

ಕರ್ನಾಟಕದ ನಾಲ್ವರು ಪದಕ ಗೆದ್ದರು. ವಿಜಯಕುಮಾರಿ ಜಿ.ಕೆ. (53.40ಸೆ) ಮಹಿಳೆಯರ 400 ಮೀಟರ್ ಓಟದಲ್ಲಿ ಚಿನ್ನ ಗೆದ್ದರು. ಸ್ನೇಹಾ ಎಸ್.ಎಸ್. (11.70 ಸೆ.) ಮಹಿಳೆಯರ 100 ಮೀ. ಓಟದಲ್ಲಿ ಬೆಳ್ಳಿ ಜಯಿಸಿದರು. 200 ಮೀಟರ್ ಓಟದಲ್ಲಿ ಉನ್ನತಿ ಅಯ್ಯಪ್ಪ (24.56 ಸೆ) ಮತ್ತು ಪುರುಷರ ಲಾಂಗ್ ಜಂಪ್‌ನಲ್ಲಿ ಲೋಕೇಶ್ ಸತ್ಯನಾಥನ್ (7.85 ಮೀ) ಕಂಚು ಗೆದ್ದರು.

22 ವರ್ಷದ ಕುಜೂರ್ ಪುರುಷರ 200 ಮೀಟರ್ ಓಟದ ಫೈನಲ್‌ನಲ್ಲಿ 20.77 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಕೊರಿಯಾದ ಕೊ ಸೆಯುಂಗ್ವಾನ್ (20.95 ಸೆ.) ಮತ್ತು ಭಾರತದ ಮತ್ತೊಬ್ಬ ಸ್ಪರ್ಧಿ ರಫುಲ್ ಕುಮಾರ್ (21.17 ಸೆ.) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.

ಜೆಎಸ್‌ಡಬ್ಲ್ಯು ತಂಡವನ್ನು ಪ್ರತಿನಿಧಿಸುವ ಶ್ರೀಶಂಕರ್ 8.13 ಮೀಟರ್ ಸಾಧನೆ ಮೆರೆದರು. ರಾಷ್ಟ್ರೀಯ ಚಾಂಪಿಯನ್ 17 ವರ್ಷದ ಶಹನವಾಜ್ ಖಾನ್ (8.04) ತೀವ್ರ ಪೈಪೋಟಿ ನೀಡಿ ಬೆಳ್ಳಿ ತಮ್ಮದಾಗಿಸಿಕೊಂಡರು. ಇದೇ ಮೊದಲ ಬಾರಿ ಅವರು 8 ಮೀಟರ್ (ಹಿಂದಿನ ಅತ್ಯುತ್ತಮ ಸಾಧನೆ 7.90 ಮೀ) ಗಡಿ ದಾಟಿದರು.

26 ವರ್ಷದ ಶ್ರೀಶಂಕರ್ ಗಾಯದ ದೀರ್ಘ ವಿರಾಮದ ನಂತರ ಗೆದ್ದ ಸತತ ನಾಲ್ಕನೇ ಪ್ರಶಸ್ತಿ ಇದಾಗಿದೆ. ಅವರಿಗೆ ಟೋಕಿಯೊ ವಿಶ್ವ ಚಾಂಪಿಯನ್‌ಷಿಪ್ ಅರ್ಹತಾ ಮಟ್ಟ (8.27ಮೀ) ತಲುಪಲು ಸಾಧ್ಯವಾಗಲಿಲ್ಲ. ರಾಜ್ಯದ ಲೋಕೇಶ್ ಕಂಚು ಗೆದ್ದರು.


ಏಷ್ಯನ್ ಗೇಮ್ಸ್ ಚಾಂಪಿಯನ್ ಅನ್ನುರಾಣಿ ಅವರು ಮಹಿಳೆಯರ ಜಾವೆಲಿನ್‌ನಲ್ಲಿ ನಾಲ್ಕನೇ ಪ್ರಯತ್ನದಲ್ಲಿ 62.01 ಮೀಟರ್ ಭರ್ಜಿ ಎಸೆದರು. ಇದರಿಂದಾಗಿ ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ವಿಶ್ವ ಚಾಂಪಿಯನ್‌ಷಿಪ್‌ಗೆ ಅರ್ಹತೆ ಪಡೆಯುವ ಸಾಧ್ಯತೆಗಳು ಬಲಗೊಂಡವು.

ಪುರುಷರ ಜಾವೆಲಿನ್ ಸ್ಪರ್ಧೆಯಲ್ಲಿ ಭಾರತದ ಸ್ಪರ್ಧಿಗಳಿಂದ ನಿರೀಕ್ಷಿತ ಪ್ರದರ್ಶನ ಬರಲಿಲ್ಲ. ಬೆಂಗಳೂರಿನಲ್ಲಿ ನೀರಜ್ ಚೋಪ್ರಾ ಆಯೋಜಿಸಿದ್ದ ಎನ್‌ಸಿ ಕ್ಲಾಸಿಕ್‌ನಲ್ಲಿ ಮೂರನೇ ಸ್ಥಾನ ಪಡೆದ ಶ್ರೀಲಂಕಾದ ರುಮೇಶ್ ಪತಿರಗೆ ಮೊದಲ ಪ್ರಯತ್ನದಲ್ಲೇ ಈಟಿಯನ್ನು 86.50 ಮೀಟರ್ ದೂರ ಎಸೆದು ಚಿನ್ನಕ್ಕೆ ಗುರಿಯಿಟ್ಟರು. ಆ ಮೂಲಕ ವಿಶ್ವ ಚಾಂಪಿಯನ್‌ಷಿಪ್‌ನ ನೇರ ಅರ್ಹತೆ (85.50 ಮೀ) ಸಂಪಾದಿಸಿದರು.

ಭಾರತದ 20 ವರ್ಷದ ಶಿವಂ ಲೋಹಕರೆ 80.95 ಮೀಟರ್ ಸಾಧನೆಯೊಂದಿಗೆ ಬೆಳ್ಳಿ ಪದಕ ಗೆದ್ದರು. ಶ್ರೀಲಂಕಾದ ಸುಮೇಧಾ ರಣಸಿಂಘೆ (80.65 ಮೀ) ಮೂರನೇ ಸ್ಥಾನ ಪಡೆದರು. ಭಾರತದ ರೋಹಿತ್ ಯಾದವ್ (80.35 ಮೀ) ಮತ್ತು ಏಷ್ಯನ್ ಚಾಂಪಿಯನ್‌ಷಿಪ್ ಬೆಳ್ಳಿ ವಿಜೇತ ಸಚಿನ್ ಯಾದವ್ (79.80 ಮೀ) ಕ್ರಮವಾಗಿ ನಾಲ್ಕು ಮತ್ತು ಐದನೇ ಸ್ಥಾನ ಪಡೆದರು.

ಮಹಿಳೆಯರ ಲಾಂಗ್ ಜಂಪ್ ಸ್ಪರ್ಧೆಯಲ್ಲಿ ಶೈಲಿ ಸಿಂಗ್ 6.28 ಮೀಟರ್ ದೂರ ಜಿಗಿದು ಪ್ರಶಸ್ತಿ ಗೆದ್ದರು. ಮಲೇಷ್ಯಾದ ಮುಹಮ್ಮದ್ ಅಜೀಮ್ ಬಿನ್ ಪುರುಷರ 100 ಮೀಟರ್ ಓಟದಲ್ಲಿ (10.35 ಸೆ) ಮಿಂಚು ಹರಿಸಿ ಚಿನ್ನ ಗೆದ್ದರು. ಮಹಿಳೆಯರ ವಿಭಾಗದಲ್ಲಿ ಎನ್‌ಸಿಒಇ ತಿರುವನಂತಪುರದ ಅಭಿನಯಾ ರಾಜರಾಜನ್ (11.57 ಸೆ) ಚಾಂಪಿಯನ್ ಆದರು.

ಒಟ್ಟು 21.89 ಲಕ್ಷ ಬಹುಮಾನ ಮೊತ್ತ ಹೊಂದಿದ್ದ ವಿಶ್ವ ಅಥ್ಲೆಟಿಕ್ಸ್‌ನ ಕಂಚಿನ ಮಟ್ಟದ ಈ ಕೂಟದಲ್ಲಿ 17 ದೇಶಗಳಿಂದ 150 ಕ್ರೀಡಾಪಟುಗಳು 19 ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು. ಇದರಲ್ಲಿ ಭಾರತದ 90 ಕ್ರೀಡಾಪಟುಗಳು ಸ್ಪರ್ಧಿಸಿದ್ದರು.



ಅನಿಮೇಶ್ ಕುಜೂರ್



ಕರ್ನಾಟಕದ ಸ್ನೇಹಾ ಎಸ್.ಎಸ್.

ಅ.15ರಿಂದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿ

ಕರ್ನಾಟಕಕ್ಕೆ ಸೌರಾಷ್ಟ್ರ ಮೊದಲ ಎದುರಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶಿ ಕ್ರಿಕೆಟ್ 'ರಾಜ' ಎಂದೇ ಕರೆಸಿಕೊಳ್ಳುವ ರಣಜಿ ಟ್ರೋಫಿ ಟೂರ್ನಿಯು ಅಕ್ಟೋಬರ್ 15ರಿಂದ ಆರಂಭವಾಗಲಿದೆ. ಹೋದ ವರ್ಷದ ಮಾದರಿಯಲ್ಲಿಯೇ ಎರಡು ಹಂತಗಳಲ್ಲಿ ಟೂರ್ನಿಯು ಆಯೋಜನೆಗೊಳ್ಳಲಿದೆ. ಕರ್ನಾಟಕ ತನ್ನ ಮೊದಲ ಪಂದ್ಯದಲ್ಲಿ ಸೌರಾಷ್ಟ್ರದ ಎದುರು ಕಣಕ್ಕಿಳಿಯಲಿದೆ.

ಈ ಪಂದ್ಯವು ಅ.15 ರಿಂದ 18ರವರೆಗೆ ರಾಜ್‌ಕೋಟ್‌ನಲ್ಲಿ ನಡೆಯಲಿದೆ. ಎಲೀಟ್ ಹಂತದಲ್ಲಿ ಕರ್ನಾಟಕವು ಸೌರಾಷ್ಟ್ರ, ಗೋವಾ, ಕೇರಳ, ಮಹಾರಾಷ್ಟ್ರ, ಚಂಡೀಗಢ, ಮಧ್ಯಪ್ರದೇಶ ಮತ್ತು ಪಂಜಾಬ್ ತಂಡಗಳನ್ನು ಎದುರಿಸಲಿದೆ.

ಟೂರ್ನಿಯ ಲೀಗ್ ವಿಭಾಗದ ಮೊದಲ ಹಂತವು ಅ.15 ರಿಂದ ನವೆಂಬರ್ 19ರವರೆಗೆ ನಡೆಯುವುದು. ಇದರಲ್ಲಿ ಐದು ಪಂದ್ಯಗಳನ್ನು ಆಡಿಸಲಾಗುವುದು. ಎರಡನೇ ಹಂತವು 2026ರ ಜನವರಿ 22 ರಿಂದ ಫೆ.1 ರವರೆಗೆ ನಡೆಯಲಿದೆ. ನಾಕೌಟ್ ಹಂತವು ಫೆ. 6 ರಿಂದ 28ರವರೆಗೆ ಆಯೋಜನೆಗೊಳ್ಳಲಿದೆ. ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯು ನವೆಂಬರ್ 26 ರಿಂದ ಡಿಸೆಂಬರ್ 18ರವರೆಗೆ ನಡೆಯುವುದು. ವಿಜಯ್ ಹಜಾರೆ ಟ್ರೋಫಿ ಏಕದಿನ ಟೂರ್ನಿಯೂ ಡಿಸೆಂಬರ್ 7ರಿಂದ 2026ರ ಜನವರಿ 28ರವರೆಗೆ ಆಯೋಜನೆಯಾಗಿದೆ.

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ತನ್ನ ಅಧಿಕೃತ ಜಾಲತಾಣ (ಬಿಸಿಸಿಐ ಡಾಟ್ ಟಿ.ವಿ)ದಲ್ಲಿ ದೇಶಿ ಕ್ರಿಕೆಟ್ ಟೂರ್ನಿಗಳ ವೇಳಾಪಟ್ಟಿಯನ್ನು ಪ್ರಕಟಿಸಿದೆ. ದೇಶಿ ಋತುವು ಇದೇ 28ರಿಂದ ನಡೆಯುವ ದುಲೀಪ್ ಟ್ರೋಫಿ ಟೂರ್ನಿಯೊಂದಿಗೆ ಆರಂಭವಾಗುವುದು. ಸೆ. 15ರವರೆಗೆ ಬೆಂಗಳೂರಿನ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ಟೂರ್ನಿ ನಡೆಯುವುದು. ಅ. 1ರಿಂದ 5ರವರೆಗೆ ನಾಗಪುರ ದಲ್ಲಿ ನಡೆಯಲಿರುವ ಇರಾನಿ ಟ್ರೋಫಿ ಪಂದ್ಯದಲ್ಲಿ ವಿದರ್ಭ ಮತ್ತು ರೆಸ್ಟ್ ಆಫ್ ಇಂಡಿಯಾ ತಂಡವು ಮುಖಾಮುಖಿಯಾಗಲಿವೆ.

ಕರ್ನಾಟಕದ ಪಂದ್ಯಗಳು 2025-26

ರಣಜಿ ಟ್ರೋಫಿ

ದಿನಾಂಕ	ಎದುರಾಳಿ
ಅ.15-18	ಸೌರಾಷ್ಟ್ರ
ಅ. 25-28	ಗೋವಾ
ನ.1-4	ಕೇರಳ
ನ.16-19	ಚಂಡೀಗಢ
ಜ.22-25	ಮಧ್ಯಪ್ರದೇಶ
ಜ.29–ಫೆ.1	ಪಂಜಾಬ್
ಫೆ.6-10	ಕ್ವಾರ್ಟರ್‌ಫೈನಲ್
ಫೆ. 15-19	ಸೆಮಿಫೈನಲ್
ಫೆ.24-28	ಫೈನಲ್

ಸೈಯದ್ ಮುಷ್ತಾಕ್ ಅಲಿ ಟ್ರೋಫಿ

ದಿನಾಂಕ	ಎದುರಾಳಿ
ನ.26	ಉತ್ತರಾಖಂಡ
ನ.28	ಜಾರ್ಖಂಡ್
ನ.30	ರಾಜಸ್ಥಾನ
ಡಿ.2	ತಮಿಳುನಾಡು
ಡಿ.4	ದೆಹಲಿ
ಡಿ.6	ಸೌರಾಷ್ಟ್ರ
ಡಿ.8	ತ್ರಿಪುರ

ವಿಜಯ್ ಹಜಾರೆ ಟ್ರೋಫಿ (ಏಕದಿನ)

ದಿನಾಂಕ	ಎದುರಾಳಿ
ಡಿ.24	ಜಾರ್ಖಂಡ್
ಡಿ.26	ಕೇರಳ
ಡಿ.29	ತಮಿಳುನಾಡು
ಡಿ.31	ಪುದುಚೇರಿ
ಜ.3	ತ್ರಿಪುರ
ಜ.6	ರಾಜಸ್ಥಾನ
ಜ.8	ಮಧ್ಯಪ್ರದೇಶ

ಮೂಲ: ಬಿಸಿಸಿಐ ಡಾಟ್ ಟಿ.ವಿ